ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
'ಮೌತ್‌ವಾಶ್'ಗಳ ಅಡ್ಡಪರಿಣಾಮವನ್ನು ಅರಿತು ಬಳಸುವುದು ಒಳಿತು

ಆಳ-ಅಗಲ
ಕಾರ್ಮಿಕರ ಆದಾಯಕ್ಕೆ ಎಐ ಪೆಟ್ಟು
ನೇಮಕಾತಿ ಅಕ್ರಮ ತಡೆ ಮಸೂದೆಗೆ ಅಂಕಿತ 8
'ಸಂಜೆಯೊಳಗೆ ಕರ್ತವ್ಯಕ್ಕೆ ಮರಳದಿದ್ದರೆ ಕ್ರಮ' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,559	24,936	₹73,600 (ಬೆಂಗಳೂರು)	₹83,300 (ಬೆಂಗಳೂರು)	83.95

ರಾಮೇಶ್ವರಂ ಕೆಫೆ ಬಾಂಬ್ ಪ್ರಕರಣ: ನಾಲ್ವರ ವಿರುದ್ಧ ರಾಷ್ಟ್ರೀಯ ತನಿಖಾ ದಳದಿಂದ ಆರೋಪಪಟ್ಟಿ

'ಬಿಜೆಪಿ ರಾಜ್ಯ ಕಚೇರಿ ಸ್ಫೋಟಕ್ಕೆ ಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರೂಕ್‌ಫೀಲ್ಡ್‌ನ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸಿದ್ದ ಶಂಕಿತ ಉಗ್ರರು ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿಯನ್ನು ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹ ಪ್ರತಿಷ್ಠಾಪನೆ ದಿನವೇ ಸ್ಫೋಟಿಸಲು ವಿಫಲ ಯತ್ನ ನಡೆಸಿದ್ದರು ಎಂದು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಹೇಳಿದೆ.

ಸ್ಫೋಟ ಪ್ರಕರಣದಲ್ಲಿ ಮುಸ್ಸಾವೀರ್ ಹುಸೇನ್ ಶಾಜೀಬ್, ಅಬ್ದುಲ್ ಮಥೀನ್ ಅಹ್ಮದ್ ತಾಹಾ, ಮಾಜ್ ಮುನೀರ್ ಅಹ್ಮದ್ ಮತ್ತು ಮುಝುಮಿಲ್ ಷರೀಫ್ ಎಂಬ ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಸಲ್ಲಿಸಿರುವ ಆರೋಪ-ಪಟ್ಟಿಯಲ್ಲಿ ಎನ್‌ಐಎ ಈ ವಿಷಯವನ್ನು ಉಲ್ಲೇಖಿಸಿದೆ.

'ತಾಹಾ, ಶಾಜೀಬ್‌ಗೆ ಭಯೋತ್ಪಾದಕ ಸಂಘಟನೆಗಳ ಸದಸ್ಯರು ಕ್ರಿಪ್ಟೋ ಕರೆನ್ಸಿ ಮೂಲಕ ಆರ್ಥಿಕ ನೆರವು ನೀಡುತ್ತಿದ್ದರು. ಟೆಲಿಗ್ರಾಂ ಆ್ಯಪ್ ಆಧಾರಿತ 'ಪಿಯರ್ ಟು ಪಿಯರ್' ವೇದಿಕೆಗಳನ್ನು ಬಳಸಿಕೊಂಡು ತಾಹಾ ಕ್ರಿಪ್ಟೋ ಕರೆನ್ಸಿಯನ್ನು ಸಾಮಾನ್ಯ ಕರೆನ್ಸಿಯನ್ನಾಗಿ ಬದಲಾವಣೆ ಮಾಡುತ್ತಿದ್ದ. ಈ ಹಣವನ್ನು ಬೆಂಗಳೂರಿನಲ್ಲಿ ಹಿಂಸಾತ್ಮಕ ಚಟುವಟಿಕೆಗಳನ್ನು ನಡೆಸುವುದಕ್ಕೆ ತಯಾರಿಗಾಗಿ ಬಳಸುತ್ತಿದ್ದ' ಎಂದೂ ಹೇಳಿದೆ.

7ನೇ ಪುಟ ನೋಡಿ

ಶಂಕಿತರ ಹೆಜ್ಜೆ ಗುರುತುಗಳು

- 2024ರ ಜನವರಿ 22ರಂದು ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ವಿಗ್ರಹ ಪ್ರತಿಷ್ಠಾಪನೆ. ಅದೇ ದಿನ ಬಾಂಬ್ ಸ್ಫೋಟಿಸುವ ಶಂಕಿತ ಉಗ್ರರ ಸಂಚು ವಿಫಲ
- ಬ್ರೂಕ್‌ಫೀಲ್ಡ್‌ನಲ್ಲಿರುವ ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರಂದು ಕಚ್ಚಾ ಬಾಂಬ್ ಸ್ಫೋಟ
- ಒಂಬತ್ತು ಮಂದಿಗೆ ತೀವ್ರ ಗಾಯ ಹಾಗೂ ಹೋಟೆಲ್‌ನ ಆಸ್ತಿಗಳಿಗೆ ಭಾರಿ ಹಾನಿ
- ಮಾರ್ಚ್ 3ರಂದು ಪ್ರಕರಣದ ತನಿಖೆ ಎನ್‌ಐಎಗೆ ವರ್ಗಾವಣೆ
- ಏಪ್ರಿಲ್ 12ರಂದು ಪಶ್ಚಿಮ ಬಂಗಾಳದ ಮೇದಿನಿಪುರ ಜಿಲ್ಲೆಯಲ್ಲಿ ತೀರ್ಥಹಳ್ಳಿಯ ಮುಸಾವೀರ್ ಹುಸೇನ್ ಮತ್ತು ಅಬ್ದುಲ್ ಮಥೀನ್ ತಾಹಾ ಬಂಧನ
- ಮತ್ತೊಬ್ಬ ಆರೋಪಿ ಮುಝುಮ್ಮಿಲ್ ಷರೀಫ್ ಸೇರಿ ಈ ಪ್ರಕರಣದಲ್ಲಿ ನಾಲ್ವರ ಬಂಧನ

ಮುಖ್ಯಾಂಶಗಳು

- ಭಯೋತ್ಪಾದಕ ಚಟುವಟಿಕೆಗೆ ಹೊರಗಿನಿಂದ ಆರ್ಥಿಕ ನೆರವು ನೀಡಿರುವುದಾಗಿ ಉಲ್ಲೇಖ
- ಮುಸ್ಲಿಂ ಯುವಕರನ್ನು ಐಎಸ್ ಸಂಘಟನೆಯತ್ತ ಸೆಳೆಯುತ್ತಿದ್ದ ಆರೋಪಿಗಳು
- ದುಷ್ಕೃತ್ಯಕ್ಕೆ ಭಾರತೀಯರು, ಬಾಂಗ್ಲಾದೇಶದ ಪ್ರಜೆಗಳ ದಾಖಲೆ ದುರ್ಬಳಕೆ

ಶಂಕಿತ ಉಗ್ರರ ನಂಟಿನ ಸರಣಿ

'ಭಯೋತ್ಪಾದನಾ ಚಟುವಟಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿರುವ ಶೋಯಬ್ ಅಹ್ಮದ್ ಮಿರ್ಝಾ ಎಂಬಾತ ಅಬ್ದುಲ್ ಮಥೀನ್ ತಾಹಾನನ್ನು ಲಷ್ಕರ್–ಎ–ತಯಬಾ ಉಗ್ರ ಸಂಘಟನೆಯು ಬೆಂಗಳೂರು ಬಾಂಬ್ ಸ್ಫೋಟಕ್ಕೆ ನಡೆಸಿದ ಸಂಚಿನ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಮೊಹಮ್ಮದ್ ಶಾಹೀದ್ ಫೈಸಲ್ ಎಂಬಾತನಿಗೆ ಪರಿಚಯಿಸಿದ್ದ. ತನ್ನ 'ಹ್ಯಾಂಡ್ಲರ್' ಆಗಿದ್ದ ಫೈಸಲ್‌ನನ್ನು ನಂತರದ ದಿನಗಳಲ್ಲಿ ತಾಹಾ, ಅಲ್ ಹಿಂದ್ ಐಎಸ್ ಭಯೋತ್ಪಾದನಾ ಚಟುವಟಿಕೆ ಪ್ರಕರಣದ ಆರೋಪಿ ಮೆಹಬೂಬ್ ಪಾಷಾ ಎಂಬಾತನಿಗೆ ಪರಿಚಯಿಸಿದ್ದ. ದಕ್ಷಿಣ ಭಾರತದಲ್ಲಿ ಐಎಸ್ ಚಟುವಟಿಕೆಗಳ ಉಸ್ತುವಾರಿ ಹೊತ್ತಿದ್ದ ಖಾಜಾ ಮೊಹಿದ್ದೀನ್ ಮತ್ತು ಅಮೀರ್ ಎಂಬುವವರಿಗೂ ಪರಿಚಯಿಸಿದ್ದ. ಕೊನೆಯಲ್ಲಿ ಫೈಸಲ್‌ನನ್ನು ಮಾಜ್ ಮುನೀರ್ ಅಹ್ಮದ್‌ಗೂ ಪರಿಚಯಿಸಿದ್ದ' ಎಂದು ಎನ್‌ಐಎ ಆರೋಪಪಟ್ಟಿ ಹೇಳಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕ್ಯಾನ್ಸರ್ ಔಷಧ, ಕುರುಕಲು ತಿನಿಸು ಅಗ್ಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ಯಾನ್ಸರ್ ಔಷಧಗಳು, ಭುಜಿಯಾ ಮತ್ತು ಮಿಕ್ಸ್ಚರ್‌ನಂತಹ ಕುರುಕಲು ತಿಂಡಿಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಸಂಶೋಧನಾ ನಿಧಿಗಳಿಗೆ ಜಿಎಸ್‌ಟಿ ಪಾವತಿಯಿಂದ ವಿನಾಯಿತಿ ನೀಡಲು ಜಿಎಸ್‌ಟಿ ಮಂಡಳಿ ಸೋಮವಾರ ನಿರ್ಧರಿಸಿದೆ.

ಪೊಟ್ಟಣಗಳಲ್ಲಿರುವ ಸಂಸ್ಕರಿತ ಕುರುಕಲು ತಿಂಡಿಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಶೇ 18ರಿಂದ ಶೇ 12ಕ್ಕೆ ಇಳಿಸಲು ಹಾಗೂ ಕರಿಯದ ಅಥವಾ ಬೇಯಿಸದ ಕುರುಕಲು ತಿಂಡಿಗಳ ಮೇಲಿನ ಶೇ 5ರಷ್ಟು ಜಿಎಸ್‌ಟಿ ದರವನ್ನು ಮುಂದುವರಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕ್ಯಾನ್ಸರ್‌ನ ಕೆಲವು ಔಷಧಿಗಳ ಮೇಲಿನ ಜಿಎಸ್‌ಟಿ ದರವನ್ನು ಶೇ 12ರಿಂದ ಶೇ 5ಕ್ಕೆ ಇಳಿಸಲು ನಿರ್ಧರಿಸಲಾಗಿದೆ.

ಮಂಡಳಿ ಸಭೆಯ ಬಳಿಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸುದ್ದಿಗಾರರಿಗೆ ಈ ಕುರಿತು ಮಾಹಿತಿ ನೀಡಿದರು.

ಕೇಂದ್ರ, ರಾಜ್ಯ ಸರ್ಕಾರಗಳ ಕಾನೂನುಗಳ ಅಡಿ ಸ್ಥಾಪನೆಯಾಗಿರುವ ಮತ್ತು ಆದಾಯ ತೆರಿಗೆ ವಿನಾಯಿತಿ ಪಡೆದಿರುವ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳಿಗೆ ಸಂಶೋಧನೆಗಾಗಿ ನೀಡಲಾದ ಅನುದಾನಕ್ಕೆ ಜಿಎಸ್‌ಟಿ ಪಾವತಿಸುವ ಅಗತ್ಯವಿಲ್ಲ ಎಂದು ಸಭೆ ನಿರ್ಧರಿಸಿದೆ ಎಂದು ಸಚಿವರು ತಿಳಿಸಿದರು.

4ನೇ ಪುಟ ನೋಡಿ

'ದಮ್ಮಯ್ಯ ಅಂದ್ರೂ ಬಿಡಲಿಲ್ಲ'

ಪ್ರಜಾವಾಣಿ ವಾರ್ತೆ

ಪ್ರಜ್ವಲ್ ರೇವಣ್ಣ

ಬೆಂಗಳೂರು: 'ಬಾಗಿಲ ಚಿಲಕ ತೆಗಿಯಣ್ಣ, ನನಗೆ ಭಯ ಆಗ್ತಿದೆ, ಹೊರಗೆ ಹೋಗ್ತೀನಿ, ನಿನ್ನ ದಮ್ಮಯ್ಯ ಬಾಗಿಲು ತೆಗಿ ಎಂದರೂ ಕೇಳದೆ ನನ್ನ ಮೈಮೇಲಿನ ಬಟ್ಟೆಗಳನ್ನೆಲ್ಲಾ ತೆಗೆಸಿ, ನನ್ನನ್ನು ಬೆತ್ತಲೆಗೊಳಿಸಿ ಬಲವಂತವಾಗಿ ಬೆಡ್ ಮೇಲೆ ಮಲಗಿಸಿ, ನನ್ನ ಮೇಲೆ ನಿಯಂತ್ರಣ ಸಾಧಿಸಿ ಅತ್ಯಾಚಾರ ಮಾಡಿದರು...

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಅತ್ಯಾಚಾರಕ್ಕೆ ಒಳಗಾದ ಮಹಿಳೆ (ಅಪಹರಣಕ್ಕೂ ಒಳಗಾಗಿದ್ದರು ಎನ್ನಲಾದ ಸಂತ್ರಸ್ತೆ) ವಿವರಿಸಿರುವ ಇಂತಹ ಹಲವಾರು ವಿವರಣೆಗಳನ್ನು ಒಳಗೊಂಡ 1,632 ಪುಟಗಳ ದೋಷಾರೋಪ ಪತ್ರವನ್ನು ತನಿಖಾಧಿಕಾರಿ ಎನ್.ಶೋಭಾ ಅವರು ಸೋಮವಾರ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎಂ. ಶಿವಕುಮಾರ್ ಅವರಿಗೆ ಸಲ್ಲಿಸಿದರು.

ಆರೋಪ ಪಟ್ಟಿಯಲ್ಲಿ ಏನಿದೆ?: 'ಪ್ರಜ್ವಲ್ ಒಂದು ಕೈಯ್ಯಲ್ಲಿ ಮೊಬೈಲ್ ಹಿಡಿದುಕೊಂಡು ಮತ್ತೊಂದು ಕೈಯ್ಯಲ್ಲಿ ಲೈಂಗಿಕ ಕೃತ್ಯ ಎಸಗಿದರು' ಎಂದು ಸಂತ್ರಸ್ತೆಯು ವಿವರಿಸಿದ್ದಾರೆ.

8ನೇ ಪುಟ ನೋಡಿ

ಶ್ರೀ ಗಜಾನನ ಮಹಾಮಂಡಳ (ರಿ),
ಹುಬ್ಬಳ್ಳಿ.
ಕ್ರಾಂತಿವೀರ
ಸಂಗೊಳ್ಳಿ ರಾಯಣ್ಣ
ಪ್ರಶಸ್ತಿ-2024
ದಿನಾಂಕ: 12.09.2024ರ
ಗುರುವಾರ
ಮಧ್ಯಾಹ್ನ 12:30 ಘಂಟೆಗೆ
ಸ್ಥಳ: ಅಕ್ಕನ ಬಳಗ ಸಭಾಭವನ,
ಜೆ.ಸಿ. ನಗರ, ಹುಬ್ಬಳ್ಳಿ.
ಬಡವರ ಬಂಧು, ಹಿಂದುಳಿದ ವರ್ಗಗಳ ಧೀಮಂತ ನಾಯಕರು,
ಮಾಜಿ ಉಪಮುಖ್ಯಮಂತ್ರಿಗಳು
ಶ್ರೀ ಕೆ.ಎಸ್. ಈಶ್ವರಪ್ಪ ರವರು
ಮತ್ತು ಮಾಜಿ ಕೇಂದ್ರ ಸಚಿವರು, ಶಾಸಕರಾದ
ಶ್ರೀ ಬಸನಗೌಡ ಪಾಟೀಲ ಯತ್ನಾಳ ಇವರಿಗೆ
ಹಾರ್ದಿಕ ಅಭಿನಂದನೆಗಳು
ಶುಭಕೋರುವವರು
ಪ್ರಕಟಣೆ: ಕೆ.ಎಸ್. ಈಶ್ವರಪ್ಪ ಅಭಿಮಾನಿ ಬಳಗ, ಶಿವಮೊಗ್ಗ

‘ನಮ್ಮ ಮೆಟ್ರೊ’ ಹಳದಿ ಮಾರ್ಗದಲ್ಲಿ ತಾಂತ್ರಿಕ ಪರಿಣಿತರ ತಂಡದ ಸದಸ್ಯರು ಸೋಮವಾರ ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆ ನಡೆಸಿದರು

2 ವಾರದಲ್ಲಿ ಪೂರ್ಣ ● ಡಿಸೆಂಬರ್‌ನಲ್ಲಿ ವಾಣಿಜ್ಯ ಸಂಚಾರ

ಹಳದಿ ಮಾರ್ಗದಲ್ಲಿ ಆರ್‌ಡಿಎಸ್‌ಒ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸಂಶೋಧನಾ ವಿನ್ಯಾಸ ಮತ್ತು ಗುಣಮಟ್ಟ ಸಂಸ್ಥೆ (ಆರ್‌ಡಿಎಸ್‌ಒ) ಪ್ರಾಯೋಗಿಕ ಸಂಚಾರದ ಮೂಲಕ ಪರೀಕ್ಷೆಗಳನ್ನು ಸೋಮವಾರ ಆರಂಭಿಸಿದೆ. ಎರಡು ವಾರದಲ್ಲಿ ಆರ್‌ಡಿಎಸ್‌ಒ ಪರೀಕ್ಷೆ ಪೂರ್ಣಗೊಳ್ಳಲಿದೆ.

ಬೊಮ್ಮನಹಳ್ಳಿಯಿಂದ ಆರ್.ವಿ. ರಸ್ತೆ ನಡುವಿನ 18.82 ಕಿ.ಮೀ. ದೂರದ ಈ ಮಾರ್ಗದಲ್ಲಿ ಪ್ರಮುಖ ಪರೀಕ್ಷೆಗಳನ್ನು ಆರಂಭಿಸಲಾಗಿದೆ. 12ರಿಂದ 14 ದಿನ ವಿವಿಧ ಪರೀಕ್ಷೆಗಳನ್ನು ತಾಂತ್ರಿಕ ಪರಿಣಿತರು ನಡೆಸಲಿದ್ದಾರೆ.

ರೋಲಿಂಗ್ ಸ್ಟಾಕ್ (ರೈಲು) ತಜ್ಞರು, ಹಳಿ ತಂತ್ರಜ್ಞರು, ಬ್ರೇಕ್ ತಂತ್ರಜ್ಞರು, ವಿವಿಧ ತಾಂತ್ರಿಕ ಪರಿಣಿತರ ತಂಡ ಈ ಪರೀಕ್ಷೆಗಳನ್ನು ನಡೆಸುತ್ತಿದೆ.ಬಳಿಕ ಪ್ರಾಯೋಗಿಕ ವರದಿಯನ್ನು ರೈಲ್ವೆ ಮಂಡಳಿಗೆ ಸಲ್ಲಿಸಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ಮಂಡಳಿಯು ಸುರಕ್ಷತಾ ಆಯುಕ್ತರನ್ನು ಕಳುಹಿಸಿ ಅಂತಿಮ ತಪಾಸಣೆ ಮಾಡಿಸಲಿದೆ. ಅವರ ವರದಿಯನ್ನು ಆಧರಿಸಿ ಅನುಮೋದನಾ ಪತ್ರವನ್ನು ನೀಡಲಿದೆ. ಡಿಸೆಂಬರ್ ಒಳಗೆ ಈ ಎಲ್ಲ ಕಾರ್ಯಗಳು ಮುಗಿಯಲಿವೆ. ಈ ಮಾರ್ಗಕ್ಕೆ ಒಟ್ಟು 14 ರೈಲುಗಳು ಬೇಕಿವೆ. ವಾಣಿಜ್ಯ ಸಂಚಾರ ಶುರು ಮಾಡಲು ಎಂಟು ರೈಲು ಸಾಕಾಗುತ್ತದೆ. ಡಿಸೆಂಬರ್ ಒಳಗೆ ಎಂಟು ರೈಲುಗಳು ಬರಲಿವೆ ಎಂದು ಮಾಹಿತಿ ನೀಡಿದ್ದಾರೆ.

ಜೂನ್‌ನಲ್ಲಿ ಪರೀಕ್ಷೆ ಆರಂಭ: ಜೂನ್ 13ರಿಂದ ವಿವಿಧ ತಂತ್ರಜ್ಞರು ಪರೀಕ್ಷೆ ಆರಂಭಿಸಿದ್ದರು. ಚಾಲಕ ರಹಿತ ಎಂಜಿನ್ ಕೋಚ್‌ನಲ್ಲಿ ಸಂಚರಿಸಿ ಟ್ರ್ಯಾಕ್ಷನ್ ಮತ್ತು ಬ್ರೇಕಿಂಗ್ ಪರೀಕ್ಷೆ ಮಾಡಿದ್ದರು. ಬೊಮ್ಮಸಂದ್ರ, ಹೆಬ್ಬಗೋಡಿ, ಹುಸ್ಕೂರು ರಸ್ತೆ, ಇನ್ಫೊಸಿಸ್ ಫೌಂಡೇಶನ್ (ಕೋಣಪ್ಪನ ಅಗ್ರಹಾರ), ಎಲೆಕ್ಟ್ರಾನಿಕ್ ಸಿಟಿ, ಬಿರಿಟೇನ ಅಗ್ರಹಾರ, ಹೊಸರಸ್ತೆ, ಸಿಂಗಸಂದ್ರ, ಕೂಡ್ಲು ಗೇಟ್, ಬೊಮ್ಮನಹಳ್ಳಿ, ಸೆಂಟ್ರಲ್ ಸಿಲ್ಕ್ ಬೋರ್ಡ್, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ, ರಾಗಿಗುಡ್ಡ, ಆರ್‌ವಿ. ರಸ್ತೆ ನಿಲ್ದಾಣಗಳವರೆಗೆ ಪ್ರೊಟೊ ಟೈಪ್ (ಮೂಲ ಮಾದರಿ) ಕೋಚ್ ರೈಲು ಸಂಚರಿಸಿ ವಿವಿಧ ಪರೀಕ್ಷೆಗಳನ್ನು ನಡೆಸಿತ್ತು.

ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ ಮಾರ್ಗದ (ಹಳದಿ ಮಾರ್ಗ) ಕಾಮಗಾರಿ 2017ರಲ್ಲಿ ಆರಂಭಗೊಂಡಿತ್ತು. ಹಸಿರು, ಗುಲಾಬಿ, ನೀಲಿ ಮಾರ್ಗಗಳೊಂದಿಗೆ ಸಂಪರ್ಕಿಸುವ ಈ ಮಾರ್ಗದಲ್ಲಿ ಡಬಲ್ ಡೆಕ್ಕರ್ ಸೇತುವೆ ಕೂಡ ಇದೆ.

ಎಸ್‌ಎಂವಿಟಿ: ಪ್ರವೇಶ ನಿಯಂತ್ರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ಬೆಂಗಳೂರು ರೈಲು ನಿಲ್ದಾಣದ ಸುತ್ತಲ ಪ್ರದೇಶದಲ್ಲಿ ವಾಹನ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ವಾಹನಗಳ ಸಂಚಾರವನ್ನು ಶಿಸ್ತುಬದ್ಧಗೊಳಿಸಲು ನಿಲ್ದಾಣದ ಆಗಮನ-ನಿರ್ಗಮನಗಳಲ್ಲಿ ಪ್ರವೇಶ ನಿಯಂತ್ರಣ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

ನಿಲ್ದಾಣದ ವಾಹನ ನಿಲುಗಡೆ ಪ್ರದೇಶ ಹೊರತುಪಡಿಸಿ ಬೇರೆ ಕಡೆಗಳಲ್ಲಿ ವಾಹನಗಳು 10 ನಿಮಿಷಕ್ಕಿಂತ ಹೆಚ್ಚು ಕಾಲ ನಿಂತಲ್ಲಿ ದ್ವಿಚಕ್ರ ವಾಹನಗಳು ₹40 ಮತ್ತು ನಾಲ್ಕು ಚಕ್ರ ವಾಹನಗಳು ₹50 ಪ್ರವೇಶ ನಿಯಂತ್ರಣ ಶುಲ್ಕವನ್ನು ಪಾವತಿಸಬೇಕಾಗುತ್ತದೆ. 20ರಿಂದ 30 ನಿಮಿಷಗಳವರೆಗೆ ದ್ವಿಚಕ್ರ ವಾಹನಗಳು ₹100 ಮತ್ತು ನಾಲ್ಕು ಚಕ್ರ ವಾಹನಗಳು ₹200 ನೀಡಬೇಕಾಗುತ್ತದೆ. 30 ನಿಮಿಷ ದಾಟಿದರೆ ವಾಹನಗಳನ್ನು ವಾರಸುದಾರರಿಲ್ಲದ ವಾಹನ ಎಂದು ಪರಿಗಣಿಸಿ ವಶಕ್ಕೆ ಪಡೆಯಲಾಗುತ್ತದೆ. ಚಾಲಕರಿಗೆ ದಂಡ ವಿಧಿಸಲಾಗುತ್ತದೆ.

ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲಿ ಮೊದಲ 2 ಗಂಟೆ ಅವಧಿಗೆ ದ್ವಿಚಕ್ರ ವಾಹನಕ್ಕೆ ₹10, ನಾಲ್ಕು ಚಕ್ರ ವಾಹನಗಳಿಗೆ ₹20 ಶುಲ್ಕ ಮಾತ್ರವಿದೆ. ಹಾಗಾಗಿ ವಾಹನವನ್ನು ನಿಗದಿಪಡಿಸಿದ ಪಾರ್ಕಿಂಗ್ ಸ್ಥಳದಲ್ಲಿಯೇ ನಿಲ್ಲಿಸುವಂತೆ ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕೈದಿಗಳಿಗೆ ಮನೆಯೂಟ: ಮಾರ್ಗಸೂಚಿಗೆ ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೈದಿಗಳಿಗೆ ಮನೆ ಊಟ ಹಾಗೂ ಇತರ ಅಗತ್ಯ ವಸ್ತುಗಳನ್ನು ತರಿಸಿಕೊಳ್ಳುವ ಸಂಬಂಧ ಮಾರ್ಗಸೂಚಿಗಳನ್ನು ರೂಪಿಸಲಾಗುವುದು’ ಎಂದು ಹೈಕೋರ್ಟ್ ತಿಳಿಸಿದೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್, ತಮಗೆ ಮನೆ ಊಟಕ್ಕೆ ಅವಕಾಶ ನೀಡಬೇಕು ಎಂದು ಕೋರಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ದರ್ಶನ್ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ಹಾಜರಾಗಿ, ‘ಅರ್ಜಿದಾರರನ್ನು ಬಳ್ಳಾರಿಗೆ ಜೈಲಿಗೆ ಸ್ಥಳಾಂತರ ಮಾಡಿರುವ ಕಾರಣ ಈಗ ಆ ಮನವಿ ಅಪ್ರಸ್ತುತವಾಗಲಿದೆ. ಆದರೆ, ನ್ಯಾಯಾಲಯವೇ ಇಂತಹುದಕ್ಕೆಲ್ಲಾ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಬೇಕಾದ ಅವಶ್ಯ ಇದೆ. ಈ ನಿಟ್ಟಿನಲ್ಲಿ ನ್ಯಾಯಾಲಯಕ್ಕೆ ನೆರವು ನೀಡಲು ನಾನು ಸಿದ್ಧ’ ಎಂದರು.

ಮಾರ್ಗಸೂಚಿ ರೂಪಿಸಬೇಕೆಂಬ ಮನವಿಗೆ ಸ್ಪಂದಿಸಿದ ನ್ಯಾಯಮೂರ್ತಿಗಳು, ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿದರಲ್ಲದೆ, ‘ಮುಂದಿನ ವಿಚಾರಣೆಯಲ್ಲಿ ಈ ಮನವಿಯನ್ನು ಪರಿಗಣಿಸಲಾಗುವುದು’ ಎಂದು ಹೇಳಿದರು.

373 ಆಂಗ್ಲ ಮಾಧ್ಯಮ ಶಾಲೆಗೆ ಅನುಮತಿ

ಬೆಂಗಳೂರು: 373 ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ (ದ್ವಿಭಾಷಾ) ವಿಭಾಗಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ.

2024-25ನೇ ಶೈಕ್ಷಣಿಕ ವರ್ಷದ ಆರಂಭದಲ್ಲಿ 1,419 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಆರಂಭಿಸಲು ಅನುಮತಿ ನೀಡಲಾಗಿತ್ತು. ಬೇಡಿಕೆ ಪರಿಗಣಿಸಿ ಕನಿಷ್ಠ 100 ವಿದ್ಯಾರ್ಥಿಗಳಿರುವ 373 ಶಾಲೆಗಳಿಗೆ ಅನುಮತಿ ನೀಡಲಾಗಿದೆ.

ಬೆಂಗಳೂರು ದಕ್ಷಿಣ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ತುಮಕೂರು, ಬಾಗಲಕೋಟೆ, ಗದಗ, ಹಾವೇರಿ, ಉತ್ತರ ಕನ್ನಡ, ಶಿರಸಿ, ಮೈಸೂರು, ಹಾಸನ, ವಿಜಯಪುರ ಮತ್ತು ಚಿಕ್ಕಮಗಳೂರಿನ ಶಾಲೆಗಳಿಗೆ ಅನುಮತಿ ನೀಡಲಾಗಿದೆ.

ಸಮಾಜ ಕಲ್ಯಾಣ ಇಲಾಖೆ

ಪ್ರಜಾಪ್ರಭುತ್ವ ದಿನ 15.09.2024

ಪ್ರಜಾಪ್ರಭುತ್ವ ದಿನ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಸಂಪರ್ಕಿಸುವ

ಮಾನವ ಸರಪಳಿ

ಪ್ರಜಾಪ್ರಭುತ್ವ ಮೌಲ್ಯಗಳನ್ನು ಬಿತ್ತುವ ಸಂಭ್ರಮದಲ್ಲಿ ಪಾಲ್ಗೊಳ್ಳಿ ಪ್ರಜಾಪ್ರಭುತ್ವ ವಿಶೇಷ ಪದಬಂಧ ತುಂಬಿಸಿ ಕಳುಹಿಸಿ ಸರಿಯುತ್ತರ ಬರೆದವರಿಗೆ ಬಹುಮಾನ, ಮೆಚ್ಚುಗೆ ಪತ್ರದ ಕೊಡುಗೆ!

ಪ್ರಜಾಪ್ರಭುತ್ವ: ವಿಶೇಷ ಪದಬಂಧ-1



ಎಡದಿಂದ ಬಲಕ್ಕೆ

1 ಜನಸಾಮಾನ್ಯರ ಕೈಯಲ್ಲಿರುವ ಆಡಳಿತ ವ್ಯವಸ್ಥೆ 5
3 ಸಂವಿಧಾನದಲ್ಲಿ ಅನುವು ಮಾಡಿಕೊಟ್ಟ ಕಾನೂನು 2
4 ಅಧಿಕಾರದ ಚುಕ್ಕಾಣಿ ಹಿಡಿದವರಿಗೆ ಬಡಜನರ ಮೇಲಿರಬೇಕಾದ ಪ್ರೀತಿ 2
6 ಜನರಿಂದ ಆಯ್ಕೆಗೊಂಡ ಮುಖಂಡ 3
8 ಜನಪ್ರತಿನಿಧಿಗಳಿಲ್ಲದ ಆಡಳಿತಕ್ಕೆ ನಿಯಂತ್ರಣ ಇರದು 4
10 ಜನರಾಯ್ಕೆಯ ಪ್ರಭುತ್ವದಲ್ಲಿ ದೇಶದ ಪ್ರಜೆಗಳ ನಡುವೆ ಇರದು ತಾರತಮ್ಯ 4
12 ಒಳ್ಳೆಯ ನಾಯಕನಿಗೆ ಮಂದಿ ನೆಲೆಸಿರುವ ಸ್ಥಳವೇ ದೇಗುಲ 4
14 ಡಾ.ಬಿ.ಆರ್.ಅಂಬೇಡ್ಕರ್ ದೇಶಕ್ಕೆ ನೀಡಿದ ಮಹತ್ತರವಾದ ಕೊಡುಗೆ 4
16 ಪುರುಷರಷ್ಟೇ ಸಮಾನ ಹಕ್ಕು ಹೊಂದಿದ ಮಹಿಳೆ 3
18 ದೇಹದ ಅಂಗಾಂಗದಲ್ಲಿ ಮಹತ್ವವಾದ ನಯನ 2
19 ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ವರಿಗೂ ಸಮನಾಗಿ ಸಿಗುವ ಭಾಗ 2
20 ಜನನಾಯಕರಿಗೆ ಇರಬೇಕಾದ ಒಳ್ಳೆಯ ಸ್ವಭಾವ 5

ಮೇಲಿನಿಂದ ಕೆಳಕ್ಕೆ

2 ವಿವೇಚಿಸಬೇಕಾದ ಸಿದ್ಧಾಂತ ರೇಖಾಗಣಿತದಲ್ಲಿ ಕಾಣುವಿರಿ 3
3 ಭೌತ ರಸಾಯನ ಶಾಸ್ತ್ರಗಳನ್ನು ಅಧ್ಯಯನ ಮಾಡಿದವನು 3
5 ರಾಜಕೀಯ ಪಕ್ಷಗಳು ಚುನಾವಣ ಆಯೋಗದಿಂದ ಹೊಂದುವ ಮನ್ನಣೆ 3
6 ಪ್ರಜಾಪ್ರಭುತ್ವ ವ್ಯವಸ್ಥೆ ಸರಿಯಿಲ್ಲದಿದ್ದಲ್ಲಿ ವ್ಯವಸ್ಥೆ ಹಾಳು 2
7 ವಿಂಗಡಣೆ ಪುನರ್ ಬಳಕೆಗೆ ಒಳಗಾಗುವ ತ್ಯಾಜ್ಯ 2
9 ಸರ್ಕಾರ ನಡೆಸುವಾತ ಬಯಸುವ ಎಲ್ಲರ ಕ್ಷೇಮ 3
11 ಎಲ್ಲವನ್ನು ಅದೃಶ್ಯ ಮಾಡಬಲ್ಲ ಮಾಂತ್ರಿಕ 3
12 ಮತದಾರನೆ ಪ್ರಜಾಪ್ರಭುತ್ವದ ತಂದೆ 3
13 ಉದ್ದವನ್ನು ಅಳೆಯುವ ಒಂದು ಪ್ರಮಾಣ 2
14 ಗ್ರಾಮೀಣ ಪ್ರದೇಶಗಳಲ್ಲಿ ವಾರಕ್ಕೊಮ್ಮೆ ಸೇರುವ ವ್ಯಾಪರ ಕೂಟ 2
15 ಭಾರತದ ರಾಷ್ಟ್ರೀಯ ಪಕ್ಷಿ 3
17 ರಾಷ್ಟ್ರವನ್ನು ಕಟ್ಟುವ ಕೆಲಸ 3

ಹೆಸರು:
ಮೊಬೈಲ್ ಸಂಖ್ಯೆ:

ಪದಬಂಧ ತುಂಬಿಸಿ ಫೋಟೊ ತೆಗೆದು ವಾಟ್ಸಪ್ ಮಾಡಿ. ಸಂಖ್ಯೆ: 9482300400. ಪ್ರತಿದಿನ 5 ವಿಜೇತರನ್ನು ಲಾಟರಿ ಮೂಲಕ ಆಯ್ಕೆ ಮಾಡಿ, ಲಿಡ್‌ಕರ್ ವತಿಯಿಂದ ರೂ. 1000 ವೌಚರನ್ನು ಬಹುಮಾನವಾಗಿ ನೀಡಲಾಗುವುದು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಮಾಜ ಕಲ್ಯಾಣ ಇಲಾಖೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗಾಗಿ ಕಲ್ಯಾಣ ಯೋಜನೆಗಳು

2024-2025ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅರ್ಜಿ ಆಹ್ವಾನ

ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ

(ಬ್ಯಾಂಕ್‌ಗಳ ಸಹಯೋಗದೊಂದಿಗೆ)

ಇತರೆ ಉದ್ದೇಶ:
ವ್ಯಾಪಾರ ಮತ್ತು ಇತರೆ ಉದ್ಯಮಗಳಿಗೆ ಈ ಕೆಳಕಂಡಂತೆ ಸಹಾಯಧನ ನೀಡಲಾಗುತ್ತದೆ. ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.

- ಬ್ಯಾಂಕ್ ಸಾಲದ ಶೇ.20ರಷ್ಟು ಸಹಾಯಧನ ಅಥವಾ ಗರಿಷ್ಟ ರೂ.1.00 ಲಕ್ಷ
- ಘಟಕ ವೆಚ್ಚದ ಶೇ.70ರಷ್ಟು ಸಹಾಯಧನ ಅಥವಾ ಗರಿಷ್ಟ ರೂ.2.00 ಲಕ್ಷ

ಸ್ವಾವಲಂಬಿ ಸಾರಥಿ

- ಸರಕು ವಾಹನ/ಟ್ಯಾಕ್ಸಿ (ಹಳದಿ ಬೋರ್ಡ್) ಖರೀದಿಸುವ ಉದ್ದೇಶಕ್ಕೆ. ಸಾಲದ ಮೊತ್ತದ ಶೇ.75 ರಷ್ಟು ಸಹಾಯಧನ ಅಥವಾ ಗರಿಷ್ಟ ರೂ. 4.00 ಲಕ್ಷ

ಗಂಗಾ ಕಲ್ಯಾಣ ಯೋಜನೆ

1.20 ಎಕರೆ ಯಿಂದ 5.00 ಎಕರೆ ಜಮೀನು ಹೊಂದಿರುವ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕೊಳವೆಬಾವಿ ಕೊರೆದು ಪಂಪ್‌ಸೆಟ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯ ಒದಗಿಸಿಕೊಡಲಾಗುವುದು.
ಘಟಕ ವೆಚ್ಚ: ರೂ. 4.75 ಲಕ್ಷ / ರೂ. 3.75 ಲಕ್ಷ - ಇದರಲ್ಲಿ ರೂ. 50,000/- ಸಾಲವೂ ಸೇರಿರುತ್ತದೆ.

ಸ್ವಯಂ ಉದ್ಯೋಗ ನೇರಸಾಲ ಯೋಜನೆ

ಕಿರು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯಧನ ಹಾಗೂ ಸಾಲ ಮಂಜೂರು ಮಾಡಲಾಗುತ್ತದೆ.
ಘಟಕ ವೆಚ್ಚ: ರೂ. 1.00 ಲಕ್ಷ
ಸಹಾಯಧನ: ರೂ. 50,000/-
ಸಾಲ: ರೂ. 50,000/-
(ಶೇಕಡ 4ರಷ್ಟು ಬಡ್ಡಿದರ)

ಭೂ ಒಡೆತನ ಯೋಜನೆ

ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಈ ಕೆಳಕಂಡ ಘಟಕ ವೆಚ್ಚದಲ್ಲಿ ಕೃಷಿ ಜಮೀನು ಖರೀದಿಸಿ ನೀಡಲಾಗುವುದು.
ಘಟಕ ವೆಚ್ಚ: ರೂ. 25.00 ಲಕ್ಷ / ರೂ. 20.00 ಲಕ್ಷ
ಸಹಾಯಧನ: ಶೇ. 50%
ಸಾಲ: ಶೇ. 50%
(ಶೇಕಡ 6ರಷ್ಟು ಬಡ್ಡಿದರ)

ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ

ಮಹಿಳಾ ಸ್ವಸಹಾಯ ಸಂಘಗಳಿಗೆ (ಕನಿಷ್ಟ 10 ಸದಸ್ಯರು) ಕಿರು ಆರ್ಥಿಕ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನ ಸೌಲಭ್ಯ ನೀಡಲಾಗುವುದು
ಘಟಕ ವೆಚ್ಚ: ರೂ. 2.50 ಲಕ್ಷ
ಸಹಾಯಧನ: ರೂ.1.50 ಲಕ್ಷ
ಸಾಲ: ರೂ. 1.00 ಲಕ್ಷ
(ಶೇಕಡ 4ರಷ್ಟು ಬಡ್ಡಿದರ)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.10.2024

2023-24ನೇ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

https://sevasindhu.karnataka.gov.in ನಲ್ಲಿ ನೇರವಾಗಿ ಅಥವಾ ಕೆಳಕಂಡ ಸಂಸ್ಥೆಗಳ ಸಹಯೋಗದೊಂದಿಗೆ ಸಹಾ ಅರ್ಜಿ ಸಲ್ಲಿಸಬಹುದು.

KARNATAKA One | ಗ್ರಾಮ ಒನ್ | BANGALORE One

ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ	ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ	ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ	ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳ ಕಛೇರಿ ಅಥವಾ ನಿಗಮಗಳ ವೆಬ್ ಸೈಟ್ ಅಥವಾ ಕಲ್ಯಾಣಮಿತ್ರ ಏಕೀಕೃತ ಎಸ್.ಸಿ / ಎಸ್.ಟಿ ಸಹಾಯವಾಣಿ **9482-300-400** ಸಂಪರ್ಕಿಸುವುದು.

ವಿಶೇಷ ಸೂಚನೆ: ನಿಗಮದ ನಿರ್ದೇಶಕ ಮಂಡಳಿ ವಿವೇಚನಾ ಕೋಟಾ ಅಥವಾ ಸರ್ಕಾರದ ಸಾಂಸ್ಥಿಕ ಕೋಟಾದಡಿ ಸ್ವೀಕರಿಸುವ ಅರ್ಜಿಗಳನ್ನು ಸಹ ಸೇವಾಸಿಂಧು ಪೋರ್ಟಲ್ ಮೂಲಕವೇ ಸಲ್ಲಿಸುವುದು.

ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಡಾ. ಹೆಚ್. ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರು ಕಾರ್ಯಕ್ರಮವೊಂದರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುತ್ತಿರುವುದು.

ನುಡಿದಂತೆ ನಡೆದಿದ್ದೇವೆ...
ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹ ಜ್ಯೋತಿ – ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ | ಅನ್ನಭಾಗ್ಯ – 10 kg | ಗೃಹಲಕ್ಷ್ಮಿ – ₹2000 | ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

PARLIAMENT OF INDIA

ವ್ಯವಸ್ಥಾಪಕ ನಿರ್ದೇಶಕರು	ಆಯುಕ್ತರು	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು	ಮಾನ್ಯ ಅಧ್ಯಕ್ಷರು
ಎಲ್ಲಾ ನಿಗಮಗಳು	ಸಮಾಜ ಕಲ್ಯಾಣ ಇಲಾಖೆ	ಸಮಾಜ ಕಲ್ಯಾಣ ಇಲಾಖೆ	ಎಲ್ಲಾ ನಿಗಮಗಳು

ಮೋರಿಯಲ್ಲಿ ಮಹಿಳೆ ಮೃತದೇಹ ಪತ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಸುಮನಹಳ್ಳಿ ಮೋರಿಯಲ್ಲಿ ಸೋಮವಾರ ವೃದ್ಧೆಯ ಮೃತದೇಹ ಪತ್ತೆಯಾಗಿದೆ.

ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ವೃದ್ಧೆಯ ಗುರುತು ಇನ್ನೂ ಪತ್ತೆಯಾಗಿಲ್ಲ. ಆಯತಪ್ಪಿ ಮೋರಿಗೆ ಬಿದ್ದು ಮೃತಪಟ್ಟಿರುವ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ.

ಯೂಟ್ಯೂಬರ್ ವಿಚಾರಣೆ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಸಹ ಯೂಟ್ಯೂಬರ್‌ಗೆ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕನ್ನಡ ಯೂಟ್ಯೂಬರ್ ದೀಪಕ್ ಎಂಬುವವರನ್ನು ಕಾಡುಗೋಡಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಸಹ ಯೂಟ್ಯೂಬರ್ ಬೆದರಿಕೆ ಹಾಕಿ, ಬೈದಿದ್ದರು. ಈ ಕುರಿತು ದೀಪಕ್ ಸ್ವತಃ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದರು. ಇದು ಜಾಲತಾಣದಲ್ಲಿ ಹರಿದಾಡಿತ್ತು. 'ಈ ಸಂಬಂಧ ಪ್ರಕರಣ ದಾಖಲು ಮಾಡಲಾಗಿದೆ' ಎಂದು 'ಎಕ್ಸ್' ನಲ್ಲಿ ಪೊಲೀಸರು ಸ್ಪಷ್ಟನೆ ನೀಡಿದ್ದಾರೆ.

ಕೆನರಾ ಬ್ಯಾಂಕ್ केनरा बैंक Canara Bank
A Government of India Undertaking
Together We Can

Head Office, HOSA Section, HR Wing, No. 112, J C Road, Bengaluru – 560002
Tel : Direct 22238406

NOTICE FOR ENGAGING DOCTOR AT HEAD OFFICE BENGALURU

Offers are invited from Doctors (MD / PG with min. 7 Yrs experience) for maintaining Health Clinic situated at Canara Bank, Head Office (Main building), #112, J C Road, Bengaluru.
The application can be downloaded from Canara Bank website www.canarabank.com from the following link :
Announcements → Engaging Doctor at HO Bengaluru → Application form
Last date to submit duly filled application in all respects is 17/09/2024.
Place : Bengaluru
Date : 10/09/2024
Sd/-
DEPUTY GENERAL MANAGER

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-131/1309/2024-25 ದಿನಾಂಕ: 09.09.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಚೈತ್ರರೆಡ್ಡಿ ಪ್ರದೀಪ್	ಆನೇಕಲ್	ಸರ್ಜಾಪುರ	ತಿಗಳಚೌಡದೇನಹಳ್ಳಿ	95/2	2-09	ವ್ಯವಸಾಯ	ವಾಣಿಜ್ಯ
					ಒಟ್ಟು	2-09		

ಷರಾ: ಈ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ನಿರ್ಮಿಸುವುದರಿಂದ ಸಾರ್ವಜನಿಕರಿಗೆ ಉತ್ತಮ ಬೆಲೆಯಲ್ಲಿ ವಾಣಿಜ್ಯ ಮಳಿಗೆಗಳು, ದಿನನಿತ್ಯ ಉಪಯೋಗದ ವಸ್ತುಗಳು ಹತ್ತಿರದಲ್ಲಿ ಲಭ್ಯವಾಗುತ್ತವೆ. ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ, ಸ್ಥಳೀಯರಿಗೆ ಉದ್ಯೋಗಾವಕಾಶಗಳು ದೊರಕುತ್ತದೆ. ಪ್ರಶ್ನಿತ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುವಾಗ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಪ್ರಶ್ನಿತ ಜಮೀನು ನಗರ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ, ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಿದ್ಧ ತಿನಿಸುಗಳ ವಿತರಕ, ಖಾಸಗಿ ಕಂಪನಿ ಉದ್ಯೋಗಿ ಪುತ್ರಿಯರ ಸಾಧನೆ

ಅನ್ನಪೂರ್ಣ, ಅನುರಾಧಾಗೆ ತಲಾ 9 ಚಿನ್ನ

ಪ್ರಜಾವಾಣಿ ವಾರ್ತೆ

ಅನುರಾಧಾ

ಅನ್ನಪೂರ್ಣ

ಬೆಂಗಳೂರು: ಕೋಲಾರ ಜಿಲ್ಲೆ ಮುಳಬಾಗಿಲಿನಲ್ಲಿ ಸಿದ್ಧ ಆಹಾರ ವಿತರಣೆ ಮಾಡುವ ಕುಟುಂಬದ ಕುಡಿ ಎಸ್. ಅನ್ನಪೂರ್ಣ ಅವರು ಬೆಂಗಳೂರು ವಿಶ್ವವಿದ್ಯಾಲಯದ ಒಂಬತ್ತು ಚಿನ್ನದ ಪದಕಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ರಸಾಯನಶಾಸ್ತ್ರ ಸ್ನಾತಕೋತ್ತರ ವಿಭಾಗದಲ್ಲಿ ಮೊದಲ ರ‍್ಯಾಂಕ್ ಪಡೆದ ಅವರು ಒಂಬತ್ತು ಚಿನ್ನದ ಪದಕಗಳ ಜೊತೆಗೆ ಎರಡು ನಗದು ಬಹುಮಾನಕ್ಕೂ ಪಾತ್ರರಾಗಿದ್ದಾರೆ.

ಕೆ.ಎಲ್. ಸೋಮಶೇಖರ್–ಎನ್. ಲಲಿತಾ ದಂಪತಿಯ ಐವರು ಮಕ್ಕಳಲ್ಲಿ ಅನ್ನಪೂರ್ಣ ಹಿರಿಯ ಮಗಳು. ಬೆಂಗಳೂರಿನಲ್ಲಿ ಸಿದ್ಧವಾಗುವ ಪೂರಿ, ಪರೋಟಗಳನ್ನು ತರಿಸಿ, ಸ್ಥಳೀಯ ಹೋಟೆಲ್, ಅಂಗಡಿಗಳಿಗೆ ವಿತರಿಸುವ ಕೆಲಸ ಮಾಡುತ್ತಾರೆ. ಆರ್ಥಿಕ ಸಂಕಷ್ಟದ ಮಧ್ಯೆಯೂ ಐವರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಶ್ರಮಿಸುತ್ತಿದ್ದಾರೆ.

'ಸ್ನಾತಕೋತ್ತರ ಪದವಿಯ ನಂತರ ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದೆ. ಈಗ ಕೆಲಸ ಬಿಟ್ಟು ಪಿಎಚ್.ಡಿಗೆ ಪ್ರವೇಶಕ್ಕೆ ಸಿದ್ಧತೆ ನಡೆಸಿರುವೆ. ಸರ್ಕಾರಿ ಕೆಲಸಕ್ಕೆ ಸೇರಿ ತಂಗಿಯರು, ನಮ್ಮನ್ನು ಓದಿಸುವ ಜವಾಬ್ದಾರಿ ತೆಗೆದುಕೊಳ್ಳುವೆ' ಎನ್ನುತ್ತಾರೆ ಅನ್ನಪೂರ್ಣ.

ಅನುರಾಧಾಗೂ ಒಂಬತ್ತು ಚಿನ್ನ: ಖಾಸಗಿ ಕಂಪನಿ ಉದ್ಯೋಗಿ, ನೆಲಮಂಗಲ ತಾಲ್ಲೂಕು ಗೊಳಾಪುರದ ಆರ್. ಮಂಜುನಾಥ್ ಅವರ ಪುತ್ರಿ ಎಂ. ಅನುರಾಧಾ ಅವರು ಬಿ.ಎಸ್‌ಸಿ ಪದವಿಯಲ್ಲಿ ಒಂಬತ್ತು ಚಿನ್ನ, ಏಳು ನಗದು ಬಹುಮಾನ ಪಡೆದಿದ್ದಾರೆ. ಬೆಂಗಳೂರಿನ ಜಿಂದಾಲ್ ಮಹಿಳಾ ಪದವಿ ಕಾಲೇಜಿನ ವಿದ್ಯಾರ್ಥಿ ಅನುರಾಧಾ ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಸಾಯನ ಶಾಸ್ತ್ರದಲ್ಲಿ ಎಂ.ಎಸ್‌ಸಿ ಸೇರಿದ್ದಾರೆ.

'ಅಪ್ಪ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿದರೆ, ಅಮ್ಮ ಟೈಲರಿಂಗ್ ಮಾಡಿ ಓದಿಗೆ ನೆರವಾಗುತ್ತಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಅಧಿಕಾರಿಯಾಗುವ ಗುರಿ ಇಟ್ಟುಕೊಂಡಿದ್ದೇನೆ' ಎಂದು ಅನುರಾಧಾ ತಿಳಿಸಿದರು.

308 ಚಿನ್ನದ ಪದಕ: ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಸೇರಿ ವಿವಿಧ ವಿಭಾಗಗಳ 158 ವಿದ್ಯಾರ್ಥಿಗಳು ಒಟ್ಟು 308 ಚಿನ್ನದ ಪದಕಕ್ಕೆ ಪಾತ್ರರಾಗಿದ್ದಾರೆ. ಅವರಲ್ಲಿ 113 ಮಹಿಳೆಯರು ಎನ್ನುವುದು ವಿಶೇಷ. ಸ್ನಾತಕೋತ್ತರ ವಿಭಾಗದಲ್ಲಿ 77 ಹಾಗೂ ಸ್ನಾತಕ ಪದವಿಯಲ್ಲಿ 36 ಮಹಿಳೆಯರು ಪದಕ ಪಡೆದಿದ್ದಾರೆ. ಮೂರು ವಿದ್ಯಾರ್ಥಿಗಳು ತಲಾ ಆರು, ಏಳು ವಿದ್ಯಾರ್ಥಿಗಳು ತಲಾ ಐದು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ಸೇಂಟ್ ಕ್ಲಾರೆಟ್ ಕಾಲೇಜಿನ ಜೆ. ರಮ್ಯಾ, ಬೆಂಗಳೂರು ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ಎಂ.ಪಿ. ರಮ್ಯಾ, ಕನ್ನಡ ಅಧ್ಯಯನ ಕೇಂದ್ರದ ವೈ.ಬಿ. ವಿಶಾಲಾಕ್ಷಿ ಅವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಚಿನ್ನದ ಪದಕದ ಶ್ರೇಯ ಸಂದಿದೆ.

ಬೆಂಗಳೂರು ವಿವಿ: ಇಂದು ಘಟಿಕೋತ್ಸವ

ಬೆಂಗಳೂರು ವಿಶ್ವವಿದ್ಯಾಲಯದ 59ನೇ ಘಟಿಕೋತ್ಸವ ಸೆಂಟ್ರಲ್ ಕಾಲೇಜಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಸೆ. 10ರಂದು ಬೆಳಿಗ್ಗೆ 11ಕ್ಕೆ ಆರಂಭವಾಗಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕುಲಪತಿ ಎಸ್.ಎಂ. ಜಯಕರ, ರಾಜ್ಯಪಾಲರು ಘಟಿಕೋತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಮಾಹಿತಿ ನೀಡಿದ್ದಾರೆ. ಹಾಗಾಗಿ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅಧ್ಯಕ್ಷತೆಯಲ್ಲಿ ಘಟಿಕೋತ್ಸವ ನಡೆಯಲಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗದ ಉಪಾಧ್ಯಕ್ಷ ದೀಪಕ್ ಕುಮಾರ್ ಶ್ರೀವಾಸ್ತವ ಘಟಿಕೋತ್ಸವ ಭಾಷಣ ಮಾಡುವರು ಎಂದರು.

ಸಿಂಡಿಕೇಟ್‌ನ ಮೂವರು ಸದಸ್ಯರಿಗೆ ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಭಾಗಿಯಾಗದಂತೆ ಹೈಕೋರ್ಟ್ ತಡೆ ನೀಡಿದೆ. ಹಾಗಾಗಿ, ಅವರು ಘಟಿಕೋತ್ಸವದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದರು.

31,382 ವಿದ್ಯಾರ್ಥಿಗಳು ಪದವಿಗೆ ಅರ್ಹರಾಗಿದ್ದಾರೆ. 21,853 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. 140 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪ್ರದಾನ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಗುರುಕಿರಣ್, ರಾಜಣ್ಣಗೆ ಗೌರವ ಡಾಕ್ಟರೇಟ್

ಸಂಗೀತ ನಿರ್ದೇಶಕ ಗುರುಕಿರಣ್, ಸಮಾಜಸೇವಕ ಕೆ.ಎಸ್. ರಾಜಣ್ಣ ಅವರನ್ನು ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಿದೆ.

ಕಲೆ, ಸಂಗೀತ ಕ್ಷೇತ್ರದ ಸಾಧನೆಗೆ ಗುರುಕಿರಣ್ ಮತ್ತು ಕ್ರೀಡೆ, ಸಮಾಜ ಸೇವಾ ಕ್ಷೇತ್ರದಲ್ಲಿನ ಸಾಧನೆಗೆ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಮಾಜಿ ಆಯುಕ್ತ ರಾಜಣ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಎಂದು ಕುಲಪತಿ ಎಂ.ಎಸ್. ಜಯಕರ್ ಹೇಳಿದರು.

ಮಗುವಿನ ರಕ್ಷಣೆ

ರಾಮನಗರ: ಐದು ವರ್ಷದ ಹೆಣ್ಣು ಮಗುವನ್ನು ಅಪಹರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದ ಚಿತ್ರಕಲಾವಿದನನ್ನು ಭಾನುವಾರ ರಾತ್ರಿ ಸ್ಥಳೀಯರ ನೆರವಿನಿಂದ ಕುಟುಂಬದವರೇ ಹಿಡಿದು ಪೊಲೀಸರಿಗೆ ಒಪ್ಪಿಸಿ, ಮಗುವನ್ನು ರಕ್ಷಿಸಿದ್ದಾರೆ.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಭರವಸೆ

ಸಿಂಗಪುರ ಉದ್ಯಮಿಗಳಿಗೆ ಮೂಲಸೌಕರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂಗಪುರದ ಉದ್ಯಮಿಗಳು ರಾಜ್ಯದಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಗೆ ಮುಂದೆ ಬಂದರೆ ಅವರಿಗೆ ಅಗತ್ಯವಾಗಿ ಬೇಕಾದ ಭೂಮಿ ಮತ್ತು ಇತರ ಮೂಲಸೌಕರ್ಯಗಳನ್ನು ತ್ವರಿತಗತಿಯಲ್ಲಿ ಒದಗಿಸಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಭರವಸೆ ನೀಡಿದ್ದಾರೆ.

ತಮ್ಮನ್ನು ಭೇಟಿ ಮಾಡಿದ ಸಿಂಗಪುರ್ ಬಿಜಿನೆಸ್ ಫೆಡರೇಶನ್‌ನ ಉನ್ನತ ಮಟ್ಟದ ನಿಯೋಗದ ಸದಸ್ಯರೊಂದಿಗೆ ಮಾತುಕತೆ ನಡೆಸಿದ ಅವರು, ಅಲ್ಲಿನ ಉದ್ಯಮಿ ಗಳೊಂದಿಗೆ ನಿರಂತರ ಸಂಪರ್ಕದಲ್ಲಿ ಇರಲಾಗುವುದು ಎಂದೂ ಹೇಳಿದರು.


ಎಂ.ಬಿ.ಪಾಟೀಲ

2025ರ ಫೆಬ್ರುವರಿ 12 ರಿಂದ 14 ರವರೆಗೆ ಬೆಂಗಳೂರಿನಲ್ಲಿ ನಡೆಯುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಸಿಂಗಪುರದ ಉದ್ದಿಮೆದಾರರು ಭಾಗವಹಿಸಬೇಕು ಎಂದು ಎಂ.ಬಿ.ಪಾಟೀಲ ಅವರು ಆಹ್ವಾನ ನೀಡಿದರು.

ಸಿಂಗಪುರದ ಅಪ್ಲೈಡ್ ಟೋಟಲ್ ಕಂಟ್ರೋಲ್ ಟ್ರೀಟ್ಮೆಂಟ್ ಪಿಟಿಇ ಲಿಮಿಟೆಡ್, ಬಯೋಮೆಡ್ ಸರ್ವೀಸಸ್ ಪಿಟಿಇ ಲಿಮಿಟೆಡ್, ಕೇಟರಿಂಗ್ ಸೊಲ್ಯೂಷನ್ಸ್ ಲಿ, ಹರ್ಮಿಸ್ ಎಪಿಟೆಕ್ ಕಾರ್ಪೊರೇಷನ್, ಇನ್ಸ್ಪಿಯರ್ ಟೆಕ್ನಾಲಜಿ, ರಿಟ್ಜ್ ಲಿಮಿಟೆಡ್, ಯೂನಿವರ್ಸಲ್ ಸಕ್ಸಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ರಾಜ್ಯದಲ್ಲಿ ಹೂಡಿಕೆ ಆಸಕ್ತಿ ವ್ಯಕ್ತಪಡಿಸಿದವು. ಇವುಗಳಿಗೆ ಅಗತ್ಯ ಭೂಮಿ ಮತ್ತು ಇತರ ಮೂಲಸೌಕರ್ಯಗಳನ್ನು ಒದಗಿಸುವುದಾಗಿ ಪಾಟೀಲ ಭರವಸೆ ನೀಡಿದರು.

ಸಿಂಗಪುರ ಬಿಜಿನೆಸ್ ಫೆಡರೇಶನ್‌ನ ಕಚೇರಿಯನ್ನು ಬೆಂಗಳೂರಿನಲ್ಲಿ ತೆರೆಯಲು ಆಸಕ್ತಿ ಹೊಂದಿರುವುದಾಗಿ ಫೆಡರೇಶನ್ ಸದಸ್ಯರು ತಿಳಿಸಿದರು. ನಿಯೋಗದಲ್ಲಿ ಉದ್ಯಮಿಗಳಾದ ಜೆಫ್ರಿ ಗುವೋ, ಡಗ್ಲಾಸ್ ಟ್ಯಾನ್, ಸಮಂತಾ ಟಿಯೋ, ಚೆನ್ ಚಿಯೋಂಗ್, ಮಾರ್ಕಸ್ ಸಿಯಾ, ಪಪ್ಪು ಮಿಲಿಂದ್ ಸುರೇಶ್, ಎಸ್.ಮಹೇಂದ್ರನ್, ಜೆಫ್ರಿ ಕಾಂಗ್ ಮತ್ತು ಶಂಭುನಾಥ್ ರೇ ಇದ್ದರು.

ಕನ್ನಡದಲ್ಲಿ ಔಷಧಿ ಚೀಟಿ: ಸರ್ಕಾರಿ ಆದೇಶಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ವೈದ್ಯರು ಕನ್ನಡದಲ್ಲಿಯೇ ಔಷಧಿ ಚೀಟಿ ಬರೆಯುವುದನ್ನು ಕಡ್ಡಾಯಗೊಳಿಸಿ ಶೀಘ್ರ ಆದೇಶ ಜಾರಿ ಮಾಡಬೇಕು' ಎಂದು ಆರೋಗ್ಯ ಸಚಿವರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮನವಿ ಮಾಡಿದ್ದಾರೆ.

'ರಾಯಚೂರಿನಲ್ಲಿ ವೈದ್ಯರು ಔಷಧಿ ಚೀಟಿಗಳನ್ನು ಕನ್ನಡದಲ್ಲಿ ಬರೆದು ಭಾಷೆಯ ಬೆಳವಣಿಗೆಗೆ ಸಹಕರಿಸಬೇಕೆಂದು ನೀಡಿದ ಕರೆಗೆ, ನೂರಾರು ಕನ್ನಡಪ್ರಿಯ ವೈದ್ಯರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಇದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಚೇತೋಹಾರಿ ಸಂಗತಿಯಾಗಿದೆ. ಹಾಗಾಗಿ ಸರ್ಕಾರಿ ವೈದ್ಯರೆಲ್ಲರೂ ಕನ್ನಡದಲ್ಲಿಯೇ ಔಷಧಿ ಚೀಟಿ ಬರೆಯಬೇಕೆಂದು ಕಡ್ಡಾಯ ಮಾಡುವಲ್ಲಿ ಕೂಡಲೇ ಸರ್ಕಾರದ ಆದೇಶ ಹೊರಡಿಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದಿದ್ದಾರೆ.

'ಕನ್ನಡಪ್ರಿಯ ವೈದ್ಯರನ್ನು, ಅವರ ಭಾಷಾ ಪರವಾದ ಕ್ರಿಯಾಶೀಲ ಚಟುವಟಿಕೆಗಳನ್ನು ಗುರುತಿಸಿ ಪ್ರತಿವರ್ಷ ವೈದ್ಯರ ದಿನದಂದು ಅಭಿನಂದಿಸುವ ಹಾಗೂ ಪುರಸ್ಕರಿಸುವ ಕೆಲಸವಾಗಬೇಕು' ಎಂದು ಅವರು ಕೋರಿದ್ದಾರೆ.

ಬಿಟಿಎಂಸಿ ಕಾಯ್ದೆ ರದ್ದತಿಗೆ ಆಗ್ರಹಿಸಿ ಶಾಂತಿಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೋಧ್‌ಗಯಾ ದೇವಾಲಯ ನಿರ್ವಹಣಾ ಸಮಿತಿ 1949ರ (ಬಿಟಿಎಂಸಿ) ಕಾಯ್ದೆ ರದ್ದುಪಡಿಸುವಂತೆ ಆಗ್ರಹಿಸಿ ಇದೇ 17ರಂದು ಬಿಹಾರದ ಪಾಟ್ನಾ ನಗರದ ಗಾಂಧಿ ಮೈದಾನದಲ್ಲಿ ಬೌದ್ಧರ ಸಾರ್ವಜನಿಕ ಸಭೆ ಮತ್ತು ಶಾಂತಿಯಾತ್ರೆ ನಡೆಯಲಿದೆ ಎಂದು ಅಖಿಲ ಭಾರತ ಬೌದ್ಧ ವೇದಿಕೆ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಬೋಧಿ ಬುದ್ಧ ವಿಹಾರ ಟ್ರಸ್ಟ್‌ನ ಮಾಜಿ ಕಾರ್ಯದರ್ಶಿ ಪ್ರಜ್ಞಶೀಲ ಭಂತೇಜಿ, 'ಬೋಧ್‌ಗಯಾ ದೇವಾಲಯದ ಆಡಳಿತ ನಿರ್ವಹಣೆಯನ್ನು ಪೂರ್ಣವಾಗಿ ಬೌದ್ಧ ಧರ್ಮೀಯರಿಗೆ ನೀಡುವಂತೆ ಆಗ್ರಹಿಸಿ ಶಾಂತಿಯಾತ್ರೆ ನಡೆಸಲಾಗುತ್ತಿದೆ. ಕರ್ನಾಟಕ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಸುಮಾರು ಐದು ಲಕ್ಷ ಜನರು ಪಾಲ್ಗೊಳ್ಳಲಿದ್ದಾರೆ. ಬೋಧ್ ಗಯಾದ ಮಹಾಬೋಧಿ ಮಠ ಹಾಗೂ ಬೌದ್ಧರ ಇತರೆ ಪವಿತ್ರ ಸ್ಥಳಗಳ ಆಡಳಿತವನ್ನು ಬೌದ್ಧ ಧರ್ಮೀಯರಿಗೆ ನೀಡಬೇಕು' ಎಂದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, 'ಬೋಧ್‌ಗಯಾದಲ್ಲಿರುವ ಮಹಾಬೋಧಿ ಮಠವು 200 ವರ್ಷಗಳಿಂದ ಸ್ಥಳೀಯ ಸನಾತನಿ ಹಿಂದೂ ಸಮುದಾಯದ ಹಿಡಿತದಲ್ಲಿದೆ. ಇದರಿಂದ, ಬೌದ್ಧ ಸಂಸ್ಕೃತಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ' ಎಂದು ಆರೋಪಿಸಿದರು.

ವೇದಿಕೆ ಮುಖಂಡರಾದ ಬಿ. ಗೋಪಾಲ್, ಹೆಣ್ಣೂರು ಶ್ರೀನಿವಾಸ್, ಆರ್. ಮೋಹನರಾಜ್ ಸುದ್ದಿಗೋಷ್ಠಿಯಲ್ಲಿದ್ದರು.

ರಸ್ತೆ ಅವ್ಯವಸ್ಥೆ

ಕುಮಾರಕೃಪಾ ರಸ್ತೆಯಲ್ಲಿ ಹಲವು ದಿನಗಳಿಂದ ಗುಂಡಿ ಬಿದ್ದಿದ್ದು, ಅದರ ಮೇಲೆ ಬ್ಯಾರಿಕೇಡ್ ಇಡಲಾಗಿದೆ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್ (ಎಡಚಿತ್ರ) ಗಂಗಾನಗರದ ಕೆಳಸೇತುವೆ ಸಮೀಪದ ರಸ್ತೆಯಲ್ಲಿ ಗುಂಡಿಯನ್ನು ದೊಡ್ಡ ಕಲ್ಲುಗಳಿಂದ ಮುಚ್ಚಲಾಗಿದೆ ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ

ಬಿಬಿಎಂಪಿ ವಲಯ ಆಯುಕ್ತರ ನೇತೃತ್ವದಲ್ಲಿ ದುರಸ್ತಿ

ರಸ್ತೆ ಗುಂಡಿ ಮುಚ್ಚುವ ಕಾರ್ಯ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ವಾರದಲ್ಲಿ ರಸ್ತೆಗಳ ಗುಂಡಿಗಳನ್ನು ಮುಚ್ಚಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಾಕೀತು ಮಾಡಿರುವ ಕಾರಣದಿಂದ ಬಿಬಿಎಂಪಿ ವಲಯ ಆಯುಕ್ತರು ರಸ್ತೆಗಳಿದು, ಗುಂಡಿ ಮುಚ್ಚುವ ಕಾರ್ಯದ ನೇತೃತ್ವ ವಹಿಸಿಕೊಂಡಿದ್ದಾರೆ.

ಮುಖ್ಯ ಆಯುಕ್ತರು ಹಾಗೂ ವಲಯ ಆಯುಕ್ತರೊಂದಿಗೆ ನಡೆದ ಸಭೆಯಲ್ಲಿ ಶಿವಕುಮಾರ್ ಅವರು ರಸ್ತೆ ಗುಂಡಿ ಮುಚ್ಚದಿದ್ದರೆ ವಲಯ ಆಯುಕ್ತರು ಹಾಗೂ ಸಂಬಂಧಿಸಿದ ಎಂಜಿನಿಯರ್‌ಗಳನ್ನು ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದ್ದರು. ಅವರ ಎಚ್ಚರಿಕೆಯ ಬೆನ್ನಲ್ಲೇ ಸೋಮವಾರದಿಂದ ವಲಯಗಳಲ್ಲಿ ರಸ್ತೆ ಗುಂಡಿ ಮುಚ್ಚುವ ಕೆಲಸ ಆರಂಭವಾಗಿದೆ.

ಶಿವಾಜಿನಗರದ ತಿಮ್ಮಯ್ಯ ರಸ್ತೆಯಲ್ಲಿ ಸೋಮವಾರ ಗುಂಡಿ ಮುಚ್ಚುವ ಕಾರ್ಯವನ್ನು ಪೂರ್ವ ವಲಯ ಆಯುಕ್ತೆ ಸ್ನೇಹಲ್ ವೀಕ್ಷಿಸಿದರು

'ಪೂರ್ವ ವಲಯ ವ್ಯಾಪ್ತಿಯಲ್ಲಿ 258.59 ಕಿ.ಮೀ ಮುಖ್ಯ ಹಾಗೂ ಉಪ ಮುಖ್ಯರಸ್ತೆ, 1,394 ಕಿ.ಮೀ ಉದ್ದದ ರಸ್ತೆ ವಾರ್ಡ್ ರಸ್ತೆಗಳು ಸೇರಿದಂತೆ ಒಟ್ಟು 1,652.59 ಕಿ.ಮೀ ಉದ್ದದ ರಸ್ತೆಗಳಿವೆ. ಒಂದು ವರ್ಷದಲ್ಲಿ 2,390 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ' ಎಂದು ವಲಯ ಆಯುಕ್ತೆ ಸ್ನೇಹಲ್ ತಿಳಿಸಿದರು.

'ರಸ್ತೆ ಗುಂಡಿ ಗಮನ' ತಂತ್ರಾಂಶದಲ್ಲಿ ಏಪ್ರಿಲ್‌ನಿಂದ ಈವರೆಗೆ ವಾರ್ಡ್ ರಸ್ತೆ ಗುಂಡಿಗಳ ಬಗ್ಗೆ 494 ದೂರು, ಪ್ರಮುಖ ರಸ್ತೆಗಳ ಗುಂಡಿಗಳ ಬಗ್ಗೆ 537 ದೂರುಗಳು ಬಂದಿವೆ. ವಾರ್ಡ್ ರಸ್ತೆಗಳಲ್ಲಿ 133 ಗುಂಡಿ ಹಾಗೂ ಪ್ರಮುಖ ರಸ್ತೆಗಳಲ್ಲಿ 132 ಗುಂಡಿಗಳನ್ನು ಮುಚ್ಚಲಾಗಿದೆ. ಇನ್ನುಳಿದ 766 ಗುಂಡಿಗಳನ್ನು ಕಾಲ ಮಿತಿಯೊಳಗಾಗಿ ಮುಚ್ಚಲಾಗುವುದು ಎಂದು ಹೇಳಿದರು.

ಒತ್ತುವರಿ ತೆರವು: ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯ ಪರಿಶೀಲನೆಯ ನಂತರ ತಿಮ್ಮಯ್ಯ ರಸ್ತೆ, ನ್ಯೂ ಮಾರ್ಕೆಟ್ ರಸ್ತೆ ಸೇರಿದಂತೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿದ ಸ್ನೇಹಲ್ ಅವರು, ಪಾದಚಾರಿ ಮಾರ್ಗಗಳಲ್ಲಿನ ಒತ್ತುವರಿ ತೆರವಿಗೆ ಸೂಚಿಸಿದರು.

ಮುಖ್ಯ ಎಂಜಿನಿಯರ್ ಸುಗುಣಾ, ಕಾರ್ಯಪಾಲಕ ಎಂಜಿನಿಯರ್ ಸೈಫುದ್ದೀನ್ ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE
Our client, Mrs.Pushpa Lakhani alias Mrs. Rajni Bhambhwani daughter of (late) Kishinchand D Lakhani, aged about 71 years, residing at Morumal Mansion, 2nd Floor, 10th Road, Kar (West), Mumbai- 400 052. Mrs.Pushpa Lakhani alias Mrs. Rajni Bhambhwani is the owner of the Office Unit No.509 admeasuring 455 Sq ft, super built-up area on the 5th floor of 'A' wing of the building known as "Mittal Tower", situated at No.6, M.G.Road, Bengaluru – 560 001, property bearing Municipal No.6/98, PD No.81-1-6/98.Our client has discovered that the Release Deed dated 08/03/2017, registered as Document No. INR-1-09126-2016-17, CD No. INRD185, in the office of SRO, Indiranagar, Bengaluru (the "Original Release Deed") has been lost in transit, despite all efforts to trace the same and a police complaint has been lodged to this effect.
Any person having information or possession of the Original Release Deed is requested to contact our offices. Sd/-
Advocate Ashika U.
1263 & 1264, 14th FloorB Wing, Mittal Tower, M.G.Road, Bangalore -560001
Phone 9740087375
Place: Bengaluru

BUSINESS
Business to Business
Business
RETIRED, OTHERS, Males, Females become Partner from Home, Earn lakhs of income every month. 8792645301

REAL ESTATE SELLING
Agricultural Land
General
FOR SALE: 28 Acres Organic Certified Land, Located in Naykal Village, Yadgir District.12 km from Yadgir district headquarter. Just 3 km from Yadgir-Shahpur state highway and 2 km from Chennai to Surat 6-lane highway. Ideal for organic farming or industrial use. Nala conversion can be arranged if interested. Serious buyers please contact to 9704416895

PERSONAL
Change of Name
I, ZAHEDA Wahid Girach W/o Girach Abdulwahid Mohammad Umar R/o #56/1, 7th A Cross, Opp Masjid A Sultana Kanaka Nagar, Bangalore 560032. have changed my name to Zaheda Abdulwahid Girach.

R.E.S. POLYTECHNIC
Estd: 1986 - Recognised by Govt. of Karnataka & AICTE
EVENING / WEEKEND CLASSES
Available for working Professionals to EE
10th Pass / What Next ???
JOIN DIPLOMA IN: Computer Science IS, Civil, Mechanical, Automobile, Electrical, Electronics, Fashion Tech, Commerce (CP)
5, Sunkadakatte, Magadi Road, Hegganahalli Cross, Bengaluru-91
Call: Secretary - 99166 46466
RES-2467

You Have Problem? Solutions for all problems from
FAMOUS ASTROLOGER BABA MUSA KHAN
10 Years Same Location Fees after work Open Challenge
9740748819
Family Dispute, Job, Enemies, Love Affair, Child Problem, Second Wife Problem, Delay in Marriage, Love Marriage, Relation Issue, foreign tour, Etc
For Urgent Solutions Meet Once
Adugodi, Koramangala 8th Blk, Nr Narayan School

ಇಂಡಿಯನ್ ಹಾತ್ ಫೆಸ್ಟಿವಲ್
Indian Haat Festival
A Shopping Fest
Arts, Crafts and Handlooms Exhibition
Ganesh Chaturthi and Onam Shopping Special
6th to 15th September 2024
Timings : 10:30 AM to 7:00 PM
10 Days Exhibition
Entry Free
Grand Flea Market
Venue: Karnataka Chitrakala Parishath
Kumara Krupa Road, Near Shivananda Circle
Bengaluru - 560 001.
100+ Stalls | Live Performance | 10 Days Exhibition | Entry Free
LED Show Live Performance Date : 14th Sept 2024 Timings: 5.30 PM- 7 PM
Indian Folk Band Live Performance Date : 15th Sept 2024 Timings: 5.30 PM- 7 PM
Art & Craft | Jewellers | Clothings | Fashion Accessories | Home Decore & More
For Details Contact: 6364685716 / 9036658774

CHANGE OF NAME
I, RAMADEVARU RAMESHA, R/at # 6, 2nd Cross, T D Lane, Opp. Ankaliparameshwari Temple Street, Cottonpet, Bengaluru-560053, have changed my name to RAMESH KABADI RAMDEVASA vide affidavit dated 09.09.2024, before notary S.I. Balaguru, Bengaluru. Henceforth I shall be called as RAMESH KABADI RAMDEVASA only

CHANGE OF NAME
I, TAHSEEN GULEDGUD, W/o Thoufeeq Ahmed, R/at # 103, 4th Cross, Amarjyothi Layout, Sampigehalli, R.K. Hegde Nagar Post, Bengaluru-560077, have changed my name to TAHSEEN MOHAMMED IQBAL GULEDGUD vide affidavit dated 03.09.2024, before notary R. Chandrashekar, Bengaluru.

Lost
I, VIVEK Antony, residing at 303, J.P.Nagar 7th phase, lost my Diploma Certificate, M.S. Ramaiah College, passed out in the year 2013 (476CE10038) while in transit. If found, please contact: 7022659367.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036



ದಕ್ಷಿಣ ಭಾರತದ ಮೊದಲ ಹವಾನಿಯಂತ್ರಿತ ಮಾರುಕಟ್ಟೆ ವಿಜಯನಗರದಲ್ಲಿ ಆರಂಭ • ಯಶಸ್ವಿಯಾದರೆ ವಿವಿಧೆಡೆ ಆರಂಭಿಸಲು ಬಿಬಿಎಂಪಿ ಚಿಂತನೆ

ಬೀದಿ ವ್ಯಾಪಾರಕ್ಕೊಂದು ಸೂರು: ಪಾಲಿಕೆ ಬಜಾರ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬೀದಿ ವ್ಯಾಪಾರಕ್ಕೊಂದು ಸೂರು ಕಲ್ಪಿಸುವ ಉದ್ದೇಶದಿಂದ ವಿಜಯನಗರದಲ್ಲಿ ಆರಂಭಗೊಂಡಿರುವ ದಕ್ಷಿಣ ಭಾರತದ ಮೊದಲ ಹವಾನಿಯಂತ್ರಿತ 'ಶ್ರೀಕೃಷ್ಣದೇವರಾಯ ಪಾಲಿಕೆ ಬಜಾರ್' ಈಗ ಆಕರ್ಷಣೆಯ ಕೇಂದ್ರವಾಗಿದೆ. ಯೋಜನೆ ಇಲ್ಲಿ ಯಶಸ್ವಿಯಾದರೆ ನಗರದಲ್ಲಿ ಸಾಧ್ಯ ಇರುವ ಕಡೆಗಳಲ್ಲೆಲ್ಲ ಇನ್ನಷ್ಟು ಪಾಲಿಕೆ ಬಜಾರ್‌ಗಳನ್ನು ತೆರೆಯಲು ಬಿಬಿಎಂಪಿ ಚಿಂತನೆ ನಡೆಸಿದೆ.

ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿ, ಪಾದಚಾರಿ ಮಾರ್ಗ ಎಲ್ಲೆಂದರಲ್ಲಿ ವ್ಯಾಪಾರ ಮಾಡುವುದನ್ನು ತಪ್ಪಿಸಿ, ಒಂದೇ ಕಡೆ ವ್ಯಾಪಾರ ಮಾಡಲು ಪಾಲಿಕೆ ಬಜಾರ್ ಅವಕಾಶ ಕಲ್ಪಿಸಿಕೊಟ್ಟಿದೆ. ನೆಲದಡಿಯಲ್ಲಿ ಮಾರುಕಟ್ಟೆ ಇದಾಗಿರುವುದರಿಂದ ವಾಹನ ಸಂಚಾರಕ್ಕೆ ಉಂಟಾಗುತ್ತಿದ್ದ ತೊಡಕು ತಪ್ಪಲಿದೆ. ಅಪಘಾತಗಳ ಸಂಖ್ಯೆಯೂ ತಗ್ಗುವ ನಿರೀಕ್ಷೆ ಮೂಡಿದೆ. ಪಾದಚಾರಿ ಮಾರ್ಗಗಳು ವ್ಯಾಪಾರಕ್ಕೆ ಬಳಕೆಯಾಗುವ ಬದಲು ಜನಸಂಚಾರಕ್ಕೆ ಒದಗಲಿವೆ. ಜೊತೆಗೆ ವ್ಯಾಪಾರಿಗಳು ಮಳೆ, ಗಾಳಿ, ಬಿಸಿಲಿಗೆ ಮೈಯೊಡ್ಡುವ ಪ್ರಮೇಯ ತಪ್ಪಲಿದೆ.

ದೆಹಲಿಯಲ್ಲಿ ರಾಜೀವ್ ಚೌಕ ಮೆಟ್ರೊ ನಿಲ್ದಾಣ ಬಳಿಯೇ ಪಾಲಿಕೆ ಬಜಾರ್ ನಿರ್ಮಿಸಲಾಗಿದ್ದರೆ, ಬೆಂಗಳೂರಿನಲ್ಲಿಯೂ ನಮ್ಮ ಮೆಟ್ರೊ ಮತ್ತು ಬಿಎಂಟಿಸಿ ನಿಲ್ದಾಣಗಳ ಬಳಿಯೇ ಪಾಲಿಕೆ ಬಜಾರ್ ನಿರ್ಮಿಸಲಾಗಿದೆ. ಇದರಿಂದ ಗ್ರಾಹಕರಿಗೆ ಅನುಕೂಲವಾಗಿದೆ.

ಶ್ರೀಕೃಷ್ಣದೇವರಾಯ ಪಾಲಿಕೆ ಬಜಾರ್ ಅನ್ನು ಆಗಸ್ಟ್ 25ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ಮಾಡಿದ್ದರೂ ವ್ಯಾಪಾರಿಗಳು ತೆರಳಿರಲಿಲ್ಲ. ಗಣೇಶನ ಹಬ್ಬ ಮುಗಿಯುವವರೆಗೆ ಬೀದಿಯಲ್ಲೇ ವ್ಯಾಪಾರ ಮಾಡಿದ್ದು, ಸೆಪ್ಟೆಂಬರ್ 8ಕ್ಕೆ ಪಾಲಿಕೆ ಬಜಾರ್ ಒಳಗೆ ಅಂಗಡಿಗಳನ್ನು ತೆರೆದಿದ್ದಾರೆ. ಪೂಜೆ ಸಾಮಗ್ರಿ, ಹಣ್ಣು, ತರಕಾರಿ, ತೆಂಗಿನಕಾಯಿ, ಬಳೆ-ಕ್ಲಿಪ್ ಸೇರಿದಂತೆ ವಿವಿಧ ಬಗೆಯ ಉತ್ಪನ್ನಗಳ ವ್ಯಾಪಾರಗಳು ಗರಿಗೆದರಿವೆ. ಗ್ರಾಹಕರು, ಕುತೂಹಲಿಗಳು ಪ್ರತಿದಿನ ಪಾಲಿಕೆ ಬಜಾರ್‌ಗೆ ಬಂದು ಸುತ್ತು ಹಾಕಿ ಹೋಗುತ್ತಿದ್ದಾರೆ. ಇದರಿಂದ ಪ್ರತಿದಿನ ಸಂಜೆಯ ಹೊತ್ತಿಗೆ ಬಜಾರ್‌ನಲ್ಲಿ ಜನ ಸಂಚಾರ ಹೆಚ್ಚಾಗಿದೆ.

7 ವರ್ಷ: 2017ರಲ್ಲಿ ಈ ಯೋಜನೆಗೆ ಮಂಜೂರಾತಿ ನೀಡಿದ್ದ ರಾಜ್ಯ ಸರ್ಕಾರವು, ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ₹5 ಕೋಟಿ ಬಿಡುಗಡೆ ಮಾಡಿತ್ತು. ಏಳು ವರ್ಷಗಳ ಬಳಿಕ ಒಟ್ಟು ₹13 ಕೋಟಿ ವೆಚ್ಚದಲ್ಲಿ ಕಾಮಗಾರಿ ಪೂರ್ಣಗೊಂಡಿತ್ತು.

ಪೂರ್ಣ ಹವಾನಿಯಂತ್ರಿತವಾದ ಈ ಬಜಾರ್ ಒಟ್ಟು 1,165 ಚದರ ಮೀಟರ್ ವಿಸ್ತೀರ್ಣವನ್ನು ಹೊಂದಿದೆ. 136 ಮೀಟರ್ ಉದ್ದ, 11 ಮೀಟರ್ ಅಗಲ ಇರುವ ಈ ಬಜಾರ್‌ನಲ್ಲಿ ಪ್ರತಿ ಮಳಿಗೆಯ ವಿಸ್ತೀರ್ಣ 9 ಚದರ ಮೀಟರ್ ಆಗಿದೆ. 81 ಮಳಿಗೆಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ ಒಂದು ಕೊಠಡಿ ಭದ್ರತಾ ಸಿಬ್ಬಂದಿಗೆ, ಇನ್ನೊಂದು ಕೊಠಡಿ ವಿದ್ಯುತ್ ನಿರ್ವಹಣಾ ಸಿಬ್ಬಂದಿಗೆ ನೀಡಲಾಗಿದ್ದು, 79 ಮಳಿಗೆಗಳು ಬೀದಿ ವ್ಯಾಪಾರಿಗಳಿಗೆ ನೀಡಲಾಗಿದೆ. ಪ್ರತಿ ಮಳಿಗೆಗೆ ಅಗ್ನಿಶಾಮಕ ಉಪಕರಣ ಅಳವಡಿಸಲಾಗಿದೆ ಎಂದು ಪಾಲಿಕೆ ಬಜಾರ್ ಕಾಮಗಾರಿ ನಿರ್ವಹಿಸಿದ್ದ ಪರಿಚಿತ ಕನ್‌ಸ್ಟ್ರಕ್ಷನ್ ಎಂಜಿನಿಯರ್ ಶ್ರೇಯಸ್ ತಿಳಿಸಿದರು.

ವೇಗವಾಗಿ ಬೆಳೆಯುತ್ತಿರುವ ಬೆಂಗಳೂರಿಗೆ ಇಂಥ ಪಾಲಿಕೆ ಬಜಾರ್‌ಗಳ ಅವಶ್ಯಕತೆ ಹೆಚ್ಚಿದ್ದು, ಗ್ರಾಹಕರು ಅಧಿಕ ಇರುವ ಪ್ರದೇಶಗಳಲ್ಲಿ ಪಾಲಿಕೆ ಬಜಾರ್‌ಗಳನ್ನು ನಿರ್ಮಿಸಬೇಕು ಎಂಬುದು ಜನರ ಬೇಡಿಕೆಯಾಗಿದೆ.

ಪಾಲಿಕೆ ಬಜಾರ್ ಅಂಕಿ ಅಂಶ

ನಗರೋತ್ಥಾನದಲ್ಲಿ ನೀಡಿದ ಅನುದಾನ

₹5 ಕೋಟಿ 2017–18ರಲ್ಲಿ | ₹8 ಕೋಟಿ 2021–22ರಲ್ಲಿ

79 ಒಟ್ಟು ಮಳಿಗೆಗಳ ಸಂಖ್ಯೆ | **5** ಹೊರಾಂಗಣದಲ್ಲಿರುವ ಎ.ಸಿ. ಯುನಿಟ್‌ಗಳು

26 ಒಳಾಂಗಣದಲ್ಲಿರುವ ಎ.ಸಿ. ಯುನಿಟ್‌ಗಳು | **1** ಲಿಫ್ಟ್ | **8** ಪ್ರವೇಶ ದ್ವಾರ

2 ಎಸ್ಕಲೇಟರ್ | **145** ವಿದ್ಯುತ್ ದೀಪಗಳು

ವಿಜಯನಗರದಲ್ಲಿ ಬಿಬಿಎಂಪಿ ನಿರ್ಮಿಸಿರುವ 'ಕೃಷ್ಣದೇವರಾಯ ಪಾಲಿಕೆ ಬಜಾರ್' ಪ್ರಜಾವಾಣಿ ಚಿತ್ರಗಳು: ರಂಜು ಪಿ.

ವಿಜಯನಗರ ವ್ಯಾಪ್ತಿಯಲ್ಲಿ ಮತ್ತೆ ಮೂರು ಬಜಾರ್

ನಾನು ದೆಹಲಿಗೆ ಹೋದಾಗ ಅಲ್ಲಿನ ಪಾಲಿಕೆ ಬಜಾರ್ ನೋಡಿದ್ದೆ. ನಮ್ಮಲ್ಲಿಯೂ ಇಂಥ ಬಜಾರ್ ಆಗಬೇಕು ಎಂದು ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಮುಂದೆ ಪ್ರಸ್ತಾವ ಇರಿಸಿದ್ದೆ. ಅವರು ಯೋಜನೆಗೆ ಅನುಮೋದನೆ ನೀಡಿ, ಅನುದಾನವನ್ನೂ ಒದಗಿಸಿದರು. ಸುಸಜ್ಜಿತವಾದ ಪಾಲಿಕೆ ಬಜಾರ್ ನಿರ್ಮಾಣವಾಗಿದೆ. ಈಗ ಬೀದಿ ವ್ಯಾಪಾರಿಗಳು ಬಜಾರ್‌ಗೆ ಸ್ಥಳಾಂತರಗೊಳ್ಳುತ್ತಿದ್ದಾರೆ. ಮುಂದೆ ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮೂರು ಕಡೆ ಇದೇ ರೀತಿ ಪಾಲಿಕೆ ಬಜಾರ್ ಮಾಡುವ ಚಿಂತನೆ ಇದೆ.

ಎಂ.ಕೃಷ್ಣಪ್ಪ, ಶಾಸಕ, ವಿಜಯನಗರ

ಜಾಗ ಇರುವಲ್ಲಿ ಪಾಲಿಕೆ ಬಜಾರ್

ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಪಾಲಕೆ ಬಜಾರ್ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮಗೆ ಸೂಚನೆ ನೀಡಿದ್ದಾರೆ. ಕೆ.ಆರ್. ಮಾರುಕಟ್ಟೆಯಂಥ ದೊಡ್ಡ ಮಾರುಕಟ್ಟೆ ಇರುವಲ್ಲಿ ಪಾಲಿಕೆ ಬಜಾರ್ ಕಷ್ಟ. 50-60 ಬೀದಿ ವ್ಯಾಪಾರಿಗಳು ಒಂದೆಡೆ ವ್ಯಾಪಾರ ಮಾಡುತ್ತಿದ್ದರೆ, ಅಲ್ಲಿ ಸ್ಥಳಾವಕಾಶ ಇದ್ದರೆ ನೆಲದಡಿಯಲ್ಲಿ ಮಾರುಕಟ್ಟೆ ನಿರ್ಮಿಸಲಾಗುವುದು. ಬಿಬಿಎಂಪಿ ವತಿಯಿಂದ ಅಂಥ ಸ್ಥಳಗಳನ್ನು ಗುರುತಿಸುವ ಕಾರ್ಯ ನಡೆಯಲಿದೆ.

ತುಷಾರ್ ಗಿರಿನಾಥ್, ಬಿಬಿಎಂಪಿ ಮುಖ್ಯ ಆಯುಕ್ತ

ವ್ಯಾಪಾರಿಗಳು ಏನಂತಾರೆ?

ಪಾಲಿಕೆ ಬಜಾರ್‌ಗೆ ವ್ಯಾಪಾರಿಗಳು ಈಗಷ್ಟೇ ಸ್ಥಳಾಂತರಗೊಳ್ಳುತ್ತಿದ್ದಾರೆ. ಒಮ್ಮೆ ಪೂರ್ಣ ಪ್ರಮಾಣದಲ್ಲಿ ವ್ಯಾಪಾರ ಆರಂಭಗೊಂಡ ಬಳಿಕ ವಿಜಯನಗರ ಮೆಟ್ರೊ ನಿಲ್ದಾಣದ ಪಕ್ಕದ ಸರ್ವಿಸ್ ರಸ್ತೆಯಲ್ಲಿ ಬೀದಿ ವ್ಯಾಪಾರ ಪೂರ್ಣ ನಿಷೇಧಗೊಳ್ಳಲಿದೆ. ಬೀದಿಯಲ್ಲಿ ವ್ಯಾಪಾರ ಇಲ್ಲದೇ ಇದ್ದಾಗ ಇಲ್ಲೇ ಇರುವ ಪಾಲಿಕೆ ಬಜಾರ್‌ಗೆ ಗ್ರಾಹಕರು ಬಂದೇ ಬರುತ್ತಾರೆ. ನಮ್ಮ ಶಾಸಕರ ಕನಸಿನ ಯೋಜನೆ ಯಶಸ್ವಿಗೊಳ್ಳಲಿದೆ.

ಅಬ್ದುಲ್ ರಿಯಾಜ್
ವಿಜಯನಗರ ಹಣ್ಣು ಮತ್ತು ತರಕಾರಿ ಮಾರಾಟಗಾರರ ಸಂಘದ ಕಾರ್ಯದರ್ಶಿ

ಇಲ್ಲಿನ ಶಾಸಕರು ಒಳ್ಳೆಯ ಬಜಾರ್ ನಿರ್ಮಾಣ ಮಾಡಿದ್ದಾರೆ. ಬೀದಿ ವ್ಯಾಪಾರಿಗಳು ಇಲ್ಲಿಯೂ ಅಂಗಡಿ ಇಟ್ಟುಕೊಂಡು, ಹೊರಗೆಯೂ ಇನ್ನೊಂದು ಅಂಗಡಿ ಹಾಕಿಕೊಂಡು ವ್ಯಾಪಾರ ಮಾಡುವುದನ್ನು ಬಿಡಬೇಕು. ಇಲ್ಲೇ ಎಲ್ಲರೂ ವ್ಯಾಪಾರ ಆರಂಭಿಸಿದರೆ ಗ್ರಾಹಕರು ಹೊರಗೆ ಖರೀದಿಸುವುದಿಲ್ಲ. ಇಲ್ಲಿ ಉತ್ತಮ ವ್ಯಾಪಾರ ನಡೆಯಲಿದೆ.

ಕೆಂಪರಾಜು, ಪೂಜಾ ಸಾಮಗ್ರಿ ವ್ಯಾಪಾರಿ

'ಕೃಷ್ಣದೇವರಾಯ ಪಾಲಿಕೆ ಬಜಾರ್'ನಲ್ಲಿ ತೆರೆದಿರುವ ಮಳಿಗೆಗಳು

ನಾನು 50 ವರ್ಷಗಳಿಂದ ಹೊರಗೆ ಮಳೆ, ಬಿಸಿಲು ಲೆಕ್ಕಿಸದೇ ವ್ಯಾಪಾರ ಮಾಡುತ್ತಿದ್ದೇನೆ. ಇದೇ ಮೊದಲ ಬಾರಿಗೆ ನಮಗೆ ಈ ಬಜಾರ್ ಮೂಲಕ ರಕ್ಷಣೆ ಸಿಕ್ಕಿದೆ. ಹಳೇ ವ್ಯಾಪಾರಿಗಳನ್ನು ಗುರುತಿಸಿ ಅಂಗಡಿಗಳನ್ನು ನೀಡಿದ್ದಾರೆ. ಇತ್ತೀಚೆಗಷ್ಟೇ ವ್ಯಾಪಾರ ಆರಂಭಿಸಿರುವ ಕೆಲವರನ್ನು ಹೊರತುಪಡಿಸಿ ಮತ್ತೆಲ್ಲರಿಗೂ ಮಳಿಗೆಗಳು ಸಿಕ್ಕಿವೆ.

ರಾಮಣ್ಣ, ತೆಂಗಿನಕಾಯಿ ವ್ಯಾಪಾರಿ

ನಿನ್ನೆಯಷ್ಟೇ ಅಂಗಡಿ ತೆರೆದಿದ್ದೇವೆ. ಜನರು ಕುತೂಹಲದಿಂದ ಬಂದು ನೋಡಿ ಹೋಗಿದ್ದಾರೆ. ಮೇಲೆ ಬೀದಿ ವ್ಯಾಪಾರ ನಿಂತರೆ ಜನರು ಬಜಾರ್ ಒಳಗೆ ಬರಲಿದ್ದಾರೆ. ಇದೇ ರೀತಿ ನಗರದ ಬೇರೆ ಬೇರೆ ಪ್ರದೇಶದಲ್ಲಿ ಬಜಾರ್ ಮಾಡಿದರೆ ನಮ್ಮಂತೆ ದುಡಿದು ತಿನ್ನುವವರಿಗೆ ಅನುಕೂಲವಾಗಲಿದೆ.

ವಲ್ಲಿ ಕೃಷ್ಣಮೂರ್ತಿ, ಹೂವಿನ ವ್ಯಾಪಾರಿ

ವ್ಯಾಪಾರ ಶುರುವಾಗಿದೆ. ಇನ್ನೊಂದೆರಡು ವಾರ ಹೋದರೆ ವ್ಯಾಪಾರ ಕುದುರಿಕೊಳ್ಳಬಹುದು. ಎಲ್ಲರೂ ಇಲ್ಲೇ ವ್ಯಾಪಾರ ಶುರು ಮಾಡಿದಾಗ ಜನರೂ ಇಲ್ಲೇ ಬರಲಿದ್ದಾರೆ. ಮಳೆ, ಬಿಸಿಲಿನ ಭಯ ಇಲ್ಲದೇ ವ್ಯಾಪಾರ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ.

ಮಂಜುಳಾ, ತರಕಾರಿ ವ್ಯಾಪಾರಿ

ಬೀದಿ ಬದಿ ವ್ಯಾಪಾರಿಗಳ ಹಕ್ಕು ರಕ್ಷಣೆಗೆ ಪೂರಕ

ಸಾರ್ವಜನಿಕ ಪ್ರದೇಶಗಳಲ್ಲಿ ಬೀದಿ ವ್ಯಾಪಾರಿಗಳನ್ನು ನಿಯಂತ್ರಿಸಲು ಮತ್ತು ಅವರ ಹಕ್ಕುಗಳನ್ನು ರಕ್ಷಿಸಲು 2014ರಲ್ಲಿ ಕೇಂದ್ರ ಸರ್ಕಾರವು ಬೀದಿ ವ್ಯಾಪಾರಿಗಳ ಜೀವನದ ರಕ್ಷಣೆ ಮತ್ತು ವ್ಯಾಪಾರದ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದಿತ್ತು. ಆದರೆ, ಬಹುತೇಕ ಕಡೆಗಳಲ್ಲಿ ಬೀದಿ ವ್ಯಾಪಾರಿಗಳನ್ನು ಎಬ್ಬಿಸಿ ಕಳುಹಿಸಲಾಗುತ್ತಿತ್ತೇ ಹೊರತು, ಅವರ ಹಕ್ಕುಗಳನ್ನು ರಕ್ಷಿಸುವ ಕೆಲಸಗಳಾಗುತ್ತಿರಲಿಲ್ಲ. ಇಂಥ ಬಜಾರ್‌ಗಳು ಈ ಕಾಯ್ದೆಗೆ ಪೂರಕವಾಗಿವೆ ಎಂದು ವ್ಯಾಪಾರಿಗಳು ಸಂತಸ ವ್ಯಕ್ತಪಡಿಸಿದರು.

ಒಂದೇ ಬಿಬಿಎಂಪಿ ಇರಲಿ, ಉಳಿಯಲಿ: ಬಿಜೆಪಿ, ಜೆಡಿಎಸ್ ಶಾಸಕರ ಒಕ್ಕೊರಲ ಆಗ್ರಹ

'ಬಿಬಿಎಂಪಿ ವಿಭಜಿಸಿದರೆ ಜನಾಂದೋಲನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ ಬೆಂಗಳೂರನ್ನು ಆಡಳಿತದ ಹೆಸರಿನಲ್ಲಿ ವಿಭಜಿಸಬಾರದು. ಇಂತಹ ಕಾರ್ಯಕ್ಕೆ ಸರ್ಕಾರ ಮುಂದಾದರೆ ನಗರದಲ್ಲಿ ಜನಾಂದೋಲನ ನಡೆಸಲಾಗುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ರಾಜ್ಯ ಸರ್ಕಾರ 'ಗ್ರೇಟರ್ ಬೆಂಗಳೂರು ಆಡಳಿತ' (ಜಿಬಿಜಿ) ಸ್ಥಾಪನೆಗೆ ಸಂಬಂಧಿಸಿದಂತೆ ಮಂಡಿಸಿರುವ ಮಸೂದೆಯ ಪ್ರಾತ್ಯಕ್ಷಿಕೆ ಮತ್ತು ಸಾಧಕ-ಬಾಧಕಗಳ ಕುರಿತು ಸೋಮವಾರ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಬೆಂಗಳೂರು ನಗರ ಕನ್ನಡಿಗರಿಗಾಗಿಯೇ ಇರಬೇಕು. ಇಲ್ಲಿ ಕನ್ನಡಿಗರೇ ಸಾರ್ವಭೌಮರಾಗಿದ್ದು, ಕನ್ನಡದವರೇ ಮೇಯರ್ ಆಗಬೇಕು. ಇದಕ್ಕಾಗಿ ಬೆಂಗಳೂರು ವಿಭಜನೆಯನ್ನು ಬಿಜೆಪಿ ಮತ್ತು ಜೆಡಿಎಸ್ ವಿರೋಧಿಸುತ್ತವೆ' ಎಂದು ತಿಳಿಸಿದರು.

ಬಿಬಿಎಂಪಿ ಅಡಿಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿ, ಜಲಮಂಡಳಿ, ಬಿಎಂಟಿಸಿ ಬರುವುದಿಲ್ಲ. ಇವೆಲ್ಲವೂ ಒಂದೆಡೆ ಬಂದು, ಬಿಬಿಎಂಪಿಯೇ ನಿರ್ವಹಣೆ ಮಾಡಿದರೆ ಪ್ರತ್ಯೇಕವಾಗಿ ಐಎಎಸ್ ಅಧಿಕಾರಿಗಳನ್ನು ನೇಮಕ ಮಾಡುವುದೂ ತಪ್ಪುತ್ತದೆ. ಸರ್ಕಾರಕ್ಕೆ ವೆಚ್ಚವೂ ಕಡಿಮೆಯಾಗುತ್ತದೆ. ಜನರಿಗೆ ಒಂದೆಡೆ ಎಲ್ಲ ಸೌಲಭ್ಯವೂ ಸಿಗುವಂತಾಗುತ್ತದೆ ಎಂದರು.

ರಾಜ್ಯ ಸರ್ಕಾರದ ಈ ಮಸೂದೆಯಿಂದ ಪುರಪಿತೃಗಳ ಅಧಿಕಾರ ಕುಂಠಿತವಾಗುವ ಅಪಾಯವಿದೆ. ಆದ್ದರಿಂದ ಬದಲಾವಣೆ ತರಬೇಕಿದೆ. ಈ ತಿದ್ದುಪಡಿ ಮಾಡಲು ಹಾಗೂ ವಾರ್ಡ್ ಹೆಚ್ಚಳಕ್ಕೆ ವಿಳಂಬವಾದರೆ ಹಿಂದಿನಂತೆ 198 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು ಎಂದು ಅವರು ಆಗ್ರಹಿಸಿದರು.

'ಇಡೀ ದೇಶಕ್ಕೆ ಒಬ್ಬ ಪ್ರಧಾನಿ, ರಾಜ್ಯಕ್ಕೆ ಒಬ್ಬರೇ ಮುಖ್ಯಮಂತ್ರಿ ಇರುವಂತೆ ಬೆಂಗಳೂರು ನಗರಕ್ಕೆ ಒಬ್ಬರೇ ಮೇಯರ್ ಇರಲಿ. ಅವರ ಅಧಿಕಾರಾವಧಿ ಎರಡೂವರೆ ವರ್ಷ ಅಥವಾ ಐದು ವರ್ಷ ನಿಗದಿಪಡಿಸಿದರೂ ಅಡ್ಡಿಯಿಲ್ಲ' ಎಂದರು.

'ತಜ್ಞರು ನೀಡಿರುವ ವರದಿಯಲ್ಲಿ ಶೇಕಡ 20ರಷ್ಟನ್ನು ಮಾತ್ರ ಸರ್ಕಾರ ಮಸೂದೆಯಲ್ಲಿ ಅಳವಡಿಸಿಕೊಂಡಿದೆ. ನ್ಯಾಯಾಲಯದಲ್ಲಿ ಪ್ರಶ್ನಿಸಿದರೂ ಈ ಮಸೂದೆ ಬಿದ್ದು ಹೋಗುತ್ತದೆ ಎಂದು ನಗರ ಸಮಿತಿಯಲ್ಲಿರುವ ತಜ್ಞ ವಿ.ರವಿಚಂದರ್ ಅವರೇ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಲೋಪಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡುವ ಪ್ರಯತ್ನ ಮಾಡಲಾಗುವುದು. ಒಂದು ವೇಳೆ ಒಪ್ಪದಿದ್ದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ಇದಕ್ಕೂ ಮುನ್ನ 'ಬ್ರ್ಯಾಂಡ್ ಬೆಂಗಳೂರು ಸಮಿತಿ' ಸದಸ್ಯ ವಿ. ರವಿಚಂದರ್ ಅವರು ಜಿಬಿಜಿ ಮಸೂದೆ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. 'ಸಮಿತಿ ನೀಡಿದ್ದ ವರದಿ ಹಾಗೂ ರಾಜ್ಯ ಸರ್ಕಾರ ಮಂಡಿಸಿರುವ ಮಸೂದೆಗೆ ಸಾಕಷ್ಟು ವ್ಯತ್ಯಾಸವಿದೆ. ಸಮಿತಿಯ ಶೇ 20ರಷ್ಟು ಶಿಫಾರಸುಗಳನ್ನು ಮಾತ್ರ ಪರಿಗಣಿಸಲಾಗಿದೆ. ಸಮಿತಿಯ ಶಿಫಾರಸುಗಳನ್ನು ಎಷ್ಟರ ಮಟ್ಟಿಗೆ ತೆಗೆದುಕೊಳ್ಳಬೇಕು ಎಂಬುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು' ಎಂದು ಹೇಳಿದರು.

ಬಿಜೆಪಿ ಶಾಸಕರಾದ ಡಾ. ಅಶ್ವತ್ಥನಾರಾಯಣ, ಮುನಿರತ್ನ, ಸಿ.ಕೆ.ರಾಮಮೂರ್ತಿ, ಕೆ.ಗೋಪಾಲಯ್ಯ, ಎಸ್.ಆರ್. ವಿಶ್ವನಾಥ್, ವಿಧಾನ ಪರಿಷತ್‌ನ ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎ. ಶರವಣ, ಬಿಬಿಎಂಪಿ ಮಾಜಿ ಸದಸ್ಯರಾದ ಎಸ್. ನಟರಾಜ್, ಪದ್ಮನಾಭ ರೆಡ್ಡಿ, ಸದಾಶಿವ, ಸೋಮಶೇಖರ್, ಬಿ.ವಿ. ಗಣೇಶ್ ಪಾಲ್ಗೊಂಡಿದ್ದರು.

'ಗ್ರೇಟರ್ ಬೆಂಗಳೂರು ಆಡಳಿತ' (ಜಿಬಿಜಿ) ಮಸೂದೆಯ ಚರ್ಚೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು

'ಪಾಲಿಕೆಗೆ ಸದಸ್ಯರ ಆಯ್ಕೆಯಾಗಲಿ'

'ನಾಲ್ಕು ವರ್ಷಗಳಿಂದ ಬಿಬಿಎಂಪಿಗೆ ಚುನಾವಣೆ ನಡೆಸಿಲ್ಲ. ಮೊದಲು ಚುನಾವಣೆ ಮಾಡಿ. 225 ವಾರ್ಡ್‌ಗಳಿಗಾದರೂ ಮೊದಲು ಸದಸ್ಯರ ಆಯ್ಕೆಯಾಗಲಿ. ಅವರಿಗೆ ಎಲ್ಲ ರೀತಿಯ ಅಧಿಕಾರ ಕೊಡಿ' ಎಂದು ಜಯನಗರ ವಿಧಾನಸಭೆ ಕ್ಷೇತ್ರದ ಶಾಸಕ ಸಿ.ಕೆ. ರಾಮಮೂರ್ತಿ ಆಗ್ರಹಿಸಿದರು.

'ಮಸೂದೆಯಲ್ಲಿ ಪಾಲಿಕೆ ಹಾಗೂ ಪಾಲಿಕೆ ಸದಸ್ಯರ ಎಲ್ಲ ಅಧಿಕಾರವನ್ನೂ ಕಿತ್ತುಕೊಳ್ಳಲಾಗಿದೆ. ಇದರಿಂದ ಜನರಿಗೆ ಸೌಲಭ್ಯಗಳು ಸಿಗುವುದು ದುಸ್ತರವಾಗುತ್ತದೆ. ಸಮಸ್ಯೆಗಳ ನಿವಾರಣೆಗೂ ಅಡ್ಡಿಯಾಗುತ್ತದೆ' ಎಂದರು.

ಇಂದಿಗೆ ನಾಲ್ಕು ವರ್ಷ

ಬಿಬಿಎಂಪಿಯ ಕೌನ್ಸಿಲ್ ಅವಧಿ ಮುಗಿದು ಸೆಪ್ಟೆಂಬರ್ 10ಕ್ಕೆ ನಾಲ್ಕು ವರ್ಷ ಪೂರ್ಣಗೊಳ್ಳುತ್ತದೆ. 2020ರ ಸೆಪ್ಟೆಂಬರ್ 10ರವರೆಗೆ ಕೌನ್ಸಿಲ್ ಕಾರ್ಯನಿರ್ವಹಿಸಿತ್ತು. ಅದಾದ ನಂತರ ಚುನಾವಣೆ ನಡೆಯದೆ ಅಧಿಕಾರಿಗಳೇ ಕಾರ್ಯನಿರ್ವಹಿಸುತ್ತಿದ್ದಾರೆ. ಇಷ್ಟೊಂದು ದೀರ್ಘ ಅವಧಿಗೆ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲದಿರುವುದು ದಾಖಲೆಯಾಗಿದೆ. 198 ವಾರ್ಡ್‌ಗಳಿಂದ 243 ವಾರ್ಡ್‌ಗಳಿಗೆ ಪುನರ್ ವಿಂಗಡಣೆ, ಮೀಸಲಾತಿ ನಿಗದಿಗಾಗಿ ಬಿಜೆಪಿ ಸರ್ಕಾರ ಮೂರು ವರ್ಷ ವ್ಯಯ ಮಾಡಿತು. ಅದಾದ ನಂತರ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ 243 ವಾರ್ಡ್‌ಗಳಿಂದ 225 ವಾರ್ಡ್‌ಗಳಿಗೆ ಇಳಿಸಿತು. ಇನ್ನೂ ಮೀಸಲಾತಿ ಪ್ರಕಟಿಸಿಲ್ಲ. ಈ ಮಧ್ಯೆ ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಮಂಡನೆಯಾಗಿದೆ.

ಬಿಡಿಎ ಕಾಂಪ್ಲೆಕ್ಸ್ ಉಳಿಸಲು ಆಗ್ರಹ: 12ರಂದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಏಳು ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಸಾರ್ವಜನಿಕ ಖಾಸಗಿ (ಪಿಪಿಪಿ) ಸಹಭಾಗಿತ್ವದಲ್ಲಿ ಮರು ನಿರ್ಮಿಸಲು ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಿರುವ ಆದೇಶವನ್ನು ರದ್ದುಪಡಿಸುವಂತೆ ಆಗ್ರಹಿಸಿ ಇದೇ 12ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಬಿಡಿಎ ಕಾಂಪ್ಲೆಕ್ಸ್ ಉಳಿಸಿ ಹೋರಾಟ ಸಮಿತಿ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಮುಖಂಡ ಆರ್. ನಾಗೇಶ್, 'ಇಂದಿರಾನಗರ ವಾಣಿಜ್ಯ ಸಂಕೀರ್ಣವನ್ನು ಮೆವ್ರಿಕ್ ಹೋಲ್ಡಿಂಗ್ಸ್ ಇನ್‌ವೆಸ್ಟ್‌ಮೆಂಟ್ಸ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ. ಕೋರಮಂಗಲ, ಎಚ್‌ಎಸ್‌ಆರ್ ಬಡಾವಣೆ, ಆರ್.ಟಿ. ನಗರ, ಆಸ್ಟಿನ್ ಟೌನ್, ಸದಾಶಿವನಗರ ಮತ್ತು ವಿಜಯನಗರ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಎಂ-ಫಾರ್ ಡೆವಲಪರ್ಸ್ ಸಂಸ್ಥೆಗೆ ಪಿಪಿಪಿ ಸಹಭಾಗಿತ್ವ ದಲ್ಲಿ ಮರು ನಿರ್ಮಿಸಲು ಗುತ್ತಿಗೆ ನೀಡಲಾಗಿದೆ. ಈ ಸಂಸ್ಥೆಗಳು ಸದ್ಯ ಇರುವ ಕಟ್ಟಡವನ್ನು ಕೆಡವಿಹಾಕಿ, ಇದೇ ಜಾಗದಲ್ಲಿ ಬಹುಮಹಡಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಲಿವೆ' ಎಂದು ಹೇಳಿದರು.

'ಖಾಸಗಿ ಸಂಸ್ಥೆಗಳು ಈ ಏಳೂ ಬಿಡಿಎ ವಾಣಿಜ್ಯ ಸಂಕೀರ್ಣಗಳನ್ನು ಮರು ನಿರ್ಮಿಸಿ, ಅದರಲ್ಲಿ 65:35ರ ಅನುಪಾತದಲ್ಲಿ 30 ವರ್ಷಕ್ಕೆ ಗುತ್ತಿಗೆ ಪಡೆದುಕೊಳ್ಳಲಿವೆ. ಮುಂದಿನ 30 ವರ್ಷಕ್ಕೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಕರಾರಿನಲ್ಲಿ ಅವಕಾಶವಿದೆ. ಈ ವಾಣಿಜ್ಯ ಸಂಕೀರ್ಣಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಮೂಲಕವೇ ಮರು ನಿರ್ಮಿಸಬೇಕಿತ್ತು. ಇದಕ್ಕೆ ಅಗತ್ಯವಿರುವಷ್ಟು ಸಾಲ ಸೌಲಭ್ಯವೂ ಸಿಗುತ್ತಿತ್ತು. ಅದರ ಜೊತೆಗೆ ಬಿಡಿಎಗೆ ಆದಾಯವು ಬರುತ್ತಿತ್ತು. ಆದರೆ, ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡಿರುವ ಸರ್ಕಾರದ ನಡೆ ಖಂಡನೀಯ' ಎಂದರು.

'ಈ ಏಳು ವಾಣಿಜ್ಯ ಸಂಕೀರ್ಣಗಳು ಆಯಕಟ್ಟಿನ ಜಾಗದಲ್ಲಿದ್ದು, ಇವುಗಳ ವಿಸ್ತೀರ್ಣ 12 ಎಕರೆ ಇದೆ. ಈ ಜಮೀನುಗಳ ಒಟ್ಟು ಮೌಲ್ಯ ಸುಮಾರು ₹20 ಸಾವಿರ ಕೋಟಿ ಇದೆ. ಈ ಸಾರ್ವಜನಿಕ ಆಸ್ತಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡುವುದನ್ನು ವಿರೋಧಿಸಿ ಪ್ರತಿಭಟನೆ ಆಯೋಜಿಸಲಾಗಿದೆ' ಎಂದು ಹೇಳಿದರು.

ಸಿಪಿಐ ರಾಜ್ಯ ಸಮಿತಿಯ ಸದಸ್ಯೆ ಗೌರಮ್ಮ, ಎಎಪಿ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ, ನಜೀಬ್ ಎಂ.ಎ. ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಾವನ ಕೊಲೆ ಮಾಡಿದ ಬಾಮೈದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ವಿಚಾರಿಸಲು ಮನೆಗೆ ಬಂದಿದ್ದ ಬಾವನನ್ನೇ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಬ್ಯಾಟರಾಯನಪುರ ಠಾಣಾ ವ್ಯಾಪ್ತಿಯ ಹೊಸಗುಡ್ಡದಹಳ್ಳಿಯಲ್ಲಿ ಭಾನುವಾರ ರಾತ್ರಿ ನಡೆದಿದೆ.

ವೆಂಕಟಾಚಲಪತಿ (45) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ಬಾಮೈದ ವಿಶ್ವನಾಥ (45) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಮಲ್ಲೇಶ್ವರದ ಉಪ ನೋಂದಣಿ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿರುವ ವಿಶ್ವನಾಥ್, ಕೆಲವು ದಿನಗಳಿಂದ ಮಾನಸಿಕ ಖಿನ್ನತೆಗೊಳಗಾಗಿದ್ದರು. ಅಣ್ಣನ ಆರೋಗ್ಯದ ಕುರಿತು ತಂಗಿ ಹಾಗೂ ಅವರ ಪತಿ ವೆಂಕಟಾಚಲಪತಿ ಕಾಳಜಿ ತೋರಿಸುತ್ತಿದ್ದರು. ಭಾನುವಾರ ರಾತ್ರಿ 9 ಗಂಟೆ ಸುಮಾರಿಗೆ ಆರೋಗ್ಯ ವಿಚಾರಿಸಿ, ಔಷಧಿ ಕೊಟ್ಟು ಹೋಗಲು ಇಬ್ಬರೂ ಆರೋಪಿಯ ಮನೆ ಬಳಿ ಬಂದಿದ್ದರು. ಈ ವೇಳೆ ಆರೋಪಿ ಚಾಕುವಿನಿಂದ ವೆಂಕಟಾಚಲಪತಿಗೆ ಇರಿದು ಕೊಲೆ ಮಾಡಿದ್ದಾನೆ. ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ಮಾಹಿತಿ ನೀಡಿದ್ದಾರೆ.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಬ್ಯಾಟರಾಯನಪುರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸಂಸ್ಕೃತಿ ಹಬ್ಬಕ್ಕೆ ಅನುಮತಿ ರದ್ದು 15 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಯಮ ಉಲ್ಲಂಘನೆ ಕಾರಣಕ್ಕೆ ಅಸ್ಸಾಂ ರಾಜ್ಯದ ಬುಡಕಟ್ಟು ಜನರ ಸಂಸ್ಕೃತಿ ಹಬ್ಬ (ಕರ್ಮ ಪೂಜಾ ಫೆಸ್ಟಿವಲ್) ಆಚರಣೆಗೆ ನೀಡಿದ್ದ ಅನುಮತಿಯನ್ನು ರದ್ದುಗೊಳಿಸಿ, ಆಯೋಜಕರ ಸಹಿತ 15 ಮಂದಿ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.



'ಸರ್ಜಾಪುರ ರಸ್ತೆಯ ಕಾಲೇಜು ಮೈದಾನದಲ್ಲಿ ಭಾನುವಾರ ಹಬ್ಬಕ್ಕೆ 500 ಜನರು ಸೇರುತ್ತಾರೆ ಎಂದು ಆಯೋಜಕರು ಹೇಳಿದ್ದರು. ಆದರೆ, ಕಾರ್ಯಕ್ರಮಕ್ಕೆ ಅಂದಾಜು ಎರಡರಿಂದ ಮೂರು ಸಾವಿರ ಜನರು ಸೇರಿದ್ದರು. ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದ್ದ ಕಾರಣ ಕಾರ್ಯಕ್ರಮವನ್ನು ಕೂಡಲೇ ನಿಲ್ಲಿಸುವಂತೆ ಸೂಚಿಸಿ, ಅನುಮತಿಯನ್ನು ರದ್ದು ಪಡಿಸಲಾಯಿತು' ಎಂದು ಡಿಸಿಪಿ ಗಿರೀಶ್ ಅವರು ತಿಳಿಸಿದ್ದಾರೆ.

'ಕಾರ್ಯಕ್ರಮ ರದ್ದುಗೊಂಡಿದ್ದರಿಂದ ನಿರಾಶೆಗೊಂಡ ಜನರು, ಕುರ್ಚಿಗಳನ್ನು ಬಿಸಾಡಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೆಲಕಾಲ ಸ್ಥಳದಲ್ಲಿ ಗೊಂದಲದ ವಾತಾವರಣ ಉಂಟಾಗಿತ್ತು. ಬಳಿಕ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಕರೆಯಿಸಿ ಸ್ಥಳದಲ್ಲಿದ್ದ ಜನರನ್ನು ನಿಯಂತ್ರಿಸಿ, ಹೊರಕ್ಕೆ ಕಳುಹಿಸಲಾಯಿತು. ಐದು ವರ್ಷಗಳಿಂದ ಕಾರ್ಯಕ್ರಮ ಆಯೋಜಿಸುತ್ತಿದ್ದು, ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಜನದಟ್ಟಣೆ ನಿಯಂತ್ರಿಸಲು ಆಯೋಜಕರಿಗೂ ಕಷ್ಟವಾಯಿತು. ಕರ್ಮ ಪೂಜಾ ಕಮಿಟಿಯ ಮುಖ್ಯಸ್ಥರಾದ ಚಿತ್ರಾ ತಾರ್ಕಿ ಸೇರಿದಂತೆ ಕೆಲವರ ವಿರುದ್ಧ ವರ್ತೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಮಹಿಳೆ ರಕ್ಷಿಸಿದ ಬಾಲಕಿಯ ಧೈರ್ಯಕ್ಕೆ ಸಿ.ಎಂ ಮೆಚ್ಚುಗೆ

ಬೆಂಗಳೂರು: ದಕ್ಷಿಣಕನ್ನಡ ಜಿಲ್ಲೆ ಕಿನ್ನಿಗೋಳಿ ಬಳಿ ಅಪಘಾತಕ್ಕೀಡಾದ ಆಟೋವನ್ನು ಎತ್ತಿ ಅದರಡಿ ಸಿಲುಕಿದ್ದ ಮಹಿಳೆಯ ಪ್ರಾಣ ಉಳಿಸಿದ ಬಾಲಕಿಯ ಸಮಯಪ್ರಜ್ಞೆ ಮತ್ತು ಧೈರ್ಯ ಶ್ಲಾಘನೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಎಕ್ಸ್' ಮೂಲಕ ಮೆಚ್ಚುಗೆ ಸೂಚಿಸಿರುವ ಮುಖ್ಯಮಂತ್ರಿ, ಬಾಲಕಿಯು ಯಾರ ಸಹಾಯಕ್ಕೂ ಕಾಯದೆ ಕಾರ್ಯತತ್ಪರಳಾಗಿ ನೆರವಿಗೆ ಧಾವಿಸಿದ್ದಾಳೆ ಎಂದಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ಅಪಘಾತ ಸಂಭವಿಸಿದ ಸ್ಥಳಗಳಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಬೇಕಿದ್ದ ಜನರು ಸುತ್ತಲೂ ನಿಂತು ಮೊಬೈಲ್ ಮೂಲಕ ವಿಡಿಯೊ ಮಾಡುವುದನ್ನು ಹಲವು ಬಾರಿ ಮಾಧ್ಯಮಗಳಲ್ಲಿ ಕಂಡಿದ್ದೆ. ಇದು ಭವಿಷ್ಯದ ದಿನಗಳ ಬಗ್ಗೆ ನನ್ನಲ್ಲಿ ಆತಂಕವನ್ನೂ ಮೂಡಿಸಿತ್ತು. ಈ ಪುಟ್ಟ ಬಾಲಕಿಯ ಕಾರ್ಯ ಇಡೀ ಸಮಾಜಕ್ಕೊಂದು ಸಂದೇಶ ರವಾನಿಸಿದಂತಿದೆ' ಎಂದರು.

ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ಅಸಮಾಧಾನ

'ಪೌರಕಾರ್ಮಿಕರಿಗೆ ಸಮವಸ್ತ್ರ ನೀಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೌರ ಕಾರ್ಮಿಕರಿಗೆ ಸಮರ್ಪಕವಾಗಿ ಸಮವಸ್ತ್ರ ಕೊಟ್ಟಿಲ್ಲ. ಇದು ಶೋಚನಿಯ ವಿಷಯ. ಪೌರ ಕಾರ್ಮಿಕರು ಸ್ವಚ್ಛತಾ ಸೇನಾನಿಗಳು. ಅವರ ಆರೋಗ್ಯದ ಕಡೆ ಗಮನಹರಿಸದೇ ನಗರದ ಸ್ವಚ್ಛತೆ ಮಾಡುತ್ತಿದ್ದಾರೆ' ಎಂದು ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ನವೀಕೃತ ಗೊಂಡಿರುವ 'ಬಸವ ಸಭಾಂಗಣ' ಉದ್ಘಾಟನೆ ಹಾಗೂ 'ಶ್ರೀಗೌರಿ– ಗಣಪತಿ ಉತ್ಸವ' ಆಚರಣೆ ಸಮಾರಂಭದಲ್ಲಿ ಸೋಮವಾರ ಅವರು ಮಾತನಾಡಿದರು.

'ಕಸ ವಿಲೇವಾರಿ ಸಮರ್ಪಕವಾಗಿ ಮಾಡಬೇಕು. ಬಿಬಿಎಂಪಿ ಅಧಿಕಾರಿಗಳು ಮನಸ್ಸು ಮಾಡಿದರೆ 'ಗಾರ್ಡನ್ ಸಿಟಿ' ನಿರ್ಮಾಣ ಮಾಡಬಹುದು. ಗುಂಡಿಯಲ್ಲಿ ಬಿದ್ದು ಹಲವರು ಮೃತಪಟ್ಟಿದ್ದಾರೆ. ತಲೆಗೆ ಹೆಲ್ಮೆಟ್ ಹಾಕದೇ ಇರುವುದೂ ಇದಕ್ಕೆ ಒಂದು ಕಾರಣ' ಎಂದು ಹೇಳಿದರು.

'ನಾವು ಸೇವಾಮನೋಭಾವದಿಂದ ಕೆಲಸ ಮಾಡಬೇಕು. ಸಮಾಜದಲ್ಲಿ ಉತ್ತಮ ಅಧಿಕಾರಿಗಳು, ನೌಕರರು ಇದ್ದಾರೆ. ನಿಷ್ಠಾವಂತರಾಗಿ ಬಾಳಿ, ಬಸವ ತತ್ವದಲ್ಲಿ ಎಲ್ಲರೂ ಸಾಗಿದಾಗ ಸಮಾಜದ ಅಭಿವೃದ್ಧಿ ಸಾಧ್ಯ. ಬಿಬಿಎಂಪಿಯ ಅಧಿಕಾರಿ, ನೌಕರರ ಜೊತೆಯಲ್ಲಿ ಸಾಮರಸ್ಯದಿಂದ ಜನರು ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳಬೇಕು' ಎಂದು ಹೈಕೋರ್ಟ್ ನ್ಯಾಯಮೂರ್ತಿ ಆರ್. ದೇವದಾಸ್ ಸಲಹೆ ನೀಡಿದರು.

ಅಧಿಕಾರಿ ಮತ್ತು ನೌಕರರ ಸಂಘಟನೆ ಮತ್ತು ಸಮಸ್ಯೆಗಳ ಕುರಿತು ಚರ್ಚೆ ಮಾಡಲು ಸುಸಜ್ಜಿತ ಸಭಾಂಗಣ ನಿರ್ಮಿಸಲಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

ಬಿಬಿಎಂಪಿ ವಿಶೇಷ ಆಯುಕ್ತ ಡಾ.ಅವಿನಾಶ್ ಮೆನನ್, ಪೂರ್ವ ವಲಯ ಆಯುಕ್ತೆ ಸ್ನೇಹಲ್, ಉಪ ಆಯುಕ್ತ ಮಂಜುನಾಥ್ ಸ್ವಾಮಿ, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ 'ಬಸವ ಸಭಾಂಗಣ'ವನ್ನು ಹೈಕೋರ್ಟ್ ನ್ಯಾಯಮೂರ್ತಿ ಆರ್. ದೇವದಾಸ್ ಉದ್ಘಾಟಿಸಿದರು. ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ. ವೀರಪ್ಪ, ಸಂಘದ ಅಧ್ಯಕ್ಷ ಎ. ಅಮೃತ್ ರಾಜ್, ಪೂರ್ವ ವಲಯ ಆಯುಕ್ತೆ ಸ್ನೇಹಲ್ ಉಪಸ್ಥಿತರಿದ್ದರು

ಸೇವೆ ಕಾಯಂ ಶೀಘ್ರ: ತುಷಾರ್ ಗಿರಿನಾಥ್

'ಬಿಬಿಎಂಪಿಯಲ್ಲಿ ಪೌರ ಕಾರ್ಮಿಕರ ಸೇವೆಯನ್ನು ಕಾಯಂ ಮಾಡುವ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಕೆಲವೊಂದು ಪ್ರಕ್ರಿಯೆಗಳಿಗೆ ಆಡಳಿತ ವಿಭಾಗದ ವಿಶೇಷ ಆಯುಕ್ತರು ವಿವರಣೆ ಕೇಳಿದ್ದರು. ಮಾಹಿತಿ ನೀಡಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪೌರ ಕಾರ್ಮಿಕರಿಗೆ ಸಮವಸ್ತ್ರ ಸೇರಿದಂತೆ ಸುರಕ್ಷಾ ಉಪಕರಣಗಳನ್ನು ನೀಡಲಾಗುತ್ತಿದೆ. ಸೇವೆ ಕಾಯಂ ಆಗದ ಪೌರ ಕಾರ್ಮಿಕರಿಗೆ ಸವಲತ್ತು ಒದಗಿಸಲು ಒಂದಷ್ಟು ಸಮಸ್ಯೆಯಾಗುತ್ತಿದ್ದು, ಅದನ್ನು ಕೂಡಲೇ ಪರಿಹರಿಸಲಾಗುವುದು ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಉಪನಗರ ರೈಲು ಯೋಜನೆ: ಸಚಿವರಾದ ಎಂ.ಬಿ. ಪಾಟೀಲ– ವಿ. ಸೋಮಣ್ಣ ಪ್ರಗತಿ ಪರಿಶೀಲನೆ

‘2026ರ ಅಂತ್ಯಕ್ಕೆ ಕಾರಿಡಾರ್ 2,4 ಉದ್ಘಾಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಉಪನಗರ ರೈಲು ಯೋಜನೆಯ ನಾಲ್ಕು ಕಾರಿಡಾರ್‌ಗಳ ಪೈಕಿ, ಚಿಕ್ಕಬಾಣಾವರ-ಬೈಯ್ಯಪ್ಪನಹಳ್ಳಿ (ಕಾರಿಡಾರ್ 2) ಮತ್ತು ಹೀಲಲಗಿ- ರಾಜಾನುಕುಂಟೆ (ಕಾರಿಡಾರ್ 4) ಯೋಜನೆಗಳನ್ನು 2026ರ ಡಿಸೆಂಬರ್ ವೇಳೆಗೆ ಲೋಕಾರ್ಪಣೆ ಮಾಡಲಾಗುವುದು’ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಉಪನಗರ ರೈಲ್ವೆ ಯೋಜನೆಯೂ ಸೇರಿದಂತೆ ರಾಜ್ಯದ ವಿವಿಧ ರೈಲ್ವೆ ಯೋಜನೆಗಳ ಕುರಿತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲರ ಜೊತೆ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಈ ನಾಲ್ಕು ಕಾರಿಡಾರ್‌ಗಳಿಗೆ ಪ್ರಧಾನಿ ನರೇಂದ್ರ ಮೋದಿ ಈ ಹಿಂದೆ ಶಂಕುಸ್ಥಾಪನೆ ನೆರವೇರಿಸಿದ್ದರು. ನಿಗದಿತ ಅವಧಿಯ ಒಳಗೆ 2 ಮತ್ತು 4ನೇ ಕಾರಿಡಾರ್ ಯೋಜನೆಗಳನ್ನು ಉದ್ಘಾಟಿಸಲಾಗುವುದು. ಇತರ ಎರಡು ಕಾರಿಡಾರ್‌ಗಳ ಕುರಿತು ಮುಂದೆ ಚರ್ಚೆ ನಡೆಸಲಾಗುವುದು’ ಎಂದರು.

‘ಬೆಂಗಳೂರು ಮೆಟ್ರೊ, ಉಪನಗರ ರೈಲು ಯೋಜನೆ ಮತ್ತು ರೈಲ್ವೆ ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕಾಗಿದೆ. ಪರಸ್ಪರ ಸ್ಪರ್ಧೆಯ ಬದಲು, ಎಲ್ಲಿ ಯಾರ ಸೇವೆ ಇಲ್ಲವೊ ಅಲ್ಲಿ ಮತ್ತೊಬ್ಬರು ಸೇವೆ ನೀಡುವಂತೆ ಆಗಬೇಕು’ ಎಂದು ಸೋಮಣ್ಣ ಹೇಳಿದರು.

ಉಪನಗರ ರೈಲು ಯೋಜನೆಗೆ ಸಂಬಂಧಿಸಿದಂತೆ ಬಿಬಿಎಂಪಿ ಅಧಿಕಾರಿಗಳನ್ನೂ ಸೇರಿಸಿಕೊಂಡು ಸಮನ್ವಯ ಸಭೆ ನಡೆಸಬೇಕು. ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕು

ವಿ. ಸೋಮಣ್ಣ
ರೈಲ್ವೆ ಖಾತೆ ರಾಜ್ಯ ಸಚಿವ

ರೈಲ್ವೆ ಬೋಗಿಗಳ ಸಮಸ್ಯೆ: ‘ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ರೈಲ್ವೆ ಬೋಗಿಗಳನ್ನು ಉತ್ಪಾದಿಸಿ ಪೂರೈಸಲು ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ (ಕೆ-ರೈಡ್) ಟೆಂಡರ್ ಕರೆದಿದೆ. ಆದರೆ, ಯಾವ ಸಂಸ್ಥೆಯೂ ಟೆಂಡರ್‌ನಲ್ಲಿ ಭಾಗವಹಿಸಿಲ್ಲ. ಈ ವಿಷಯದಲ್ಲಿ ರೈಲ್ವೆ ನೆರವು ನೀಡಬೇಕು’ ಎಂದು ಎಂ.ಬಿ.ಪಾಟೀಲ ಮಾಡಿದ ಮನವಿಗೆ ಸ್ಪಂದಿಸಿದ ಸೋಮಣ್ಣ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ಶೀಘ್ರದಲ್ಲೇ ಸಭೆ ಆಯೋಜಿಸಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

‘2026ರ ಅಂತ್ಯದಲ್ಲಿ ಎರಡೂ ಕಾರಿಡಾರ್‌ಗಳ ಕಾಮಗಾರಿ ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ. ಅದಕ್ಕಿಂತ ಕನಿಷ್ಠ ಆರು ತಿಂಗಳು ಮೊದಲು ರೈಲ್ವೆ ಬೋಗಿಗಳ ಸರಬರಾಜು ಆಗಬೇಕಾಗಿದೆ. ಇಲ್ಲದೇ ಇದ್ದರೆ, ಆ ವೇಳೆಗೆ ರೈಲ್ವೆ ಸಂಚಾರ ಆರಂಭಿಸಲು ಕಷ್ಟವಾಗಲಿದೆ’ ಎಂದು ಅಧಿಕಾರಿಗಳು ಹೇಳುತ್ತಿದ್ದಂತೆ, ಗಂಭೀರತೆ ಗಮನಿಸಿದ ಸೋಮಣ್ಣ, ತಕ್ಷಣ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರು.

‘ಬೆಂಗಳೂರಿನ ಅಕ್ಕಪಕ್ಕದ ನಗರ, ಪಟ್ಟಣಗಳಿಗೆ ಸಂಪರ್ಕ ಕಲ್ಪಿಸಲು ಉಪನಗರ ರೈಲ್ವೆ ಯೋಜನೆಯನ್ನು ವಿಸ್ತರಿಸುವ ಅಗತ್ಯವಿದೆ. ಬೆಂಗಳೂರಿನಿಂದ ಸಮೀಪದ ತುಮಕೂರು, ಮೈಸೂರು, ಮಾಗಡಿ, ಗೌರೀಬಿದನೂರು, ಕೋಲಾರ ನಗರಗಳಿಗೆ ಸಂಪರ್ಕ ಕಲ್ಪಿಸುವ ಬಗ್ಗೆಯೂ ಚರ್ಚೆ ಆಗಿದೆ. ಇದನ್ನು ಯಾವ ರೀತಿ ಕೈಗೆತ್ತಿಕೊಳ್ಳಬೇಕು ಎಂಬುದರ ಬಗ್ಗೆಯೂ ಅಧಿಕಾರಿಗಳ ಮಟ್ಟದಲ್ಲಿ ಮೊದಲು ಸಭೆಗಳನ್ನು ಮಾಡಿ ನಂತರ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು’ ಎಂದು ಸೋಮಣ್ಣ ಹೇಳಿದರು.

ಬೆಂಗಳೂರು- ಯಲಹಂಕ-ದೇವನಹಳ್ಳಿ ನಡುವೆ ಸಂಪರ್ಕ ಕಲ್ಪಿಸುವ ಕಾರಿಡಾರ್-1 ಉಪನಗರ ರೈಲ್ವೆ ಯೋಜನೆಯನ್ನು ಚಿಕ್ಕಬಳ್ಳಾಪುರ ಮೂಲಕ ಕೋಲಾರಕ್ಕೆ ಸಂಪರ್ಕಿಸುವ ಬದಲು ದೇವನಹಳ್ಳಿಯಿಂದಲೇ ನೇರವಾಗಿ ಕೋಲಾರಕ್ಕೆ ಸಂಪರ್ಕ ಕಲ್ಪಿಸುವ ಸಾಧ್ಯಾಸಾಧ್ಯತೆ, ಬೆಂಗಳೂರು ಸುತ್ತಲಿನ ವರ್ತುಲ ರೈಲ್ವೆ ಹಳಿಗೆ ಉಪನಗರ ರೈಲ್ವೆ ಯೋಜನೆಯ ಸಂಪರ್ಕ ಕಲ್ಪಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು. ಸುಮಾರು ₹21 ಸಾವಿರ ಕೋಟಿ ವೆಚ್ಚದ 281 ಕಿ.ಮೀ ವರ್ತುಲ ರೈಲ್ವೆ ಯೋಜನೆಗೆ ರೈಲ್ವೆ ಮಂಡಳಿ ಈಗಾಗಲೇ ಒಪ್ಪಿಗೆ ನೀಡಿದೆ. ಉಪನಗರ ರೈಲುಗಳಿಗೂ ಇದರ ಜತೆ ಸಂಪರ್ಕ ಕಲ್ಪಿಸುವುದು ಹೆಚ್ಚು ಸೂಕ್ತ ಎಂದೂ ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಅರವಿಂದ ಶ್ರೀವಾಸ್ತವ, ನಮ್ಮ ಮೆಟ್ರೊ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ, ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ ಸಭೆಯಲ್ಲಿ ಇದ್ದರು.

ಚಿಕ್ಕಬಾಣಾವರ-ಬೈಯ್ಯಪ್ಪನಹಳ್ಳಿ (ಕಾರಿಡಾರ್ 2) ಪ್ರಗತಿ
25.01 ಕಿ.ಮೀ ಒಟ್ಟು ಉದ್ದ
₹859.97 ಕೋಟಿ ಟೆಂಡರ್ ಮೊತ್ತ

ಹೀಲಲಗಿ-ರಾಜಾನುಕುಂಟೆ (ಕಾರಿಡಾರ್ 4)
46.88 ಕಿ.ಮೀ ಒಟ್ಟು ಉದ್ದ
₹1,040.51 ಕೋಟಿ ಟೆಂಡರ್ ಮೊತ್ತ

ಬೆಂಗಳೂರು ಉಪನಗರ ಯೋಜನೆ ಆರ್ಥಿಕ ಪ್ರಗತಿ (ಕೋಟಿಗಳಲ್ಲಿ)
₹15,767 ಅಂದಾಜು ವೆಚ್ಚ
₹1,165.42 ಬಿಎಸ್‌ಆರ್‌ಪಿಗೆ ಬಿಡುಗಡೆಯಾದ ಮೊತ್ತ
₹1,055.15 2024ರ ಆಗಸ್ಟ್ 26ರವರೆಗೆ ವೆಚ್ಚ
₹750 ಬಿಎಸ್‌ಆರ್‌ಪಿಗೆ 2024–25ನೇ ಸಾಲಿಗೆ ಬಜೆಟ್

ಸುದ್ದಿ 2 ನಿಮಿಷ

ಸ್ಪರ್ಧಾತ್ಮಕ ಪರೀಕ್ಷೆ ಪ್ರವೇಶಪತ್ರ ಡೌನ್‌ಲೋಡ್‌ಗೆ ತಡೆ: ಬಿಜೆಪಿ ಟೀಕೆ

ಬೆಂಗಳೂರು: ಗ್ರೂಪ್ ‘ಬಿ’ ಹುದ್ದೆಗಳಿಗೆ ಇದೇ 14 ಮತ್ತು 15ರಂದು ನಡೆಯಲಿರುವ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರವೇಶಪತ್ರಗಳ ಡೌನ್‌ಲೋಡ್ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಮೂಲಕ ಕೆಪಿಎಸ್‌ಸಿ ಮತ್ತು ಸರ್ಕಾರದ ಹುಳುಕು ಬಯಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ.

‘ಎಕ್ಸ್’ ಮೂಲಕ ಈ ವಿಷಯ ಪ್ರಸ್ತಾಪಿಸಿರುವ ಅವರು, ‘ಇದೇ 5ರಂದು ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ, ತಾಂತ್ರಿಕ ಕಾರಣಗಳಿಂದಾಗಿ ಕೆಲವು ಅಭ್ಯರ್ಥಿಗಳ ಪರೀಕ್ಷಾ ಕೇಂದ್ರಗಳ ಹಂಚಿಕೆಯಲ್ಲಿ ವ್ಯತ್ಯಾಸಗಳಾಗಿತ್ತು. ಇದೇ ಕಾರಣಕ್ಕೆ ಡೌನ್‌ಲೋಡ್ ಪ್ರಕ್ರಿಯೆ ತಡೆಹಿಡಿರುವುದು ಸರ್ಕಾರದ ಕಾರ್ಯವೈಖರಿಗೆ ಕೈಗನ್ನಡಿ’ ಎಂದು ಹರಿಹಾಯ್ದಿದ್ದಾರೆ.

ಇದೇ 22ರಂದು ಯುಪಿಎಸ್‌ಸಿ ಮತ್ತು ಎಸ್‌ಎಸ್‌ಸಿ ಪರೀಕ್ಷೆಗಳ ದಿನಾಂಕ ನಿಗದಿಯಾಗಿದ್ದು, ಅದೇ ದಿನ ಪಿಎಸ್‌ಐ ಪರೀಕ್ಷೆ ನಡೆಸಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮ ಉದ್ಯೋಗಾಕಾಂಕ್ಷಿಗಳ ವಿರೋಧಿ ಅಲ್ಲದೆ ಬೇರೇನೂ ಅಲ್ಲ. ಪಿಎಸ್‌ಐ ಪರೀಕ್ಷೆ ಮುಂದೂಡಬೇಕು. ಗ್ರೂಪ್ ‘ಬಿ’ ಹುದ್ದೆಗಳ ಪ್ರವೇಶಪತ್ರ ಹಾಗೂ ಪರೀಕ್ಷಾ ಕೇಂದ್ರಗಳ ಗೊಂದಲ ನಿವಾರಿಸಿ ಪರೀಕ್ಷಾರ್ಥಿಗಳಿಗೆ ತೊಂದರೆ ಆಗದಂತೆ ಎಚ್ಚರವಹಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.



ಶಿಕ್ಷಕನ ಮೊಬೈಲ್‌ನಲ್ಲಿ 5,000 ನಗ್ನಚಿತ್ರ: ಪೋಷಕರ ಆತಂಕ

ಕೋಲಾರ: ಮಾಲೂರು ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಚಿತ್ರಕಲಾ ಶಿಕ್ಷಕ ಮುನಿಯಪ್ಪ ಅವರ ಮೊಬೈಲ್‌ನಲ್ಲಿ ಐದು ಸಾವಿರಕ್ಕೂ ಹೆಚ್ಚು ನಗ್ನ ದೃಶ್ಯಗಳಿದ್ದವು ಎನ್ನಲಾದ ವಿಚಾರ ಪೋಷಕರಲ್ಲಿ ಆತಂಕ ತಂದೊಡ್ಡಿದೆ.

ಈ ಸಂಬಂಧ ಪೋಷಕರು, ಸಂಬಂಧಿಕರು ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರಿಗೆ ಕರೆ ಮಾಡಿ ವಿಚಾರಿಸುತ್ತಿದ್ದಾರೆ. ತಮ್ಮ ಮಕ್ಕಳಿಗೆ ಸಂಬಂಧಿಸಿದ ವಿಡಿಯೊಗಳು ಇವೆಯೇ ಎಂದು ಆತಂಕಗೊಂಡಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ಗೆ ಮಾಹಿತಿ ನೀಡಿರುವ ಪೋಷಕರೊಬ್ಬರು, ‘ವಸತಿ ಶಾಲೆಯಲ್ಲಿ ಮಕ್ಕಳು ಬಟ್ಟೆ ಬದಲಾಯಿಸುವ ಫೋಟೊವನ್ನು ಕೆಲವರು ಮೊಬೈಲ್‌ನಲ್ಲಿ ತೆಗೆದಿದ್ದ ಬಗ್ಗೆ ಆಗಲೇ ದೂರು ನೀಡಿದ್ದೆವು’ ಎಂದರು.

ಈ ಕುರಿತು ಪ್ರತಿಕ್ರಿಯಿಸಿರುವ ವಸತಿ ಶಾಲೆಯ ಹೊಸ ಪ್ರಾಂಶುಪಾಲ, ‘ಆರೋಪಿ ಶಿಕ್ಷಕ ಈಗ ನಮ್ಮ ವಸತಿ ಶಾಲೆಯಲ್ಲಿ ಇಲ್ಲ. ಕೆಲ ಸಾಮಾಜಿಕ ಜಾಲತಾಣಗಳು ನಮ್ಮ ಶಾಲೆಯಲ್ಲಿರುವ ಶಿಕ್ಷಕ ಎಂದು ಉಲ್ಲೇಖಿಸುತ್ತಿವೆ. ಪೋಷಕರು ಆತಂಕಗೊಂಡು ಕರೆ ಮಾಡಿ ವಿಚಾರಿಸುತ್ತಿದ್ದಾರೆ. ನಾವು ಸಮಾಧಾನ ಮಾಡುತ್ತಿದ್ದೇವೆ. ಈಗ ನಮ್ಮ ವಸತಿ ಶಾಲೆಯಲ್ಲಿ ಯಾವುದೇ ಸಮಸ್ಯೆ ಇಲ್ಲ’ ಎಂದರು.

ಪ್ರಕರಣ ನಡೆದಾಗ ಇದ್ದ ವಸತಿ ಶಾಲೆಯ ಪ್ರಾಂಶುಪಾಲರು, ಶಿಕ್ಷಕರು, ಅತಿಥಿ ಶಿಕ್ಷಕರು, ಅಡುಗೆ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಸೇರಿದಂತೆ ಎಲ್ಲರನ್ನೂ ಈಗಾಗಲೇ ವರ್ಗಾವಣೆ ಮಾಡಲಾಗಿದೆ.

‘ಕಾಂಗ್ರೆಸ್ ಪಕ್ಷದವರಿಂದಲೇ ಸಿ.ಎಂಗೆ ಮೋಸ’

ರಾಜ್ಯದಲ್ಲಿ 60 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲು ಸರ್ಕಾರ ಸಿದ್ಧತೆ • ಬಿಜೆಪಿಯಿಂದ ಹೋರಾಟ– ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವರು ಸಂಗೊಳ್ಳಿ ರಾಯಣ್ಣನ ಉದಾಹರಣೆ ಮೂಲಕ ಬೆನ್ನಿಗೆ ಚೂರಿ ಹಾಕಲಾಗುತ್ತಿದೆ ಎಂದು ಎರಡು ಬಾರಿ ಹೇಳಿದ್ದಾರೆ. ಅವರ ಪಕ್ಷದವರೇ ಅವರಿಗೆ ಮೋಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಪ್ರಕ್ರಿಯೆ ಆರಂಭವಾಗಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಡಾ ಪ್ರಕರಣದಲ್ಲಿ ನಾವ್ಯಾರೂ ಆರ್‌ಟಿಐ ಅರ್ಜಿ ಹಾಕಿಲ್ಲ. ಅವರ ಪಕ್ಷದವರೇ ಎಲ್ಲ ದಾಖಲೆಗಳನ್ನು ಹೊರಗೆ ತಂದಿದ್ದಾರೆ. ಮ್ಯೂಸಿಕಲ್ ಚೇರ್ ಮಾಡುತ್ತಿರುವವರೇ ಪಟಾಕಿ ಇಡುತ್ತಿದ್ದಾರೆ. ಅವರು ಪಟಾಕಿ ಹೊಡೆದಾಗ ಸಿದ್ದರಾಮಯ್ಯ ರಾಜೀನಾಮೆ ನೀಡಲೇಬೇಕಾಗುತ್ತದೆ’ ಎಂದರು.

‘ರಾಜ್ಯದಲ್ಲಿ 60 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸುವ ತಯಾರಿ ನಡೆದಿದೆ. ಇದರಿಂದ ಸರ್ಕಾರಕ್ಕೆ ಹಣ ಉಳಿತಾಯವಾಗಲಿದೆ. ಈಗಾಗಲೇ ಬಿಪಿಎಲ್ ಕಾರ್ಡ್‌ದಾರರಿಗೆ ಅಧಿಕಾರಿಗಳು ಕಿರುಕುಳ ನೀಡಲಾರಂಭಿಸಿದ್ದಾರೆ. ಇದಕ್ಕಾಗಿ ಖಾಸಗಿ ಏಜೆನ್ಸಿ ನೇಮಕ ಮಾಡಿ, ಆ ಮೂಲಕ ಕಾರ್ಡ್ ರದ್ದುಪಡಿಸಿ ಗ್ಯಾರಂಟಿಗೆ ಹಣ ಉಳಿಸಲಾಗುತ್ತಿದೆ. ಜನರಿಗೆ ಗೊತ್ತಾಗದಂತೆ ತೆರಿಗೆ ವಿಧಿಸುವುದು ಹೇಗೆಂದು ತಂತ್ರ ಮಾಡಲು ಸಮಿತಿ ನೇಮಿಸಲಾಗಿದೆ. ಇದರ ವಿರುದ್ಧ ಬಿಜೆಪಿ ಹೋರಾಡಲಿದೆ’ ಎಂದು ಅಶೋಕ ಹೇಳಿದರು.

‘ಈಗಾಗಲೇ ಹಿಮಾಚಲ ಪ್ರದೇಶ ಇಂತಹದ್ದೇ ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ದುಸ್ಥಿತಿಗೆ ತಲುಪಿದೆ. ಕರ್ನಾಟಕ ಪಾಪರ್ ಆದರೂ ಪರವಾಗಿಲ್ಲ; ನಮ್ಮ ಬೇಳೆ ಬೇಯಬೇಕು ಎಂಬುದು ಕಾಂಗ್ರೆಸ್ ಯೋಚನೆ. ಅಧಿಕಾರಿಗಳು ಒಂದೋ ಆತ್ಮಹತ್ಯೆ ಮಾಡಿಕೊಳ್ಳಬೇಕು, ಇಲ್ಲವಾದರೆ ಸ್ವಯಂ ನಿವೃತ್ತಿ ಪಡೆಯಬೇಕು ಎಂಬ ಸ್ಥಿತಿ ಇದೆ. ಇಲ್ಲಿ ನಿಷ್ಠಾವಂತ ಅಧಿಕಾರಿಗಳಿಗೆ ಬದುಕುವ ಗ್ಯಾರಂಟಿ ಇಲ್ಲ’ ಎಂದು ದೂರಿದರು.

ಪೈಪೋಟಿ ಅಲ್ಲ, ಬಡಿದಾಟ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರಿಸ್ಥಿತಿ ನೋಡಿ ಬೇಸರವಾಗುತ್ತದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ಅಲ್ಲ, ಬಡಿದಾಟ ನಡೆದಿದೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಗದಗ ಜಿಲ್ಲೆಯ ಶಿರಹಟ್ಟಿಯಲ್ಲಿ ಸೋಮವಾರ ಹೇಳಿದರು.

‘ಕುರ್ಚಿ ಆಸೆ: ಕಡಿವಾಣ ಹಾಕಿ’

‘ಪಕ್ಷದ ನಿಯಮ ಉಲ್ಲಂಘಿಸಿ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಆಕಾಂಕ್ಷೆ ವ್ಯಕ್ತಪಡಿಸುತ್ತಿರುವ ಸಚಿವರ ಬಹಿರಂಗ ಹೇಳಿಕೆಗೆ ಹಾಗೂ ಚರ್ಚೆಗಳಿಗೆ ಕಡಿವಾಣ ಹಾಕಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರಾದ ದಿನೇಶ್ ಗೂಳಿಗೌಡ ಮತ್ತು ಮಂಜುನಾಥ ಭಂಡಾರಿ ಪತ್ರ ಬರೆದಿದ್ದಾರೆ.

‘ಮುಖ್ಯಮಂತ್ರಿ ಮತ್ತಿತರ ಮಹತ್ವದ ಸ್ಥಾನಗಳು ಹೈಕಮಾಂಡ್ ಹಂತದಲ್ಲಿ ನಿರ್ಧಾರವಾಗುತ್ತವೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಅದು ಗೊತ್ತಿದ್ದೂ ಕೆಲವು ಸಚಿವರು ಮತ್ತು ಪಕ್ಷದ ಹಿರಿಯ ನಾಯಕರು ಚರ್ಚೆ ಮಾಡುತ್ತಿದ್ದಾರೆ. ಸಚಿವರ ಲಗಾಮಿಲ್ಲದ ಹೇಳಿಕೆಗಳಿಂದ ಪಕ್ಷದ ವರ್ಚಸಿಗೆ ಧಕ್ಕೆಯಾಗುವ ಹಾಗೂ ಸರ್ಕಾರದ ಅಭದ್ರತೆ ಕುರಿತ ಚರ್ಚೆಗಳಿಗೆ ಎಡೆ ಮಾಡಿ ಕೊಟ್ಟಂತೆ ಆಗಲಿದೆ. ಹೀಗಾಗಿ ಇಂಥ ಚರ್ಚೆಗಳಿಗೆ ತಕ್ಷಣ ತಡೆ ಹಾಕುವ ಅವಶ್ಯ ಇದೆ’ ಎಂದು ಮನವಿ ಮಾಡಿದ್ದಾರೆ.

ದೆಹಲಿಗೆ ಸಚಿವ ಎಂ.ಬಿ. ಪಾಟೀಲ

ಬೆಂಗಳೂರು: ರಾಜ್ಯದಲ್ಲಿ 2025ರ ಫೆಬ್ರುವರಿ 12ರಿಂದ 14ರವರೆಗೆ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯಲಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳ ರಾಯಭಾರಿಗಳು ಮತ್ತು ಔದ್ಯಮಿಕ ಸಂಘಟನೆಗಳನ್ನು ಭೇಟಿ ಮಾಡಲು ಮತ್ತು ನಿಗದಿತ ರೋಡ್ ಶೋನಲ್ಲಿ ಭಾಗವಹಿಸಲು ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ ಅವರು ಸೋಮವಾರ ನವದೆಹಲಿಗೆ ತೆರಳಿದರು.

ಎರಡು ದಿನ ದೆಹಲಿಯಲ್ಲಿ ವಾಸ್ತವ್ಯ ಹೂಡಲಿರುವ ಪಾಟೀಲರು, ಇದೇ ಸಂದರ್ಭದಲ್ಲಿ ಪಕ್ಷದ ಹೈಕಮಾಂಡ್ ನಾಯಕರನ್ನೂ ಭೇಟಿ ಮಾಡಿ ಚರ್ಚೆ ನಡೆಸುವ ಸಾಧ್ಯತೆಯಿದೆ.

ನಗರದ ಹಲಸೂರು ಕೆರೆಯಲ್ಲಿ ಸೋಮವಾರ ಗಣೇಶ ಮೂರ್ತಿಯನ್ನು ಕ್ರೇನ್ ಮೂಲಕ ವಿಸರ್ಜಿಸಲಾಯಿತು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಜಿಎಸ್‌ಟಿ ಪರಿಹಾರದಲ್ಲಿ ನ್ಯಾಯಯುತ ಪಾಲು: ರಾಜ್ಯ ಬೇಡಿಕೆ

ನವದೆಹಲಿ: ಜಿಎಸ್‌ಟಿ ಪರಿಹಾರದಲ್ಲಿ ನ್ಯಾಯಯುತ ಪಾಲನ್ನು ನೀಡಬೇಕು ಎಂದು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಮುಂದೆ ಮತ್ತೊಮ್ಮೆ ಬೇಡಿಕೆ ಮುಂದಿರಿಸಿದೆ.

ನವದೆಹಲಿಯಲ್ಲಿ ಸೋಮವಾರ ನಡೆದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೂ, ಜಿಎಸ್‌ಟಿ ಪರಿಹಾರದಲ್ಲಿ ಭಾರಿ ಅನ್ಯಾಯವಾಗುತ್ತಿದೆ’ ಎಂದು ಅಂಕಿ ಅಂಶಗಳ ಸಹಿತ ವಿವರಿಸಿದರು. ಈ ವಿಷಯದ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಶಿಫಾರಸು ಮಾಡಲು ಮಂತ್ರಿಗಳ ತಂಡವನ್ನು ರಚಿಸಲು ಕೌನ್ಸಿಲ್ ನಿರ್ಧರಿಸಿತು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ‘ಸಚಿವರ ತಂಡವು ಎಲ್ಲ ರಾಜ್ಯಗಳ ಬೇಡಿಕೆ ಕುರಿತು ಅಧ್ಯಯನ ನಡೆಸಲಿದೆ ಹಾಗೂ ರಾಜ್ಯಗಳ ಜತೆಗೆ ಚರ್ಚೆ ನಡೆಸಲಿದೆ. ಕೌನ್ಸಿಲ್ ಸಭೆಯಲ್ಲಿ ಕರ್ನಾಟಕದ ಸಚಿವರು ರಾಜ್ಯದ ಅಂಕಿ ಅಂಶಗಳನ್ನು ಪ್ರಸ್ತುತಪಡಿಸಿದರು’ ಎಂದರು.

ಜಿಎಸ್‌ಟಿಯ ಅವೈಜ್ಞಾನಿಕ ಅನುಷ್ಠಾನದಿಂದ ಕರ್ನಾಟಕಕ್ಕೆ ₹59,274 ಕೋಟಿ ನಷ್ಟವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ಆರೋಪಿಸಿದ್ದರು.

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಸಮುದಾಯಗಳಿಗೆ ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸದಸ್ಯರು ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ ಅವರ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು
ಪ್ರಜಾವಾಣಿ ಚಿತ್ರ

ಕ್ಯಾನ್ಸರ್ ಔಷಧ, ಕುರುಕಲು ತಿನಿಸು ಅಗ್ಗ

ಒಂದನೇ ಪುಟದಿಂದ...

ದೇಶದ ಏಳು ಪ್ರಮುಖ ಶೈಕ್ಷಣಿಕ ಸಂಸ್ಥೆಗಳು 2017ರಿಂದ ಪಡೆದ ಸಂಶೋಧನಾ ಅನುದಾನಗಳಿಗೆ ತೆರಿಗೆ ಪಾವತಿಸದ ಕಾರಣಕ್ಕೆ ಜಿಎಸ್‌ಟಿ ಮಹಾ ನಿರ್ದೇಶನಾಲಯ ಇತ್ತೀಚೆಗೆ ಷೋಕಾಸ್ ನೋಟಿಸ್ ನೀಡಿತ್ತು. ಐಐಟಿ ದೆಹಲಿ ₹120 ಕೋಟಿ ಹಾಗೂ ಇತರ ಸಂಸ್ಥೆಗಳು ₹5 ಕೋಟಿಯಿಂದ ₹60 ಕೋಟಿವರೆಗೆ ತೆರಿಗೆ ಪಾವತಿಸಬೇಕು ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಸಂಶೋಧನಾ ಅನುದಾನಗಳಿಗೆ ಸಂಬಂಧಿಸಿದಂತೆ ನೀಡಿರುವ ವಿನಾಯಿತಿಯಿಂದ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಹೆಚ್ಚಿನ ನೆರವು ಹರಿದುಬರುವುದನ್ನು ಇದು ಖಾತರಿಪಡಿಸುತ್ತದೆ ಎಂದು ‘ಡೆಲಾಯ್ಟ್ ಇಂಡಿಯಾ’ದ ಪಾಲುದಾರ ಎಂ.ಎಸ್. ಮಣಿ ತಿಳಿಸಿದ್ದಾರೆ.

ವಿಮಾ ಪ್ರೀಮಿಯಂ ಮೇಲಿನ ತೆರಿಗೆ ಪ್ರಮಾಣ ಇಳಿಕೆಗೆ ಸಹಮತ

ನವದೆಹಲಿ (ಪಿಟಿಐ): ಆರೋಗ್ಯ ವಿಮೆ ಹಾಗೂ ಜೀವ ವಿಮೆಗಳ ಪ್ರೀಮಿಯಂ ಮೇಲಿನ ಜಿಎಸ್‌ಟಿ ಪ್ರಮಾಣವನ್ನು ಈಗಿರುವ ಶೇಕಡ 18ಕ್ಕಿಂತ ಕಡಿಮೆ ಮಾಡಬೇಕು ಎಂಬ ವಿಚಾರವಾಗಿ ಜಿಎಸ್‌ಟಿ ಮಂಡಳಿಯಲ್ಲಿ ಬಹುತೇಕ ಸಹಮತ ವ್ಯಕ್ತವಾಗಿದೆ ಎಂದು ಮೂಲಗಳು ತಿಳಿಸಿದೆ.

ಆದರೆ, ಈ ಕುರಿತ ಅಂತಿಮ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯ ಮುಂದಿನ ಸಭೆಯಲ್ಲಿ ಕೈಗೊಳ್ಳಲಾಗುತ್ತದೆ ಎಂದು ಗೊತ್ತಾಗಿದೆ.

ವಿಮಾ ಪ್ರೀಮಿಯಂಗಳ ಮೇಲಿನ ತೆರಿಗೆ ಪ್ರಮಾಣ ಕಡಿಮೆ ಮಾಡುವುದರ ಪರಿಣಾಮದ ಬಗ್ಗೆ ಫಿಟ್‌ಮೆಂಟ್ ಸಮಿತಿಯು ವರದಿಯೊಂದನ್ನು ಸಲ್ಲಿಸಿತು.

ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಸಂಗ್ರಹವಾಗುತ್ತಿರುವ ವರಮಾನದ ಮೊತ್ತವು ತಿಂಗಳಿನಿಂದ ತಿಂಗಳಿಗೆ ಹೆಚ್ಚುತ್ತಿರುವ ಕಾರಣಕ್ಕೆ, ವಿಮಾ ಕಂತುಗಳ ಮೇಲಿನ ತೆರಿಗೆ ಪ್ರಮಾಣವನ್ನು ಕಡಿಮೆ ಮಾಡಬಹುದು ಎಂಬ ವಿಚಾರದಲ್ಲಿ ಬಹುತೇಕ ರಾಜ್ಯಗಳು ಸಮ್ಮತಿ ವ್ಯಕ್ತಪಡಿಸಿವೆ ಎಂದು ಗೊತ್ತಾಗಿದೆ.

83 ಸಾವಿರ ಗಣೇಶ ಮೂರ್ತಿ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಭಾನುವಾರ (ಸೆಪ್ಟೆಂಬರ್ 8) 83,404 ಗಣೇಶ ಮೂರ್ತಿಗಳನ್ನು ವಿಸರ್ಜಿಸಲಾಗಿದೆ.

ಮೊಬೈಲ್ ಟ್ಯಾಂಕರ್ ಹಾಗೂ ಕೆರೆ ಅಂಗಳದ ಶಾಶ್ವತ/ ತಾತ್ಕಾಲಿಕ ಕಲ್ಯಾಣಿಗಳಲ್ಲಿ ಮೂರ್ತಿಗಳನ್ನು ವಿಸರ್ಜಿಸಲಾಗಿದೆ. ದಕ್ಷಿಣ ವಲಯದಲ್ಲಿ ಅತಿಹೆಚ್ಚು (47,055) ಮೂರ್ತಿಗಳು ವಿಸರ್ಜನೆಯಾಗಿವೆ. ಪೂರ್ವ ವಲಯದಲ್ಲಿ 12,652, ಪಶ್ಚಿಮದಲ್ಲಿ 10,828, ಬೊಮ್ಮನಹಳ್ಳಿಯಲ್ಲಿ 2,276, ಯಲಹಂಕದಲ್ಲಿ 4096, ಆರ್.ಆರ್.ನಗರದಲ್ಲಿ 3,859, ಮಹದೇವಪುರದಲ್ಲಿ 2,224 ಹಾಗೂ ದಾಸರಹಳ್ಳಿ ವಲಯದಲ್ಲಿ 424 ಮೂರ್ತಿಗಳು ವಿಸರ್ಜನೆಯಾಗಿವೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಸ್ವಚ್ಛತಾ ಕಾರ್ಯ: ಯಡಿಯೂರು ಕೆರೆಯ ಕಲ್ಯಾಣಿಯಲ್ಲಿ ಮಂಗಳವಾರ ಸ್ವಚ್ಛತಾ ಕಾರ್ಯ ಕೈಗೊಂಡಿರುವುದರಿಂದ ಗಣೇಶ ವಿಸರ್ಜನೆಯನ್ನು ನಿರ್ಬಂಧಿಸಲಾಗಿದೆ. ಸೆ.11ರಿಂದ (ಬುಧವಾರ) 17ರವರೆಗೆ ಮೂರ್ತಿ ವಿಸರ್ಜನೆಗೆ ಅವಕಾಶ ಇರುತ್ತದೆ ಎಂದು ಪದ್ಮನಾಭನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಕೋಲ್ಕತ ರೇಸ್

ಲೇಡಿ ಸನ್‌ಶೈನ್ ಗೆಲ್ಲುವ ನಿರೀಕ್ಷೆ

ಹೆಚ್.ಪಿ.ಎಸ್.ಎಲ್ ಕಲ್ಕತ್ತ ಫಿಲ್ಲೀಸ್ ಟ್ರಯಲ್ ಸ್ಟೇಕ್ಸ್ ಮಂಗಳವಾರದ ಕೋಲ್ಕತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲೇಡಿ ಸನ್‌ಶೈನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಲಿಬಾನ್ 1, ಡೈಮಂಡ್ ಗೋಲ್ಡ್ 8, ವಿನ್ಸ್ ಏಂಜೆಲ್ 7
2ನೇ ರೇಸ್: ಫ್ಯಾನ್ಸಿ ನ್ಯಾನ್ಸಿ 5, ಕೇ ಸ್ಟಾರ್ 3, ಟಸ್ಕನಿ 8
3ನೇ ರೇಸ್: ಕಿಂಗ್ಸ್ ರಿಟ್ರೀಟ್ 5, ಜುಕಾರ್ಡಿ 4, ವಂಡರ್‌ಫುಲ್ 9
4ನೇ ರೇಸ್: ಮೆರೋಪಿ 1, ಲಾ ಡಾಮಿನೇಟ್ 4, ಎಟರ್ನಲ್ ಪ್ರಿನ್ಸೆಸ್ 2
5ನೇ ರೇಸ್: ಲೇಡಿ ಸನ್‌ಶೈನ್ 3, ಟ್ರಕಿಲಾ 5
6ನೇ ರೇಸ್: ಎಟೋಷ 3, ಕೂಲ್ ರೈಡರ್ 2, ಅಗ್ನಾಸ್ಟಿಕ್ 1
7ನೇ ರೇಸ್: ಏರೊಪಾಲಿ 2, ಸೂಪರಿಕಾಗ 3, ಸೂಪರಿಕಾಗ 4

ಉತ್ತಮ ಬೆಟ್: ಫ್ಯಾನ್ಸಿ ನ್ಯಾನ್ಸಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಬೆಳಿಗ್ಗೆ 10ಕ್ಕೆ ಸುಬ್ರಮಣ್ಯ ಹೋಮ, ಸಂಜೆ 7ಕ್ಕೆ ನಟರಾಜ್ ಎಂಟರ್‌ಟೈನರ್ಸ್ ತಂಡದಿಂದ ಸಂಗೀತ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಐದನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ

‘ನೀರಿನ ಬಿಕ್ಕಟ್ಟು, ಹವಾಮಾನ ಬದಲಾವಣೆ, ಕೃಷಿ ಮೇಲಿನ ಪರಿಣಾಮಗಳು ಮತ್ತು ನೀರು, ಭೂಮಿ, ಖನಿಜ ಇತ್ಯಾದಿ ನೈಸರ್ಗಿಕ ಸಂಪನ್ಮೂಲಗಳ ಸರಕೀಕರಣ’ ವಿಷಯದ ಕುರಿತು ರಾಜ್ಯಮಟ್ಟದ ವಿಚಾರಸಂಕಿರಣ: ಪ್ರಾಸ್ತಾವಿಕ ನುಡಿ: ಸಿದ್ದನಗೌಡ ಪಾಟೀಲ, ವಿಷಯ ಮಂಡನೆ: ನಾಗೇಶ್ ಹೆಗಡೆ, ಪ್ರಕಾಶ್ ಕಮ್ಮರಡಿ, ಭಾಗವಹಿಸುವವರು: ಎಚ್.ಆರ್. ಬಸವರಾಜಪ್ಪ, ಬಡಗಲಪುರ ನಾಗೇಂದ್ರ, ಜಿ.ಸಿ. ಬಯ್ಯಾರೆಡ್ಡಿ, ಎಸ್. ವರಲಕ್ಷ್ಮಿ, ಎಸ್. ಆರ್. ಹಿರೇಮಠ, ಮಾವಳ್ಳಿ ಶಂಕರ್, ನೂರ್ ಶ್ರೀಧರ್, ಆಯೋಜನೆ: ಸಂಯುಕ್ತ ಹೋರಾಟ–ಕರ್ನಾಟಕ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 10.30

ನೇತ್ರದಾನದ ಮಹತ್ವದ ಕುರಿತು ವಾಕಥಾನ್: ಅತಿಥಿಗಳು: ಎ.ಆರ್. ಸಪ್ತಗಿರಿಗೌಡ, ಡಾ. ರಜನಿ, ಅಧ್ಯಕ್ಷತೆ: ಡಾ. ರಾಕೇಶ್ ಎಸ್. ಆಯೋಜನೆ ಮತ್ತು ಸ್ಥಳ: ಡಾ. ಅಗರವಾಲ್ಸ್ ಐ ಆಸ್ಪತ್ರೆ, ಎನ್‌ಕೆಎಸ್ ಪ್ರೈಮ್, ಮೊದಲನೇ ಬ್ಲಾಕ್, ರಾಜಾಜಿನಗರ ಮೆಟ್ರೊ ನಿಲ್ದಾಣ, ಬೆಳಿಗ್ಗೆ 10.30

‘ಲೈಟ್ಸ್, ಕ್ಯಾಮೆರಾ, ಅಕೌಂಟಬಿಲಿಟಿ!-ಚಿತ್ರರಂಗದಲ್ಲಿ ಲೈಂಗಿಕ ಕಿರುಕುಳದ ಕುರಿತು ಚರ್ಚೆ: ಭಾಗವಹಿಸುವವರು: ಅಶ್ವಿನಿ ಒಬುಳೇಶ್, ದು. ಸರಸ್ವತಿ, ಚೇತನ್ ಅಹಿಂಸಾ, ಶರಣ್ಯ ರಾಮಪ್ರಕಾಶ್, ಮುಕ್ತಾ ದೀದಿ ಚಾಂದ್, ಕೀರ್ತನಾ ಕುಮಾರ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಕಲಾಕೃತಿಗಳ ಪ್ರದರ್ಶನ: ಕಲಾವಿದ: ಅಮಿತಾಭ್ ಆಶೇಶ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 11

ವಿಶ್ವ ಆತ್ಮಹತ್ಯೆ ತಡೆ ದಿನ: ಅಧ್ಯಕ್ಷತೆ: ಡಾ. ಪ್ರತಿಮಾ ಮೂರ್ತಿ, ಉಪಸ್ಥಿತಿ: ಡಾ. ಪ್ರಭಾ ಎಸ್. ಚಂದ್ರ, ಡಾ.ಬಿ.ಎಸ್. ಶಂಕರನಾರಾಯಣ ರಾವ್, ಆಯೋಜನೆ: ನಿಮ್ಹಾನ್ಸ್, ಸ್ಥಳ: ಕನ್ವೆನ್ಷನ್ ಹಾಲ್, ನಿಮ್ಹಾನ್ಸ್, ಮಧ್ಯಾಹ್ನ 2.30

‘ವೈ ಡು ಫ್ರಾಗ್ಸ್ ಡು ವಾಟ್ ದೇ ಡು?’ ಉಪನ್ಯಾಸ: ಗುರುರಾಜ ಕೆ.ವಿ., ಆಯೋಜನೆ: ಪರಸ್ಪರ, ಸ್ಥಳ: ಎಸ್. ವಿ. ನರಸಯ್ಯ ಸಭಾಂಗಣ, ಐಐಎಸ್‌ಸಿ, ಸಂಜೆ 4

ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಆಸ್ಪತ್ರೆ ಉದ್ಘಾಟನೆ: ಉಪಸ್ಥಿತಿ: ಶೋಭಾ ಕರಂದ್ಲಾಜೆ, ದಿನೇಶ್ ಗುಂಡೂರಾವ್, ರಾಮಲಿಂಗಾರೆಡ್ಡಿ, ಎಸ್.ಟಿ. ಸೋಮಶೇಖರ್, ಪೀಟರ್ ಮಚಾಡೊ, ವಿಕ್ಟರ್ ಹೆನ್ರಿ ಥಾಕೂರ್, ಡಾ. ಶರಣಪ್ರಕಾಶ ಪಾಟೀಲ, ಆಯೋಜನೆ: ಬ್ರಿಗೇಡ್, ಸ್ಥಳ: ಬ್ರಿಗೇಡ್ ಮಿಡೊ, ಸಾಲುಹುಣಸೆ ಗ್ರಾಮ, ಕನಕಪುರ ರಸ್ತೆ, ಸಂಜೆ 4.30

ಕರ್ನಾಟಕ ಸಂಗೀತ ಕಾರ್ಯಕ್ರಮ: ಗಾಯನ: ಕಾರ್ತಿಕ್ ಎಂ.ಎ., ಪಿಟೀಲು: ಜನಾರ್ದನ್ ಎಸ್., ಮೃದಂಗ: ಅಪ್ರಮೇಯ ಭಾರಧ್ವಾಜ್, ಘಟ: ಉತ್ತಮ್ ಎಸ್., ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಬಿಎಂಶ್ರೀ ಪ್ರತಿಷ್ಠಾನ ಕಾರ್ಯಕ್ರಮದಲ್ಲಿ ಸಂಶೋಧಕ ಪ್ರೊ.ಎ.ವಿ.ನಾವಡ ಹೇಳಿಕೆ

‘ಸಂಶೋಧನಾ ಪ್ರಬಂಧಗಳಲ್ಲಿ ಕೃತಿ ಚೌರ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚೆಗೆ ವಿಶ್ವವಿದ್ಯಾಲಯಗಳ ಸಂಶೋಧನಾ ಪ್ರಬಂಧಗಳಲ್ಲಿ ಕೃತಿ ಚೌರ್ಯ ಢಾಳಾಗಿ ಕಾಣಿಸುತ್ತಿದೆ. ಹಿಂದೆ ಯಾರೋ ರಚಿಸಿದ ಅಧ್ಯಯನ ಪ್ರಬಂಧಗಳಲ್ಲಿನ ವಾಕ್ಯಗಳನ್ನೇ ತಮ್ಮ ಪ್ರಬಂಧಗಳಲ್ಲಿ ಯಥಾವತ್ತು ದಾಖಲಿಸಿರುವುದನ್ನು ಗಮನಿಸಿದ್ದೇನೆ’ ಎಂದು ಸಂಶೋಧಕ ಪ್ರೊ.ಎ.ವಿ.ನಾವಡ ಹೇಳಿದರು.

ಬಿಎಂಶ್ರೀ ಪ್ರತಿಷ್ಠಾನ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಶ್ರೀಮತಿ ಸಾವಿತ್ರಮ್ಮ ಪ್ರೊ. ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ’ ಸ್ವೀಕರಿಸಿ ಅವರು ಮಾತನಾಡಿದರು.

‘ಒಂದೇ ವಿಷಯದ ಮೇಲಿನ ಬೇರೆ ಬೇರೆ ಸಂಶೋಧನಾ ಪ್ರಬಂಧಗಳಲ್ಲಿ ಇಂಥ ನಕಲು ವಾಕ್ಯಗಳನ್ನು ಗುರುತಿಸಿದ್ದೇನೆ. ಹೀಗೆ ನಕಲು ಮಾಡಿ, ಸಂಶೋಧನೆಯಲ್ಲಿ ಬಳಸಿರುವ ಸಾಹಿತ್ಯದ ಮೂಲ ಆಕರವನ್ನು ಹೇಳದೆ, ತಾವೇ ಬರೆದಿದ್ದೇವೆಂಬ ಭ್ರಮೆ ಉಂಟು ಮಾಡುತ್ತಿದ್ದಾರೆ’ ಎಂದು ಬೇಸರಿಸಿದರು.

‘ಅನೇಕ ವಿದ್ಯಾರ್ಥಿಗಳು ಸಾಹಿತ್ಯದ ಮೂಲ ಆಕರಗಳನ್ನು ಬಳಸದೇ, ‘ಗೂಗಲ್ ಸರ್ಚ್’ ಮೂಲಕ ‘ಸಂಶೋಧನೆ’ ಮಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಇದರಿಂದ ಅನೇಕ ಸಂಶೋಧನಾ ಪ್ರಬಂಧಗಳಲ್ಲಿ ತಪ್ಪು ವಿಚಾರಗಳು ದಾಖಲಾಗುತ್ತಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಪ್ರೊ. ಎಂ.ವಿ.ಸೀತಾರಾಮಯ್ಯ (ಎಂವಿಸೀ) ಅವರ ಆಲೋಚನೆಗಳು, ಆದರ್ಶಗಳು ನನ್ನ ಬದುಕನ್ನು ರೂಪಿಸಿವೆ. ಅಂಥ ಮೇರು ವ್ಯಕ್ತಿಯ ಹೆಸರಿನಲ್ಲಿ ಸಾಹಿತ್ಯ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು ನನ್ನ ಬದುಕಿನ ಭಾಗ್ಯ’ ಎಂದು ಹೇಳಿದರು.

ಬಿಎಂಶ್ರೀ ಪ್ರತಿಷ್ಠಾನದ ಸಂಸ್ಥಾಪಕರ ದಿನಾಚರಣೆ ಕುರಿತು ಮಾತನಾಡಿದ ಸಾಹಿತಿ ಪಿ.ವಿ.ನಾರಾಯಣ, ‘ಸರ್ಕಾರ ಬಿ.ಎಂ.ಶ್ರೀಕಂಠಯ್ಯನವರ(ಬಿಎಂಶ್ರೀ) ಕುರಿತು ಏನೂ ಕೆಲಸ ಮಾಡದಿದ್ದ ಕಾಲಘಟ್ಟದಲ್ಲಿ ಎಂವಿಸೀ ಅವರೇ ತಮ್ಮ ಗುರು ಬಿಎಂಶ್ರೀ ಅವರ ಹೆಸರಲ್ಲಿ ಪ್ರತಿಷ್ಠಾನ ಆರಂಭಿಸಿದರು’ ಎಂದು ಸ್ಮರಿಸಿದರು.

‘ನಾಲ್ಕು ದಶಕಗಳಿಂದ ನಡೆಯುತ್ತಿರುವ ಈ ಪ್ರತಿಷ್ಠಾನ ನೂರಾರು ಎಂ.ಫಿಲ್ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಗೆ ನೆರವಾಗಿದೆ. ಹತ್ತಾರು ದತ್ತಿ ಪ್ರಶಸ್ತಿಗಳು, ವಿಚಾರ ಸಂಕಿರಣಗಳನ್ನೂ ವರ್ಷಪೂರ್ತಿ ನಡೆಸುತ್ತಿದೆ’ ಎಂದರು.

ಮಲ್ಲೇಪುರಂ ಜಿ. ವೆಂಕಟೇಶ್ ಮಾತನಾಡಿ ‘ಪ್ರೊ. ಎಂವಿಸೀ ಅವರು ಸಾಹಿತ್ಯ ಕೃಷಿಯ ಜೊತೆಗೆ, ತಾವು ಬೆಳೆಯುತ್ತಾ, ಎಲ್ಲರನ್ನೂ ಬೆಳೆಸುವ ಪ್ರಯತ್ನ ಮಾಡಿದರು. ಅವರಂತೆ ನಡೆಯುತ್ತಿರುವ ಪ್ರೊ. ಎ.ವಿ. ನಾವಡ ಅವರಿಗೆ, ಪ್ರೊ.ಎಂವಿಸೀ ಸಾಹಿತ್ಯ ಪುರಸ್ಕಾರ ಸಂದಿರುವುದು ಅರ್ಥಪೂರ್ಣವಾಗಿದೆ’ ಎಂದರು.

ಬಿಎಂಶ್ರೀ ಪ್ರತಿಷ್ಠಾನದ ಗುರುಪ್ರಸಾದ್, ಪ್ರೊ. ಎಂ.ವಿ. ಸೀತಾರಾಮಯ್ಯ ಅವರ ನಾಲ್ವರು ಪುತ್ರರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಂಶೋಧಕ ಎ.ವಿ ನಾವಡ ಅವರಿಗೆ ‘ಶ್ರೀಮತಿ ಸಾವಿತ್ರಮ್ಮ ಪ್ರೊ.ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ’ ನೀಡಿ ಗೌರವಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಮಲ್ಲೇಪುರಂ ಜಿ. ವೆಂಕಟೇಶ್, ಶಾಂತರಾಜು, ಪಿ.ವಿ ನಾರಾಯಣ ಭಾಗವಹಿಸಿದ್ದರು
ಪ್ರಜಾವಾಣಿ ಚಿತ್ರ

ಕೇದಾರನಾಥ ಗಣೇಶ

ಗಣೇಶ ಉತ್ಸವದ ಅಂಗವಾಗಿ 'ಬೀದರ್ ಕಾ ರಾಜಾ' ಗಣೇಶ ಮಂಡಳಿಯವರು ಬೀದರ್‌ನ ಸಾಯಿ ಶಾಲೆ ಮೈದಾನದಲ್ಲಿ ಉತ್ತರಾಖಂಡದ ಕೇದಾರನಾಥ ಜ್ಯೋತಿರ್ಲಿಂಗ ದೇವಸ್ಥಾನದ ಪ್ರತಿಕೃತಿಯನ್ನು ನಿರ್ಮಿಸಿ ಅದರೊಳಗೆ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ನಿತ್ಯ ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಿದ್ದಾರೆ ಪ್ರಜಾವಾಣಿ ಚಿತ್ರ: ಲೋಕೇಶ ವಿ. ಬಿರಾದಾರ

ಚಾಲಕನಿಂದ ಯುವಕನ ಕೊಲೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ತಾಲ್ಲೂಕಿನ ಮೋರಖಂಡಿ ಗ್ರಾಮದಲ್ಲಿ ಭಾನುವಾರ ರಾತ್ರಿ ಟಿಪ್ಪರ್ ಅನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿರುವುದನ್ನು ಪ್ರಶ್ನಿಸಿದ ಯುವಕನೊಬ್ಬನನ್ನು ಟಿಪ್ಪರ್ ಚಾಲಕ ರಾಡ್‌ನಿಂದ ಹೊಡೆದು ಕೊಲೆ ಮಾಡಿದ್ದಾನೆ.

ಬಿಜೆಪಿಯ ಮೋರಖಂಡಿ ಬೂತ್ ಘಟಕದ ಅಧ್ಯಕ್ಷರಾಗಿದ್ದ ರೈತ ಶ್ರೀನಿವಾಸ ಬಿರಾದಾರ (35) ಕೊಲೆಯಾದವರು.

ಯುವಕರು ಹಾಗೂ ಪೊಲೀಸರು ಟಿಪ್ಪರ್ ಅನ್ನು ಬೆನ್ನಟ್ಟಿ, ಇಂಡಿಯ ಚಾಲಕ ಶಿವರಾಜ ಬನಸೂಡೆ ಎಂಬಾತನನ್ನು ಹಿಡಿದಿದ್ದಾರೆ. ಬಸವಕಲ್ಯಾಣ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರಿಯಾಯೋಜನೆ ರೂಪಿಸಲು ಸರ್ಕಾರಕ್ಕೆ ತಾಂತ್ರಿಕ ಸಮಿತಿ ಶಿಫಾರಸು

ಕಾವೇರಿ ಮಲಿನ; ವರದಿ ಸಲ್ಲಿಕೆ

• ಎಂ. ಮಹೇಶ

ಮೈಸೂರು: ಈ ಭಾಗದ ಜೀವ ನದಿಗಳಾದ ಹಾಗೂ ಬೆಂಗಳೂರು, ಮೈಸೂರು ಸೇರಿದಂತೆ ಹತ್ತಾರು ಪ್ರಮುಖ ನಗರ ಮತ್ತು ಸಾವಿರಾರು ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆಯ ಪ್ರಮುಖ ಮೂಲಗಳಾದ ಕಾವೇರಿ, ಲಕ್ಷ್ಮಣತೀರ್ಥ, ಕಪಿಲಾ ನದಿಗಳು ಕಳವಳಕಾರಿ ಪ್ರಮಾಣದಲ್ಲಿ ಮಲಿನಗೊಂಡಿರುವ ಬಗ್ಗೆ ತಾಂತ್ರಿಕ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆ.

'ಮಲಿನ ನೀರು ನದಿಗಳಿಗೆ ಸೇರದಂತೆ ತಡೆಯುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಕಾರ್ಖಾನೆಗಳಿಂದ ತ್ಯಾಜ್ಯವನ್ನು ಸಮರ್ಪಕವಾಗಿ ಸಂಸ್ಕರಿಸದೆ ನೇರವಾಗಿ ನದಿಗೆ ಹರಿಸುತ್ತಿರುವುದು, ಕೃಷಿ ತ್ಯಾಜ್ಯ, ಬಯಲು ಶೌಚಾ, ಪಟ್ಟಣ ಮತ್ತು ನಗರ ಪ್ರದೇಶಗಳ ಘನತ್ಯಾಜ್ಯವು ಒಡಲು ಸೇರುತ್ತಿದ್ದು, ಇವು ಮಾಲಿನ್ಯಕ್ಕೆ ಪ್ರಮುಖ ಕಾರಣಗಳಾಗಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿವೆ.

'ಸಮಿತಿಯು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಸಿದ್ಧಪಡಿಸಿದ ಕರಡು ವರದಿಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯ ಕೇಂದ್ರ ಕಚೇರಿ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಏನೇನು ಕ್ರಿಯಾಯೋಜನೆಗಳನ್ನು ಮಾಡಬೇಕು ಎಂಬುದನ್ನು ಉಲ್ಲೇಖಿಸಲಾಗಿದೆ. ಮಾಲಿನ್ಯ ತಡೆಗೆ ಅಲ್ಪಾವಧಿ ಹಾಗೂ ದೀರ್ಘಾವಧಿಗೆ ಕೈಗೊಳ್ಳಬೇಕಾದ ಕ್ರಮಗಳೇನು ಎನ್ನುವುದನ್ನು ತಿಳಿಸಲಾಗಿದೆ' ಎಂದು ಮಂಡಳಿಯ ಪರಿಸರ ಅಧಿಕಾರಿ ಕೆ.ಎಲ್. ಸವಿತಾ 'ಪ್ರಜಾವಾಣಿ'ಗೆ ತಿಳಿಸಿದರು.

ಕಾವೇರಿ ನದಿಯಲ್ಲಿ ಪೂಜೆ, ಮಾಟ ಮಂತ್ರ ಮಾಡಿದ ತ್ಯಾಜ್ಯ

ಮುಖ್ಯಾಂಶಗಳು

- ಕರಡು ವರದಿ ಸರ್ಕಾರಕ್ಕೆ ಸಲ್ಲಿಕೆ
- ಕಲ್ಮಶ ನೀರು ಸೇರುತ್ತಿರುವುದರಿಂದ ತೊಂದರೆ
- ಅಲ್ಪಾವಧಿ, ದೀರ್ಘಾವಧಿ ಕ್ರಮಕ್ಕೆ ಶಿಫಾರಸು

ತಡೆಯಲು ಏನು ಮಾಡಬೇಕು?: 'ಚರಂಡಿ ನೀರು ನದಿಯನ್ನು ಎಲ್ಲೆಲ್ಲಿ ಸೇರುತ್ತಿದೆ ಹಾಗೂ ತಡೆಗಟ್ಟಲು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ. ಸ್ಥಳೀಯ ಸಂಸ್ಥೆಗಳು, ಮಂಡಳಿ, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸೇರಿದಂತೆ ಯಾವ್ಯಾವ ಸಂಸ್ಥೆಯವರ ಪಾತ್ರವೇನು ಎಂಬುದರ ಬಗ್ಗೆ ತಿಳಿಸಲಾಗಿದೆ. ಸರ್ಕಾರದ ನಿರ್ದೇಶನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ಮಾಹಿತಿ ನೀಡಿದರು.

'ಕಾವೇರಿ ನದಿಗೆ ಕೊಳಚೆ ನೀರು ಮಿಶ್ರಣವಾಗುತ್ತಿದ್ದು, ಇದನ್ನು ತಡೆಯಲು ಕ್ರಮ ಕೈಗೊಳ್ಳುವ ಅಗತ್ಯವಿದೆ. ಹೀಗಾಗಿ, ಪರಿಶೀಲನೆಗೆ ತಾಂತ್ರಿಕ ಪರಿಣಿತರ ಸಮಿತಿ ರಚಿಸಬೇಕು. ಅದರ ವರದಿ ಆಧಾರದಲ್ಲಿ ಸರ್ಕಾರ ಸೂಕ್ತ ಕ್ರಮ ವಹಿಸಬೇಕು' ಎಂದು ಮಂಡ್ಯದವರೇ ಆದ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

'ಕೊಡಗು ಜಿಲ್ಲೆಯ ಭಾಗಮಂಡಲದಲ್ಲಿ ಉಗಮಗೊಳ್ಳುವ ಕಾವೇರಿಗೆ ಕುಶಾಲನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ,ನಂಜನಗೂಡು, ತಿ.ನರಸೀಪುರ, ಕೊಳ್ಳೇಗಾಲ ಮೊದಲಾದ ಪ್ರಮುಖ ನಗರ-ಪಟ್ಟಣಗಳ ಭಾಗದಲ್ಲಿ ಹಲವು ಕಾರ್ಖಾನೆಗಳ ತ್ಯಾಜ್ಯವನ್ನು ಸರಿಯಾಗಿ ಸಂಸ್ಕರಿಸದೆ ನೇರವಾಗಿ ನದಿಗೆ ಹರಿಸಲಾಗುತ್ತಿದೆ. ಒಳಚರಂಡಿ ನೀರಿನಿಂದಲೂ ಕಲುಷಿತಗೊಂಡು ಮಲಿನಗೊಳ್ಳುತ್ತಿದೆ. ಇದು ಜಲಚರಗಳ ಸಾವಿಗೂ ಕಾರಣವಾಗಿದೆ. ಹಲವು ಕೈಗಾರಿಕೆಗಳ ತ್ಯಾಜ್ಯದಿಂದ ನದಿಯು ನೈಸರ್ಗಿಕ ಗುಣ ಕಳೆದುಕೊಳ್ಳುತ್ತಿದ್ದು, ಅಪಾಯಕಾರಿ ಆಗುತ್ತಿದೆ' ಎಂದು ಹೇಳಿದ್ದರು.

ಡಿಸಿಎಂ ಸೂಚನೆಯಂತೆ: 'ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ತ್ಯಾಜ್ಯ ನೀರನ್ನು ಕಾವೇರಿ ನದಿಗೆ ನೇರವಾಗಿ ಹರಿಸದಂತೆ ನೋಡಿಕೊಳ್ಳಬೇಕು' ಎಂದು ಮಂಡ್ಯ ಜಿಲ್ಲಾಧಿಕಾರಿ ಕುಮಾರ ಅವರು ಮೈಸೂರು ಜಿಲ್ಲಾಧಿಕಾರಿ ಹಾಗೂ ನಗರಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಗಮನಸೆಳೆದಿದ್ದರು. ಇದೆಲ್ಲದರ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಕೆಎಸ್‌ಪಿಸಿಬಿ ಮುಖ್ಯ ಪರಿಸರ ಅಧಿಕಾರಿ ಪಿ.ನಿರಂಜನ್ ಅಧ್ಯಕ್ಷತೆಯಲ್ಲಿ ರಚಿಸಿದ್ದ ತಾಂತ್ರಿಕ ಸಮಿತಿಯಲ್ಲಿ, ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಬಿಎಂ. ಪ್ರಕಾಶ್, ಎಸ್‌ಜೆಸಿಇ ಪ್ರಾಧ್ಯಾಪಕ ಬಿ.ಮನೋಜ್ ಕುಮಾರ್, ಮೈಸೂರು ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಮುಖ್ಯಸ್ಥರು, ಕಾವೇರಿ ನೀರಾವರಿ ನಿಗಮದ ಮೈಸೂರು ವೃತ್ತದ ಎಸ್‌ಇ ಮಹೇಶ್, ಕೆಯುಡಬ್ಲ್ಯುಎಸ್‌ಎಸ್‌ಬಿ ಎಸ್‌ಇ ಹಾಗೂ ಮೈಸೂರು ಮಹಾನಗರ ಪಾಲಿಕೆಯ ಎಸ್‌ಇ ಸಮಿತಿಯಲ್ಲಿದ್ದರು. ಸಮಿತಿಯು ಒಂದೂವರೆ ತಿಂಗಳವರೆಗೆ ವಿವಿಧೆಡೆಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿ, ನೀರಿನ ಮಾದರಿಗಳ ವೈಜ್ಞಾನಿಕ ವಿಶ್ಲೇಷಣೆಯ ವರದಿ ಮೊದಲಾದ ಅಂಶಗಳನ್ನು ಒಳಗೊಂಡ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ರಸ್ತೆ ಅಪಘಾತ ತಡೆಗೆ ₹100 ಕೋಟಿ ಯೋಜನೆ

ಪ್ರಜಾವಾಣಿ ವಾರ್ತೆ

ಮಧುಗಿರಿ (ತುಮಕೂರು): ರಾಜ್ಯದಲ್ಲಿ ಅಪಘಾತ ಸಂಖ್ಯೆ ತಗ್ಗಿಸಲು ₹100 ಕೋಟಿ ಮೊತ್ತದ ಯೋಜನೆ ಸಿದ್ಧಪಡಿಸಿ ಹಣಕಾಸು ಇಲಾಖೆಗೆ ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಸೋಮವಾರ ಇಲ್ಲಿ ಹೇಳಿದರು.

ಭಾನುವಾರ ಸಂಜೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಆರು ಮಂದಿ ಮೃತಪಟ್ಟ ಸ್ಥಳ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ರಸ್ತೆ ಅಪಘಾತಗಳ ಸಂಖ್ಯೆ ನಿಯಂತ್ರಿಸುವುದು ಹಾಗೂ ಅಪಘಾತದ ಪ್ರಮುಖ ಸ್ಥಳ ಗುರುತಿಸಿ ಸರಿಪಡಿಸುವ ಸಲುವಾಗಿ ₹100 ಕೋಟಿ ಮೊತ್ತದ ಯೋಜನೆಯನ್ನು ಗೃಹ ಇಲಾಖೆ ಅಧಿಕಾರಿಗಳು ಸಿದ್ಧಪಡಿಸಿದ್ದರು. ಅದನ್ನು ಪರಿಶೀಲಿಸಿ ಒಪ್ಪಿಗೆಗಾಗಿ ಹಣಕಾಸು ಇಲಾಖೆಗೆ ಕಳುಹಿಸಿಕೊಡಲಾಗಿದೆ. ಅನುಮತಿ ಸಿಕ್ಕ ನಂತರ ಕೆಲಸ ಆರಂಭವಾಗಲಿದೆ ಎಂದು ತಿಳಿಸಿದರು.

ಬೆಂಗಳೂರು- ಮೈಸೂರು ಹೆದ್ದಾರಿ ನಿರ್ಮಾಣವಾದ ಆರಂಭದ ಮೊದಲ ನಾಲ್ಕು ತಿಂಗಳಲ್ಲೇ ಸಂಭವಿಸಿದ ಅಪಘಾತದಲ್ಲಿ 100ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು. ತಕ್ಷಣ ರಸ್ತೆ ಕಾಮಗಾರಿ ನಿರ್ವಹಿಸಿದವರು, ತಾಂತ್ರಿಕ ಪರಿಣತರೊಂದಿಗೆ ಚರ್ಚಿಸಲಾಯಿತು. ಸ್ಥಳಕ್ಕೆ ತಾಂತ್ರಿಕ ಸಮಿತಿ ಕಳುಹಿಸಿ ವರದಿ ಪಡೆದು, ಅಗತ್ಯ ಕ್ರಮ ತೆಗೆದುಕೊಂಡ ನಂತರ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದರು.

ಆಳ್ವಾಸ್‌ನಲ್ಲಿ ಕಾನೂನು ಕಾಲೇಜು

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಕಾನೂನು ಮಹಾವಿದ್ಯಾಲಯವನ್ನು ಆರಂಭಿಸಿದ್ದು, ಇದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿದೆ. ಬಾರ್ ಕೌನ್ಸಿಲ್ ಆಫ್ ಇಂಡಿಯಾದಿಂದ ಅನುಮೋದನೆಯನ್ನೂ ಪಡೆದಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರಾವಳಿ ಕರ್ನಾಟಕ ದಲ್ಲಿ ಮೊದಲ ಬಾರಿಗೆ ಅತಿ ಹೆಚ್ಚು ಉದ್ಯೋಗ ಸಾಧ್ಯತೆ ಇರುವ 5 ವರ್ಷದ ಬಿಕಾಂ ಎಲ್‌ಎಲ್‌ಬಿ ಪದವಿಯನ್ನು 60 ವಿದ್ಯಾರ್ಥಿಗಳ ಮಿತಿಯೊಂದಿಗೆ ಹಾಗೂ 3 ವರ್ಷದ ಎಲ್‌ಎಲ್‌ಬಿ ಪದವಿಯನ್ನು 60 ವಿದ್ಯಾರ್ಥಿಗಳ ಮಿತಿಯೊಂದಿಗೆ ಈ ವರ್ಷದಿಂದಲೇ ಆರಂಭಿಸಲು ಅನುಮತಿ ದೊರೆತಿದೆ. ಕಾನೂನು ಶಿಕ್ಷಣದಲ್ಲಿ ಉತ್ತಮ ಅನುಭವ ಹೊಂದಿರುವ ಶಿಕ್ಷಕರನ್ನು ಈಗಾಗಲೇ ನೇಮಿಸಿದ್ದು, ಗುಣಾತ್ಮಕವಾದ ಕಾನೂನು ಶಿಕ್ಷಣಕ್ಕೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಕಟಿಬದ್ಧವಾಗಿದೆ ಎಂದರು.

ಯಾವುದೇ ವಿಭಾಗದಲ್ಲಿ ಪದವಿ ಪೂರ್ಣಗೊಳಿಸಿದವರು 3 ವರ್ಷಗಳ ಎಲ್‌ಎಲ್‌ಬಿ ಪದವಿ ಅಧ್ಯಯನಕ್ಕೆ ಪ್ರವೇಶ ಪಡೆಯಬಹುದು. ದ್ವಿತೀಯ ಪಿಯುಸಿಯಲ್ಲಿ ವಾಣಿಜ್ಯ ಅಥವಾ ವಿಜ್ಞಾನ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ಬಿಕಾಂ ಎಲ್‌ಎಲ್‌ಬಿ ಪ್ರವೇಶಕ್ಕೆ ಅರ್ಹರು. 'ಸಿಎಲ್‌ಎಟಿ'ಗೂ ತರಬೇತಿ ನೀಡಲಾಗುತ್ತದೆ ಎಂದು ಹೇಳಿದರು.

ದಾಖಲಾತಿ ಆರಂಭಗೊಂಡಿದ್ದು, ಮೊ: 9379525826, 8147760394 ಸಂಪರ್ಕಿಸಬಹುದು ಎಂದರು.

ಬಂಡೂರಿ ತಿರುವು: ಪ್ರಸ್ತಾವ ವಾಪಸ್

ಗೋವಾದ 'ಹಳೆ' ಪತ್ರಕ್ಕೆ ಪ್ರತಿಕ್ರಿಯೆ ನೀಡುವಂತೆ ಅರಣ್ಯ ಸಚಿವಾಲಯ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಭಾಗವಾದ ಬಂಡೂರಿ ನಾಲೆ ತಿರುವು ಯೋಜನೆಗೆ 71 ಎಕರೆ ಅರಣ್ಯ ಭೂಮಿ ಬಳಸಲು ಅನುಮೋದನೆ ನೀಡುವಂತೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ ಪ್ರಸ್ತಾವನೆಯನ್ನು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ವಾಪಸ್ ಕಳುಹಿಸಿದೆ. ಗೋವಾ ಸರ್ಕಾರ 2023ರ ಜನವರಿಯಲ್ಲಿ ಬರೆದ ಪತ್ರಕ್ಕೆ ವಿವರವಾದ ಪ್ರತಿಕ್ರಿಯೆ ನೀಡುವಂತೆ ರಾಜ್ಯಕ್ಕೆ ಸೂಚಿಸಿದೆ.

ಮಹದಾಯಿ ಜಲವಿವಾದ ನ್ಯಾಯ ಮಂಡಳಿಯು 2018ರ ಆಗಸ್ಟ್ 14ರಂದು ಕಳಸಾ–ಬಂಡೂರಿ ಯೋಜನೆಗೆ 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿದೆ. ಇದರಲ್ಲಿ ಬಂಡೂರಿ ನಾಲಾ ತಿರುವು ಯೋಜನೆಗೆ 2.18 ಟಿಎಂಸಿ ಅಡಿ ಮೀಸಲಿಡಲಾಗಿದೆ. ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಮೂರು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡಬೇಕು ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಅವರು ಜುಲೈ 23ರಂದು ಅರಣ್ಯ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಪರಿಸರ ಸಚಿವಾಲಯವು ಆಗಸ್ಟ್ 21ರಂದು ಪ್ರಸ್ತಾವನೆಯನ್ನು ವಾಪಸ್ ಕಳುಹಿಸಿದೆ.

ಸಮಜಾಯಿಷಿ ನೀಡಿದ್ದ ರಾಜ್ಯ: ಬಂಡೂರಿ ನಾಲಾ ತಿರುವು ಯೋಜನಾ ಸ್ಥಳಕ್ಕೆ ಬೆಳಗಾವಿ ವೃತ್ತದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಫೆಬ್ರುವರಿಯಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿದ್ದರು. 'ಈ ಪ್ರದೇಶದ ಸುತ್ತ ಅನೇಕ ಕಾಡು ಪ್ರಾಣಿಗಳು ಕಂಡುಬಂದಿವೆ. ಈ ಪ್ರದೇಶವು ರಾಷ್ಟ್ರೀಯ ಉದ್ಯಾನ, ವನ್ಯಜೀವಿಧಾಮ, ಹುಲಿ ಸಂರಕ್ಷಿತ ಪ್ರದೇಶ ಹಾಗೂ ಆನೆ ಕಾರಿಡಾರ್‌ನ ಭಾಗ ಅಲ್ಲ' ಎಂದಿದ್ದರು.

'ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿ ಅಧಿಸೂಚಿಸಿದ ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಗೂ ಈ ಪ್ರದೇಶ ಬರುವುದಿಲ್ಲ. ಯೋಜನೆ ಅನುಷ್ಠಾನದಿಂದ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆ ಆಗುವುದಿಲ್ಲ' ಎಂದು ರಾಜ್ಯ ಸರ್ಕಾರವು ಪರಿಸರ ಸಚಿವಾಲಯಕ್ಕೆ ಪ್ರತಿಕ್ರಿಯೆ ನೀಡಿತ್ತು.

ಗೋವಾದ ಆಕ್ಷೇಪವೇನು?

ಕಳಸಾ–ಬಂಡೂರಿ ಯೋಜನೆಗೆ ಆಕ್ಷೇಪ ವ್ಯಕ್ತಪಡಿಸಿ ಗೋವಾ ಜಲಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಅವರು 2023ರ ಜನವರಿ 24ರಂದು ಪತ್ರ ಬರೆದಿದ್ದರು. 'ಮಹದಾಯಿ ನದಿಯು ಮಹದಾಯಿ ವನ್ಯಜೀವಿ ಧಾಮ, ಭೀಮಗಡ ವನ್ಯಜೀವಿಧಾಮ, ಭಗವಾನ್ ಮಹಾವೀರ ವನ್ಯಜೀವಿಧಾಮ ಹಾಗೂ ಸಲೀಂ ಅಲಿ ಪಕ್ಷಿಧಾಮದ ಮೂಲಕ ಹರಿದು ಹೋಗುತ್ತಿದೆ. ಒಂದು ವೇಳೆ, ನದಿ ತಿರುವು ಯೋಜನೆ ಕೈಗೆತ್ತಿಕೊಂಡರೆ ವನ್ಯಜೀವಿಧಾಮಗಳಿಗೆ ಹಾನಿಯಾಗಲಿದೆ ಹಾಗೂ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಉಲ್ಲಂಘನೆಯಾಗಲಿದೆ' ಎಂದು ಅವರು ಪತ್ರದಲ್ಲಿ ಹೇಳಿದ್ದರು.

'ಯೋಜನೆಯ ಕಾಮಗಾರಿ ಕೈಗೆತ್ತಿಕೊಳ್ಳದಂತೆ ಗೋವಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಕರ್ನಾಟಕ ಸರ್ಕಾರಕ್ಕೆ 2023ರ ಜನವರಿ 9ರಂದು ಷೋಕಾಸ್ ನೋಟಿಸ್ ನೀಡಿದ್ದಾರೆ. ಜತೆ, ಈ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿದೆ. ಒಂದು ವೇಳೆ, ಯೋಜನೆ ಕೈಗೆತ್ತಿಕೊಂಡರೆ ನ್ಯಾಯಾಂಗ ನಿಂದನೆಯಾಗುತ್ತದೆ. ಹೀಗಾಗಿ, ಯೋಜನೆಗೆ ಅರಣ್ಯ ಬಳಕೆಗೆ ಒಪ್ಪಿಗೆ ಕೊಡಬಾರದು' ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದರು. ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕರ್ನಾಟಕ ಸರ್ಕಾರಕ್ಕೆ ಪರಿಸರ ಸಚಿವಾಲಯ 2023ರ ಜನವರಿ 31ರಂದು ಸೂಚಿಸಿತ್ತು.

ಸಿ.ಎಂ.ಗೆ ಅವಮಾನ 10 ಮಂದಿ ವಿರುದ್ಧ ಪ್ರಕರಣ

ಉಡುಪಿ: ಮಣಿಪಾಲದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅವಮಾನ ಮಾಡಿರುವ ಆರೋಪದಡಿ ಶಾಸಕ ಯಶ್‌ಪಾಲ್ ಸುವರ್ಣ ಸೇರಿ 11 ಮಂದಿ ಬಿಜೆಪಿ ಮುಖಂಡರ ವಿರುದ್ಧ ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕುಂದಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ರಾಮಕೃಷ್ಣ ಅವರಿಗೆ ಘೋಷಿಸಿದ್ದ 'ಉತ್ತಮ ಶಿಕ್ಷಕ' ಪ್ರಶಸ್ತಿ ತಡೆಹಿಡಿದ ಸರ್ಕಾರದ ನಿರ್ಧಾರ ಖಂಡಿಸಿ ಉಡುಪಿ ಜಿಲ್ಲಾ ಬಿಜೆಪಿ ಯುವಮೋರ್ಚಾ ಈಚೆಗೆ ಪ್ರತಿಭಟನೆ ಹಮ್ಮಿಕೊಂಡಿತ್ತು. 'ಮುಖ್ಯಮಂತ್ರಿಯನ್ನು ಅವಮಾನಿಸಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಸೌರವ್ ಬಲ್ಲಾಳ್ ದೂರು ನೀಡಿದ್ದರು.

'ನನ್ನ, ಬಿಜೆಪಿ ಕಾರ್ಯಕರ್ತರ ಮೇಲೆ ನೂರು ಕೇಸು ದಾಖಲಿಸಿದರೂ ಧೃತಿಗೆಡುವುದಿಲ್ಲ' ಎಂದಿದ್ದಾರೆ ಯಶ್‌ಪಾಲ್.

ಸಿಹಿ ತಿಂಡಿ, ಪಾನೀಯ ನೀಡದಂತೆ ಮನವಿ

ಮಸೀದಿಗೆ ಗಣೇಶೋತ್ಸವ ಸಮಿತಿ ಪತ್ರ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಇಲ್ಲಿನ ಕಲ್ಲಡ್ಕ ಸಮೀಪದ ಬೋಳಂತೂರು ತುಳಸೀವನ ಸಿದ್ಧಿವಿನಾಯಕ ವಿಶ್ವಸ್ಥ ಮಂಡಳಿ ವತಿಯಿಂದ ಶನಿವಾರ ನಡೆದ 41ನೇ ವರ್ಷದ ಸಾರ್ವಜನಿಕ ಗಣೇಶೋತ್ಸವ ಮೆರವಣಿಗೆ ವೇಳೆ ಸಿಹಿ ತಿಂಡಿ ಮತ್ತು ಪಾನೀಯ ನೀಡದಂತೆ ಸಂಘಟಕರು ಮಸೀದಿಗೆ ಬರೆದ ಪತ್ರ ಸೋಮವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

'ಕಳೆದ ವರ್ಷ ಮೆರವಣಿಗೆ ವೇಳೆ ನಿಮ್ಮ ಸಮಾಜ ಬಾಂಧವರು ನೀಡಿದ್ದ ಸಿಹಿ ತಿಂಡಿ ಮತ್ತು ಪಾನೀಯ ಸೇವಿಸಿ ಕೆಲವು ಮಕ್ಕಳು ಅಸ್ವಸ್ಥಗೊಂಡಿದ್ದರು. ಇದರಿಂದ ನಮ್ಮ ನಡುವಿನ ಸಾಮರಸ್ಯ ಕೆಡುವ ಆತಂಕ ಇದ್ದು, ಇನ್ನು ಮುಂದೆ ಶೋಭಾಯಾತ್ರೆ ವೇಳೆ ಯಾವುದೇ ಸಿಹಿ ತಿಂಡಿ ಮತ್ತು ಪಾನೀಯ ನೀಡದಂತೆ ಮುಂಜಾಗ್ರತಾ ಕ್ರಮವಾಗಿ ವಿನಂತಿಸುತ್ತಿದ್ದೇವೆ. ಈ ಮನವಿಗೆ ಸಂಬಂಧಿಸಿ ನಿಮ್ಮ ಎಲ್ಲ ಸಮಾಜ ಬಾಂಧವರು ಸಹಕರಿಸಬೇಕಾಗಿ ಮನವಿ ಮಾಡುತ್ತಿದ್ದೇವೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಸಿದ್ಧಿವಿನಾಯಕ ಮಂದಿರ ಆಡಳಿತ ಸಮಿತಿ ಅಧ್ಯಕ್ಷ ಮುತ್ತಪ್ಪ, 'ಗಣೇಶ ಚತುರ್ಥಿಯಂದು ತುಳಸೀವನ ಭಜನಾ ಮಂದಿರದಲ್ಲಿ ಪ್ರತಿಷ್ಠಾಪಿಸುವ ಗಣೇಶ ವಿಗ್ರಹವನ್ನು 2 ಕಿ.ಮೀ. ಶೋಭಾಯಾತ್ರೆ ನಡೆಸಿ, ಬೀರುಕೋಡಿ ಕೆರೆಯಲ್ಲಿ ವಿಸರ್ಜನೆ ಮಾಡಲಾಗುತ್ತದೆ. ಎರಡು ವರ್ಷಗಳಿಂದ ಮೆರವಣಿಗೆ ಹಾದುಹೋಗುವ ಎರಡು ಮಸೀದಿಗಳ ಎದುರು ಮುಸ್ಲಿಂ ಸಮುದಾಯದವರು ಸಿಹಿ ತಿಂಡಿ, ಪಾನೀಯ ವಿತರಿಸುತ್ತಿದ್ದರು. ಈ ಊರಿನಲ್ಲಿ ಎಲ್ಲರೂ ಅನ್ಯೋನ್ಯವಾಗಿದ್ದು, ಭವಿಷ್ಯದಲ್ಲಿ ಕೋಮು ಸೌಹಾರ್ದಕ್ಕೆ ಧಕ್ಕೆ ಬರಬಾರದು ಎಂದು ಪತ್ರ ಬರೆದು ಮಸೀದಿಗೆ ವಿನಂತಿಸಲಾಗಿತ್ತು. ಎರಡೂ ಮಸೀದಿಗಳ ಅಧ್ಯಕ್ಷರು ಸಹಮತ ವ್ಯಕ್ತಪಡಿಸಿ, ಈ ಬಾರಿ ಸಿಹಿ ತಿಂಡಿ, ಪಾನೀಯ ವಿತರಣೆ ಮಾಡಿಲ್ಲ. ಹೀಗಿರುವಾಗ, ಜನರ ನಡುವಿನ ಸೌಹಾರ್ದ ಸಂಬಂಧ ಕೆಡಿಸಲು ಹೊರಗಿನವರು ಈ ಪತ್ರವನ್ನು ದುರ್ಬಳಕೆ ಮಾಡಿದ್ದಾರೆ' ಎಂದು ಆರೋಪಿಸಿದರು.

'ಬೋಳಂತೂರಿನಲ್ಲಿ ಎಲ್ಲ ಸಮುದಾಯದವರು ಅನ್ಯೋನ್ಯವಾಗಿದ್ದೇವೆ. 40 ವರ್ಷಗಳಿಂದ ಸಾಮರಸ್ಯಕ್ಕೆ ಧಕ್ಕೆಯಾಗಿಲ್ಲ. ಭವಿಷ್ಯದಲ್ಲಿ ಸಾಮರಸ್ಯ ಕೆಡದಂತೆ ಮುಂಜಾಗ್ರತಾ ಕ್ರಮವಾಗಿ ಅವರು ಬರೆದ ಪತ್ರವನ್ನು ಕಿಡಿಗೇಡಿಗಳು ಬಳಸಿಕೊಂಡು ಅಪಪ್ರಚಾರ ನಡೆಸುತ್ತಿರುವುದು ಬೇಸರ ತಂದಿದೆ' ಎಂದು ತುಳಸೀವನ ರೆಹಮಾನಿಯಾ ಜುಮ್ಮಾ ಮಸೀದಿ ಅಧ್ಯಕ್ಷ ಬಿ.ಎಂ. ಇಬ್ರಾಹಿಂ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಹೆಣ್ಣು ಭ್ರೂಣ ಹತ್ಯೆ: ಮತ್ತೆ 6 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಮಂಡ್ಯ: ಜಿಲ್ಲೆಯ ಪಾಂಡವಪುರ, ಬೆಳ್ಳೂರು ಮತ್ತು ಮೇಲುಕೋಟೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ 'ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ'ಗೆ ಸಂಬಂಧಿಸಿದ ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸಿರುವ ಪೊಲೀಸರು, ಮತ್ತೆ ಆರು ಆರೋಪಿಗಳನ್ನು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 36ಕ್ಕೆ ಏರಿಕೆಯಾಗಿದೆ.

ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಬೇವಿನಹಳ್ಳಿಯ ರಾಮಕೃಷ್ಣ ಬಿನ್ ನಿಂಗೇಗೌಡ (55), ಬನ್ನೂರು ಪಟ್ಟಣದ ಗುರು ಬಿನ್ ನಿಂಗಣ್ಣ (22), ಮೈಸೂರು ನಗರದ ಆದಿಶಕ್ತಿ ಬಡಾವಣೆಯ ಸೋಮಶೇಖರ್ ಪಟೇಲ್ (38), ಮೈಸೂರಿನ ರಾಘವೇಂದ್ರ ಬಡಾವಣೆಯ ಶಂಕರ ಜಿ.ಎನ್. (54), ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಹಿರೇಮರಳಿ ಗ್ರಾಮದ ನವೀನ್ ಎಚ್.ಕೆ (41) ಮತ್ತು ಹರಳಹಳ್ಳಿ ಗ್ರಾಮದ ಜಬ್ಬರ್ ಬಿನ್ ಜಿಯಾವುಲ್ಲಾ (46) ಬಂಧಿತರು. ಇವರಿಂದ ಎರಡು ಸ್ಕ್ಯಾನಿಂಗ್ ಯಂತ್ರಗಳು ಹಾಗೂ ಎರಡು ಕಾರ್ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಶಂಕರ

ನವೀನ

ರಾಮಕೃಷ್ಣ

ಗುರು

ಸೋಮಶೇಖರ ಪಾಟೀಲ್

'ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಮಾಡುತ್ತಿದ್ದ ಜಾಲವನ್ನು ಭೇದಿಸಿರುವ ಮಂಡ್ಯ ಜಿಲ್ಲೆಯ 7 ವಿಶೇಷ ತನಿಖಾ ತಂಡಗಳು, ಶಂಕಿತರನ್ನು ಕರೆತಂದು ವಿಚಾರಣೆ ನಡೆಸುತ್ತಿವೆ. ಎಲ್ಲ ಆರೋಪಿಗಳನ್ನು ಬಂಧಿಸಿ, ಈ ಕೃತ್ಯಕ್ಕೆ ಸಂಪೂರ್ಣ ಕಡಿವಾಣ ಹಾಕಲು ಅಗತ್ಯ ಕ್ರಮ ಕೈಗೊಂಡಿದ್ದೇವೆ' ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಉಚಿತ ವಿದ್ಯಾರ್ಥಿನಿಲಯ: ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘವು ಬೆಂಗಳೂರಿನ ಶೇಷಾದ್ರಿಪುರದಲ್ಲಿ ನಡೆಸುತ್ತಿರುವ ಉಚಿತ ವಿದ್ಯಾರ್ಥಿನಿಲಯಕ್ಕೆ ಪ್ರವೇಶಕ್ಕಾಗಿ ಈಡಿಗ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ

ತಾಂತ್ರಿಕ ಪದವಿ, ಸ್ನಾತಕೋತ್ತರ ಪದವಿ, ವೈದ್ಯಕೀಯ ಹಾಗೂ ಔಷಧ ವಿಜ್ಞಾನ ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲಿರುವ ಸಮುದಾಯದ ವಿದ್ಯಾರ್ಥಿಗಳು ಇದೇ 30ರೊಳಗೆ ಅರ್ಜಿ ಸಲ್ಲಿಸಬಹುದು.

ವಿಳಾಸ: ಪ್ರಧಾನ ಕಾರ್ಯದರ್ಶಿ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಈಡಿಗ ಭವನ, ನಂ. 185, ರಾಜೀವಗಾಂಧಿ ವೃತ್ತ, ಶೇಷಾದ್ರಿಪುರ, ಬೆಂಗಳೂರು–560020ಗೆ ಅರ್ಜಿಗಳನ್ನು ತಲುಪಿಸಬಹುದು. ಅರ್ಜಿಯೊಂದಿಗೆ ಜಾತಿ ಪ್ರಮಾಣಪತ್ರ, ಆಧಾರ್ ಮತ್ತು ಪಾನ್ ಕಾರ್ಡ್ ಪ್ರತಿಗಳನ್ನು ಲಗತ್ತಿಸುವುದು ಕಡ್ಡಾಯ. ಮಾಹಿತಿಗೆ: 99160 45255 ಸಂಪರ್ಕಿಸಿ

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯ, ಭಾಗಮಂಗಲ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.

E-mail:eo.sribhagandeshwara@gmail.com

ದೂರವಾಣಿ ಸಂಖ್ಯೆ: 83106 96003

ಸಂಖ್ಯೆ:ಎಸ್‌ಬಿಟಿ/ತ.ತು.ಸಂ/ಇ.ಟೆ/ಪ.ಪ್ರ/1-1/2024–25 ದಿನಾಂಕ: 09.09.2024

"ಇ–ಟೆಂಡರ್ ಪ್ರಕಟಣೆ"

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲುಕು, ಭಾಗಮಂಡದಲ್ಲಿರುವ "ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ–2024" ಜಾತ್ರೆಯ ಪ್ರಯುಕ್ತ ಹೂವಿನ ಅಲಂಕಾರ ಮತ್ತು ವಿದ್ಯುತ್ ದೀಪಾಲಂಕಾರ, ಬ್ಯಾರಿಕೇಡ್ ಹಾಗೂ ಇತರೆ ವ್ಯವಸ್ಥೆಗಳನ್ನು ಕಲ್ಪಿಸಲು ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: 10.09.2024. ಅರ್ಜಿಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 24.09.2024 ಹೆಚ್ಚಿನ ವಿವರಗಳನ್ನು ಇ–ಸಂಗ್ರಹಣಾ ವೇದಿಕೆಯಿಂದ http://kppp.karnataka.gov.in ಅಂತರ್ಜಾಲದಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿರುವವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಣಾಧಿಕಾರಿಗಳು

ಶ್ರೀ ಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯಗಳು, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ

ಕರ್ನಾಟಕ ಸರ್ಕಾರ GOVERNMENT OF KARNATAKA

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979

e-mail-ids:directorbmcrcbellary@gmail.com, website : https://vims.karnataka.gov.in

ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ–1/03/2024–25 ದಿನಾಂಕ: 06.09.2024

ಇ–ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಸಂಸ್ಥೆಯ ಟ್ರಾಮಾಕೇರ್ ಆಸ್ಪತ್ರೆಗೆ ಸ್ವಚ್ಛತಾ ಮತ್ತು ನೈರ್ಮಲ್ಯ ಸೇವೆಗಳಿಗಾಗಿ ಮಾನವ ಸಂಪನ್ಮೂಲ ಒದಗಿಸಲು ಕೆ.ಟಿ.ಪಿ.ಪಿ ಅಧಿನಿಯಮ–1999–2000ರಂತೆ ದ್ವಿ–ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಇ–ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್‌ದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು ದಿನಾಂಕ:06.09.2024 ರಿಂದ 24.09.2024 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.192.00 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್‌ಸೈಟ್ ಮತ್ತು https://vims.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ಡೀನ್ & ನಿರ್ದೇಶಕರು, ಬಿಎಂಸಿಆರ್‌ಸಿ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/425/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಬಿಬಿಎಂಪಿ ಕೇಂದ್ರ ಕಛೇರಿ, ನೆಲ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್. ವೃತ್ತ, ಬೆಂಗಳೂರು–02

ಸಂ: ಉಅಸಂ/ಟೆಂಡರ್/08/2024–25 ದಿನಾಂಕ: 09.09.2024

ಟೆಂಡರ್ ಪ್ರಕಟಣೆಗಾಗಿ ಆಹ್ವಾನ–2ನೇ ಕರೆ

(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನೋಂದಾಯಿತ ಗುತ್ತಿಗೆದಾರರಿಂದ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ ರೈಲ್ವೇಸ್/ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳೊಂದಿಗೆ ಸಮಾನವಾದ ನೋಂದಣಿಯಿಂದ ಕೆಳಕಂಡ ಟೆಂಡರ್‌ಗೆ ಕೆಳ ಸಹಿದಾರರಿಂದ ಐಟಂ ದರದ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಬಿಬಿಎಂಪಿ ವ್ಯಾಪ್ತಿಯಲ್ಲಿ ಮಿಯವಾಕಿ (MIYAWAKI) ಅರಣ್ಯದ ಪರಿಕಲ್ಪನೆಯಲ್ಲಿ ಮಿನಿ ಅರಣ್ಯ ಅಭಿವೃದ್ಧಿಯ ಕಾಮಗಾರಿ (ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿದೆ)	335/–	5,03,000/–

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ 10.09.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಬಾವಿ ಸಭೆಯ ದಿನಾಂಕ: 13.09.2024ರ ಮಧ್ಯಾಹ್ನ 3:00 ಗಂಟೆಗೆ. 3) ಆನ್‌ಲೈನ್‌ನಲ್ಲಿ ಟೆಂಡರ್ ಬಗ್ಗೆ ಪ್ರಶ್ನಾವಳಿಗಾಗಿ: 13.09.2024ರ ಸಂಜೆ 5:00 ಗಂಟೆಯವರಗೆ. 4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 20.09.2024 ರ ಸಂಜೆ 4.00 ಗಂಟೆಯವರೆಗೆ 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 21.09.2024 ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: www.kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/–

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ.

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

ದೂರವಾಣಿ: +91–8431186388, ಇ–ಮೇಲ್: sabvmcri@gmail.com

ಸಂಖ್ಯೆ: SABVMCRI/E-TENDER/D&C/07/2024-25 ದಿನಾಂಕ: 09–09–2024

Indent No: DME/2024-25/IND0840

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ ಆಸ್ಪತ್ರೆಗಳಿಗೆ ಅವಶ್ಯವಿರುವ ಔಷಧಿ, ರಾಸಾಯನಿಕಗಳು ಮತ್ತು ಉಪಭೋಗ್ಯ ವಸ್ತುಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ ರೂ. 2,000/– ಗಳ ಡಿ.ಡಿ. ಯನ್ನು **ನಿರ್ದೇಶಕರು ಹಾಗೂ ಡೀನ್, ಎಸ್.ಎ.ಬಿ.ವಿ.ಎಂ.ಸಿ.ಆರ್.ಐ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: sabvmcri@gmail.com ಮತ್ತು ದೂರವಾಣಿ ಸಂಖ್ಯೆ: +91–8431186388 ನ್ನು ಸಂಪರ್ಕಿಸಬಹುದು.

1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: 09–09–2024 ರಿಂದ. 2) ಟೆಂಡರ್ ಬಗ್ಗೆ ಆನ್‌ಲೈನ್ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: 13–09–2024 ರಂದು ಸಂಜೆ 4.00 ಗಂಟೆವರೆಗೆ. 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 18–09–2024 ರಂದು ಸಂಜೆ 4.00 ಗಂಟೆವರೆಗೆ. 4) ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): 20–09–2024 ರಂದು ಬೆಳಿಗ್ಗೆ 10.30 ಗಂಟೆಗೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್

ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.

ವಾಸಾಸಂಇ/ವಾ.ಪ್ರ/1891/ಅಡ್ವರ್ಟೋ/2024–25

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೆಯೋ, ಹೇಗಿದೆಯೋ, ಯಾವ ಸ್ಥಿತಿಯಲ್ಲಿದೆಯೋ ಅದೇ ಆಧಾರದ ಮೇಲೆ) **(as is where is and whatever there is basis')**

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short Description of the Immovable Property

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

SCHEDULE 'A' PROPERTY

All that piece and parcel of the immovable property bearing BBMP Municipal No: 41/3, Old No: 41, (PID No:94-43-41/3), formed out of survey No: 93/3 and 94/2, totally measuring 22798 Sq.ft situated at Nagawara Main Road, Kadugondanahalli, Bangalore which comes under the jurisdiction of BBMP, Old ward No:94 and New ward no:30, totally measuring 22798 Sq.ft at Nagawara main Road, Kadugondanahalli,Bangalore and bounded as follows: East by: Conservancy, West by: Partly by Nagawar Main Road and partly by remaining portion of the same property, North by: Private property South by: Petrol Bunk and remaining portion of the same property. (Under Construction 31 flats (AALA DREAMS APARTMENTS), for more details please visit Karnataka Public Procurement Portal https://kppp.karnataka.gov.in & https://sploca.karnataka.gov.in/). Google Map: https://maps.app.goo.gl/PVNw22hEM7Z19oev8, Latitude and Longitude: 13°01'06.7"N 77°37'09.9"E.

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆಯ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಸಲ್ಲಿಸಲು ಮತ್ತು ಇಎಂಡಿ ಪಾವತಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
04ನೇ ಅಕ್ಟೋಬರ್ 2024, ಮಧ್ಯಾಹ್ನ 3 ರಿಂದ 4 ರವರೆಗೆ	5ನೇ ಅಕ್ಟೋಬರ್ 2024 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	8ನೇ ಅಕ್ಟೋಬರ್ 2024 ಸಂಜೆ 5 ಗಂಟೆಯವರೆಗೆ	9ನೇ ಅಕ್ಟೋಬರ್ 2024 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಜಂಟಿ ಕಾರ್ಯದರ್ಶಿ,ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸಹಿ/–

ದಿನಾಂಕ: 09.09.2024

ಸ್ಥಳ: ಬೆಂಗಳೂರು

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ.

DIPR/CP/1895/Zen/2024-25

ಕ್ಷೇಮ ಕುಶಲ

ಹಲ್ಲುಗಳುಜ್ಜಿ ಬಾಯಿ ತೊಳೆಯಿರಿ

ಡಾ. ಕೆ. ಎಸ್. ಚೈತ್ರಾ

‘ಯಾಕೋ ಬಾಯಲ್ಲಿ ಕೆಟ್ಟ ವಾಸನೆ ಬರ್ತಿದೆ. ಫ್ರೆಂಡ್ಸ್ ಜೊತೆ ಮಾತಾಡೋಕೆ ಒಂಥರ ಮುಜುಗರ ಆಗುತ್ತೆ. ಏನು ಮಾಡೋದು ಗೊತ್ತಿಲ್ಲ! ಡಾಕ್ಟರು ನೋಡಿದ್ರೆ ಬ್ರಷ್ ಮಾಡು ಅಂತಾರೆ. ಬಸ್ ತಪ್ಪುವ ಗಡಿಬಿಡಿಯಲ್ಲಿ ಅದಕ್ಕೆಲ್ಲ ಟೈಮ್ ಎಲ್ಲಿದೆ? ಏನ್ ಮಾಡೋದು ಗೊತ್ತಿಲ್ಲ’ – ಇದು ಕಾಲೇಜು ಯುವತಿಯೊಬ್ಬಳ ಅಳಲು.

‘ನನಗೂ ಅಷ್ಟೇ ಕಣೆ; ಅದಕ್ಕೇ ದಿನಾ ಮೌತ್‌ವಾಶ್ ಯೂಸ್ ಮಾಡ್ತೀನಿ. ಕ್ವಿಕ್ ಮತ್ತೆ ಈಸಿ... ನೀನೂ ಹಾಗೇ ಮಾಡು.’ ಅವಳಿಗೆ ಗೆಳತಿಯ ಸಲಹೆ.

ಅಂತೂ ಮೌತ್‌ವಾಶ್ ಬಳಕೆಯಿಂದ ಬಾಯಿ ಫ್ರೆಶ್; ಇಬ್ಬರೂ ಖುಷ್!

ಶಾಲಾ-ಕಾಲೇಜಿಗೆ ಓಡಬೇಕಾದ ವಿದ್ಯಾರ್ಥಿಗಳು, ಟ್ರಾಫಿಕ್ ದಾಟಿ ಆಫೀಸಿಗೆ ಸಮಯಕ್ಕೆ ಸರಿಯಾಗಿ ತಲುಪಬೇಕಾದ ಬೇಕಾದ ಉದ್ಯೋಗಿಗಳು, ಬ್ರಶ್ ಮಾಡಿಸಲು ತೊಂದರೆ ಕೊಡುವ ಚಿಕ್ಕ ಮಕ್ಕಳ ಪೋಷಕರು – ಹೀಗೆ ಸಮಯಕ್ಕಾಗಿ ಪರದಾಡುತ್ತಿರುವ ಬಹಳಷ್ಟು ಜನರಿಗೆ ‘ಮೌತ್‌ವಾಶ್’ ಎನ್ನುವುದು ದಂತಾರೋಗ್ಯವನ್ನು ಕಾಪಾಡಲು ಸುಲಭವಾದ ವಿಧಾನ. ಆದರೆ ನೆನಪಿನಲ್ಲಿಡಬೇಕಾದ ಅಂಶವೆಂದರೆ ಮೌತ್‌ವಾಶ್ ಬ್ರಶಿಂಗ್‌ಗೆ ಬದಲಿಯಲ್ಲ; ಪೂರಕ ಮಾತ್ರ!

ಮೌತ್‌ವಾಶ್‌ಗಳಲ್ಲಿ ಮುಖ್ಯವಾಗಿ ಎರಡು ವಿಧಗಳು. ಮೊದಲನೆಯದ್ದು, ಆಹ್ಲಾದಕರ ಸುಗಂಧಕ್ಕಾಗಿ ಬಳಸುವಂಥದ್ದು. ಮಾರುಕಟ್ಟೆಯಲ್ಲಿ ಸಿಗುವ ನಾನಾ ರುಚಿ, ಸುವಾಸನೆಯ ಈ ಮೌತ್‌ವಾಶ್‌ಗಳು ಬಾಯಿಯಲ್ಲಿ ಉಂಟಾಗುವ ದುರ್ವಾಸನೆಯನ್ನು ತಾತ್ಕಾಲಿಕವಾಗಿ ನಿಯಂತ್ರಿಸಿ, ತಾಜಾತನದ ಅನುಭವವನ್ನು ನೀಡುತ್ತವೆ. ಎರಡನೆಯದ್ದು, ಔಷಧಯುತವಾದದ್ದು. ಇವುಗಳಲ್ಲಿ ಸೂಕ್ಷ್ಮಾಣುಜೀವಿಗಳನ್ನು ಕೊಲ್ಲುವ ರಾಸಾಯನಿಕಗಳಿರುತ್ತವೆ. ಫ್ಲೋರೈಡ್ ಇರುವ ಮೌತ್‌ವಾಶ್‌ಗಳು ಹಲ್ಲುಗಳನ್ನು ಬಲಪಡಿಸುತ್ತವೆ. ಬಾಯಲ್ಲಿರುವ ಹಾನಿಕಾರಕ ಸೂಕ್ಷ್ಮಾಣುಜೀವಿಗಳನ್ನು ನಿಯಂತ್ರಿಸುತ್ತದೆ; ಉತ್ಪತ್ತಿಯಾಗುವ ಆ್ಯಸಿಡ್ ವಿರುದ್ಧ ಹೋರಾಡುತ್ತವೆ ಮತ್ತು ಆ ಮೂಲಕ ಹಲ್ಲುಗಳ ಹುಳುಕನ್ನು ನಿಯಂತ್ರಿಸುವಲ್ಲಿ ಸಹಾಯಕ ಎನ್ನಲಾಗುತ್ತದೆ. ವಸಡಿನ ಉರಿಯೂತ ಮತ್ತು ಮೂಳೆಯ ಸೋಂಕು ಇದ್ದಾಗಲೂ ಬಾಯಿಯನ್ನು ರೋಗಾಣುಗಳಿಂದ ದೂರವಿಡಲು ಇವುಗಳನ್ನು ಬಳಸಲಾಗುತ್ತದೆ. ಕೆಲವು ಬಾರಿ ‘ಫಂಗಲ್’ ಸೋಂಕು ಇದ್ದಾಗ ವಿಶೇಷ ರೀತಿಯ ಮೌತ್ ವಾಶ್‌ಗಳನ್ನು ಬಳಸುವ ಸೂಚನೆಯನ್ನು ನೀಡಲಾಗುತ್ತದೆ. ಹೀಗೆ ಆಯಾ ಪರಿಸ್ಥಿತಿಗೆ ತಕ್ಕ ರೀತಿಯಲ್ಲಿ ಮೌತ್‌ವಾಶ್‌ಗಳ ರಾಸಾಯನಿಕಗಳು ಭಿನ್ನವಾಗಿರುತ್ತವೆ. ಹೀಗಾಗಿ ದಂತವೈದ್ಯರ ಸಲಹೆಯನ್ನು ಪಡೆದು ಸೂಕ್ತವಾದ ಮೌತ್‌ವಾಶನ್ನು ಬಳಸುವುದು ಒಳ್ಳೆಯದು.

ಮೌತ್‌ವಾಶ್‌ಗಳಲ್ಲಿ ಕೆಲವನ್ನು ಹಾಗೇ ನೇರವಾಗಿ ಬಳಸಿದರೆ, ಮತ್ತೆ ಕೆಲವನ್ನು ನೀರಿನೊಡನೆ ಬೆರೆಸಿ ಉಪಯೋಗಿಸಬೇಕಾಗುತ್ತದೆ. ತೆಗೆದುಕೊಳ್ಳಬೇಕಾದ ಪ್ರಮಾಣವೂ ಕಂಪನಿಗಳ ಮೇಲೆ ನಿರ್ಧಾರವಾಗಿರುತ್ತದೆ. ಹಾಗಾಗಿ ಬಳಸುವ ವಿಧಾನವನ್ನು ಕುರಿತು ತಯಾರಕರು, ಬಾಟಲ್‌ನ ಮೇಲೆ ಮುದ್ರಿಸಿರುವ ಸೂಚನೆಗಳನ್ನು ಬಳಸುವ ಮುನ್ನ ಓದಬೇಕು. ಸಾಧಾರಣವಾಗಿ 15-20 ಮಿ. ಲೀ. ಮೌತ್‌ವಾಶ್ ಅನ್ನು ಮೂವತ್ತು ಸೆಕೆಂಡ್‌ಗಳಷ್ಟು ಬಾಯಲ್ಲಿಟ್ಟುಕೊಂಡು, ಅದು ಬಾಯಿಯ ಎಲ್ಲ ಕಡೆಗೂ ತಾಗುವಂತೆ ಚಲನೆ ಮಾಡಬೇಕು. ನಂತರ ಮೌತ್‌ವಾಶ್‌ನಿಂದ ಒಂದು ನಿಮಿಷ ಬಾಯಿಯನ್ನು ಮುಕ್ಕಳಿಸಬೇಕು. ಇದರಿಂದ ಬಾಯಿಯ ಮತ್ತು ನಾಲಿಗೆಯ ಹಿಂಭಾಗ ತೊಳೆಯಲ್ಪಡುತ್ತದೆ. ಕಡೆಯಲ್ಲಿ, ಮೌತ್‌ವಾಶನ್ನು ನುಂಗದೇ ಹೊರಗೆ ಉಗುಳುವುದೂ ಮುಖ್ಯ. ಇಲ್ಲದಿದ್ದಲ್ಲಿ ಅದರಲ್ಲಿರುವ ರಾಸಾಯನಿಕಗಳು ಹೊಟ್ಟೆಗೆ ಸೇರುತ್ತವೆ.

ಮಕ್ಕಳು ಬಳಸಬಹುದೇ?

ಮಕ್ಕಳಿಗೆ ಹಲ್ಲುಗಳ ಬ್ರಶ್ ಮಾಡಿಸುವಾಗ ಅವರು ಗಲಾಟೆ ಮಾಡುವುದು ಸಹಜ. ಆಗ ಸಮಯವನ್ನು ಉಳಿಸಲು ಅಥವಾ ಕೆಲಸವನ್ನು ಸುಲಭಮಾಡಿಕೊಳ್ಳಲು ಪೋಷಕರು ಮೌತ್‌ವಾಶ್‌ಗೆ ಮೊರೆ ಹೋಗುವುದು ಸಾಮಾನ್ಯ. ಆರು ವರ್ಷಕ್ಕಿಂತಲೂ ಕೆಳಗಿನ ಮಕ್ಕಳಿಗೆ ಈ ಪದ್ಧತಿ ಎರಡು ಕಾರಣಗಳಿಂದ ಅಪಾಯಕಾರಿ. ಮೊದಲನೆಯದಾಗಿ. ಮಕ್ಕಳಿಗೆ ನುಂಗದೆಯೇ ಮೌತ್‌ವಾಶ್ ಅನ್ನು ಉಗಿಯಲು ಗೊತ್ತಾಗುವುದಿಲ್ಲ. ಹೀಗಾಗಿ ಅದನ್ನು ಅವರು ನುಂಗಿದರೆ ಮೌತ್‌ವಾಶ್‌ನ ರಾಸಾಯನಿಕಗಳು ಅವರ ಹೊಟ್ಟೆಗೆ ಸೇರಬಹುದು. ಎರಡನೆಯದಾಗಿ, ಒಂದು ವೇಳೆ ಮೌತ್‌ವಾಶ್ ದ್ರಾವಣದಲ್ಲಿ ಹೆಚ್ಚಿನ ಪ್ರಮಾಣದ ಫ್ಲೋರೈಡ್ ಇದ್ದು, ಅದನ್ನು ಮಕ್ಕಳು ಸೇವಿಸಿದರೆ ಅದರಿಂದ ಅವರ ಹಲ್ಲುಗಳ ಬಣ್ಣವೇ ಬದಲಾಗಬಹುದು. ಆರರಿಂದ ಹನ್ನೆರಡು ವರ್ಷದ ಮಕ್ಕಳಲ್ಲಿ ಬಳಸುವಾಗ ಪೋಷಕರು ಕಾಳಜಿಯನ್ನು ವಹಿಸಿ, ಅದನ್ನು ಬಳಸುವ ವಿಧಾನವನ್ನು ಕಲಿಸಿಕೊಡಬೇಕು. ಗಮನದಲ್ಲಿಡಬೇಕಾದಂಥ ಇನ್ನೊಂದು ಪ್ರಮುಖ ಅಂಶ ಎಂದರೆ ಮೌತ್‌ವಾಶ್ ಬಾಟಲಿಯು ಮಕ್ಕಳ ಕೈಗೆ ಸಿಗದಂತೆ ಎತ್ತರ ಮತ್ತು ಸುರಕ್ಷಿತ ಸ್ಥಳದಲ್ಲಿಡುವುದು. ಬಣ್ಣಬಣ್ಣದ ಆಕರ್ಷಕ ದ್ರಾವಣವನ್ನು ಮಕ್ಕಳು ‘ಜ್ಯೂಸ್’ ಎಂದು ಭಾವಿಸಿ ಕುಡಿಯಲೂಬಹುದು. ಹಾಗಾಗಿ ಮನೆಯಲ್ಲಿ ಹಿರಿಯರು ಈ ವಿಷಯದಲ್ಲಿ ಎಚ್ಚರದಿಂದಿರಬೇಕು.

ಮೌತ್‌ವಾಶ್ ಉಪ ಯೋಗಿಸುವುದೇನೋ ಸರಿ; ಆದರೆ ಬ್ರಶ್, ಫ್ಲಾಸ್ ಮಾಡುವ ಮುನ್ನ ಅಥವಾ ನಂತರ ಇದನ್ನು ಬಳಸಬೇಕೇ ಎಂದೂ ಅನುಮಾನ ಬರುವುದು ಸಹಜ. ನಮ್ಮ ದಿನಚರಿಯಲ್ಲಿ ಈ ಮೂರನ್ನೂ ಸರಿಯಾಗಿ ಬಳಸಿ ಬಾಯಿಯನ್ನು ಸ್ವಚ್ಛವಾಗಿಡುವುದು ಮುಖ್ಯವೇ ಹೊರತು ‘ಯಾವುದರ ನಂತರ ಯಾವುದು’ ಎಂಬುದು ಮಹತ್ವದ ವಿಷಯವಲ್ಲ. ಆದರೂ ಪಾಲಿಸಬಹುದಾದ ಕ್ರಮ ಹೀಗಿದೆ. ಮೊದಲು ಫ್ಲಾಸ್ ಬಳಸಿ, ಹಲ್ಲಿನ ಸಂದಿಗಳಲ್ಲಿ ಸಿಲುಕಿರುವ ಆಹಾರದ ಸಣ್ಣ ಕಣಗಳನ್ನು ತೆಗೆಯಬೇಕು. ಸ್ವಚ್ಛ ಶುದ್ಧ ನೀರಿನಲ್ಲಿ ಬಾಯಿಯನ್ನು ಮುಕ್ಕಳಿಸಿ ಆ ಸಣ್ಣ ಕಣಗಳನ್ನು ಉಗಿಯಬೇಕು. ಬಳಿಕ ಮೌತ್‌ವಾಶ್ ಬಳಸಿ ಚೆನ್ನಾಗಿ ಬಾಯಿಯನ್ನು ಮುಕ್ಕಳಿಸಬೇಕು. ಬಾಯಿಗೆ ನೀರನ್ನು ಹಾಕದೇ ಪೇಸ್ಟ್ ಮತ್ತು ಬ್ರಶ್ ಅನ್ನು ಉಪಯೋಗಿಸಿ ಮೂರು ನಿಮಿಷಗಳ ಕಾಲ ಹಲ್ಲುಗಳನ್ನು ಉಜ್ಜಬೇಕು. ಕಡೆಯಲ್ಲಿ ಪೇಸ್ಟ್‌ನ ನೊರೆಯನ್ನು ಉಗಿಯಬೇಕು. ಕೂಡಲೇ ಬಾಯಿಗೆ ನೀರನ್ನು ಹಾಕಿ ತೊಳೆಯಬಾರದು. ಏಕೆಂದರೆ ಪೇಸ್ಟ್ ಮತ್ತು ಮೌತ್‌ವಾಶ್‌ನಲ್ಲಿರುವ ಉಪಯುಕ್ತ ವಸ್ತುಗಳ ಪರಿಣಾಮದಲ್ಲಿ ವ್ಯತ್ಯಾಸವಾಗುತ್ತದೆ. ❖

ಅಡ್ಡಪರಿಣಾಮ

ಮೌತ್‌ವಾಶ್‌ಗಳನ್ನು ಉಪಯೋಗಿಸುವುದರಿಂದ ಅನುಕೂಲಗಳಿವೆ ನಿಜ. ಆದರೆ ಹಲ್ಲುಗಳು ಕಂದುಬಣ್ಣಕ್ಕೆ ತಿರುಗುವುದು, ಬಾಯಿ ಉರಿಯುವಿಕೆ, ರುಚಿಯಲ್ಲಿ ವ್ಯತ್ಯಾಸ, ರಾಸಾಯನಿಕಗಳಿಂದ ಅಲರ್ಜಿ – ಹೀಗೆ ಕೆಲವು ಅಡ್ಡಪರಿಣಾಮಗಳೂ ಎದುರಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಬಾಯಿಯ ಸ್ವಚ್ಛತೆಗೆ ಬ್ರಶಿಂಗ್ ಕಡ್ಡಾಯ. ಇದನ್ನು ನಿರ್ಲಕ್ಷಿಸಿದಾಗ ಬಾಯಿ, ಹಲ್ಲುಗಳು ಮತ್ತು ನಾಲಗೆಯಲ್ಲಿ ಕೊಳೆಯು ಸೇರಿ ಬಾಯಿಯಿಂದ ಕೆಟ್ಟ ವಾಸನೆ (ಹಾಲಿಟೋಸಿಸ್) ಹೊರಹೊಮ್ಮುತ್ತದೆ. ಇದನ್ನು ಹೋಗಲಾಡಿಸಲೆಂದೇ ಅನೇಕರು ಮೌತ್ ವಾಶ್‌ಗಳ ಮೊರೆ ಹೋಗುತ್ತಾರೆ. ಈ ದ್ರಾವಣಗಳಿಂದ ತಾತ್ಕಾಲಿಕವಾಗಿ ಕೆಟ್ಟ ವಾಸನೆ ಕಡಿಮೆಯಾಗಬಹುದು. ಆದರೆ ದುರ್ವಾಸನೆಯ ಮೂಲ ಸ್ವಚ್ಛತೆಯಲ್ಲಿಯ ಕೊರತೆಯ ಕಡೆಗೆ ಗಮನವನ್ನು ಕೊಡಬೇಕು. ಹಲ್ಲಿನಲ್ಲಿ ಗಾರೆ ಕಟ್ಟುವಿಕೆಯನ್ನೂ ತಡೆಗಟ್ಟುವ ಕ್ರಮಗಳನ್ನು ಅನುಸರಿಸಬೇಕು. ಕೇವಲ ಮೌತ್ ವಾಶ್‌ಗಳನ್ನಷ್ಟೆ ಬಳಸುವುದರಿಂದ ಮೂಲ ಸಮಸ್ಯೆ ಹಾಗೇ ಮುಂದುವರೆದು, ಹಲ್ಲುಗಳ ರೋಗ್ಯಕ್ಕೆ ಹಾನಿಯಾಗುತ್ತದೆ.

ನೆನಪಿರಲಿ: ಮೌತ್‌ವಾಶ್‌ಗಳು ಬಾಯಿಯನ್ನು ‘ಫ್ರೆಶ್’ ಆಗಿಟ್ಟರೂ, ಅದು ಬ್ರಶಿಂಗ್‌ಗೆ ಪರ್ಯಾಯವಲ್ಲ, ಪೂರಕ ಮಾತ್ರ.

ಹರ್ನಿಯಾ ಎಂಬ ‘ವೃದ್ಧಿ’ ರೋಗ

ಡಾ. ಗೀತಾ ಎಸ್. ಎನ್. ಭಟ್

ಮೋಹನ್‌ನಿಗೆ ಮೂವತ್ತೆರಡರ ಹರೆಯ. ಒಮ್ಮೆ ಎಡೆಬಿಡದೆ ಏಕಾಏಕಿ ವಿಪರೀತದ ಕೆಮ್ಮು ಸತಾಯಿಸಲು ತೊಡಗಿತು. ಅಷ್ಟರಲ್ಲಿ ಹೊಸದೊಂದು ಸಮಸ್ಯೆ ಹುಟ್ಟಿಕೊಂಡಿತು. ಕೊನೆಗೂ ಕೆಮ್ಮು ಪರಿಹಾರ. ಆದರೆ ಅದರೊಂದಿಗೆ ಶುರುವಾದದ್ದು ತಳ ಹೊಟ್ಟೆಯ ಗೆಜ್ಜೆ(ತೊಡೆಸಂದಿ)ಯಲ್ಲಿ ನೋವು ಕಾಣಿಸತೊಡಗಿತು. ಅದು ವಿಪರೀತವೆನಿಸಿದಾಗ ಪರೀಕ್ಷೆಗಳಿಗೆ ಒಳಗಾದ ಮೋಹನನಿಗೆ ‘ಹರ್ನಿಯಾ’ ಸಮಸ್ಯೆಯ ಅರಿವಾಯಿತು.

‘ವೃದ್ಧಿ’ ಎಂಬ ಹೆಸರಡಿ ಆಯುರ್ವೇದೀಯರು ಗುರುತಿಸುವ ರೋಗವಿದು. ತೊಡೆಸಂದಿಯ ಎರಡೂ ಕಡೆ ಇರುವ ಸ್ನಾಯುಗಳು ಅತೀವ ಕೆಮ್ಮಿನ ದೆಸೆಯಿಂದ ಸಡಿಲಗೊಂಡವು. ಆಗ ಅಲ್ಲಿ ಕಿರುಕರುಳಿನ ಸುರುಳಿಯೊಂದು ಕ್ರಮೇಣ ಜಾರಲಾರಂಭ. ಅದು ಕೆಳಗಿಳಿದು ವೃಷಣಕೋಶ(ಫಲಕೋಶ)ದ ಒಳಗೆ ಸರಿಯುತ್ತದೆ. ಓಡಾಡಿದಾಗ ಅದು ಕೆಳಗೆ ಜಾರುವ ಸನ್ನಿವೇಶ ಉಂಟಾಗುತ್ತದೆ. ಹೆಚ್ಚು ನೋವು ಮತ್ತೆ ಮತ್ತೆ ಕಾಣಿಸಿಕೊಳ್ಳತೊಡಗುತ್ತದೆ. ಕುಳಿತ ಮತ್ತು ಮಲಗಿದ ಭಂಗಿಯಲ್ಲಿ ಅಂಶತಃ ನೋವು ಕಡಿಮೆಯಾಗುತ್ತದೆ. ಕ್ರಮೇಣ ಕರುಳಿನ ಇಳಿಕೆ ಭಾಗವು ಮತ್ತೆ ಯಥಾ ಸ್ಥಾನದೆಡೆಗೆ ಮರಳುವುದು. ಇದನ್ನು ‘ಇಂಗ್ವೈನಲ್’ ಅಥವಾ ‘ಅಂತ್ರ ವೃದ್ಧಿ’ ಎಂದು ಆಯುರ್ವೇದದಲ್ಲಿ ಕರೆಯಲಾಗಿದೆ.

ಅತಿ ಉಲ್ಬಣಿಸಿದ ಕೆಮ್ಮು ಮೋಹನನಿಗೆ ಉಂಟಾದ ಹರ್ನಿಯಾ ಕಾಯಿಲೆಯ ಮೂಲ ಕಾರಣವಾಗಿತ್ತು; ಇನ್ನೊಂದು ಕಾರಣ ಅವನ ಧಡೂತಿ ದೇಹ. ಹೆಚ್ಚು ಹೊತ್ತು ನಿಂತುಕೊಂಡೇ ಕೆಲಸ ಮಾಡುವವರು, ಭಾರವನ್ನು ಎತ್ತುವವರು – ಇಂಥವರಿಗೆ ಈ ಬಗೆಯ ಹರ್ನಿಯಾದ ಉಪಟಳ ಸಹಜ.

ಹೊಕ್ಕಳು ದೈವಕೃತ ಛಿದ್ರ. ಅದು ಅಮ್ಮನ ದೇಹಕ್ಕೆ ನವಮಾಸ ಗರ್ಭಸ್ಥಶಿಶು ಪೋಷಕ ಹೆಬ್ಬಾಗಿಲು. ಪ್ರಸವಾನಂತರ ಮಗುವಿಗೆ ಬಾಯಿಯ ಮೂಲಕ ಪೋಷಣೆ. ಮೂಗಿನ ಮೂಲಕ ಉಸಿರಾಟ. ಈ ಛಿದ್ರ ಭದ್ರವಾಗಿ ಮುಚ್ಚಿಕೊಳ್ಳುತ್ತದೆ. ಕಾರಣಾಂತರದಿಂದ ಕೆಲವೊಮ್ಮೆ ಪಸೆಯಂತೆ ಸ್ರಾವ, ಗಾಯ, ಕೆರೆತಗಳು ಕಾಣಿಸೀತು. ಈ ರಂಧ್ರದ ಮೂಲಕ ಕರುಳುಭಾಗ ಕ್ರಮೇಣ ಹೊರಬರಲು ಯತ್ನಿಸೀತು. ಇದು ಹೊಕ್ಕಳ ಹರ್ನಿಯಾ. ಹುಟ್ಟಿನಿಂದ ಮತ್ತು ನಾಭಿ ನಾಡಿ(ಹೊಕ್ಕಳ ಬಳ್ಳಿ)ಯ ಅಸಮರ್ಪಕ ನಿರ್ವಹಣೆಯಿಂದ ಹೀಗಾಗುತ್ತದೆ ಎನ್ನುವ ಹೇಳಿಕೆಗಳಿವೆ. ವಂಶಪಾರಂಪರ್ಯದ ಹಣೆಪಟ್ಟಿ ಸಹ ಇದಕ್ಕಿದೆ. ಒಟ್ಟಿನಲ್ಲಿ ಹೊಟ್ಟೆಯ ಭಾಗದ ಮಾಂಸಪೇಶೀಗಳ ಮೇಲೆ ಒತ್ತಡ ಬೀಳುವಂತಹ ಕೆಲಸ ಕಾರ್ಯಗಳಿಂದ ದೂರವಿರುವವರಿಗೆ ಕ್ರಮೇಣ ಈ ಸಮಸ್ಯೆಯ ಪರಿಹಾರ ಸಾಧ್ಯ. ಯೋಗ, ಪ್ರಾಣಾಯಾಮದ ನೆರವು ಎಲ್ಲ ಬಗೆಯ ಹರ್ನಿಯಾ ತಡೆಯ ಮೂಲಮಂತ್ರ.

ಉದರಾಶ್ರಿತ ಯಂತ್ರಾಗಾರವೆಂಬ ಪೆಟ್ಟಿಗೆಯ ಮೇಲ್ತಳದ ಮುಚ್ಚಳ ವಪೆ. ಇದು ತಿಳು ಪದರದ ರಚನೆ. ಮೇಲಿನ ತಿದಿಗಳಂತಹ ಎದೆಗೂಡೊಳಗಣ ಶ್ವಾಸಕೋಶ ಮತ್ತು ಉದರದ ಪೆಟ್ಟಿಗೆ ಬೇರ್ಪಡಿಕೆಯ ಈ ಪದರಕ್ಕೆ ಕಾರಣಾಂತರಗಳಿಂದ ಧಕ್ಕೆಯಾದೀತು. ಕರುಳು ಭಾಗವೋ, ಇತರ ಅಂಗಗಳೋ ಒತ್ತಡ ಹಾಕೀತು. ಅಂತಹ ಪೊರೆರೂಪದ ವಪೆಯ ಮೇಲ್ಮುಖದ ದೂಡುವಿಕೆ ‘ಹಯಟಸ್ ಹರ್ನಿಯಾ’ದ ಸ್ವರೂಪ. ಉದರವೆಂಬ ಯಂತ್ರಾಗಾರದ ಶಸ್ತ್ರಚಿಕಿತ್ಸೆ ನಡೆಯಿತೇ? ಅನಂತರ ಹೊಲಿಗೆಯುಂದ ಮುಚ್ಚಲಾಗಿದೆಯೆ? ಆ ಮುಚ್ಚಿದ ಗಾಯದ ಒಳಗೆ ತೂರುವ ಕಿರುಕರುಳಿನ ಭಾಗದ ಸಮಸ್ಯೆ ಇದೆ. ಉಂಡ ಅನ್ನ ಪಚನವಾಗಲು ಅಹರ್ನಿಶಿ ದಡಬಡಾಯಿಸುತ್ತಾ ಚಲನೆ ಮಾಡುವ ಕಿರುಕರುಳಿನ ಭಾಗ ತೂರುವ ಯತ್ನ ಮಾಡಬಹುದು. ಇದು ಒಣಗಾಯದೊಳಗೆ ಇರುವ ಒಳಭಿತ್ತಿ ತೂರುವ ಹರ್ನಿಯಾ (ಇನ್ಸಿಷನ್).

ಆಯುರ್ವೇದ ಸಂಹಿತೆಗಳು ‘ವೃದ್ಧಿ’ ಎಂದು ಹರ್ನಿಯಾ ಪ್ರಕಾರಗಳನ್ನು ವಿವರಿಸುತ್ತವೆ. ‘ಮೂತ್ರಜವೃದ್ಧಿ’ ಎಂಬ ಪ್ರಕಾರವಿದೆ. ಹಾದಿ ತಪ್ಪಿದ ಮೂತ್ರಾಂಶದ ಜಿನುಗುವಿಕೆ ಕ್ರಮೇಣ ವೃಷಣಬೀಜದೆಡೆ ಸಂಗ್ರಹವಾಗುತ್ತದೆ. ಶೈಶವದಲ್ಲಿ ವೃಷಣಬೀಜಗಳು ಕೆಳಭಾಗಕ್ಕೆ ಜಾರದ ಸ್ಥಿತಿಯಲ್ಲಿ ಇರುತ್ತವೆ. ಆಗ ಆ ಶಿಶುವಿನ ಬೀಜದ ಕೋಶದಲ್ಲಿ ವಾಯುವಿನಂತಹ ಅಥವಾ ದ್ರವಭಾಗದ ತಾತ್ಕಾಲಿಕ ಸಂಗ್ರಹವಿರುತ್ತದೆ. ಮಗುವಿನ ಸಹಜ ಆರೋಗ್ಯ ಸುಧಾರಿಸುತ್ತಲೇ ಶೈಶವದ ಈ ಬಗೆಯ ವೃದ್ಧಿರೋಗ ಉಪಶಮನವಾಗುತ್ತದೆ.

ಆಧುನಿಕ ವೈದ್ಯಶಾಸ್ತ್ರದಲ್ಲಿ ಬಹುತೇಕ ಹರ್ನಿಯಾ ಚಿಕಿತ್ಸೆ ಎಂದರೆ ಶಸ್ತ್ರಚಿಕಿತ್ಸೆ ಮಾತ್ರ. ಜಾರಿರುವ ಅಂಗವನ್ನು ಈ ಕ್ರಿಯೆಯ ಮರುಸ್ಥಾಪಿಸುವರು. ಅನಂತರ ಮತ್ತೆ ಜಾರದಂತೆ ಮೆಷ್ (ಬಲೆ) ಅನ್ನು ಇರಿಸುವರು. ಆದರೆ ದಢೂತಿ ಕಾಯದವರಿಗೆ ಮತ್ತು ಡೊಳ್ಳು ಹೊಟ್ಟೆಯವರಿಗೆ ಮೆಷ್‌ಪದರ ಜಾರುವ ಸಂಭವ ಇರುತ್ತದೆ. ಪದರ ಜಾರಿದಾಗ ಮತ್ತೆ ಶಸ್ತ್ರಚಿಕಿತ್ಸೆ. ಹೀಗಾಗಿ ಸಮಸ್ಯೆಗಳ ಸರಮಾಲೆ ಸೃಷ್ಟಿಸುವ ಹರ್ನಿಯಾದಿಂದ ದೂರ ಉಳಿಯಲು ನಮ್ಮ ಜೀವನಶೈಲಿಯಲ್ಲಿ ವ್ಯತ್ಯಾಸಗಳನ್ನು ಮಾಡಿಕೊಳ್ಳಬೇಕು.

ಮಲ, ಮೂತ್ರ ಮತ್ತು ಅಪಾನವಾಯುವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸಬಾರದು. ಹಾಗೆಯೇ ಬಾರದ ವೇಗವನ್ನು ತಿಣುಕಾಡುತ್ತಾ ಬರಿಸಿಕೊಳ್ಳಬಾರದು. ಇವೆರಡೂ ಹರ್ನಿಯಾ ಮಾತ್ರವಲ್ಲ, ಅನೇಕ ಕಾಯಿಲೆಗಳ ಹೆದ್ದಾರಿ. ಸದಾ ನಿಂತು ಕೆಲಸ ಮಾಡುವವರು, ಹೆಚ್ಚೆಚ್ಚು ಭಾರವನ್ನು ಎತ್ತುವವರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಅಧ್ಯಾಯ: 6 ತ್ರಿಭುಜ

ಅಭ್ಯಾಸ – 6. 1

ಆವರಣದಲ್ಲಿ ಕೊಟ್ಟಿರುವ ಪದಗಳಿಂದ ಸೂಕ್ತವಾದ ಪದವನ್ನು ಆರಿಸಿ ಬಿಟ್ಟ ಪದ ತುಂಬಿಸಿ

1) ಎಲ್ಲಾ ವೃತ್ತಗಳು__________ (ಸರ್ವಸಮ, ಸಮರೂಪ)

ಉತ್ತರ:– ಸಮರೂಪ

2) ಎಲ್ಲಾ ವರ್ಗಗಳು __________ (ಸಮರೂಪ, ಸರ್ವಸಮ)

ಉತ್ತರ:– ಸಮರೂಪ

3) ಎಲ್ಲಾ _______ ತ್ರಿಭುಜಗಳು ಸಮರೂಪ (ಸಮದ್ವಿಬಾಹು, ಸಮಬಾಹು)

ಉತ್ತರ:– ಸಮಬಾಹು

4) ಬಾಹುಗಳ ಸಂಖ್ಯೆ ಒಂದೇ ಇರುವ ಎರಡು ಬಹುಭುಜಾಕೃತಿಗಳು ಸಮರೂಪವಾಗಬೇಕಾದರೆ (a) ಅದರ ಅನುರೂಪ ಕೋನಗಳು __________ ಮತ್ತು (b) ಅದರ ಅನುರೂಪ ಬಾಹುಗಳು __________ (ಸಮ, ಸಮಾನುಪಾತದಲ್ಲಿದೆ)

ಉತ್ತರ:– a)ಸಮ, b) ಸಮಾನುಪಾತದಲ್ಲಿದೆ

2. ಎರಡು ವಿಭಿನ್ನ ಉದಾಹರಣೆಗಳನ್ನು ಕೊಡಿ

i) ಒಂದು ಜೊತೆ ಸಮರೂಪ ಆಕೃತಿಗಳು

ii) ಒಂದು ಜೊತೆ ಸಮರೂಪವಲ್ಲದ ಆಕೃತಿಗಳು

ಉತ್ತರ:–(1) ಎರಡು ಸಮಭಾಹು ತ್ರಿಭುಜಗಳು

2) ಒಬ್ಬ ವ್ಯಕ್ತಿಯ ಬೇರೆಬೇರೆ ಭಂಗಿಯ 2 ಬೇರೆಬೇರೆ ಅಳತೆಯ ಭಾವ ಚಿತ್ರಗಳು.

3. ಕೆಳಗಿನ ಚತುರ್ಭುಜಗಳು ಸಮರೂಪವೇ? ಇಲ್ಲವೆ ತಿಳಿಸಿ.



ಉತ್ತರ:– ಸಮರೂಪದ ಚತುರ್ಭುಜಗಳಲ್ಲ

ಅಭ್ಯಾಸ –6.2

1) ಚಿತ್ರ 6.17 ರ (i) ಮತ್ತು (ii)ರಲ್ಲಿ $DE \parallel BC$ ಆದರೆ (i)ರಲ್ಲಿ EC (ii)ರಲ್ಲಿ AD ಕಂಡುಹಿಡಿಯಿರಿ.



ಪರಿಹಾರ:–(i) $\triangle ABC$, $DE \parallel BC$ (ದತ್ತ)

∴AD/DB=AE/EC(ಮೂಲ ಸಮಾನುಪಾತತೆಯ ಪ್ರಮೇಯದಂತೆ)

$$\Rightarrow \frac{1.5}{3} = \frac{1}{EC}$$

$$\Rightarrow EC = 3/1.5$$

$$EC = 3x\frac{10}{15} = 2cm$$

EC = 2 cm.

(ii) $\triangle$ ABC, $DE \parallel BC$ (ದತ್ತ)

∴ AD/DB = AE/EC (ಮೂಲ ಸಮಾನುಪಾತತೆಯ ಪ್ರಮೇಯದಂತೆ)

$$\Rightarrow \frac{AD}{7.2} = \frac{1.8}{5.4} \Rightarrow AD = \frac{1.8x7.2}{5.4} = 2$$

$\Rightarrow AD = 2.4$

AD = 2.4 cm.

2) E ಮತ್ತು F ಬಿಂದುಗಳು ಕ್ರಮವಾಗಿ ΔPQRನ PQ ಮತ್ತು PRಗಳ ಮೇಲಿನ ಬಿಂದುಗಳು. ಕೆಳಗಿನ ಪ್ರತಿ ಸಂದರ್ಭಗಳಲ್ಲಿ $EF \parallel QR$ ಆಗಿದೆಯೇ ಪರೀಕ್ಷಿಸಿ.

(i) PE = 3.9 cm, EQ = 3 cm, PF 3.6 cm ಮತ್ತು FR=2.4 cm

(ii) PE = 4 cm, QE = 4.5 cm, PF = 8 cm ಮತ್ತು RF=9 cm

(iii) PQ =1.28 cm, PR = 2.56 cm, PE = 0.18 cm ಮತ್ತು PF = 0.63 cm

ಪರಿಹಾರ:- ΔPQR, ದಲ್ಲಿ PQ ಮತ್ತು PR ಬಾಹುವಿನಲ್ಲಿ E ಮತ್ತು F ಗಳು ಬಿಂದುಗಳಾಗಿವೆ.



(i) PE = 3.9 cm, EQ = 3 cm, PF = 3.6 cm ಮತ್ತು FR = 2,4 cm (ದತ್ತ)

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\frac{PE}{EQ} = \frac{3.9}{3} \Rightarrow = \frac{39}{30} = 1.3$$

$$\text{And} \frac{PF}{FR} = \frac{3.6}{2.4} = \frac{36}{24} = \frac{3}{2} = 1.5$$

$$\frac{PE}{EQ} \neq \frac{PF}{FR}$$

$EF \parallel QR$ ಆಗಿಲ್ಲ

(ii) PE=4 cm, QE= 4.5 cm, PF = 8cm ಮತ್ತು RF=9cm

ಮೂಲ ಸಮಾನುಪಾತತೆಯ ಪ್ರಮೇಯದಂತೆ

$$\frac{PE}{QE} = \frac{4}{4.5} \Rightarrow = \frac{40}{45} = \frac{8}{9}$$

$$\text{And} \quad \frac{PF}{RF} = \frac{8}{9}$$

ಆದ್ದರಿಂದ PE/QE = PF/RF

$EF \parallel QR$ ಆಗಿದೆ

(iii) PQ = 1.28 cm, PR= 2.56 cm, PE=0.18 cm ಮತ್ತು PF = 0.36 cm

EQ = PQ – PE = 1.28 – 0.18 = 1.10 cm

ಮತ್ತು FR = PR – PF = 2.56 – 0.36 = 2.20 cm

So, PE/EQ = 0.18/1.10 = 18/110 = 9/55....... (i)

ಮತ್ತು PE/FR = 0.36/2.20=36/220=9/55......... (ii)

ಇಲ್ಲಿ ಸಮೀಕರಣ 1 ಮತ್ತು 2 ರಿಂದ,

PE/EQ = PF/FR

ಹೀಗಾಗಿ $EF \parallel QR$ ಆಗಿದೆ (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವಧಾರ್ಥ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

CURRENT ELECTRICITY

25. Obtain the condition for the balance of a Wheatstone's network by applying Kirchoff's law.

Ans:- (.........Contd)

Applying the Kirchoff's I law to the nodes B and D, we get

$I_1 = I_3 + I_g$ ....(i)

$I_2 + I_g = I_4$ ......(ii)

Applying Kirchoff's II law to mesh ABDA,

$I_1P + I_gG - I_2R = 0$.......(iii)

and for the mesh BCDB,

$I_3Q - I_4S - I_gG = 0$.......(iv)

The current I_g through the galvanometer can be altered by varying resistances in the bridge.

Let any one or more of 4 resistances be changed until current through the galvanometer becomes zero ($I_g = 0$).

Under this condition the Wheatstone's network is said to be balanced.

Substituting $I_g = 0$ in eqns (i),(ii),(iii) and (iv), we get

$I_1 = I_3$ ....(v)

$I_2 = I_4$ ....(vi)

$I_1P - I_2R = 0 \Rightarrow I_1P = I_2R$........(vii)

$I_3Q - I_4S = 0 \Rightarrow I_3Q = I_4S$..........(viii)

Dividing eqns (7) and (8), we get

$$\frac{I_1P}{I_3Q} = \frac{I_2R}{I_4S}$$

But from eqns(5)&(6), $I_1 = I_3$ & $I_2 = I_4$

$$\therefore \frac{P}{Q} = \frac{R}{S}$$

This is the condition for balance of a Wheatstone's network.

If 3 of the 4 resistances are known then the 4th unknown one can be calculated.

Multiple Choice questions:-

1. Consider a current carrying wire(current *I*) in the shape of a circle. Note that as the current progresses along the wire, the direction of j (current density) charges in an exact manner, while the current *I* remain unaffected. The agent that is *essentially* responsible for is -

a) source of emf.

b) electric field produced by charges accumulated on the surface of wire.

c) the charges just behind a given segment of wire which push them just the right way by repulsion.

d) the charges ahead

2. Two batteries of emf ε_1 and ε_2 ($\varepsilon_2 > \varepsilon_1$) and internal resistances r_1 and r_2 respectively are connected in parallel as in fig below -



a) The equivalent emf ε_{eq} of the two cells is between ε_1 and ε_2, i.e. $\varepsilon_1 < \varepsilon_{eq} < \varepsilon_2$.

b) The equivalent emf ε_{eq} is smaller than ε_1.

c) The ε_{eq} is given by $\varepsilon_{eq} = \varepsilon_1 + \varepsilon_2$ always.

d) ε_{eq} is independent of internal resistances r_1 and r_2.

3. A resistance *R* is to be measured using a meter bridge. Student chooses the standard resistance *S* to be 100Ω. He finds the null point at l_1 =2.9 cm. He is told to attempt to improve the accuracy. Which of the following is a useful way?

a) He should measure l_1 more accurately.

b) He should change *S* to 1000Ω and repeat the experiment.

c) He should change *S* to 3Ω and repeat the experiment.

d) He should give up hope of a more accurate measurement with a meter bridge.

4. Two cells of emf's approximately 5V and 10V are to be accurately compared using a potentiometer of length 400cm.

a) The battery that runs the potentiometer should have voltage of 8V.

b) The battery of potentiometer can have a voltage of 15V and *R* adjusted so that the potential drop across the wire slightly exceeds 10V.

c) The first portion of 50 cm of wire itself should have a potential drop of 10V.

d) Potentiometer is usually used for comparing resistances and not voltages.

5. A metal rod of length 10 cm and a rectangular cross-section of $1cm \times \frac{1}{2}cm$ is connected to a battery across opposite faces. The resistance will be –

a) maximum when the battery is connected across $1cm \times \frac{1}{2}cm$ faces.

(Contd....)

ರೇಣುಕಸ್ವಾಮಿ ಮರಣಕ್ಕೆ ಕಾರಣ • ಆರೋಪ ಪಟ್ಟಿಯಲ್ಲಿದೆ ವಿವರ

‘ಎದೆ, ಮರ್ಮಾಂಗಕ್ಕೆ ಒದ್ದಿದ್ದ ದರ್ಶನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಟ್ಟಣಗೆರೆ ಶೆಡ್‌ನಲ್ಲಿ ರೇಣುಕಸ್ವಾಮಿಯ ತಲೆ, ಕುತ್ತಿಗೆ ಹಾಗೂ ಎದೆಯ ಭಾಗಕ್ಕೆ ಕಾಲಿನಿಂದ ಬಲವಾಗಿ ಒದ್ದೆ. ಮರದ ಕೊಂಬೆಯಿಂದಲೂ ಹೊಡೆದೆ. ಸ್ಥಳಕ್ಕೆ ಬಂದ ಪವಿತ್ರಾಗೌಡ ನನ್ನ ಸೂಚನೆಯಂತೆ ಚಪ್ಪಲಿಯಿಂದ ಆತನಿಗೆ ಹೊಡೆದಳು. ನನ್ನ ಕಾರಿನ ಚಾಲಕ ಲಕ್ಷ್ಮಣ ಸಹ ಕುತ್ತಿಗೆ, ಬೆನ್ನಿಗೆ ಹೊಡೆದ. ನಂದೀಶ್ ಆತನನ್ನು ಜೋರಾಗಿ ಎತ್ತಿ ಕೆಳಕ್ಕೆ ಹಾಕಿದ’ ಎಂದು ಆರೋಪಿ ದರ್ಶನ್ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾರೆ.

ದರ್ಶನ್ ನೀಡಿರುವ ಈ ಹೇಳಿಕೆಯು ನ್ಯಾಯಾಲಯಕ್ಕೆ ಪೊಲೀಸರು ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಉಲ್ಲೇಖವಾಗಿದೆ.

‘ಪವಿತ್ರಾ ಗೌಡ ಅವರಿಗೆ ಕಳುಹಿಸಿದ್ದ ಅಶ್ಲೀಲ ಸಂದೇಶಗಳನ್ನು ಓದುತ್ತಿದ್ದಂತೆ ಕುಪಿತರಾದ ದರ್ಶನ್ ಅವರು ರೇಣುಕಸ್ವಾಮಿಯ ಮರ್ಮಾಂಗಕ್ಕೆ ಬಲವಾಗಿ ಒದ್ದಿದ್ದರು’ ಎಂದು ಮತ್ತೊಬ್ಬ ಆರೋಪಿ ಪವನ್ ನೀಡಿರುವ ಹೇಳಿಕೆಯೂ ಆರೋಪಪಟ್ಟಿಯ ಭಾಗವಾಗಿದೆ.

ಕುಪಿತರಾಗಿದ್ದ ದರ್ಶನ್ ತಂಡ, ರೇಣುಕಸ್ವಾಮಿ ಅವರ ಮೇಲೆ ಹೇಗೆಲ್ಲ ಹಲ್ಲೆ ನಡೆಸಿ, ಅವರ ಮರಣಕ್ಕೆ ಕಾರಣವಾಯಿತು ಎಂಬುದನ್ನು ಆರೋಪ ಪಟ್ಟಿ ಸವಿವರವಾಗಿ ಉಲ್ಲೇಖಿಸಿದೆ.

‘ರೇಣುಕಸ್ವಾಮಿಯು ಪವಿತ್ರಾಗೌಡ ಅಲ್ಲದೇ ಇತರೆ ಸಿನಿಮಾ ನಟಿಯರಿಗೂ ಅಶ್ಲೀಲ ಸಂದೇಶ ಕಳುಹಿಸಿರುವುದನ್ನು ಪವನ್ ತಿಳಿಸಿದ. ಆಗ ಆತನಿಗೆ ಬೈದು ಕಾಲಿನಿಂದ ಒಂದೆರಡು ಬಾರಿ ಒದ್ದು ಅಲ್ಲಿಂದ ಹೊರಟು ಹೋದೆ. ರಾತ್ರಿ 7.30ಕ್ಕೆ ಪ್ರದೂಷ್ ಮನೆಗೆ ಬಂದು, ರೇಣುಕಸ್ವಾಮಿ ಮೃತಪಟ್ಟಿರುವ ವಿಚಾರ ತಿಳಿಸಿದ. ಈ ವಿಷಯವನ್ನು ನೋಡಿ-ಕೊಳ್ಳುವುದಾಗಿ ಹೇಳಿ ಪ್ರದೂಷ್ ₹30 ಲಕ್ಷ ನಗದು ಪಡೆದ. ಕೆಲ ಹೊತ್ತಿನ ಬಳಿಕ ವಿನಯ್ ಬಂದು ₹10 ಲಕ್ಷ ಪಡೆದುಕೊಂಡು ಹೋದ’ ಎಂದು ದರ್ಶನ್ ಹೇಳಿದ್ದಾಗಿ ಆರೋಪ ಪಟ್ಟಿಯಲ್ಲಿದೆ.

‘ಜೂನ್ 10ರ ರಾತ್ರಿ ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿದ್ದಾಗ ಪ್ರದೂಷ್, ನಾಗರಾಜು, ವಿನಯ್ ಬಂದು ಭೇಟಿ ಮಾಡಿದರು. ಅವರನ್ನು ವಿಚಾರಿಸಿದಾಗ, ರೇಣುಕಸ್ವಾಮಿಗೆ ಧನರಾಜ್ ವಿದ್ಯುತ್ ಶಾಕ್ ನೀಡಿದ್ದು, ಪವನ್ ಹಲ್ಲೆ ನಡೆಸಿದ್ದು, ನಂದೀಶ್ ರೇಣುಕಸ್ವಾಮಿಯನ್ನು ಮೇಲಿಂದ ಎತ್ತಿ ಕೆಳಕ್ಕೆ ಕುಕ್ಕಿದ್ದಾನೆ ಎಂದು ತಿಳಿಸಿದ. ಈ ಕೊಲೆಯ ಹೊಣೆಯನ್ನು ಬೇರೆಯವರಿಗೆ ಹೊರಿಸಲು ಹೆಚ್ಚಿನ ಹಣ ಬೇಕಾಗುತ್ತದೆ’ ಎಂದು ಹೇಳಿ ಹೊರಟು ಹೋದರು’ ಎಂದೂ ಆರೋಪ ಪಟ್ಟಿ ವಿವರಿಸಿದೆ.

ಪವಿತ್ರಾ ಮನೆ ಖರೀದಿಗೆ ₹1.75 ಕೋಟಿ ಸಾಲ: ‘ಹತ್ತು ವರ್ಷದಿಂದ ಪವಿತ್ರಾಗೌಡ ಜತೆ ಸಹಜೀವನ ನಡೆಸುತ್ತಿದ್ದೇನೆ. ಪವಿತ್ರಾಗೆ ಮನೆ ಖರೀದಿಸಲು 2018ರಲ್ಲಿ ಜೆಟ್‌ಲ್ಯಾಗ್ ಪಬ್ ಮಾಲೀಕ ದಿವಂಗತ ಸೌಂದರ್ಯ ಜಗದೀಶ್ ಅವರಿಂದ ₹1.75 ಕೋಟಿ ಸಾಲ ಪಡೆದು, ಆಕೆಯ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದೆ. ಈ ಸಾಲದ ಹಣವನ್ನು ಎರಡು ವರ್ಷಗಳ ಹಿಂದೆಯೇ ಸೌಂದರ್ಯ ಜಗದೀಶ್ ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದೆ’ ಎಂದು ದರ್ಶನ್ ಪೊಲೀಸರಿಗೆ ತಿಳಿಸಿದ್ದಾರೆ.

ವಿಚಾರಣೆ ವೇಳೆ ದರ್ಶನ್, ಪವಿತ್ರಾಗೌಡ ಅವರಿಂದ ಹೇಳಿಕೆ ದಾಖಲಿಸಿಕೊಂಡ ಪೊಲೀಸರು

‘ಬುಲ್ ಬುಲ್’ ಚಿತ್ರದ ವೇಳೆ ಪರಿಚಯ

ಬಾಲ್ಯದ ಜೀವನ, ವಿವಾಹ, ದರ್ಶನ್ ಜೊತೆಗಿನ ಪ್ರೀತಿ ಸೇರಿದಂತೆ ಹಲವು ವಿಚಾರಗಳನ್ನು ಪವಿತ್ರಾಗೌಡ ಅವರು ಪೊಲೀಸರಿಗೆ ತಮ್ಮ ಹೇಳಿಕೆ ದಾಖಲಿಸುವ ವೇಳೆ ತಿಳಿಸಿದ್ದಾರೆ.

‘2014ರಲ್ಲಿ ಬುಲ್ ಬುಲ್ ಚಿತ್ರದ ಆಡಿಷನ್‌ಗೆ ಹೋಗಿದ್ದ ವೇಳೆ ದರ್ಶನ್ ಪರಿಚಯವಾಯಿತು. ಅವರ ಮ್ಯಾನೇಜರ್ ಮೂಲಕ ಮೊಬೈಲ್ ನಂಬರ್ ಪಡೆದು ಚಿತ್ರದಲ್ಲಿ ಅವಕಾಶ ನೀಡುವಂತೆ ಕೋರಿದೆ. ಇದನ್ನೇ ಸಲುಗೆಯಾಗಿ ತೆಗೆದುಕೊಂಡು ದರ್ಶನ್ ನನಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸುತ್ತಿದ್ದರು. ನಮ್ಮ ಮನೆಗೂ ಬಂದು ಹೋಗುತ್ತಿದ್ದರು. ನಾನು ಮತ್ತು ದರ್ಶನ್ ಪ್ರೀತಿಸುತ್ತಿದ್ದೆವು’ ಎಂದು ಪವಿತ್ರಾಗೌಡ ಹೇಳಿದ್ದಾರೆ.

‘ಜೆ.ಪಿ. ನಗರದಲ್ಲಿನ ನಮ್ಮ ನಿವಾಸಕ್ಕೆ ದರ್ಶನ್ ಬರುತ್ತಿದ್ದರು. ನಾನು, ಮಗಳು ಹಾಗೂ ದರ್ಶನ್ ಜೊತೆಯಾಗಿ ವಾಸ ಮಾಡಲು ಆರ್. ಆರ್. ನಗರದ ಅವರ ಮನೆ ಹತ್ತಿರ ನನಗಾಗಿ ಮನೆ ಖರೀದಿಸಿದ್ದರು’ ಎಂಬ ಅವರ ಹೇಳಿಕೆಯನ್ನು ಆರೋಪಪಟ್ಟಿಯಲ್ಲಿ ನಮೂದಿಸಲಾಗಿದೆ.

‘ರೇಣುಕ’ನನ್ನು ಸಾಯಿಸುವಂತೆ ಹೇಳಿದ್ದ ಪವಿತ್ರಾ

‘ಪಟ್ಟಣಗೆರೆ ಶೆಡ್‌ನಲ್ಲಿ ಟಿ ಶರ್ಟ್ ಧರಿಸಿ, ನೀಲಿ ಬಣ್ಣದ ಒಳ ಉಡುಪಿನಲ್ಲಿ ಕುಳಿತಿದ್ದ ರೇಣುಕಸ್ವಾಮಿಗೆ ಚಪ್ಪಲಿಯಿಂದ ಕಪಾಳ ಹಾಗೂ ತಲೆಗೆ ಹೊಡೆದೆ. ಆತನನ್ನು ಬಿಡಬೇಡಿ, ಸಾಯಿಸಿ ಎಂದು ಅಲ್ಲಿದ್ದವರಿಗೆ ಹೇಳಿದ್ದೆ’ ಎಂದು ನಟ ದರ್ಶನ್ ಅವರ ಪ್ರೇಯಸಿ ಪವಿತ್ರಾಗೌಡ ವಿಚಾರಣೆ ವೇಳೆ ಪೊಲೀಸರ ಎದುರು ತಪ್ಪೊಪ್ಪಿಕೊಂಡಿದ್ದಾರೆ.

‘ಜೂನ್ 8ರಂದು ಮಧ್ಯಾಹ್ನ 1 ರಿಂದ 2 ರ ಸಮಯದಲ್ಲಿ ದರ್ಶನ್ ಕರೆ ಮಾಡಿ, ನಮ್ಮ ಹುಡುಗರು ರೇಣುಕಸ್ವಾಮಿಯನ್ನು ಅಪಹರಿಸಿಕೊಂಡು ಬಂದಿದ್ದಾರೆ ಎಂದರು. ಪವನ್, ಪ್ರದೂಷ್ ಜತೆ ಸ್ಕಾರ್ಪಿಯೊ ವಾಹನದಲ್ಲಿ ಬಂದ ದರ್ಶನ್, ‘ಆತನಿಗೆ ಬುದ್ಧಿ ಕಲಿಸೋಣ ಬಾ’ ಎಂದು ನನ್ನನ್ನು ಶೆಡ್‌ಗೆ ಕರೆದೊಯ್ದರು. ಅಲ್ಲಿದ್ದ ವ್ಯಕ್ತಿ ಗೋಳಾಡಿಕೊಂಡು ಕ್ಷಮೆ ಕೋರುತ್ತಿದ್ದ. ‘ಈತನೇ ‘ಗೌತಮ್ ಕೆ.ಎಸ್. 1990’ ಖಾತೆಯಿಂದ ಅಶ್ಲೀಲ ಸಂದೇಶ ಕಳುಹಿಸಿದ್ದು, ಈತನ ನಿಜವಾದ ಹೆಸರು ರೇಣುಕಸ್ವಾಮಿ’ ಎಂದು ದರ್ಶನ್ ಹೇಳಿದರು. ದರ್ಶನ್, ನಾಗರಾಜು, ಪವನ್, ನಂದೀಶ್ ಅವರು ರೇಣುಕಸ್ವಾಮಿಯ ತಲೆ, ಎದೆ, ಕೈ ಕಾಲುಗಳ ಮೇಲೆ ಮರದ ರೆಂಬೆಯಿಂದ ಥಳಿಸಿದರು’ ಎಂದು ಪವಿತ್ರಾ ನೀಡಿರುವ ಹೇಳಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿಯಲ್ಲಿ ಲಗತ್ತಿಸಲಾಗಿದೆ.

‘ಅಸಭ್ಯವಾಗಿ ನಡೆದುಕೊಂಡ ವ್ಯಕ್ತಿ ಇವನೇನಾ?’ ಎಂದು ನಾನು ಸಹ ಚಪ್ಪಲಿಯಿಂದ ಆತನ ಕಪಾಳ ಮತ್ತು ಮುಖಕ್ಕೆ ಹೊಡೆದು, ಬಿಡಬೇಡಿ ಸಾಯಿಸಿ ಎಂದು ಅಲ್ಲಿದವರಿಗೆ ಹೇಳಿದೆ. ಅವರೆಲ್ಲರೂ ಹಲ್ಲೆ ನಡೆಸಿದರು. ಆಗ ದರ್ಶನ್ ನನ್ನನ್ನು ಮನೆಗೆ ಹೋಗಲು ಹೇಳಿದರು’ ಎಂದು ಪವಿತ್ರಾ ಹೇಳಿಕೆ ನೀಡಿದ್ದಾರೆ.

‘ನಾವು ಹಲ್ಲೆ ಮಾಡಿದ ವ್ಯಕ್ತಿ ಮೃತಪಟ್ಟಿದ್ದು, ಈ ವಿಷಯ ನಾವು ನೋಡಿಕೊಳ್ತೀವಿ ಎಂದು ದರ್ಶನ್ ಹಾಗೂ ಪವನ್ ರಾತ್ರಿ 9.30ಕ್ಕೆ ನನಗೆ ಹೇಳಿದ್ದರು’ ಎಂದೂ ಪವಿತ್ರಾಗೌಡ ತಿಳಿಸಿದ್ದಾರೆ.

ಸರ್ಕಾರದಿಂದಲೇ ಮಾಹಿತಿ ಸೋರಿಕೆ: ಛಲವಾದಿ

ಬೆಂಗಳೂರು: ‘ಮುಡಾ ಪ್ರಕರಣದ ವಿಚಾರಣೆಯ ಮಾಹಿತಿಯನ್ನು ಬದಿಗೆ ಸರಿಸಲು ಜೈಲಿನಲ್ಲಿರುವ ನಟ ದರ್ಶನ್ ಅವರ ಚಿತ್ರಗಳು ಮತ್ತು ಮಾಹಿತಿಯನ್ನು ಸರ್ಕಾರವೇ ಮಾಧ್ಯಮಗಳಿಗೆ ಬಿಡುಗಡೆ ಮಾಡುತ್ತಿದೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ‘ಈ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಕರಣವನ್ನು ಮರೆ ಮಾಚಲು ತಂತ್ರಗಾರಿಕೆ ನಡೆಸಲಾಗಿದೆ’ ಎಂದು ಅವರು ಹೇಳಿದ್ದಾರೆ. ‘ದರ್ಶನ್ ಅವರಿಂದ ನಡೆದ ಕೊಲೆ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿರುವಾಗ-ಲೇ, ದರ್ಶನ್ ಪೊಲೀಸ್ ಠಾಣೆಯಲ್ಲಿದ್ದ ಮತ್ತು ಜೈಲಿನಲ್ಲಿರುವ ಚಿತ್ರಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಸರ್ಕಾರ ಯಾವ ಉದ್ದೇಶಕ್ಕಾಗಿ ಚಿತ್ರ ಬಿಡುಗಡೆ ಮಾಡುತ್ತಿದೆ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಪೊಲೀಸರು ಮಾಹಿತಿಗಳನ್ನು ನ್ಯಾಯಾಲಯಕ್ಕೆ ನೀಡುವ ಬದಲು ಮಾಧ್ಯಮಗಳಿಗೆ ಬಿಡುಗಡೆ ಮಾಡಲು ಕಾರಣವೇನು? ಇದು ಕಾನೂನು ಬಾಹಿರವಲ್ಲವೇ’ ಎಂದು ಅವರು ಪ್ರಶ್ನಿಸಿದ್ದಾರೆ.

ನ್ಯಾಯಾಂಗ ಬಂಧನ 12ರ ವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ನಟ ದರ್ಶನ್ ಸೇರಿ ಎಲ್ಲಾ 17 ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ಸೆಪ್ಟೆಂಬರ್ 12ರವರೆಗೂ ವಿಸ್ತರಿಸಿ, 24ನೇ ಎಸಿಎಂಎಂ ನ್ಯಾಯಾಲಯ ಸೋಮವಾರ ಆದೇಶಿಸಿದೆ.

ಮೈಸೂರು, ಬೆಂಗಳೂರು, ಬಳ್ಳಾರಿ, ಕಲಬುರಗಿ, ವಿಜಯಪುರ, ತುಮಕೂರು ಹಾಗೂ ಬೆಳಗಾವಿ ಕಾರಾಗೃಹಗಳ-ಲ್ಲಿರುವ ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಸೋಮವಾರ ಅಂತ್ಯಗೊಳ್ಳುತ್ತಿತ್ತು. ಆಯಾ ಕಾರಾಗೃಹ-ಗಳಿಂದಲೇ ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಮೂರು ದಿನ ನ್ಯಾಯಾಂಗ ಬಂಧನ ಅವಧಿಯನ್ನು ವಿಸ್ತರಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ 60 ಡಿಜಿಟಲ್ ಸಾಕ್ಷ್ಯಗಳನ್ನೊಳಗೊಂಡ ಹಾರ್ಡ್ ಡಿಸ್ಕ್ ಮತ್ತು ಪೆನ್ ಡ್ರೈವ್ ಅನ್ನು ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ನ್ಯಾಯಾಲಯಕ್ಕೆ ಸಲ್ಲಿಸಿದರು.

ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿರುವುದರಿಂದ ದರ್ಶನ್ ಸೇರಿದಂತೆ ಬಹುತೇಕ ಆರೋಪಿಗಳ ಪರ ವಕೀಲರು ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿ ದ್ದರು. ಆದರೆ, ವಿಚಾರಣೆ ವೇಳೆ ಯಾರೊಬ್ಬರೂ ಅರ್ಜಿ ಸಲ್ಲಿಸಲಿಲ್ಲ

ಬಳ್ಳಾರಿ ವರದಿ: ದರ್ಶನ್ ಅವರಿಗೆ ಜೈಲಿನಲ್ಲಿ ಈವರೆಗೆ ಟಿವಿ ವ್ಯವಸ್ಥೆ ಆಗಿಲ್ಲ. ಹಳೇ ಟಿವಿಯನ್ನೇ ದುರಸ್ತಿಪಡಿಸಿ, ಕೊಡಲಾಗಿತ್ತು. ಆದರೆ, ಅದರ ಧ್ವನಿವರ್ಧಕದಲ್ಲಿ ದೋಷವಿದ್ದ ಕಾರಣ ಮತ್ತೆ ದುರಸ್ತಿಗೆ ಕಳುಹಿಸಲಾಯಿತು ಎಂದು ಹೇಳಲಾಗಿದೆ.

ದರ್ಶನ್ ಭೇಟಿಗೆ ಸೋಮವಾರ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಬಂದ ಶಿಗ್ಗಿ ಬಸ್ಯ ಎಂಬುವರಿಗೆ ಅಧಿಕಾರಿಗಳು ಅನುಮತಿ ನಿರಾಕರಿಸಿದರು. ಹಲವು ಕಳವು ಪ್ರಕರಣಗಳಲ್ಲಿ ಭಾಗಿಯಾಗಿ ಬಳ್ಳಾರಿ ಕಾರಾಗೃಹದಲ್ಲಿ 20 ವರ್ಷ ಸೆರೆವಾಸದಲ್ಲಿದ್ದ ಶಿಗ್ಗಿ ಬಸ್ಯ, ತಮ್ಮ ಪ್ರಕ-ರಣಗಳಲ್ಲಿ ತಾವೇ ವಾದ ಮಾಡುತ್ತಿದ್ದರು ಎನ್ನಲಾಗಿದೆ.

‘ದರ್ಶನ್ ಚಾರ್ಜ್ ಶೀಟ್ ಅಧ್ಯಯನ ಮಾಡುತ್ತೇನೆ. ಪೊಲೀಸರು ಯಾವ ರೀತಿ ತನಿಖೆ ನಡೆಸಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಿದೆ. ದರ್ಶನ್ ನಿರಪರಾಧಿ. ನಾನು ಅವರ ಪರ ಖಂಡಿತ ಹೋರಾಟ ನಡೆಸುವೆ. ಬಳ್ಳಾರಿ ಕೇಂದ್ರ ಕಾರಾಗೃಹ ದರ್ಶನ್‌ಗೆ ಸುರಕ್ಷಿತವಲ್ಲ’ ಎಂದು ಶಿಗ್ಗಿ ಬಸ್ಯ ಸುದ್ದಿಗಾರರಿಗೆ ತಿಳಿಸಿದರು.

ನಿಧನ ವಾರ್ತೆ

ಪತ್ರಕರ್ತ ವಸಂತ್ ನಾಡಿಗೇರ

ಬೆಂಗಳೂರು : ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ವಸಂತ ನಾಡಿಗೇರ (59) ಅವರು ಸೋಮವಾರ ಮುಂಜಾನೆ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ತಾಯಿ, ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಚಾಮರಾಜಪೇಟೆಯ ಚಿತಾಗಾರದಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ವಸಂತ ನಾಡಿಗೇರ ಅವರು ಸಂಯುಕ್ತ ಕರ್ನಾಟಕದಿಂದ ವೃತ್ತಿ ಬದುಕು ಆರಂಭಿಸಿ, ಕನ್ನಡಪ್ರಭ, ವಿಜಯ ಕರ್ನಾಟಕ, ವಿಶ್ವವಾಣಿ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿ-ಸಿದ್ದರು. ಗಾಯಕಿ ಲತಾ ಮಂಗೇಶ್ಕರ್ ಜೀವನ ಚರಿತ್ರೆ ‘ಹಾಡು ಹಕ್ಕಿಯ ಹೃದಯ ಗೀತೆ’ ಎಂಬ ಕೃತಿಯನ್ನು ಬರೆದಿದ್ದಾರೆ. ನೇಪಾಳ ಮತ್ತು ಶ್ರೀಲಂಕಾದ ಪ್ರವಾಸ ಕಥನ ಕೃತಿಗಳನ್ನು ಬರೆದಿದ್ದಾರೆ.

ನಾಡಿಗೇರ ಅವರಿಗೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯೂಜೆ) ದತ್ತಿನಿಧಿ ಪ್ರಶಸ್ತಿ ನೀಡಿ ಗೌರವಿಸಿತ್ತು. ಕರ್ನಾಟಕ ಮಾಧ್ಯಮ ಅಕಾಡೆಮಿ, ಖಾದ್ರಿ ಶಾಮಣ್ಣ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

‘ಬಿಜೆಪಿ ರಾಜ್ಯ ಕಚೇರಿ ಸ್ಫೋಟಕ್ಕೆ ಯತ್ನ’

ಒಂದನೇ ಪುಟದಿಂದ...

‘ಅಯೋಧ್ಯೆಯ ರಾಮಮಂದಿರದಲ್ಲಿ ಬಾಲರಾಮನ ವಿಗ್ರಹ ಪ್ರತಿಷ್ಠಾಪನೆಯಾದ 2024ರ ಜನವರಿ 22ರಂದೇ ಕಚ್ಚಾ ಬಾಂಬ್ ಬಳಸಿ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಘಟಕದ ಕಚೇರಿ ಸ್ಫೋಟಿಸಲು ಆರೋಪಿಗಳು ನಡೆಸಿದ್ದ ಯತ್ನ ವಿಫಲವಾಗಿತ್ತು. ಆ ಬಳಿಕ ರಾಮೇಶ್ವರಂ ಕೆಫೆ ಸ್ಫೋಟಕ್ಕೆ ಯೋಜನೆ ರೂಪಿಸಿದ್ದರು’ ಎಂದು ಎನ್‌ಐಎ, ನ್ಯಾಯಾಲಯಕ್ಕೆ ತಿಳಿಸಿದೆ.

ಭಾರತೀಯ ದಂಡ ಸಂಹಿತೆ, ಕಾನೂನುಬಾಹಿರ ಚಟುವಟಿಕೆ(ತಡೆ) ಕಾಯ್ದೆ, ಸಾರ್ವಜನಿಕ ಆಸ್ತಿ ಹಾನಿ ತಡೆ (ಪಿಡಿಎಲ್‌ಪಿ) ಕಾಯ್ದೆ, ಸ್ಫೋಟಕ ವಸ್ತುಗಳ ನಿಯಂತ್ರಣ ಕಾಯ್ದೆಗಳ ಅಡಿಯಲ್ಲಿ ಎಲ್ಲ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಎನ್‌ಐಎ ಹೇಳಿದೆ.

ವಿವಿಧೆಡೆ ಶೋಧ ನಡೆಸಿ, ತಾಂತ್ರಿಕ ಸಾಕ್ಷ್ಯಗಳನ್ನು ಕಲೆಹಾಕಿದ್ದ ತನಿಖಾ ತಂಡ, ವಿವಿಧ ರಾಜ್ಯಗಳ ಪೊಲೀಸ್ ಪಡೆಗಳು ಮತ್ತು ಇತರ ತನಿಖಾ ಸಂಸ್ಥೆಗಳ ಜೊತೆಗೂಡಿ ಆರೋಪಿಗಳ ಪತ್ತೆಗೆ ಶ್ರಮಿಸಿತ್ತು. ಮುಸ್ಸಾವೀರ್ ಹುಸೇನ್ ಶಾಜೀಬ್, ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿದ್ದ ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ. ಅಲ್ ಹಿಂದ್ ಉಗ್ರ ಸಂಘಟನೆಯ ಚಟುವಟಿಕೆಗಳನ್ನು 2020ರಲ್ಲಿ ತನಿಖಾ ಸಂಸ್ಥೆಗಳು ಪತ್ತೆ ಹಚ್ಚಿದ ಬಳಿಕ ಶಾಜೀಬ್ ಮತ್ತು ಅಬ್ದುಲ್ ಮಥೀನ್ ತಾಹಾ ತಲೆಮರೆಸಿಕೊಂಡಿದ್ದರು. ಎನ್‌ಐಎ ಅಧಿಕಾರಿಗಳು ಸತತ ಕಾರ್ಯಾಚರಣೆ ನಡೆಸಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ನಡೆದ 42 ದಿನಗಳ ಬಳಿಕ ಈ ಇಬ್ಬರನ್ನೂ ಪಶ್ಚಿಮ ಬಂಗಾಳದ ಅಡಗುದಾಣವೊಂದರಿಂದ ಬಂಧಿಸಿದ್ದರು ಎಂಬ ಉಲ್ಲೇಖ ಆರೋಪ ಪಟ್ಟಿಯಲ್ಲಿದೆ.

‘ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರಾದ ಮುಸ್ಸಾವೀರ್ ಹುಸೇನ್ ಮತ್ತು ಅಬ್ದುಲ್ ಮಥೀನ್, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಜತೆ ನಂಟು ಹೊಂದಿದ್ದರು. ಸಿರಿಯಾದಲ್ಲಿ ಐಎಸ್ ವಶದಲ್ಲಿರುವ ಪ್ರದೇಶಕ್ಕೆ ವಲಸೆ ಹೋಗಲು ಈ ಹಿಂದೆ ಪ್ರಯತ್ನಿಸಿದ್ದರು. ಅಮಾಯಕ ಮುಸ್ಲಿಂ ಯುವಕರನ್ನು ಪ್ರಚೋದಿಸಿ ಐಎಸ್ ಸಿದ್ಧಾಂತದತ್ತ ಸೆಳೆಯುವ ಕೆಲಸ ಮಾಡುತ್ತಿದ್ದರು. ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದಲ್ಲಿ ಬಂಧಿತರಾಗಿರುವ ಮಾಜ್ ಮುನೀರ್ ಅಹ್ಮದ್ ಮತ್ತು ಮುಝಮ್ಮಿಲ್ ಷರೀಫ್ ಕೂಡ ಅದೇ ರೀತಿ ಈ ಇಬ್ಬರಿಂದ ಪ್ರಚೋದಿತರಾಗಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು’ ಎಂದು ಎನ್‌ಐಎ ನ್ಯಾಯಾಲಯಕ್ಕೆ ತಿಳಿಸಿದೆ.

ಮುಸ್ಸಾವೀರ್ ಹುಸೇನ್ ಮತ್ತು ಅಬ್ದುಲ್ ಮಥೀನ್ ವಂಚನೆಯಿಂದ ಭಾರತೀಯ ಸಿಮ್ ಕಾರ್ಡ್‌ಗಳನ್ನು ಪಡೆದು ಬಳಸುತ್ತಿದ್ದರು. ನಕಲಿ ದಾಖಲೆಗಳನ್ನು ಬಳಸಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆದಿದ್ದರು. ಭಾರತೀಯರು ಮತ್ತು ಬಾಂಗ್ಲಾದೇಶಿ ಪ್ರಜೆಗಳಿಗೆ ಸಂಬಂಧಿಸಿದ ಗುರುತಿನ ದಾಖಲೆಗಳನ್ನು ಡಾರ್ಕ್ ವೆಬ್‌ನಿಂದ ಡೌನ್‌ಲೋಡ್ ಮಾಡಿ ಇರಿಸಿ-ಕೊಂಡಿದ್ದರು ಎಂದು ತನಿಖಾ ಸಂಸ್ಥೆ ಹೇಳಿದೆ.

ಮುಖ್ಯಮಂತ್ರಿ ಹುದ್ದೆ ಸದ್ಯಕ್ಕೆ ಖಾಲಿ ಇಲ್ಲ: ಜಿ. ಪರಮೇಶ್ವರ

ಕಾಂಗ್ರೆಸ್‌ನಲ್ಲಿ ನಿಲ್ಲದ ಸಿಎಂ ಪಟ್ಟದ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಪ್ರಶ್ನೆಯೇ ಇಲ್ಲ’ ಎಂದು ಕಾಂಗ್ರೆಸ್ ಹೈಕಮಾಂಡ್ ನಾಯಕರು ಪುನರುಚ್ಚರಿಸುತ್ತಲೇ ಇದ್ದರೂ, ತಾವೂ ಮುಖ್ಯಮಂತ್ರಿ ಆಕಾಂಕ್ಷಿ ಎಂದು ಹೇಳುವವರ ಪಟ್ಟಿ ಕಾಂಗ್ರೆಸ್‌ನಲ್ಲಿ ಬೆಳೆಯುತ್ತಲೇ ಇದೆ.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಗೃಹ ಸಚಿವ ಜಿ. ಪರಮೇಶ್ವರ, ‘ಮುಖ್ಯಮಂತ್ರಿ ಹುದ್ದೆ ಸದ್ಯಕ್ಕೆ ಖಾಲಿ ಇಲ್ಲ. ಹೀಗಾಗಿ, ಮುಂದಿನ ಮುಖ್ಯಮಂತ್ರಿ ಕುರಿತು ಚರ್ಚೆ ಮಾಡುವ ಅಗತ್ಯವೂ ಇಲ್ಲ’ ಎಂದರು.

‘ಮುಡಾ ನಿವೇಶನ ಹಂಚಿಕೆ ವಿಚಾರ ಸದ್ಯ ನ್ಯಾಯಾಲಯದಲ್ಲಿದ್ದು, ಅಲ್ಲಿ ಏನಾಗಲಿದೆ ಎಂಬುದನ್ನು ಕಾದು ನೋಡಬೇಕಿದೆ. ಎಲ್ಲದಕ್ಕೂ ಮೊದಲೇ ಮುಂದಿನ ಮುಖ್ಯಮಂತ್ರಿ ಕುರಿತು ಚರ್ಚೆ ಮಾಡುವ ಅಗತ್ಯ ಸದ್ಯಕ್ಕಂತೂ ನನಗೆ ಕಾಣಿಸುತ್ತಿಲ್ಲ’ ಎಂದರು.

ಯಾರೂ ಅಪೇಕ್ಷೆ ಪಡುತ್ತಿಲ್ಲ: ‘ಮುಖ್ಯಮಂತ್ರಿ ಸ್ಥಾನಕ್ಕೆ ಕಾಂಗ್ರೆಸ್‌ನಲ್ಲಿ ಯಾರೂ ಅಪೇಕ್ಷೆ ಪಡುತ್ತಿಲ್ಲ. ಅಷ್ಟಕ್ಕೂ, ಸಿದ್ದರಾಮಯ್ಯ ಬೆಂಬಲಕ್ಕೆ ಹೈಕಮಾಂಡ್ ನಿಂತಿದೆ. ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಕೂಡಾ ಅವರ ಪರ ನಿಂತಿದ್ದಾರೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದೇ ತೀರ್ಮಾನ ಬಂದರೂ ಸಿದ್ದರಾಮಯ್ಯ ಅವರೇ ಮುಂದುವರಿಯುತ್ತಾರೆ’ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಹೇಳಿದರು.

ಕೆಲವು ಸಚಿವರ ದೆಹಲಿ ಪ್ರಯಾಣದ ಕುರಿತು ಪ್ರತಿಕ್ರಿಯಿಸಿದ ಬೋಸರಾಜು, ‘ಪಕ್ಷದ ಹೈಕಮಾಂಡ್ ನಾಯಕರ ಜೊತೆ ಸಮಯ ನಿಗದಿ ಮಾಡಿಕೊಂಡು ಭೇಟಿಗೆ ಸಚಿವರು ಹೋಗುತ್ತಿದ್ದಾರೆ. ಸತೀಶ ಜಾರಕಿಹೊಳಿ ಹೋಗಿದ್ದರು. ಮುಂದಿನ ವಾರ ನಾನೂ ಹೋಗುತ್ತಿದ್ದೇನೆ. ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡಲು ಹೋಗುತ್ತೇವೆ’ ಎಂದರು.



ಸಿದ್ದರಾಮಯ್ಯ ಅವರ ಸ್ಥಾನಕ್ಕೆ ಚ್ಯುತಿ ಬರುವುದಿಲ್ಲ. ಹೈಕಮಾಂಡ್ ಅವರ ಬೆನ್ನಿಗೆ ಗಟ್ಟಿಯಾಗಿ ನಿಂತಿದೆ. ಅವರೇ 5 ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ಬದಲಾವಣೆ ಚರ್ಚೆ ವ್ಯರ್ಥ ಪ್ರಯತ್ನ

ಡಿ.ಕೆ. ಸುರೇಶ್ ಮಾಜಿ ಸಂಸದ



ಮುಖ್ಯಮಂತ್ರಿ ಬದಲಾವಣೆಯ ಯಾವುದೇ ಪ್ರಸಂಗ ಇಲ್ಲ. ಸಿದ್ದರಾಮಯ್ಯ ನಾಯಕತ್ವ ಅಲ್ಲಾಡಿಸಲು ಯಾರಿಗೂ ಸಾಧ್ಯವಿಲ್ಲ

ಎನ್.ಎಸ್. ಬೋಸರಾಜು ಸಣ್ಣ ನೀರಾವರಿ ಸಚಿವ

‘ಅದೃಷ್ಟವಿದ್ದರೆ ನಾನೇ ಸಿ.ಎಂ’

ಕೊಪ್ಪಳ: ‘ಮುಖ್ಯಮಂತ್ರಿ ಆಗಬೇಕು ಎಂದು ಹಲವರು ಆಸೆ ಪಡುತ್ತಿದ್ದಾರೆ. ಅವರು ಆಸೆ ಪಡುವುದರಲ್ಲಿ ತಪ್ಪೇನಿಲ್ಲ. ಆದರೆ, ಆ ಜಾಗ ಖಾಲಿಯಿಲ್ಲ. ಒಂದು ವೇಳೆ ಬೇರೆಯವರನ್ನು ಮುಖ್ಯಮಂತ್ರಿ ಮಾಡುವುದಾದರೆ ನಾನೂ ಆಕಾಂಕ್ಷಿ’ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅದೃಷ್ಟ-ವಿದ್ದರೆ ನಾನೂ ಏಕೆ ಮುಖ್ಯಮಂತ್ರಿ ಆಗಬಾರದು’ ಎಂದು ಪ್ರಶ್ನಿಸಿದರು.

‘ಹೊಸದಾಗಿ ಯಾರೇ ಮುಖ್ಯಮಂತ್ರಿ ಆಗುವುದಾದರೂ ಅವರಿಗೆ ಸಿದ್ದರಾಮಯ್ಯನವರ ಆಶೀರ್ವಾದ ಬೇಕು. ಅವರು ಹೇಳಿದವರು ಸಿ.ಎಂ. ಆಗುತ್ತಾರೆ. ಅಂತಹ ಸಂದರ್ಭ ಬಂದರೆ ಸಿದ್ದರಾಮಯ್ಯ ನನ್ನ ಹೆಸರನ್ನೇ ಹೇಳುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿ-ಸಿದರು. ‘ಎಂ.ಬಿ. ಪಾಟೀಲ ಹಾಗೂ ಶಿವಾನಂದ ಪಾಟೀಲ ಅವರು ಲಿಂಗಾಯತ ಸಮುದಾಯದ ಹಿರಿಯ ನಾಯಕರು ಎಂದು ಹೇಳಿಕೊಳ್ಳುತ್ತಿದ್ದಾರೆ. ಜಾತಿ ವಿಷಯ ಮುನ್ನಲೆಗೆ ತಂದರೆ ಲಿಂಗಾಯತರಲ್ಲಿ ನಾನು ಹಾಗೂ ಬಿ.ಆರ್. ಪಾಟೀಲ ಮಾತ್ರ ಹಿರಿಯ ಶಾಸಕರಿದ್ದೇವೆ. ಹೆಚ್ಚು ಬಾರಿ ಗೆದ್ದ ಲಿಂಗಾಯತ ಶಾಸಕ ನಾನೊಬ್ಬನೇ. ಮುಖ್ಯಮಂತ್ರಿ ಸ್ಥಾನ ಲಿಂಗಾಯತರಿಗೆ ಹಾಗೂ ಕಲ್ಯಾಣ ಕರ್ನಾಟಕ ಭಾಗದ ಶಾಸಕರಿಗೆ ಕೊಡುವುದಾದರೆ ಆಕಾಂಕ್ಷಿ ಯಾಗಿ ಮುಂಚೂಣಿ ಯಲ್ಲಿರುತ್ತೇನೆ’ ಎಂದರು.

ಬಸವರಾಜ ರಾಯರಡ್ಡಿ

ಮಾಹಿತಿ ಬಿತ್ತರಿಸದಂತೆ ಕೋರ್ಟ್‌ಗೆ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ದೋಷಾರೋಪ ಪಟ್ಟಿ ಮತ್ತು ಅದಕ್ಕೆ ಪೂರಕವಾದ ಇತರೆ ಯಾವುದೇ ಅಂಶಗಳನ್ನು ಪ್ರಸಾರ ಮಾಡದಂತೆ ಎಲ್ಲ ವಿಧವಾದ ಮಾಧ್ಯಮ ಸಂಸ್ಥೆಗಳನ್ನು ನಿರ್ಬಂಧಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಮಾಧ್ಯಮ ಸಂಸ್ಥೆಗಳನ್ನು ಹೆಸರಿಸುವಂತೆ ನಟ ದರ್ಶನ್ ಅವರಿಗೆ ಹೈಕೋರ್ಟ್ ಸೂಚಿಸಿದೆ.

ದರ್ಶನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ದರ್ಶನ್ ಪರ ಹಾಜರಾಗಿದ್ದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಸುದ್ದಿ ಮಾಧ್ಯಮಗಳು, ಅದರಲ್ಲೂ ಎಲೆಕ್ಟ್ರಾನಿಕ್ ಮಾಧ್ಯಮಗಳು ದಿನದ 8 ಗಂಟೆಗಳ ಕಾಲ ನಿರಂತರವಾಗಿ ರೇಣುಕಸ್ವಾಮಿ ಕೊಲೆ ಪ್ರಕರಣದ ಸುದ್ದಿಯನ್ನು ಪೂರ್ವಗ್ರಹ ಪೀಡಿತ ಭಾವನೆಯಿಂದ ಪ್ರಸಾರ ಮಾಡುತ್ತಿವೆ’ ಎಂದು ಆಕ್ಷೇಪಿಸಿದರು.

‘ಈ ರೀತಿಯ ವರದಿ ಪ್ರಕಟವಾಗುವಿಕೆಯು, ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ್ ನಿಯಂತ್ರಣ ಕಾಯ್ದೆ–1995ರ ಮತ್ತು ದರ್ಶನ್ ಅವರ ಮೂಲಭೂತ ಹಕ್ಕಿನ ಸ್ಪಷ್ಟ ಉಲ್ಲಂಘನೆಯೂ ಆಗಿದೆ. ಆದ್ದರಿಂದ, ಮಾಧ್ಯಮಗಳನ್ನು ಈ ವಿಷಯದಲ್ಲಿ ನಿಯಂತ್ರಿಸಲು ನಿರ್ದೇಶನ ನೀಡಬೇಕು’ ಎಂದು ಮನವಿ ಮಾಡಿದರು.

ನ್ಯಾಯಪೀಠವು ಅರ್ಜಿದಾರರ ಪರ ವಕೀಲರಿಗೆ, ‘ಆಕ್ಷೇಪಣೆ ಇರುವ ನಿರ್ದಿಷ್ಟ ಮಾಧ್ಯಮಗಳ ಕುರಿತು ಮಂಗಳವಾರ (ಸೆ.10) ಬೆಳಗ್ಗೆ 10.30ಕ್ಕೆ ಮೆಮೊ ಸಲ್ಲಿಸಿ’ ಎಂದು ನಿರ್ದೇಶಿಸಿತು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಇಪಿ/18/415/2024–25 ದಿನಾಂಕ : 09.09.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕ್ಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಮೈಸೂರು ಜಿಲ್ಲೆ, ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಉದ್ದೇಶಿತ ಮೈಸೂರು ರಫ್ತು ಕೇಂದ್ರ ಸ್ಥಾಪನೆಯ ಉಳಿದ ಭಾಗದ ನಿರ್ಮಾಣದ ಕಾಮಗಾರಿಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25.09.2024 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https ://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/1892/Zen/2024-25

ಕೆ.ಎಂ.ಎಫ್ **ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**
ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029

IFT No: KMF/ENGG/MD/ETP_BIOGAS_CALL2/2024-25 Date: 09-09-2024

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಡಿಯಲ್ಲಿ ಮರು ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳ, ಬೆಂಗಳೂರು, ವತಿಯಿಂದ ಬೆಂಗಳೂರು ಯಲಹಂಕದಲ್ಲಿರುವ ಮದರ್ ಡೇರಿ ಘಟಕದ Effluent Treatment Plantಗೆ ಅವಶ್ಯಕವಿರುವ BIOGAS POWER GENERATOR ENGINE ಸರಬರಾಜು ಮತ್ತಿತ್ತರೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಇದೇ ಮಾದರಿಯ ಕೆಲಸಗಳನ್ನು ನಿರ್ವಹಿಸಿ ಅನುಭವವಿರುವ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ (Technical & Financial) ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: support@eprochelpdesk.com and helpline no. +91-8046010000, +91-8068948777, 080-22230960, 080-22234115

ಕ್ರಮ ಸಂಖ್ಯೆ	ಕೆಲಸದ ವಿವರ	ಇ. ಎಂ. ಡಿ. ರೂ. ಪೈ.
1	ಬೆಂಗಳೂರು ಯಲಹಂಕದಲ್ಲಿರುವ ಕಹಾಮದ ಮದರ್ ಡೇರಿ ಘಟಕದಲ್ಲಿರುವ ದಿನವಹಿ 1700 ಸಾವಿರ ಲೀಟರ್ ಸಾಮರ್ಥ್ಯದ Effluent Treatment Plant ಗೆ ಅವಶ್ಯಕವಿರುವ 125 ಕೆ.ವಿ.ಎ. ಸಾಮರ್ಥ್ಯದ BIOGAS POWER GENERATOR ENGINE ಸರಬರಾಜು, ಅಳವಡಿಕೆ ಹಾಗೂ ಮತ್ತಿತರೆ ಸಂಬಂಧಿಸಿದ ಕೆಲಸಗಳು	1,80,000/–

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ **10–09–2024** ರಿಂದ **24–09–2024 ರ ಸಾಯಂಕಾಲ 4.00 ಗಂಟೆಯವರೆಗೆ.** 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ **24–09–2024 ರ ಸಾಯಂಕಾಲ 4.00 ಗಂಟೆಯವರೆಗೆ.** 3) ಟೆಂಡರುಗಳನ್ನು (Cover-1) ತೆರೆಯುವ ದಿನಾಂಕ **25–09–2024 ರಂದು ಸಾಯಂಕಾಲ 4.30 ಗಂಟೆಗೆ.**

ಇನ್ನಿತ್ತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್ ನ ತಿದ್ದುಪಡಿ / ಬದಲಾವಣೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–1)

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ –584133, ರಾಯಚೂರು, ಕರ್ನಾಟಕ, ಭಾರತ
E-mail: registrarrur@gmail.com Website: https://raichuruniversity.ac.in

ಸಂ:ರಾವಿರಾ/ಶೈಕ್ಷಣಿಕ/ಪ್ರವೇಶ/ಪಿಜಿ/2024–25/758 ದಿನಾಂಕ: 29.08.2024

ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ

ರಾಯಚೂರು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ (CBCS) ಪದವಿಗಳಿಗಾಗಿ 2024–25ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸಂಲಗ್ನತೆ ಹೊಂದಿದ ಸರ್ಕಾರಿ/ಖಾಸಗಿ ಮಹಾವಿದ್ಯಾಲಯಗಳಲ್ಲಿ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಕರ್ನಾಟಕ ಸರ್ಕಾರದ UUCMS ತಂತ್ರಾಂಶದ ಮುಖಾಂತರ ನಿಗದಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪ್ರವೇಶ ಪರೀಕ್ಷೆ ಮುಖಾಂತರ ಮಾತ್ರ ನೀಡಲಾಗುವುದು.

ರಾಯಚೂರು ವಿಶ್ವವಿದ್ಯಾಲಯದ ಆವರಣದ ವಿಭಾಗಗಳಲ್ಲಿ/ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸ್‌ಗಳು	
ಕಲಾ ನಿಕಾಯ	ಕನ್ನಡ, ಇಂಗ್ಲಿಷ್, ಉರ್ದು ಮತ್ತು ಪರ್ಷಿಯನ್
ಸಮಾಜ ವಿಜ್ಞಾನ ನಿಕಾಯ	ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಮಹಿಳಾ ಅಧ್ಯಯನ, ಸಮಾಜ ಕಾರ್ಯ ಮತ್ತು ಪತ್ರಿಕೋದ್ಯಮ & ಸಮೂಹ ಸಂವಹನ
ವಿಜ್ಞಾನ ನಿಕಾಯ	ವಿದ್ಯನ್ಮಾನ & ಉಪಕರಣಾತ್ಮಕ ತಂತ್ರಜ್ಞಾನ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತಶಾಸ್ತ್ರ, ಗಣಕ ವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ ಮತ್ತು ಗ್ರಂಥಾಲಯ & ಮಾಹಿತಿ ವಿಜ್ಞಾನ
ವಾಣಿಜ್ಯ ನಿಕಾಯ	ವಾಣಿಜ್ಯ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 1) ಅಭ್ಯರ್ಥಿಗಳು (https://uucms.karnataka.gov.in/Login/Index) UUCMS website ಮೂಲಕ ಸಂಬಂಧಿಸಿದ ಕೋರ್ಸಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಯು ಪ್ರಾರಂಭವಾಗುವ ದಿನಾಂಕ: 02.09.2024 2) ಆನ್‌ಲೈನ್‌ನಲ್ಲಿ ಭರ್ತಿಮಾಡಿದ ಸ್ನಾತಕೋತ್ತರ ಪದವಿಯ ಪ್ರವೇಶಾತಿ ಅರ್ಜಿ ಮತ್ತು ಸ್ನಾತಕ ಪದವಿಯ ಎಲ್ಲಾ ಅಂಕಪಟ್ಟಿಗಳು ಹಾಗೂ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ: 30.09.2024

ಸೂಚನೆ : ರಾಯಚೂರು ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಕಾಲೇಜುಗಳಲ್ಲಿನ ವಿಷಯವಾರು ಪ್ರವೇಶಾತಿಯ ಸಂಖ್ಯೆ ಹಾಗೂ ಅರ್ಹತೆಯ ಮಾನದಂಡಗಳ ಮಾಹಿತಿಯು ವಿಶ್ವವಿದ್ಯಾಲಯದ ಜಾಲತಾಣದಲ್ಲಿ https://raichuruniversity.ac.in ಲಭ್ಯವಿರುತ್ತದೆ.

ಅರ್ಜಿಗಳನ್ನು UUCMS ಆನ್‌ಲೈನ್ ಪೋರ್ಟಲ್ ಮೂಲಕ ಸಲ್ಲಿಸಲು ಮಾರ್ಗಸೂಚಿಗಳು

1) ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸಬಯಸುವ ಅಭ್ಯರ್ಥಿಗಳು ಆನ್‌ಲೈನ್ ಪೋರ್ಟಲ್ https://uucms.karnataka.gov.in/Login/Index ಮೂಲಕವೇ ಅರ್ಜಿಗಳನ್ನು ಸಲ್ಲಿಸುವುದು. (ಅಭ್ಯರ್ಥಿಗಳ ಪ್ರವೇಶಾತಿ–user manual ನೋಡುವುದು). 2) ಒಂದಕ್ಕಿಂತ ಹೆಚ್ಚಿನ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಇಚ್ಛಿಸಿದ ಕೋರ್ಸುಗಳನ್ನು ಆಯ್ದುಕೊಂಡು ಪ್ರತ್ಯೇಕವಾಗಿ ಶುಲ್ಕ ಪಾವತಿಸಿ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದು. 3) ಅರ್ಜಿ ಶುಲ್ಕ ರೂ.800/– (ಕರ್ನಾಟಕದ ನಿವಾಸಿಯಾದ ಪ.ಜಾತಿ/ಪ ಪಂಗಡ/ ಪ್ರವರ್ಗ–1 ಮತ್ತು ತೃತೀಯ ಲಿಂಗಿಗಳಿಗೆ ರೂ. 400/– ಮಾತ್ರ) ಗಳನ್ನು ಆನ್‌ಲೈನ್‌ನಲ್ಲಿ ತಿಳಿಸಿರುವ ಲಿಂಕನ್ನು ಬಳಸಿ ಪಾವತಿಸುವುದು. 4) ಅರ್ಹತೆ, ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪಟ್ಟಿ, ಕೋರ್ಸಿನ ಶುಲ್ಕ ಇತ್ಯಾದಿ ವಿವರಗಳ ಬಗ್ಗೆ ರಾಯಚೂರು ವಿಶ್ವವಿದ್ಯಾಲಯದ ಜಾಲತಾಣ https://raichuruniversity.ac.in ನಲ್ಲಿ ನೋಡಬಹುದು. 5) 2024–25 ನೇ ಸಾಲಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸಲು 30.09.2024 ಕೊನೆಯ ದಿನಾಂಕವಾಗಿರುತ್ತದೆ. 6) ಅಭ್ಯರ್ಥಿಗಳು ಆನ್‌ಲೈನ್ (UUCMS)ನಲ್ಲಿ ಮುಖಾಂತರ ಕೋರ್ಸಿಗೆ ಸಲ್ಲಿಸಿದ ಅರ್ಜಿಗಳ ಮುದ್ರಿತ ಪ್ರತಿ (Hard Copy)ಯ ಜೊತೆ ಸ್ವಯಂ ಧೃಡೀಕರಿಸಿದ ದಾಖಲೆಗಳನ್ನು ತಕ್ಷಣವೇ ಖುದ್ದಾಗಿ ಅಥವಾ ಸ್ಪೀಡ್ ಪೋಸ್ಟ್ ಮುಖಾಂತರ ದಿನಾಂಕ 30.09.2024 ರ ಒಳಗಾಗಿ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರು, ಸ್ನಾತಕೋತ್ತರ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಈ ವಿಳಾಸಕ್ಕೆ ಕಳುಹಿಸತಕ್ಕದ್ದು. 7) ಅಂತಿಮ ದಿನಾಂಕದ ನಂತರ ಸಲ್ಲಿಸುವ ಮತ್ತು ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು. 8) UUCMS ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಗಳನ್ನು ಮಾತ್ರ ಸೀಟುಗಳ ಆಯ್ಕೆಗಾಗಿ ಪರಿಗಣಿಸಲಾಗುವುದು. 9) ಆಫ್‌ಲೈನ್ ಮೂಲಕ ಬರುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ. 10) ಎಲ್ಲ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಪರೀಕ್ಷೆಯನ್ನು ಕಡ್ಡಾಯವಾಗಿ ನಡೆಸಲಾಗುವುದು (ವಿವರಗಳಿಗೆ ವಿಶ್ವವಿದ್ಯಾಲಯದ ಜಾಲತಾಣ https://raichuruniversity.ac.in ವನ್ನು ನೋಡುವುದು). 11) ಸ್ನಾತಕೋತ್ತರ ಕೋರ್ಸ್‌ಗಳನ್ನು ಒಳಗೊಂಡಂತೆ ಪ್ರತಿ ಕೋರ್ಸ್‌ಗೆ ಕನಿಷ್ಠ 10 ಅಭ್ಯರ್ಥಿಗಳ ಪ್ರವೇಶವಿದ್ದಲ್ಲಿ ಮಾತ್ರ ಅಂತಹ ಕೋರ್ಸ್‌ಗಳನ್ನು ನಡೆಸಲಾಗುವುದು. ಇಲ್ಲದಿದ್ದರೆ ಶುಲ್ಕವನ್ನು ಮರುಪಾವತಿಸಲಾಗುತ್ತದೆ.

ಸಹಿ/– ಕುಲಸಚಿವರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
DIP/RCR/362/KSMCA/361/2024-25

ಅಕ್ರಮ ಎಸಗಿದವರಿಗೆ ₹10 ಕೋಟಿ ದಂಡ, 10 ವರ್ಷ ಜೈಲು • ಮಸೂದೆಗೆ ಒಪ್ಪಿಗೆ ನೀಡಿದ ರಾಜ್ಯಪಾಲ ಗೆಹಲೋತ್

ನೇಮಕಾತಿ ಅಕ್ರಮ ತಡೆ ಮಸೂದೆಗೆ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಎಸಗುವವರಿಗೆ ₹10 ಕೋಟಿ ದಂಡ ಮತ್ತು 10 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಸಾರ್ವಜನಿಕ ಪರೀಕ್ಷಾ (ನೇಮಕಾತಿಯಲ್ಲಿ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಮಸೂದೆ-2023ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಒಪ್ಪಿಗೆ ನೀಡಿದ್ದಾರೆ.

ಈ ಮಸೂದೆಗೆ ಸಂಬಂಧಿಸಿದಂತೆ ರಾಜ್ಯಪಾಲರು ಕೆಲವು ವಿವರಣೆಗಳನ್ನು ಕೇಳಿ ಹಿಂದಕ್ಕೆ ಕಳುಹಿಸಿದ್ದರು. ಸರ್ಕಾರ ಇದಕ್ಕೆ ಸೂಕ್ತ ವಿವರಣೆಗಳನ್ನು ನೀಡಿ ಮತ್ತೆ ರಾಜ್ಯಪಾಲರಿಗೆ ಕಳುಹಿಸಿತ್ತು. ಈ ಹಿಂದೆ 12 ವರ್ಷ ಜೈಲು ಶಿಕ್ಷೆ ನಿಗದಿ ಮಾಡಲಾಗಿತ್ತು, ಈಗ ಅದನ್ನು 10 ವರ್ಷಗಳಿಗೆ ಇಳಿಸಿದೆ.

ಥಾವರಚಂದ್ ಗೆಹಲೋತ್

ವಿವಿಧ ಇಲಾಖೆಗಳ ನೇಮಕಾತಿ ಪರೀಕ್ಷೆಗಳಲ್ಲಿ ವ್ಯಾಪಕ ಅಕ್ರಮ ನಡೆದಿದ್ದವು. ಪಿ ಎಸ್ ಐ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ, ಪ್ರಥಮ ದರ್ಜೆ ಸಹಾಯಕ ಪರೀಕ್ಷೆ ಸೇರಿ ಹಲವು ಅಕ್ರಮ ನಡೆದಿದ್ದವು. ಪರೀಕ್ಷಾ ಅಕ್ರಮಗಳನ್ನು ತಡೆಯುವ ಉದ್ದೇಶದಿಂದ ವಿಧಾನಮಂಡಲದಲ್ಲಿ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲಾಗಿತ್ತು.

ಪರೀಕ್ಷೆಯಲ್ಲಿ ನಕಲು ಮಾಡುವುದು, ಪ್ರಶ್ನೆಪತ್ರಿಕೆಗಳ ಸೋರಿಕೆ, ಉತ್ತರ ಪತ್ರಿಕೆ ಮತ್ತು ಒಎಂಆರ್ ಹಾಳೆಗಳನ್ನು ತಿದ್ದುವುದು, ಲಿಖಿತ ಅಥವಾ ವಿದ್ಯುನ್ಮಾನ ಅಥವಾ ಯಾಂತ್ರಿಕ ಸಾಧನ/ ಉಪಕರಣ ಬಳಸುವುದು, ಪರೀಕ್ಷಾ ಕೇಂದ್ರದೊಳಕ್ಕೆ ಅಕ್ರಮ ಪ್ರವೇಶ ಮಾಡುವುದು, ಅನಧಿಕೃತ ಸ್ಥಳಗಳಲ್ಲಿ ಪರೀಕ್ಷೆ ಬರೆಯುವುದು ಸೇರಿದಂತೆ ಯಾವುದೇ ಬಗೆಯ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗುವುದನ್ನು ಶಿಕ್ಷಾರ್ಹ ಅಪರಾಧ ಎಂದು ಈ ಮಸೂದೆಯು ಘೋಷಿಸಿದೆ.

ನಕಲು ಅಥವಾ ಹೊರಗಿನಿಂದ ಸಹಾಯ ಪಡೆದು ಪರೀಕ್ಷಾ ಅಕ್ರಮ ಎಸಗುವ ಅಭ್ಯರ್ಥಿಗೆ ಐದು ವರ್ಷಗಳ ವರೆಗೆ ಜೈಲು ಶಿಕ್ಷೆ ಮತ್ತು ₹10 ಲಕ್ಷ ದಂಡ ವಿಧಿಸುವ ಪ್ರಸ್ತಾವ ಮಸೂದೆಯ ಸೆಕ್ಷನ್ 10 (1) ಒಳಗೊಂಡಿದೆ.

ಅಭ್ಯರ್ಥಿಯೂ ಸೇರಿದಂತೆ ಯಾವುದೇ ವ್ಯಕ್ತಿ ಬೇರೊಬ್ಬರ ಹೆಸರಿನಲ್ಲಿ ಪರೀಕ್ಷೆ ಬರೆಯಲು ಪ್ರಯತ್ನಿಸುವುದು, ಪ್ರಶ್ನೆಪತ್ರಿಕೆ ಸೋರಿಕೆ ಮಾಡುವುದು, ಸೋರಿಕೆಗೆ ಪ್ರಯತ್ನಿಸುವುದು, ಅಕ್ರಮವಾಗಿ ಪ್ರಶ್ನೆಪತ್ರಿಕೆಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು, ಅಕ್ರಮವಾಗಿ ಉತ್ತರ ಬರೆಯುವುದು ಅಥವಾ ಬರೆಯಲು ನೆರವಾಗುವುದು, ನೆರವು ಕೋರುವುದು ಸೇರಿದಂತೆ ಪ್ರಶ್ನೆಪತ್ರಿಕೆ ಅಥವಾ ಪರೀಕ್ಷಾ ಅಕ್ರಮಕ್ಕೆ ನೆರವು ನೀಡುವವರಿಗೆ ಎಂಟರಿಂದ 10 ವರ್ಷಗಳವರೆಗೆ ಜೈಲು ಶಿಕ್ಷೆ ಹಾಗೂ ₹15 ಲಕ್ಷದಿಂದ ₹10 ಕೋಟಿಯವರೆಗೂ ದಂಡ ವಿಧಿಸುವ ಪ್ರಸ್ತಾವ ಸೆಕ್ಷನ್ 10 (2)ರಲ್ಲಿದೆ.

ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾದ ಅಭ್ಯರ್ಥಿಗಳು ಮುಂದಿನ ಎರಡು ವರ್ಷಗಳವರೆಗೆ ಯಾವುದೇ ಸಾರ್ವಜನಿಕ ಪರೀಕ್ಷೆಯನ್ನು ತೆಗೆದುಕೊಳ್ಳದಂತೆ ಅನರ್ಹಗೊಳಿಸುವ ಪ್ರಸ್ತಾವವು ಸೆಕ್ಷನ್ 11 (2)ರಲ್ಲಿದೆ.

ಯಾವುದೇ ಸಂಸ್ಥೆ ಅಥವಾ ಆಡಳಿತ ಮಂಡಳಿಯು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾದರೆ ಆ ಪರೀಕ್ಷೆಯ ಸಂಪೂರ್ಣ ವೆಚ್ಚವನ್ನು ಅಂತಹ ಸಂಸ್ಥೆ, ಆಡಳಿತ ಮಂಡಳಿಯಿಂದಲೇ ವಸೂಲಿ ಮಾಡಲು ಸೆಕ್ಷನ್ 13 ಅವಕಾಶ ಕಲ್ಪಿಸಲಿದೆ.

ರೇಣುಕಾ ಯಲ್ಲಮ್ಮ ಅಭಿವೃದ್ಧಿ ಪ್ರಾಧಿಕಾರ: ರೇಣುಕಾ ಯಲ್ಲಮ್ಮ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ಉದ್ದೇಶದ 'ಶ್ರೀರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ಮಸೂದೆ 2024'ಕ್ಕೂ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

ಅನಧಿಕೃತ ಸ್ವತ್ತುಗಳಿಗೆ ತೆರಿಗೆ ನಿಗದಿ: ಮಸೂದೆಗೆ ಒಪ್ಪಿಗೆ

ನಗರ ಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿಯ ಎಲ್ಲ ಆಸ್ತಿಗಳನ್ನು ಆರ್ಥಿಕ ಸಂಪನ್ಮೂಲ ಜಾಲಕ್ಕೆ ಒಳಪಡಿಸುವ, ಅನಧಿಕೃತ ವಸತಿ ಪ್ರದೇಶದಲ್ಲಿರುವ ನಿವೇಶನ ಮತ್ತು ಕಟ್ಟಡಗಳು ಹಾಗೂ ಅಧಿಕೃತ ವಸತಿ ಪ್ರದೇಶಗಳ ಅನಧಿಕೃತ ಕಟ್ಟಡಗಳಿಗೆ ಆಸ್ತಿ ತೆರಿಗೆ ನಿಗದಿ ಮಾಡುವ ಉದ್ದೇಶದ 'ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ಮಸೂದೆ-2024'ಕ್ಕೆ ರಾಜ್ಯಪಾಲರು ಅಂಕಿತ ನೀಡಿದ್ದಾರೆ.

ಈ ಮಸೂದೆಗೆ ಸಂಬಂಧಿಸಿದಂತೆ ಕೆಲವು ವಿವರಣೆಗಳನ್ನು ಕೋರಿ ಮಸೂದೆಯನ್ನು ಹಿಂದಕ್ಕೆ ಕಳುಹಿಸಿದ್ದರು. ಅದಕ್ಕೆ ವಿವರಣೆ ನೀಡಿದ ಬಳಿಕ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಮೂಲಗಳು ತಿಳಿಸಿವೆ.

ಎಲ್ಲ ನಗರ ಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿ ಸ್ವತ್ತುಗಳನ್ನು ಇ-ಆಸ್ತಿ ತಂತ್ರಾಂಶದ ಜಾಲಕ್ಕೆ ಸೇರಿಸಲು ಅವಕಾಶ ನೀಡಲಾಗಿದೆ. ಅಧಿಕಾರಿಗಳು ಕರ್ತವ್ಯದಲ್ಲಿ ಲೋಪ ತೋರಿದಾಗ ದಂಡ ವಿಧಿಸುವ ಅವಕಾಶವನ್ನೂ ಮಸೂದೆಯಲ್ಲಿ ಕಲ್ಪಿಸಲಾಗಿದೆ.

ಸುದ್ದಿ 2 ನಿಮಿಷ

ಸಿ.ಎಂ ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಿಚಾರಣೆ ಮುಂದುವರಿಸಬಾರದು ಹಾಗೂ ಯಾವುದೇ ಕ್ರಮ ಕೈಗೊಳ್ಳಬಾರದು' ಎಂಬ ಈ ಹಿಂದಿನ ಆದೇಶವನ್ನು ಹೈಕೋರ್ಟ್, ಇದೇ 12ರವರೆಗೆ ಪುನಃ ವಿಸ್ತರಿಸಿದೆ.

ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಸೋಮವಾರ ಮುಂದುವರಿಸಿದರು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ವಾದ ಮಂಡಿಸಿ, 'ರಾಜ್ಯಪಾಲರು, ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡುವ ಮುನ್ನ ತನಿಖಾಧಿಕಾರಿಯ ಪ್ರಾಥಮಿಕ ತನಿಖಾ ವರದಿ ಆಧರಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕಿತ್ತು. ಆದರೆ, ಈ ಪ್ರಕರಣದಲ್ಲಿ ರಾಜ್ಯಪಾಲರು ಸ್ವತಃ ತನಿಖಾಧಿಕಾರಿ ಸ್ವರೂಪದಲ್ಲಿ ನಡೆದುಕೊಂಡಿದ್ದಾರೆ' ಎಂದು ಬಲವಾಗಿ ಆಕ್ಷೇಪಿಸಿದರು.

ವಾದ ಆಲಿಸಿದ ನ್ಯಾಯಮೂರ್ತಿಯವರು ಇದೇ 12ರ ಮಧ್ಯಾಹ್ನ 12 ಗಂಟೆಗೆ ವಿಚಾರಣೆ ಮುಂದೂಡಿದರು. 'ಅಂದು ಸಿದ್ದರಾಮಯ್ಯ ಪರ ಹಿರಿಯ ವಕೀಲರಾದ ಅಭಿಷೇಕ್ ಮನು ಸಿಂಘ್ವಿ ಮತ್ತು ರವಿವರ್ಮ ಕುಮಾರ್ ತಮ್ಮ ವಾದ ಪೂರ್ಣಗೊಳಿಸಬೇಕು. ಅದಕ್ಕೆ ಆಕ್ಷೇಪಣೆಗಳಿದ್ದರೆ ಅಂದೇ ಪೂರೈಸಬೇಕು' ಎಂದು ಉಭಯ ಪಕ್ಷಗಾರರಿಗೆ ತಾಕೀತು ಮಾಡಿದರು.

ಕಾಳಿ ನದಿ: ಸೇತುವೆ ಅವಶೇಷ ತೆರವು ಕಾರ್ಯಾಚರಣೆ ಆರಂಭ

ಕಾರವಾರ: ಇಲ್ಲಿನ ಕಾಳಿನದಿಯ ಹಳೆಯ ಸೇತುವೆ ಕುಸಿದು ಬಿದ್ದು ಒಂದು ತಿಂಗಳು ಬಳಿಕ ಅವಶೇಷಗಳ ತೆರವು ಕಾರ್ಯ ಸೋಮವಾರ ಆರಂಭಗೊಂಡಿತು. ಮುಂಬೈನಿಂದ ತರಿಸಲಾದ ಕಟ್ಟಡ ಒಡೆಯುವ ಯಂತ್ರದ ನೆರವಿನಿಂದ ಕೋಡಿಬಾಗದ ಕಡೆಯ ಸೇತುವೆಯ ಭಾಗವನ್ನು ತೆರವುಗೊಳಿಸುವ ಪ್ರಕ್ರಿಯೆ ನಡೆಯಿತು.

ನದಿಯಂಚಿನಲ್ಲಿ ಕುಸಿಯದೆ ನಿಂತಿರುವ ಸೇತುವೆಯ ಭಾಗ ಶಿಥಿಲವಾಗಿದ್ದು, ತಜ್ಞರ ಸಲಹೆ ಮೇರೆಗೆ ಅದನ್ನು ಮೊದಲು ತೆರವುಗೊಳಿಸಲಾಗುತ್ತದೆ. ಅವಶೇಷಗಳ ತೆರವಿಗೆ ಕ್ರೇನ್ ಸಹಿತ ಬಾರ್ಜ್ ಸೇರಿ ಅತ್ಯಾಧುನಿಕ ಯಂತ್ರೋಪಕರಣಗಳ ಅಗತ್ಯವಿದ್ದು, ಒಂದೆರಡು ದಿನಗಳಲ್ಲಿ ಅವು ಬರಲಿವೆ.

'ಅವಶೇಷಗಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಕನಿಷ್ಠ ಮೂರು ತಿಂಗಳು ಬೇಕು. ಅವಶೇಷಗಳನ್ನು ಬೇರೆಡೆ ಸುರಿಯಲು ಇನ್ನೂ ಜಾಗ ಅಂತಿಮವಾಗಿಲ್ಲ' ಎಂದು ಐಆರ್‌ಬಿ ಕಂಪನಿಯ ಎಂಜಿನಿಯರ್ ತಿಳಿಸಿದರು.

ಆ. 7ರ ತಡರಾತ್ರಿ 41 ವರ್ಷದಷ್ಟು ಹಳೆಯದಾದ ಸೇತುವೆ ಕುಸಿದು ಬಿದ್ದಿತ್ತು. ಸೇತುವೆಯ ಅವಶೇಷ ತೆರವು ಆಗದ ಬಗ್ಗೆ ಸೆ. 1ರ ಸಂಚಿಕೆಯ 'ಪ್ರಜಾವಾಣಿ'ಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಅಸಭ್ಯ ವರ್ತನೆ: ಪ್ರಾಚಾರ್ಯರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಭಾಲ್ಕಿ (ಬೀದರ್ ಜಿಲ್ಲೆ): ತಮ್ಮೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದಾರೆ ಎಂದು ವಿದ್ಯಾರ್ಥಿನಿಯರು ದೂರು ನೀಡಿದ ಹಿನ್ನೆಲೆಯಲ್ಲಿ ತಾಲ್ಲೂಕಿನ ಕೋನ ಮೇಳಕುಂದಾ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ನಾಗಶೆಟ್ಟಿ ಕುಲಕರ್ಣಿ ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಆದೇಶಿಸಿದ್ದಾರೆ.

ಪ್ರಾಚಾರ್ಯರನ್ನು ಬೇರೆ ಕಡೆ ವರ್ಗಾಯಿಸುವಂತೆ ವಿದ್ಯಾರ್ಥಿನಿಯರು ಕೋರಿದ್ದರು. ಹೀಗಾಗಿ ವಸತಿ ಶಾಲೆಯ ವಿದ್ಯಾರ್ಥಿನಿಯರ ಸುರಕ್ಷತೆಯ ದೃಷ್ಟಿಯಿಂದ ಪ್ರಾಚಾರ್ಯರನ್ನು ಕೂಡಲೇ ವಸತಿ ಶಾಲೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದ್ದು, ಸಂಘದ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ರಾಜ್ಯದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ: ಸೋಮಣ್ಣ–ಎಂ.ಬಿ. ಪಾಟೀಲ ಸಭೆ

'ಹೊಸ, ಜೋಡಿ ರೈಲುಮಾರ್ಗಕ್ಕೆ ವೇಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಬ್ಬಳ್ಳಿ-ಅಂಕೋಲಾ, ಬೆಂಗಳೂರು-ಮಂಗಳೂರು ನಡುವೆ ಜೋಡಿ ರೈಲು ಮಾರ್ಗ ನಿರ್ಮಾಣ, ಚಿತ್ರದುರ್ಗ-ಹೊಸಪೇಟೆ- ಆಲಮಟ್ಟಿ ನಡುವೆ ಹೊಸ ರೈಲುಮಾರ್ಗ ಯೋಜನೆ ಕೈಗೆತ್ತಿಕೊಳ್ಳಬೇಕು' ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರ ಮುಂದೆ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಬೇಡಿಕೆ ಇಟ್ಟರು.

ಸೋಮಣ್ಣ ಜೊತೆ ಸೋಮವಾರ ನಡೆದ ಸಭೆಯಲ್ಲಿ ರಾಜ್ಯದ ಹಲವು ರೈಲ್ವೆ ಯೋಜನೆಗಳ ವಸ್ತುಸ್ಥಿತಿಯ ಕುರಿತು ಪಾಟೀಲ ಅವರು ಪ್ರಸ್ತಾಪಿಸಿದರು.

ಮಂಗಳೂರಿಗೆ ಜೋಡಿ ರೈಲು ಮಾರ್ಗ ಇಲ್ಲದಿರುವುದರಿಂದ ಸರಕು ಸಾಗಣೆಯೂ ಸೇರಿದಂತೆ ಆ ಭಾಗದಲ್ಲಿ ಕೈಗಾರಿಕಾ ಬೆಳವಣಿಗೆ ಕುಂಠಿತವಾಗಿದೆ. ಹುಬ್ಬಳ್ಳಿ- ಅಂಕೋಲಾ ರೈಲ್ವೆ ಯೋಜನೆ ಮೂಲಕ ಅಲ್ಲಿನ ಬಂದರನ್ನು ಉತ್ತರ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸಲು ಸಾಧ್ಯವಾಗಲಿದೆ. ಇದರಿಂದ ರಾಜ್ಯದಲ್ಲಿ

ರಾಜ್ಯದ ರೈಲ್ವೆ ಯೋಜನೆಗಳ ವಸ್ತುಸ್ಥಿತಿಯ ಕುರಿತು ವಿ. ಸೋಮಣ್ಣ ಮತ್ತು ಎಂ.ಬಿ. ಪಾಟೀಲ ಅವರು ಅಧಿಕಾರಿಗಳ ಜೊತೆ ಸಭೆ ನಡೆಸಿದರು

ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಅನುಕೂಲ ಆಗಲಿದೆ. ಅಲ್ಲದೆ, ಸಕಲೇಶಪುರ- ಸುಬ್ರಹ್ಮಣ್ಯ ನಡುವೆ ಸುರಂಗ ರೈಲ್ವೆ ಮಾರ್ಗ ನಿರ್ಮಾಣದ ಸಾಧ್ಯತೆಯ ಬಗ್ಗೆಯೂ ಗಮನ ನೀಡಬೇಕು ಎಂದು ಪಾಟೀಲ ಮನವಿ ಮಾಡಿದರು.

'ಚಿತ್ರದುರ್ಗ- ಹೊಸಪೇಟೆ- ಕೊಪ್ಪಳ- ಆಲಮಟ್ಟಿ- ವಿಜಯಪುರ ಮಾರ್ಗದ ಹೊಸ ರೈಲ್ವೆ ಯೋಜನೆಗೆ ಒಪ್ಪಿಗೆ ನೀಡಬೇಕು. ಇದರಿಂದ ಬೆಂಗಳೂರು-ವಿಜಯಪುರ ಮತ್ತು ಸೊಲ್ಲಾಪುರ ನಡುವೆ ಪ್ರಯಾಣ ಅವಧಿ ಕಡಿಮೆ ಆಗಲಿದೆ' ಎಂಬ ಬೇಡಿಕೆಗೆ ಸ್ಪಂದಿಸಿದ ಸೋಮಣ್ಣ, 'ಈ ಮಾರ್ಗದ ಸಮೀಕ್ಷೆ ನಡೆಯುತ್ತಿದೆ' ಎಂದರು.

'ಧಾರವಾಡ- ಕಿತ್ತೂರು- ಬೆಳಗಾವಿ ನಡುವಿನ ನೇರ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಭೂಸ್ವಾಧೀನ ಸಮಸ್ಯೆಯಿದೆ. ಈ ಸಮಸ್ಯೆ ಬಗೆಹರಿಸಲು ಸ್ಥಳೀಯ ಜನಪ್ರತಿನಿಧಿಗಳ ಜತೆ ಶೀಘ್ರ ಸಭೆ ನಡೆಸಲಾಗುವುದು' ಎಂದು ಪಾಟೀಲ ಹೇಳಿದರು.

'ತುಮಕೂರು- ದಾವಣಗೆರೆ ಮತ್ತು ತುಮಕೂರು- ರಾಯದುರ್ಗ ಯೋಜನೆಗಳನ್ನು ನಿಗದಿಗಿಂತ ಮೊದಲೇ ಪೂರ್ಣಗೊಳಿಸಲು ಆದ್ಯತೆ ನೀಡಬೇಕು. ನನೆಗುದಿಗೆ ಬಿದ್ದಿರುವ ಬಿಡದಿ- ಕನಕಪುರ- ಚಾಮರಾಜನಗರ ರೈಲ್ವೆ ಯೋಜನೆಗೆ ಕಾಯಕಲ್ಪ ನೀಡಬೇಕು' ಎಂಬ ಮನವಿಗೂ ಸ್ಪಂದಿಸಿದ ಸೋಮಣ್ಣ, ಸದ್ಯದಲ್ಲೇ ಈ ಯೋಜನೆಗಳಿಗೆ ಚಾಲನೆ ನೀಡಲಾಗುವುದು ಎಂದರು.

ವಿಜಯಪುರಕ್ಕೆ 'ವಂದೇ ಭಾರತ್'?: 'ಸದ್ಯದಲ್ಲಿ ಇನ್ನೂ 10 'ವಂದೇ ಭಾರತ್' ರೈಲುಗಳ ಸಂಚಾರಕ್ಕೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಅದರಲ್ಲಿ ಒಂದು ಕರ್ನಾಟಕಕ್ಕೂ ಬರಲಿದೆ. ಅದು ಯಾವ ಮಾರ್ಗದಲ್ಲಿ ಸಂಚರಿಸಲಿದೆ ಎನ್ನುವುದು ಗೊತ್ತಿಲ್ಲ. ಮೂಲಸೌಕರ್ಯ ಅಭಿವೃದ್ಧಿ ಸಚಿವರ ಜಿಲ್ಲೆ ವಿಜಯಪುರಕ್ಕೆ ಈ ರೈಲು ಬಂದರೂ ಅಚ್ಚರಿ ಇಲ್ಲ' ಎಂದು ಸೋಮಣ್ಣ ಹೇಳಿದರು.

'ರೈಲು ಪ್ರಯಾಣ ನಾಲ್ಕು ಗಂಟೆ ಉಳಿತಾಯ'

'ಬೆಂಗಳೂರು- ವಿಜಯಪುರ ನಡುವೆ ರೈಲು ಪ್ರಯಾಣಕ್ಕೆ ಸದ್ಯ 14 ಗಂಟೆ ಬೇಕಿದೆ. ವಿಜಯಪುರ ಕಡೆಗೆ ಹೋಗುವ ರೈಲುಗಳನ್ನು ಹುಬ್ಬಳ್ಳಿ ದಕ್ಷಿಣ ರೈಲು ನಿಲ್ದಾಣದಿಂದ ನೇರವಾಗಿ ಗದಗ ಕಡೆ, ಅಲ್ಲಿಂದ ಬೈಪಾಸ್ ಮೂಲಕ ವಿಜಯಪುರಕ್ಕೆ ಹೋಗುವಂತೆ ಮಾಡಿದರೆ ನಾಲ್ಕು ಗಂಟೆ ಉಳಿತಾಯ ಮಾಡಬಹುದು' ಎಂದು ಎಂ.ಬಿ. ಪಾಟೀಲ ಸಲಹೆ ನೀಡಿದರು.

ಈ ಸಲಹೆಯನ್ನು ಪರಿಶೀಲಿಸುವಂತೆ ರೈಲ್ವೆ ಅಧಿಕಾರಿಗಳಿಗೆ ಸೋಮಣ್ಣ ಸೂಚಿಸಿದರು. 'ಗದಗ ಬೈಪಾಸ್ ಮೂಲಕ ರೈಲು ಹಾದು ಹೋಗುವುದಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ' ಎಂದು ಅಧಿಕಾರಿಗಳು ಹೇಳಿದಾಗ, 'ಹೊಸ ರೈಲು ಆರಂಭಿಸಿದರೆ ಈ ಸಮಸ್ಯೆ ಇರುವುದಿಲ್ಲ' ಎಂದು ಪಾಟೀಲ ಸಲಹೆ ನೀಡಿದರು.

ಹಿರಿಯರ ಹುಮ್ಮಸ್ಸು...

ಹಿರಿಯ ನಾಗರಿಕರ ದಿನದ ಅಂಗವಾಗಿ ಕೊಪ್ಪಳದ ತಾಲ್ಲೂಕು ಕ್ರೀಡಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ ವೇಗವಾಗಿ ನಡೆಯುವ ಸ್ಪರ್ಧೆಯಲ್ಲಿ ಅಜ್ಜಿಯರ ಹುಮ್ಮಸ್ಸು ಕಂಡುಬಂದಿದ್ದು ಹೀಗೆ...
– ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಬಸವ ತತ್ವಾಭಿಮಾನಿಗಳ ಸಭೆ ಆಕ್ರೋಶ; ಜಾಗೃತಗೊಳಿಸಲು ಸಮಾವೇಶ

'ವಚನ ಸಾಹಿತ್ಯ ವಿಕೃತಗೊಳಿಸುವ 'ವಚನ ದರ್ಶನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಧರ್ಮ ಗ್ರಂಥವಾದ ವಚನ ಸಾಹಿತ್ಯವನ್ನು ವಿಕೃತಗೊಳಿಸುವುದಕ್ಕಾಗಿ ಪ್ರಕಟಿಸಿರುವ 'ವಚನ ದರ್ಶನ' ಕೃತಿಯನ್ನು ವಿರೋಧಿಸುತ್ತೇವೆ' ಎಂದು ಬಸವ ತತ್ವಾಭಿಮಾನಿಗಳು ಹೇಳಿದ್ದಾರೆ.

'ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರ ನೇತೃತ್ವದಲ್ಲಿ ಇತ್ತೀಚೆಗೆ ಬಸವ ತತ್ವಾಭಿಮಾನಿಗಳ ಸಭೆ ನಡೆಯಿತು. ವಚನ ಸಾಹಿತ್ಯವನ್ನು ಮತ್ತು ಲಿಂಗಾಯತ ಧರ್ಮವನ್ನು ಚಾತುರ್ವರ್ಣ ವ್ಯವಸ್ಥೆಯ ಭಾಗವನ್ನಾಗಿ ಮಾಡುವ ಪುರೋಹಿತಶಾಹಿ ಪ್ರಯತ್ನ ಇದಾಗಿದೆ. ಇಂಥ ಪ್ರಕಟಣೆ ಖಂಡನೀಯ ಎಂದು ಸಭೆಯಲ್ಲಿ ನಿರ್ಣಯಿಸಲಾಗಿದೆ' ಎಂದು ಬಸವ ತತ್ವಾಭಿಮಾನಿಗಳಾದ ಟಿ.ಆರ್. ಚಂದ್ರಶೇಖರಯ್ಯ, ಎಚ್.ಎಂ. ಸೋಮಶೇಖರಪ್ಪ, ಎಚ್.ಸಿ. ಉಮೇಶ್ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಸಾಣೇಹಳ್ಳಿ ಶ್ರೀ ಸಾರಥ್ಯದಲ್ಲಿ ನಡೆದ ಸಭೆ
- ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗವಲ್ಲ– ತೀರ್ಮಾನ
- ಗೊಡ್ಡು ಆಚರಣೆಗಳಿಂದ ಸ್ವಾಮೀಜಿ ದೂರ ಇರಲಿ–ಕರೆ

ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಿದ್ದು, ಹಿಂದೂ ಧರ್ಮದ ಭಾಗವಲ್ಲ ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಲಿಂಗಾಯತ ಧರ್ಮ ಹಿಂದೂ ಧರ್ಮದ ಭಾಗ ಎಂದು ಹೇಳುತ್ತಿರುವ ಕೆಲವು ಲಿಂಗಾಯತ ಸ್ವಾಮಿಗಳ ನಿಲುವನ್ನು ಖಂಡಿಸಲಾಯಿತು ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಲಿಂಗಾಯತ ಸಮಾಜ ಸಂಘಟನೆಯನ್ನು ಗಟ್ಟಿಗೊಳಿಸಲು, ಸಂಘಟನೆ ಮತ್ತು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳ ಮೇಲೆ ನಡೆಯುತ್ತಿರುವ ನಿರಂತರ ದಾಳಿಯನ್ನು ವಿರೋಧಿಸಲು, ಬಸವಾನುಯಾಯಿಗಳನ್ನು ಜಾಗೃತಗೊಳಿಸಲು ಎಲ್ಲ ಜಿಲ್ಲೆಗಳಲ್ಲಿ ಸಮಾವೇಶ ನಡೆಸಲು ತೀರ್ಮಾನಿಸಲಾಯಿತು.

ಲಿಂಗಾಯತ ಧರ್ಮಕ್ಕೆ ವಿರುದ್ಧವಾದ ಗುಡಿ ಸಂಸ್ಕೃತಿ, ಕರ್ಮ ಸಿದ್ಧಾಂತ, ಮರ ಸುತ್ತುವುದು, ನೀರಲ್ಲಿ ಮುಳುಗುವುದು, ದಾನ–ದಕ್ಷಿಣೆ ಮಾಡುವುದು, ಮಹಿಳೆಯರನ್ನು ಕೀಳಾಗಿ ಕಾಣುವುದು, ಸೂತಕ, ಹೋಮ, ಹವನ ಆಚರಿಸುವುದು ಮುಂತಾದ ಗೊಡ್ಡು ಆಚರಣೆಗಳಿಂದ ಲಿಂಗಾಯತರು, ಲಿಂಗಾಯತ ಮಠಗಳು, ಸ್ವಾಮೀಜಿಗಳು ದೂರ ಇರಬೇಕು. ಲಿಂಗಾಯತ ಪ್ರಣಾಳಿಕೆಗೆ ಮತ್ತು ಬಸವ ಸಂವಿಧಾನಕ್ಕೆ ಅನುಸಾರವಾಗಿ ಲಿಂಗಾಯತರು, ಮಠಗಳು ಹಾಗೂ ಸ್ವಾಮೀಜಿಗಳು ನಡೆದುಕೊಳ್ಳಬೇಕು ಎಂದು ಕರೆ ನೀಡುವ ತೀರ್ಮಾನವನ್ನು ಸಭೆ ತೆಗೆದುಕೊಂಡಿತು ಎಂದು ಅವರು ತಿಳಿಸಿದ್ದಾರೆ.

ಗುರೂಜಿ ಹತ್ಯೆ ಪ್ರಕರಣದ ಆರೋಪಿಗಳಿಂದ ಜೀವ ಬೆದರಿಕೆ

ಚಂದ್ರಶೇಖರ ಗುರೂಜಿ

ಹುಬ್ಬಳ್ಳಿ: ವಾಸ್ತುತಜ್ಞ ಚಂದ್ರಶೇಖರ ಗುರೂಜಿ ಹತ್ಯೆ ಪ್ರಕರಣದ ಆರೋಪಿಗಳು, ನ್ಯಾಯಾಂಗ ಬಂಧನದಲ್ಲಿ ಇದ್ದಾಗಲೇ ಗುರೂಜಿ ಅವರ ಸಂಬಂಧಿಕರಿಗೆ ಕೊಲೆ ಬೆದರಿಕೆ ಹಾಕಿದ ಬಗ್ಗೆ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾಂತೇಶ ಶಿರೂರು ಮತ್ತು ಮಂಜುನಾಥ ಮರೇವಾಡ ವಿರುದ್ಧ ಗುರೂಜಿ ಸಂಬಂಧಿಕರಾದ ಉದ್ಯಮಿ ಸಂಜಯ ಅಂಗಡಿ ಸೆಪ್ಟೆಂಬರ್ 2ರಂದು ದೂರು ನೀಡಿದ್ದಾರೆ.

ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಿಚಾರಣೆ 12ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯ ಮೇಲಿನ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಆರೋಪದ ಕ್ರಿಮಿನಲ್ ಪ್ರಕರಣಗಳಲ್ಲಿ ಜಾಮೀನು ಕೋರಿರುವ ಮಾಜಿ ಸಂಸದ ಪ್ರಜ್ವಲ್ ಅವರ ರೇವಣ್ಣ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಇದೇ 12ಕ್ಕೆ ಮುಂದೂಡಿದೆ.

ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಅತ್ಯಾಚಾರ ಪ್ರಕರಣದಲ್ಲಿ ಜಾಮೀನು ಮತ್ತು ಬೆಂಗಳೂರಿನ ಸಿಐಡಿ ಠಾಣೆಯಲ್ಲಿ ದಾಖಲಾಗಿರುವ ಮತ್ತೆರಡು ಪ್ರತ್ಯೇಕ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿರುವ ಪ್ರಜ್ವಲ್ ಅವರ ಅರ್ಜಿಗಳನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, 'ಹೊಳೆನರಸೀಪುರದಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಆದರೆ, ಅದರ ಪ್ರತಿಯನ್ನು ನಮಗೆ ನೀಡಿಲ್ಲ. ದೋಷಾರೋಪ ಪಟ್ಟಿ ಬದಿಗಿರಿಸಿ ಗಮನಿಸಿದರೆ ಪ್ರಜ್ವಲ್ ವಿರುದ್ಧದ ಎಲ್ಲ ಆರೋಪಗಳೂ ಜಾಮೀನು ನೀಡಬಹುದಾದ ಆರೋಪಗಳಾಗಿವೆ' ಎಂದರು.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, 'ಸಂತ್ರಸ್ತೆಯರ ಗೌರವ ಮತ್ತು ಘನತೆಯ ದೃಷ್ಟಿಯಿಂದ ಪ್ರಕರಣವನ್ನು ಇನ್ ಕ್ಯಾಮೆರಾ ವಿಚಾರಣೆಗೆ ಒಳಪಡಿಸುವ ಬಗೆಗಿನ ಮನವಿಯನ್ನು ಪರಿಗಣಿಸಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಇನ್ ಕ್ಯಾಮೆರಾ ವಿಚಾರಣೆಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ನೀಡಿರುವ ದೋಷಾರೋಪ ಪಟ್ಟಿಯನ್ನು ಪರಿಶೀಲಿಸಿ, ಮುಖ್ಯ ನ್ಯಾಯಮೂರ್ತಿಗಳಿಂದ ಸೂಕ್ತ ಆದೇಶ ಪಡೆದುಕೊಳ್ಳಲಾಗುವುದು' ಎಂದು ಮೌಖಿಕವಾಗಿ ತಿಳಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

'ದಮ್ಮಯ್ಯ ಅಂದ್ರೂ ಬಿಡಲಿಲ್ಲ'

ಒಂದನೇ ಪುಟದಿಂದ...

'ಬೇಡ ಎಂದರೂ ಕೇಳದೆ ಏನೂ ಆಗೋಲ್ಲ ಎಂದರು. ಮನೆ ಸ್ವಚ್ಛಪಡಿಸುವ ನೆಪದಲ್ಲಿ ಆಗಾಗ್ಗೆ ಕರೆಸಿಕೊಂಡು ಅವರ ತಂದೆ ತಾಯಿ ಇಲ್ಲದ ಸಮಯದಲ್ಲಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರು' ಎಂದು ಸಂತ್ರಸ್ತೆಯು ವಿವರಿಸಿದ್ದಾರೆ.

'ಆರೋಪಿಯು ಸಂಸದರಾಗಿದ್ದು, ತಮ್ಮ ಮನೆಯಲ್ಲಿ ಕೆಲಸ ಮಾಡುವ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿ ಜೀವ ಬೆದರಿಕೆ ಹಾಕುವ ಮೂಲಕ ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 376 (2) (ಕೆ), 376 (2) (ಎನ್), 354 (ಎ), 354 (ಬಿ), 354 (ಸಿ) ಮತ್ತು 506 ರೀತ್ಯಾ ಅಪರಾಧ ಎಸಗಿರುತ್ತಾರೆ' ಎಂದು ವಿವರಿಸಲಾಗಿದೆ.

'ಸಂತ್ರಸ್ತೆಯು ತನ್ನ ಮೇಲೆ ನಡೆದ ಅಪರಾಧ ಕುರಿತು ಇನ್ನಾರಿಗೂ ಬಹಿರಂಗಪಡಿಸದಂತೆ ಮತ್ತು ಪುನಃ ಇಂತಹುದೇ ಕೃತ್ಯಕ್ಕೆ ಸಹಕರಿಸುವಂತೆ ಒತ್ತಾಯಿಸಲು ಅತ್ಯಾಚಾರದ ಕ್ರಿಯೆಯನ್ನು ತನ್ನ ಮೊಬೈಲ್ ಫೋನಿನಲ್ಲಿ ಉದ್ದೇಶಪೂರ್ವಕವಾಗಿ ಚಿತ್ರೀಕರಿಸಿಕೊಂಡಿದ್ದೇ, ನಂತರ ವಿಡಿಯೊ ಬಹಿರಂಗಗೊಳ್ಳಲು ಕಾರಣವಾಗಿದ್ದು, ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರ ಕಲಂ 66 (ಇ) ರೀತ್ಯಾ ಅಪರಾಧ ಎಸಗಿರುತ್ತಾರೆ' ಎಂದು ವಿವರಿಸಲಾಗಿದೆ.

'ಆರೋಪಿಯು ವಿಚಾರಣೆಯಿಂದ ತಪ್ಪಿಸಿಕೊಳ್ಳುವ ದುರುದ್ದೇಶದಿಂದ ಅತ್ಯಾಚಾರವನ್ನು ತನ್ನ ಮೊಬೈಲ್ ಫೋನಿನಲ್ಲಿ ಚಿತ್ರೀಕರಿಸಿಕೊಂಡಿದ್ದರು. ಪ್ರಕರಣದ ಪ್ರಮುಖ ಸಾಕ್ಷ್ಯ ಎನಿಸಿದ ಮೊಬೈಲ್ ಫೋನನ್ನು ನಾಶಪಡಿಸಿ ಐಪಿಸಿ ಕಲಂ 201ರ ಅನುಸಾರ ಅಪರಾಧ ಎಸಗಿರುತ್ತಾರೆ. ಸಂತ್ರಸ್ತೆಯ ಹೇಳಿಕೆ, ಸಾಂದರ್ಭಿಕ ಸಾಕ್ಷಿ ಮತ್ತು ಕೃತ್ಯದ ವಿಡಿಯೊ, ಎಫ್‌ಎಸ್‌ಎಲ್ (ವಿಧಿ ವಿಜ್ಞಾನ ಪ್ರಯೋಗಾಲಯ) ವರದಿಗಳು ಹಾಗೂ ತಾಂತ್ರಿಕ ಸಾಕ್ಷ್ಯಾಧಾರಗಳಿಂದ ಆರೋಪಿಯು ಅಪರಾಧ ಎಸಗಿರುವುದು ದೃಢಪಟ್ಟಿರುತ್ತದೆ' ಎಂದು ತಿಳಿಸಲಾಗಿದೆ.

'ಈ ಪ್ರಕರಣದಲ್ಲಿ ಇನ್ನೂ ಕೆಲವು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಗುತ್ತಿದೆ. ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, 90 ದಿನಗಳು ಗತಿಸುತ್ತಾ ಬಂದ ಕಾರಣ ಲಭ್ಯ ಸಾಕ್ಷ್ಯಾಧಾರಗಳ ಆಧಾರದಲ್ಲಿ ಈ ದೋಷಾರೋಪ ಪಟ್ಟಿ ಸಲ್ಲಿಸಲಾಗುತ್ತಿದೆ. ವೈದ್ಯಕೀಯ ತಪಾಸಣೆಯ ಸಮಯದಲ್ಲಿ ಕಂಡುಬಂದ ಅಂಶಗಳನ್ನು ಎಫ್‌ಎಸ್‌ಎಲ್ ತಂಡದವರು ತೆಗೆದಿದ್ದ ಫೋಟೊಗಳಲ್ಲಿ ವೈದ್ಯರ ತಂಡ ಗುರುತಿಸಿ ಕೊಟ್ಟಿರುವ ಫೋಟೊಗಳ ಜೊತೆಗೆ ಹೋಲಿಕೆ ಮತ್ತು ವಿಶ್ಲೇಷಣೆಗಾಗಿ ಎಫ್‌ಎಸ್‌ಎಲ್‌ಗೆ ಕಳುಹಿಸಿಕೊಡಲಾಗಿದ್ದು ವರದಿ ಪಡೆಯಬೇಕಾಗಿದೆ' ಎಂದು ಉಲ್ಲೇಖಿಸಲಾಗಿದೆ.

ಬಿಎಸ್‌ವೈ: ಪೋಕ್ಸೊ ಪ್ರಕರಣ 19ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ; ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ' ಎಂಬ ತನ್ನ ಮಧ್ಯಂತರ ಆದೇಶವನ್ನು ಹೈಕೋರ್ಟ್ ಪುನಃ ವಿಸ್ತರಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ಹಾಜರಾಗಿದ್ದ ಅಶೋಕ್ ಎನ್.ನಾಯಕ್ ಅವರು, 'ಈ ಪ್ರಕರಣದಲ್ಲಿ ಸರ್ಕಾರವು ವಿಶೇಷ ಪ್ರಾಸಿಕ್ಯೂಟರ್ ಆಗಿ ಹಿರಿಯ ವಕೀಲ ರವಿವರ್ಮ ಕುಮಾರ್ ಅವರನ್ನು ನೇಮಕ ಮಾಡಿದೆ. ಅವರಿಗೆ ಪ್ರಕರಣದ ಮಾಹಿತಿ ನೀಡಬೇಕಿರುವ ಕಾರಣ ವಿಚಾರಣೆ ಮುಂದೂಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಗಳು ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿದರು.

ಬಿಜೆಪಿ ಮುಖಂಡನ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಮಹಿಳೆ ಜೊತೆ ಅಸಭ್ಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಚನ್ನಪಟ್ಟಣ ಬಿಜೆಪಿ ಗ್ರಾಮಾಂತರ ಮಂಡಳದ ಅಧ್ಯಕ್ಷ ಟಿ.ಎಸ್. ರಾಜು ವಿರುದ್ಧ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

ಸಂತ್ರಸ್ತ ಮಹಿಳೆ ದೂರಿನ ಮೇರೆಗೆ ಪ್ರಕರಣ ದಾಖಲಾಗುತ್ತಿದ್ದಂತೆಯೇ ಆರೋಪಿ ರಾಜು ತಲೆ ಮರೆಸಿಕೊಂಡಿದ್ದಾನೆ. ಆತನ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿ ನಲ್ಲಿ ನೆಲೆಸಿರುವ ಮಹಿಳೆ ಗಣೇಶ ಹಬ್ಬದ ಸಲುವಾಗಿ ತವರಾದ ತೂಬಿನಕೆರೆಗೆ ಬಂದಿದ್ದರು. ಸೆ.7ರಂದು ಗ್ರಾಮದಲ್ಲಿ ತಡರಾತ್ರಿ ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ನೋಡಲು ಮಹಿಳೆ ಮತ್ತು ಅವರ ತಾಯಿ ಮನೆ ಮುಂದೆ ನಿಂತಾಗ ಈ ಘಟನೆ ನಡೆದಿದೆ.

ಟಿ.ಎಸ್. ರಾಜು

'ತಾಯಿ ಮನೆಯೊಳಗೆ ಹೋದಾಗ ಬಳಿ ಬಂದ ರಾಜು, 'ಯಾವಾಗ ಬಂದೆ ಬೇಬಿ' ಎಂದು ಕೇಳಿ, ಹೆಗಲ ಮೇಲೆ ಕೈ ಹಾಕಿದ. ನಂತರ ಎದೆ ಭಾಗ ಮುಟ್ಟಿ ಕೈ ಹಿಡಿದು ಎಳೆದಾಡಿದ. ಮೊಬೈಲ್‌ನಲ್ಲಿ ನನ್ನ ಫೋಟೊ ಸೆರೆ ಹಿಡಿದು ಬೇರೆಯವರಿಗೆ ಕಳಿಸಿದ' ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

'ಈ ಕುರಿತು ಪ್ರಶ್ನಿಸಿದಾಗ 'ನನ್ನ ಮೊಬೈಲ್, ನನ್ನಿಷ್ಟ' ಎಂದು ಉಡಾಫೆಯಿಂದ ಪ್ರತಿಕ್ರಿಯಿಸಿದ. ಆತನ ವರ್ತನೆಯಿಂದ ದಿಗ್ಭ್ರಮೆಗೊಂಡು ಮನೆ ಒಳಗಿದ್ದ ಅಣ್ಣನಿಗೆ ವಿಷಯ ತಿಳಿಸಿದೆ. ಅವರು ಬಂದು ಪ್ರಶ್ನಿಸಿದಾಗ ರಾಜು ತಬ್ಬಿಬ್ಬುಗೊಂಡ. ಕುಟುಂಬದ ಎಲ್ಲರೂ ಸೇರಿ ಆತನನ್ನು ತರಾಟೆಗೆ ತೆಗೆದುಕೊಂಡರು. ಈ ವೇಳೆ ಆರೋಪಿ ಬಳಿ ಇದ್ದ ಮೊಬೈಲ್ ಕಿತ್ತುಕೊಂಡಿದ್ದು, ತನಿಖೆ ವೇಳೆ ಹಾಜರುಪಡಿಸುವೆ' ಎಂದು ಮಹಿಳೆ ಹೇಳಿದ್ದಾರೆ.

ಪಕ್ಷದಿಂದ ಅಮಾನತು: ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗುತ್ತಿದ್ದಂತೆ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಎನ್. ಆನಂದಸ್ವಾಮಿ ಸೋಮವಾರ ಟಿ.ಎಸ್. ರಾಜುನನ್ನು ಪಕ್ಷದಿಂದ ಅಮಾನತು ಮಾಡಿದ್ದಾರೆ.

ಕೇಂದ್ರ ಸಚಿವ ಶೆಖಾವತ್‌ಗೆ ಎಚ್‌.ಕೆ. ಪಾಟೀಲ ಒತ್ತಾಯ

'ಬಾರದ ಹಣ; ಪ್ರವಾಸಿ ತಾಣ ಅಭಿವೃದ್ಧಿಗೆ ಅಡ್ಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕದಲ್ಲಿನ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡದೇ ಇರುವುದರಿಂದ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಕಾಲಮಿತಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು ತ್ವರಿತವಾಗಿ ಹಣ ಬಿಡುಗಡೆ ಮಾಡಬೇಕು' ಎಂದು ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ಒತ್ತಾಯಿಸಿದರು.

ದಕ್ಷಿಣದ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರವಾಸೋದ್ಯಮ ಸಚಿವರ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಮೈಸೂರಿನ ಚಾಮುಂಡೇಶ್ವರಿ ದೇವಿ ಬೆಟ್ಟ ಅಭಿವೃದ್ಧಿಪಡಿಸಲು 'ಪ್ರಸಾದ್' ಯೋಜನೆಯಡಿ ಬಿಡುಗಡೆ ಮಾಡಬೇಕಿದ್ದ ಮೊದಲ ಕಂತು ₹45.17 ಕೋಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿಲ್ಲ. ಸ್ವದೇಶಿ ದರ್ಶನ 2.0 ಕಾರ್ಯಕ್ರಮಗಳ ಅಡಿಯಲ್ಲಿ ಮೈಸೂರು ಮತ್ತು ಹಂಪಿ ಯೋಜನೆಗಳಿಗೆ ಅನುಮೋದಿಸಿದ್ದ ₹46.17 ಕೋಟಿಯೂ ಬಿಡುಗಡೆ ಆಗಿಲ್ಲ' ಎಂದರು.

> **ಕೇಂದ್ರದಿಂದ ಹಣ ಬಿಡುಗಡೆ ವಿಳಂಬದಿಂದ ಮಹತ್ವದ ಯೋಜನೆಗಳನ್ನು ಪೂರ್ಣಗೊಳಿಸಲು ಅಡ್ಡಿಯಾಗುತ್ತಿದೆ. ಇದರಿಂದಾಗಿ ರಾಜ್ಯ ಸರ್ಕಾರ ಪೇಚಿಗೆ ಸಿಲುಕುವಂತಾಗಿದೆ**
> **ಎಚ್.ಕೆ. ಪಾಟೀಲ,** ಪ್ರವಾಸೋದ್ಯಮ ಸಚಿವ

'ಗೋಲ್ಡನ್ ಚಾರಿಯಟ್ ರೈಲು ಯೋಜನೆಯನ್ನು ಮತ್ತೆ ಆರಂಭಿಸಲು ರಾಜ್ಯ ಸರ್ಕಾರ ಉತ್ಸುಕವಾಗಿದೆ. ಭಾರತ್ ಗೌರವ ರೈಲ್ವೆ ನೀತಿಯಂತೆ ಗೋಲ್ಡನ್ ಚಾರಿಯಟ್ ಪ್ರವಾಸ ನೀತಿಯನ್ನು ಬದಲಿಸಿ, ಶುಲ್ಕ ಕಡಿತಗೊಳಿಸುವ ಮೂಲಕ ಈ ಯೋಜನೆಯನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಬೇಕು. ಬೇರೆ ಬೇರೆ ಧಾರ್ಮಿಕ ಶ್ರದ್ಧಾ ಕೇಂದ್ರಗಳು, ಪಾರಂಪರಿಕ ತಾಣಗಳು ಮತ್ತು ಪರಿಸರ ಪ್ರವಾಸಿ ತಾಣಗಳನ್ನು ಈ ಪ್ರವಾಸ ಯೋಜನೆಗೆ ಜೋಡಿಸಬೇಕು' ಎಂದು ಒತ್ತಾಯಿಸಿದರು.

'ಡೆಕ್ಕನ್ ಸುಲ್ತಾನೇಟ್‌ನ ಕೋಟೆಗಳು, ಶ್ರೀರಂಗಪಟ್ಟಣದ ಸ್ಮಾರಕಗಳು, ಐಹೊಳೆ-ಬಾದಾಮಿಯ ಶಿಲ್ಪಕಲೆ, ಹಿರೇಬೆಣಕಲ್‌ನ ಮೆಗಾಲಿಟಿಕ್ ಸೈಟ್ ಮತ್ತು ಬೀದರ್‌ನ ಕರೇಜ್ ವ್ಯವಸ್ಥೆ ಹಾಗೂ ಲಕ್ಕುಂಡಿಯ ಪಾರಂಪರಿಕ ಶಿಲ್ಪಕಲಾ ವೈಭವಗಳು ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗಳಿಗೆ ಸೇರಬೇಕೆನ್ನುವುದು ಕರ್ನಾಟಕದ ಬಯಕೆ. ಇದಕ್ಕೆ ಕೇಂದ್ರ ಸರ್ಕಾರ ಬೆಂಬಲ ನೀಡಬೇಕು' ಎಂದೂ ಮನವಿ ಮಾಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಗಜೇಂದ್ರ ಸಿಂಗ್ ಶೆಖಾವತ್ ವಹಿಸಿದ್ದರು. ಕೇಂದ್ರ ಪ್ರವಾಸೋದ್ಯಮ ಪ್ರವಾಸೋದ್ಯಮ ಇಲಾಖೆ ರಾಜ್ಯ ಸಚಿವ ಸುರೇಶ್ ಗೋಪಿ, ಆಂಧ್ರಪ್ರದೇಶ ಮತ್ತು ಪುದುಚೇರಿಗಳ ಪ್ರವಾಸೋದ್ಯಮ ಸಚಿವರು, ದಕ್ಷಿಣದ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು.

ಪ್ರವಾಸೋದ್ಯಮ ಸಚಿವರ ಸಮ್ಮೇಳನದಲ್ಲಿ ಎಚ್‌.ಕೆ. ಪಾಟೀಲ ಮಾತನಾಡಿದರು. ಸುರೇಶ್ ಗೋಪಿ, ಗಜೇಂದ್ರ ಸಿಂಗ್ ಶೆಖಾವತ್ ಇದ್ದರು

ಪಶ್ಚಿಮ ಬಂಗಾಳ: ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ ● ಪ್ರತಿಭಟನೆನಿರತ ವೈದ್ಯರಿಗೆ 'ಸುಪ್ರೀಂ' ಎಚ್ಚರಿಕೆ

ಸಂಜೆಯೊಳಗೆ ಕರ್ತವ್ಯಕ್ಕೆ ಮರಳದಿದ್ದರೆ ಕ್ರಮ

ನವದೆಹಲಿ (ಪಿಟಿಐ): ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ ಕೊಲೆಗೈದ ಘಟನೆ ಖಂಡಿಸಿ ಪ್ರತಿಭಟನೆ ನಡೆಸುತ್ತಿರುವ ಕಿರಿಯ ವೈದ್ಯರಿಗೆ ಮಂಗಳವಾರ ಸಂಜೆ 5ರ ಒಳಗೆ ಕರ್ತವ್ಯಕ್ಕೆ ಹಾಜರಾಗುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

'ವೈದ್ಯರು ಮಂಗಳವಾರ ಸಂಜೆ 5ರ ಒಳಗಾಗಿ ಕರ್ತವ್ಯಕ್ಕೆ ಮರಳಿದರೆ, ಅವರ ವಿರುದ್ಧ ಯಾವುದೇ ಶಿಸ್ತು ಕ್ರಮ ತೆಗೆದುಕೊಳ್ಳಬಾರದು ಎಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶಿಸುತ್ತೇವೆ. ಕೆಲಸಕ್ಕೆ ಗೈರುಹಾಜರಾದರೆ, ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠವು ಸೋಮವಾರ ಎಚ್ಚರಿಕೆ ನೀಡಿತು.

ವೈದ್ಯರು ಕಳೆದ ಒಂದು ತಿಂಗಳಿನಿಂದ ಮುಷ್ಕರ ನಡೆಸುತ್ತಿರುವುದರಿಂದ ಪಶ್ಚಿಮ ಬಂಗಾಳದಾದ್ಯಂತ ವೈದ್ಯಕೀಯ ಸೇವೆ ಅಸ್ತವ್ಯಸ್ತಗೊಂಡಿದೆ. ಸುಪ್ರೀಂ ಕೋರ್ಟ್ ನಿರ್ದೇಶನವನ್ನು ತೃಣಮೂಲ ಕಾಂಗ್ರೆಸ್ ಸರ್ಕಾರ ಸ್ವಾಗತಿಸಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರನ್ನೊಳಗೊಂಡಿರುವ ಪೀಠ, ಅತ್ಯಾಚಾರ ಮತ್ತು ಹತ್ಯೆ ಕುರಿತು ಸ್ವಯಂಪ್ರೇರಿತವಾಗಿ ದಾಖಲು ಮಾಡಿಕೊಂಡಿರುವ ಪ್ರಕರಣದ ವಿಚಾರಣೆ ಮುಂದುವರಿಸಿತು.

ಸರ್ಕಾರ ಆತ್ಮವಿಶ್ವಾಸ ತುಂಬಲಿ: 'ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ವೈದ್ಯರಲ್ಲಿರುವ ಭಯವನ್ನು ದೂರ ಮಾಡಿ, ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸವನ್ನು ಪಶ್ಚಿಮ ಬಂಗಾಳ ಸರ್ಕಾರ ಮಾಡಬೇಕು. ವೈದ್ಯರ ಸುರಕ್ಷತೆ ಖಚಿತಪಡಿಸಿಕೊಳ್ಳಲು, ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಗಳು ತಮ್ಮ ವ್ಯಾಪ್ತಿಯ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಸಾರ್ವಜನಿಕ ಆಸ್ಪತ್ರೆಗಳಲ್ಲಿನ ಭದ್ರತಾ ಪರಿಸ್ಥಿತಿಯನ್ನು ಅವಲೋಕಿಸಬೇಕು' ಎಂದು ಪೀಠವು ಹೇಳಿತು.

'ಕೆಲಸವನ್ನು ನಿಲ್ಲಿಸಿ ಯಾವುದೇ ರೀತಿಯ ಪ್ರತಿಭಟನೆ ಮಾಡಬಾರದು. ಯುವ ವೈದ್ಯರು ಕರ್ತವ್ಯಕ್ಕೆ ಹಿಂತಿರುಗಿ ರೋಗಿಗಳ ಆರೈಕೆ ಮಾಡಬೇಕು. ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಗಳು ನಿಮ್ಮ ಸುರಕ್ಷತೆ ಖಾತರಿಪಡಿಸುವರು' ಎಂದಿತು.

ಮಹತ್ವದ ದಾಖಲೆ ಅಲಭ್ಯ– ಸುಪ್ರೀಂ ಕಳವಳ: ಹತ್ಯೆಗೀಡಾದ ವೈದ್ಯ ವಿದ್ಯಾರ್ಥಿನಿಯ ಮರಣೋತ್ತರ ಪರೀಕ್ಷೆಗೆ ಸಂಬಂಧಿಸಿದ ಅಗತ್ಯ ದಾಖಲೆಯೊಂದು ಲಭ್ಯವಿಲ್ಲದ್ದಕ್ಕೆ ಸುಪ್ರಿಂ ಕೋರ್ಟ್ ಕಳವಳ ವ್ಯಕ್ತಪಡಿಸಿದ್ದು, ಆ ಬಗ್ಗೆ ತನಿಖೆ ನಡೆಸುವಂತೆ ಸಿಬಿಐಗೆ ಸೂಚಿಸಿದೆ.

'ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಹಸ್ತಾಂತರಿಸಿದ್ದಕ್ಕೆ ದಾಖಲೆಯಾಗಿರುವ ಚಲನ್ ಎಲ್ಲಿದೆ' ಎಂದು ಕೇಳಿದ ಪೀಠ, ಈ ಬಗ್ಗೆ ಉತ್ತರಿಸುವಂತೆ ಸಿಬಿಐ ಮತ್ತು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿತು.

ಸಿಬಿಐ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಚಲನ್ ನಮ್ಮ ದಾಖಲೆಗಳ ಭಾಗವಾಗಿಲ್ಲ' ಎಂದು ಪೀಠಕ್ಕೆ ತಿಳಿಸಿದರು. ಪಶ್ಚಿಮ ಬಂಗಾಳ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ತಕ್ಷಣವೇ ದಾಖಲೆಯನ್ನು ಹುಡುಕಲು ಸಾಧ್ಯವಾಗಲಿಲ್ಲ ಮತ್ತು ಈ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗುವುದು ಎಂದು ಹೇಳಿದರು. ಪೀಠವು ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 17ಕ್ಕೆ ನಿಗದಿಪಡಿಸಿದೆ.

ಸಂತ್ರಸ್ತೆಗೆ ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿ ಭಾರತೀಯ ಜನತಾ ಯುವ ಮೋರ್ಚಾ ಕಾರ್ಯಕರ್ತರು ಕೋಲ್ಕತ್ತದಲ್ಲಿ ಸೋಮವಾರ ನಡೆಸಿದ ಮೆರವಣಿಗೆಯನ್ನು ಪೊಲೀಸರು ತಡೆದರು –ಪಿಟಿಐ ಚಿತ್ರ

ಕೇಂದ್ರದ ಪಿತೂರಿ: ಮಮತಾ ಬ್ಯಾನರ್ಜಿ ಆರೋಪ

ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಹಿಂದೆ ಕೇಂದ್ರ ಸರ್ಕಾರದ ಪಿತೂರಿ ಇದೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಆರೋಪಿಸಿದ್ದಾರೆ.

'ಇದು (ಆರ್.ಜಿ ಕರ್ ಘಟನೆಯ ನಂತರದ ಪ್ರತಿಭಟನೆ) ಖಂಡಿತವಾಗಿಯೂ ಕೇಂದ್ರ ಸರ್ಕಾರದ ಪಿತೂರಿ ಆಗಿದೆ ಮತ್ತು ಕೆಲವು ಎಡಪಕ್ಷಗಳೂ ಇದರಲ್ಲಿ ಭಾಗಿಯಾಗಿವೆ. ಕೆಲವರು ನೆರೆಯ ದೇಶದಲ್ಲಿ ತಲೆದೋರಿರುವ ಅರಾಜಕತೆಯ ಲಾಭವನ್ನು ಪಡೆಯುತ್ತಿದ್ದಾರೆ. ಭಾರತ ಮತ್ತು ಬಾಂಗ್ಲಾದೇಶ ಪ್ರತ್ಯೇಕ ರಾಷ್ಟ್ರಗಳು ಎಂಬುದನ್ನು ಅವರು ಮರೆತಿದ್ದಾರೆ' ಎಂದು ಟೀಕಿಸಿದರು.

ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಲಭ್ಯವಿಲ್ಲ ಎಂದು ಪೀಠವು ಹೇಳಿದೆ. ಮಮತಾ ಬ್ಯಾನರ್ಜಿ ಕರಾಳ ಮುಖ ಸುಪ್ರೀಂ ಕೋರ್ಟ್‌ನಲ್ಲಿ ಅನಾವರಣಗೊಂಡಿದೆ

ಗೌರವ್ ಭಾಟಿಯಾ ಬಿಜೆಪಿ ರಾಷ್ಟ್ರೀಯ ವಕ್ತಾರ

'ಮೃತ ವೈದ್ಯ ವಿದ್ಯಾರ್ಥಿನಿಯ ಕುಟುಂಬಕ್ಕೆ ನಾನು ಎಂದೂ ಹಣ ನೀಡಿಲ್ಲ. ನಿಮ್ಮ ಮಗಳ ನೆನಪಿಗಾಗಿ ಏನಾದರೂ ಮಾಡಲು ಬಯಸಿದರೆ, ಸರ್ಕಾರ ನೆರವು ನೀಡಲಿದೆ ಎಂದು ಸಂತ್ರಸ್ತೆಯ ಪೋಷಕರಿಗೆ ನಾನು ಹೇಳಿದ್ದೇನೆ. ಯಾವಾಗ ಏನನ್ನು ಮಾತನಾಡಬೇಕೆಂಬುದು ನನಗೆ ತಿಳಿದಿದೆ' ಎಂದರು.

'17ರೊಳಗೆ ವಸ್ತು ಸ್ಥಿತಿ ವರದಿ ಸಲ್ಲಿಸಿ'

- ಪ್ರಕರಣದ ತನಿಖೆಯ ಕುರಿತು ಸೆಪ್ಟೆಂಬರ್ 17ರ ಒಳಗೆ ವಸ್ತು ಸ್ಥಿತಿ ವರದಿ ಸಲ್ಲಿಸುವಂತೆ ಪೀಠವು ಸಿಬಿಐಗೆ ನಿರ್ದೇಶಿಸಿತು.
- 'ಸಿಬಿಐ ಈಗಾಗಲೇ ಒಂದು ವಸ್ತು ಸ್ಥಿತಿ ವರದಿಯನ್ನು ಸಲ್ಲಿಸಿದ್ದು, ತನಿಖೆ ಪ್ರಗತಿಯಲ್ಲಿದೆ ಎಂಬುದು ತಿಳಿಯುತ್ತದೆ. ಹೊಸದಾಗಿ ವಸ್ತು ಸ್ಥಿತಿ ವರದಿ ಸಲ್ಲಿಸಲು ಸಿಬಿಐಗೆ ನಿರ್ದೇಶನ ನೀಡುತ್ತೇವೆ' ಎಂದಿತು.
- ಎಫ್‌ಐಆರ್ ದಾಖಲು ಮಾಡಿಕೊಳ್ಳುವಲ್ಲಿ 14 ತಾಸುಗಳ ವಿಳಂಬ ಆಗಿದ್ದಕ್ಕೆ, ಪೀಠವು ಕೋಲ್ಕತ್ತ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತು.
- ಸಂತ್ರಸ್ತೆಯ ಭಾವಚಿತ್ರವನ್ನು ಎಲ್ಲ ಸಾಮಾಜಿಕ ಮಾಧ್ಯಮಗಳಿಂದಲೂ ತೆಗೆದುಹಾಕುವಂತೆ ನಿರ್ದೇಶಿಸಿತು.
- ಆರ್.ಜಿ ಕರ್ ಆಸ್ಪತ್ರೆಗೆ ಭದ್ರತೆ ಒದಗಿಸಲು ನಿಯೋಜಿಸಿರುವ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಮೂರು ತುಕಡಿಗಳಿಗೂ ವಸತಿ ಸೇರಿದಂತೆ ಅಗತ್ಯವಿರುವ ಎಲ್ಲ ಸೌಲಭ್ಯ ಒದಗಿಸಿಕೊಡುವಂತೆ ಬಂಗಾಳ ಸರ್ಕಾರಕ್ಕೆ ನಿರ್ದೇಶಿಸಿದೆ.
- ಬಂಗಾಳದಲ್ಲಿರುವ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಸಿಬಿಐ, ಮಾದರಿ ಗಳನ್ನು ಪರೀಕ್ಷೆಗಾಗಿ ಏಮ್ಸ್, ಇತರ ಸಿಎಫ್‌ಎಸ್‌ಎಲ್‌ಗಳಿಗೆ ಕಳುಹಿಸುವುದಾಗಿ ಹೇಳಿದೆ.

'23 ಮಂದಿ ಸಾವು'

'ವೈದ್ಯರು ಪ್ರತಿಭಟನೆ ಆರಂಭಿಸಿದ ಬಳಿಕ ಸೂಕ್ತ ಚಿಕಿತ್ಸೆ ಲಭಿಸದೆ ರಾಜ್ಯದಲ್ಲಿ 23 ಮಂದಿ ಮೃತಪಟ್ಟಿದ್ದಾರೆ. ಆರೋಗ್ಯ ಇಲಾಖೆಯು ಸಲ್ಲಿಸಿರುವ ವಸ್ತು ಸ್ಥಿತಿ ವರದಿಯಲ್ಲಿ ಈ ಮಾಹಿತಿ ಇದೆ' ಎಂದು ಹಿರಿಯ ವಕೀಲ ಕಪಿಲ್ ಸಿಬಲ್ ಪೀಠಕ್ಕೆ ತಿಳಿಸಿದರು. ವೈದ್ಯರ ಮುಷ್ಕರದಿಂದಾಗಿ ರಾಜ್ಯದಲ್ಲಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದು, ಆರೋಗ್ಯ ಸೇವೆ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ ಎಂದರು.

ಯೂಟ್ಯೂಬ್ ವಿಡಿಯೊ ನೋಡಿ ಶಸ್ತ್ರಚಿಕಿತ್ಸೆ: ಬಾಲಕ ಸಾವು

ಸಾರಣ್ (ಪಿಟಿಐ): ನಕಲಿ ವೈದ್ಯನೊಬ್ಬ ಯೂಟ್ಯೂಬ್ ವಿಡಿಯೊ ನೆರವಿನಿಂದ ಪಿತ್ತಕೋಶದ ಕಲ್ಲು ತೆಗೆಯುವ ಶಸ್ತ್ರ ಚಿಕಿತ್ಸೆ ನಡೆಸಿದ್ದು, ಬಾಲಕ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

'ಶಸ್ತ್ರಚಿಕಿತ್ಸೆ ನಡೆಸಿ ಬಾಲಕನ ಪ್ರಾಣ ತೆಗೆದ ನಕಲಿ ವೈದ್ಯ ಅಜಿತ್ ಕುಮಾರ್ ಪುರಿಯನ್ನು ಗೋಪಾಲ್‌ಗಂಜ್ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಬಂಧಿಸಲಾಗಿದೆ' ಎಂದು ಸಾರಣ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಆಶಿಶ್ ತಿಳಿಸಿದ್ದಾರೆ.

ಮೃತ ಬಾಲಕನನ್ನು ಸಾರಣ್ ಜಿಲ್ಲೆಯ ಬೌಲಾಪುರ ಗ್ರಾಮದ ಗೋಲು ಅಲಿಯಾಸ್ ಕೃಷ್ಣ ಕುಮಾರ್ ಎಂದು ಗುರುತಿಸಲಾಗಿದೆ.

ಗೋಲು ಹೊಟ್ಟೆನೋವಿನಿಂದ ಬಳಲುತ್ತಿದ್ದರಿಂದ ಆತನ ಪೋಷಕರು ಶುಕ್ರವಾರ ಸಾರಣ್‌ನಲ್ಲಿರುವ ಧರ್ಮಬಾಗಿ ಬಜಾರ್‌ನ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದರು.

'ಆಸ್ಪತ್ರೆಗೆ ದಾಖಲಾಗಿದ್ದ ಗೋಲುಗೆ ನಕಲಿ ವೈದ್ಯ ಅಜಿತ್‌ಕುಮಾರ್ ಯೂಟ್ಯೂಬ್ ನೋಡಿಕೊಂಡು ಪಿತ್ತಕೋಶದಲ್ಲಿ ಕಲ್ಲು ತೆಗೆಯುವ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಬಳಿಕ ಗೋಲು ಆರೋಗ್ಯ ಪರಿಸ್ಥಿತಿ ತೀವ್ರ ಹದಗೆಟ್ಟಿದ್ದು, ಆತನನ್ನು ಆಸ್ಪತ್ರೆ ಸಿಬ್ಬಂದಿ ಪಟ್ನಾಕ್ಕೆ ಕರೆದೊಯ್ದಿದ್ದು, ಅಲ್ಲಿ ಆತ ಸಾವಿಗೀಡಾಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತಂತೆ ಮೃತ ಬಾಲಕನ ಅಜ್ಜ ಪ್ರಹ್ಲಾದ್ ಪ್ರಸಾದ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, 'ನಕಲಿ ವೈದ್ಯ ಅಜಿತ್‌ಕುಮಾರ್ ಅವರು, ಡೀಸೆಲ್ ತರಲು ನನ್ನನ್ನು ಹೊರಗೆ ಕಳುಹಿಸಿದರು. ನನ್ನ ಪತ್ನಿ ಅಲ್ಲಿಯೇ ಇದ್ದರು. ನಾನು ವಾಪಸ್ ಬಂದಾಗ ಅವರು ಯೂಟ್ಯೂಬ್ ವಿಡಿಯೊ ನೋಡಿಕೊಂಡು ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು. ಶಸ್ತ್ರಚಿಕಿತ್ಸೆಗೆ ಅವರು ನಮ್ಮ ಬಳಿ ಅನುಮತಿ ಪಡೆದಿರಲಿಲ್ಲ. ಶಸ್ತ್ರಚಿಕಿತ್ಸೆ ಬಳಿಕ ತೀವ್ರ ಅಸ್ವಸ್ಥನಾಗಿದ್ದ ಗೋಲುನನ್ನು ಪಟ್ನಾಕ್ಕೆ ಕರೆದೊಯ್ದಿದ್ದು, ಅಲ್ಲಿ ಆತ ಮೃತಪಟ್ಟಿದ್ದಾನೆ' ಎಂದು ತಿಳಿಸಿದ್ದಾರೆ.

ಶಾಲೆಯಲ್ಲಿ ಮಗನ ಮದುವೆ: ಶಿಕ್ಷಕಿಗೆ ನೀರಿನ ಯಂತ್ರ ಅಳವಡಿಸಲು ಸೂಚನೆ

ಹಮೀರ್‌ಪುರ (ಪಿಟಿಐ): ಸರ್ಕಾರಿ ಶಾಲೆಯ ಆವರಣದಲ್ಲಿ ಮಗನ ಮದುವೆ ಆಯೋಜಿಸಿದ್ದಕ್ಕಾಗಿ ನಾಲ್ಕು ವಾರಗಳ ಒಳಗಾಗಿ ಶಾಲೆಯಲ್ಲಿ ಎರಡು ಕುಡಿಯುವ ನೀರಿನ ಶುದ್ಧೀಕರಣ ಯಂತ್ರಗಳನ್ನು ಅಳವಡಿಸುವಂತೆ ಶಿಕ್ಷಕಿಯೊಬ್ಬರಿಗೆ ಹಿಮಾಚಲ ಪ್ರದೇಶ ಹೈಕೋರ್ಟ್ ಸೋಮವಾರ ಆದೇಶ ನೀಡಿದೆ.

ಸುಲ್ಗನ್ ಗ್ರಾಮದಲ್ಲಿನ ಸರ್ಕಾರಿ ಶಾಲೆಯಲ್ಲಿ 2021ರ ನವೆಂಬರ್ 5ರಂದು ಮದುವೆ ನೆರವೇರಿತ್ತು. ಈ ಬಗ್ಗೆ ಸ್ಥಳೀಯ ನಿವಾಸಿ ಶಶಿಕಾಂತ್ ಎಂಬುವರು ಶಿಕ್ಷಣ ಇಲಾಖೆಗೆ ಇ–ಮೇಲ್ ಮೂಲಕ ಹಾಗೂ ಮುಖ್ಯಮಂತ್ರಿ ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದ್ದರು.

ಶಿಕ್ಷಣ ಇಲಾಖೆ ಅಧಿಕಾರಿಗಳು ನವೆಂಬರ್ 8ರಂದು ತಪಾಸಣೆಗಾಗಿ ಬಂದಾಗಲೂ ಮದುವೆ ನಡೆದಿರುವುದು ದೃಢಪಟ್ಟಿತ್ತು. ಆದರೆ, ಯಾರ ಮೇಲೆಯೂ ಕ್ರಮ ಕೈಗೊಂಡಿರಲಿಲ್ಲ. ಆದ್ದರಿಂದ, ಶಶಿಕಾಂತ್ ಅವರು ಮದುವೆ ನಡೆಸಿರುವ ಕುರಿತು ಆರ್‌ಟಿಐ ಮೂಲಕ ಮಾಹಿತಿ ಪಡೆದು, ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ಐಐಟಿ ಗುವಾಹಟಿ: ವಿದ್ಯಾರ್ಥಿ ಮೃತದೇಹ ಪತ್ತೆ

ಗುವಾಹಟಿ: ಐಐಟಿ ಗುವಾಹಟಿಯಲ್ಲಿ ಕಂಪ್ಯೂಟರ್ ಸೈನ್ಸ್ ಓದುತ್ತಿದ್ದ ವಿದ್ಯಾರ್ಥಿಯ ಮೃತದೇಹವು ಹಾಸ್ಟೆಲ್ ಕೋಣೆಯಲ್ಲಿ ಸೋಮವಾರ ಪತ್ತೆಯಾಗಿದ್ದು, ಇದೊಂದು ಆತ್ಮಹತ್ಯೆ ಇರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

21 ವರ್ಷದ ವಿದ್ಯಾರ್ಥಿಯು ಉತ್ತರ ಪ್ರದೇಶದ ಬಲ್ಲಿಯಾ ಮೂಲದವರಾಗಿದ್ದಾರೆ. ಹಾಸ್ಟೆಲ್‌ನ ಕೋಣೆಯಲ್ಲಿ ವಿದ್ಯಾರ್ಥಿ ಒಬ್ಬರೇ ಇದ್ದರು. ಸೋಮವಾರ ಮೃತದೇಹ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ವರದಿಗಾಗಿ ಪೊಲೀಸರು ಕಾಯುತ್ತಿದ್ದಾರೆ. ಆತ್ಮಹತ್ಯೆ ಎಂದು ಶಂಕಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇದಕ್ಕೂ ಮುನ್ನ, ಐಐಟಿ ಗುವಾಹಟಿಯಲ್ಲಿ ಉತ್ತರ ಪ್ರದೇಶ ಮೂಲದ ಎಂ.ಟೆಕ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ದೆಹಲಿಯಲ್ಲಿ ಜ.1ರವರೆಗೆ ಪಟಾಕಿ ಮಾರಾಟ ನಿಷೇಧ

ನವದೆಹಲಿ (ಪಿಟಿಐ): ಮುಂಬರುವ ಚಳಿಗಾಲದಲ್ಲಿ ವಾಯುಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ 2025ರ ಜ.1ರವರೆಗೆ ಎಲ್ಲಾ ರೀತಿಯ ಪಟಾಕಿಗಳ ತಯಾರಿಕೆ, ಸಂಗ್ರಹ ಮತ್ತು ಮಾರಾಟವನ್ನು ದೆಹಲಿ ಸರ್ಕಾರವು ಸೋಮವಾರ ನಿಷೇಧಿಸಿದೆ.

'ಚಳಿಗಾಲದಲ್ಲಿ ಪಟಾಕಿ ಸಿಡಿಸುವುದರಿಂದ ದೆಹಲಿಯಲ್ಲಿ ವಾತಾವರಣ ಹದಗೆಡಲಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ ನಿಷೇಧ ಮಾಡುವುದು ಅನಿವಾರ್ಯ' ಎಂದು ಪರಿಸರ ಸಚಿವ ಗೋಪಾಲ್ ರೈ ಹೇಳಿದ್ದಾರೆ.

ಇಬ್ಬರು ಭಯೋತ್ಪಾದಕರ ಹತ್ಯೆಗೈದ ಸೇನೆ

ರಾಜೌರಿ/ ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಭಾನುವಾರ ರಾತ್ರಿ ಒಳನುಸುಳಲು ಯತ್ನಿಸುತ್ತಿದ್ದ ಇಬ್ಬರು ಶಸ್ತ್ರಸಜ್ಜಿತ ಭಯೋತ್ಪಾದಕರನ್ನು ಸೇನೆಯು ಹತ್ಯೆ ಮಾಡಿದೆ.

ಜಿಲ್ಲೆಯ ನೌಶೇರಾದ ಲಾಮ್ ವಲಯದಲ್ಲಿ ಒಳನುಸುಳಲು ಯತ್ನಿಸುತ್ತಿದ್ದ ಭಯೋತ್ಪಾದಕರ ಚಲನವಲನವನ್ನು ಗಮನಿಸಿ ಸೇನೆಯು ಕಾರ್ಯಾಚರಣೆ ಆರಂಭಿಸಿದೆ. ಈ ವೇಳೆ ಭಯೋತ್ಪಾದಕರು ಹಾಗೂ ಸೇನಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆಯಿತು ಎಂದು ಸೇನೆಯು ಸೋಮವಾರ ತಿಳಿಸಿದೆ.

ಸಾಮಾಜಿಕ ಜಾಲತಾಣ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿರುವ ಸೇನೆಯು 'ಹತರಾದ ಭಯೋತ್ಪಾದಕರ ಬಳಿ ಇದ್ದ ಎರಡು ಎಕೆ–47, ಒಂದು ಪಿಸ್ತೂಲ್ ಸೇರಿದಂತೆ ಇತರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಶೋಧ ಕಾರ್ಯಾಚರಣೆ ಮುಂದುವರಿದಿದೆ' ಎಂದು ಮಾಹಿತಿ ನೀಡಿದೆ.

ಭಾರತ–ಅಮೆರಿಕ ಸೇನೆ ತಾಲೀಮು

ಜೈಪುರ (ಪಿಟಿಐ): ಭಾರತ ಮತ್ತು ಅಮೆರಿಕದ ಸೇನಾ ಪಡೆಗಳು ರಾಜಸ್ಥಾನದ ಮಹಾರಾಜನ್ ಫೀಲ್ಡ್ ಫೈರಿಂಗ್ ರೇಂಜ್‌ನ ವಿದೇಶಿ ತರಬೇತಿ ಕೇಂದ್ರದಲ್ಲಿ ಸೋಮವಾರ ಜಂಟಿ ಸಮರಾಭ್ಯಾಸ ಆರಂಭಿಸಿದವು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

20ನೇ ಆವೃತ್ತಿಯ ಭಾರತ–ಅಮೆರಿಕ ಸೇನೆಯ ಜಂಟಿ ತಾಲೀಮು ಸೆಪ್ಟೆಂಬರ್ 22ರವರೆಗೆ ಮುಂದುವರಿಯಲಿದೆ ಎಂದು ರಕ್ಷಣಾ ಸಚಿವಾಲಯದ ವಕ್ತಾರ ಅಮಿತಾಭ್ ಶರ್ಮಾ ಹೇಳಿಕೆ ಮೂಲಕ ತಿಳಿಸಿದ್ದಾರೆ. ಭಾರತ ಮತ್ತು ಅಮೆರಿಕದ ಸೇನೆಯ ತಲಾ 600 ಯೋಧರು ಸಮರಾಭ್ಯಾಸದಲ್ಲಿ ಪಾಲ್ಗೊಳ್ಳಲಿದ್ದಾರೆ.

ಶಾಸಕರ ಮನೆಯಲ್ಲಿ ಕೆಲಸದಾಕೆ ಮೃತದೇಹ ಪತ್ತೆ

ಭದೋಹಿ (ಉತ್ತರ ಪ್ರದೇಶ) (ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) ಶಾಸಕ ಜಾಹಿದ್ ಬೇಗ್ ಅವರ ಮನೆಯಲ್ಲಿ ಕೆಲಸಕ್ಕಿದ್ದ ಯುವತಿ ಮೃತದೇಹವು ಬೇಗ್ ಅವರ ಮನೆಯ ಕೋಣೆಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಜಿಯಾ (18) ಅವರು ಕಳೆದ ಕೆಲ ವರ್ಷಗಳಿಂದ ಬೇಗ್ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಬೇಗ್ ಅವರ ಮನೆಯ ಕೊನೆಯ ಮಹಡಿಯ ಕೋಣೆಯೊಂದರಲ್ಲಿ ವಾಸವಿದ್ದರು. ಫ್ಯಾನ್‌ಗೆ ನೇಣುಬಿಗಿದುಕೊಂಡ ಸ್ಥಿತಿಯಲ್ಲಿ ಅವರ ಮೃತದೇಹ ಪತ್ತೆಯಾಗಿದೆ ಎಂದು ಹೇಳಿದರು.

'ಬೆಳಿಗ್ಗೆ ತುಂಬಾ ಹೊತ್ತಾದರೂ ನಾಜಿಯಾ ಎದ್ದಿರಲಿಲ್ಲ. ಇದನ್ನು ಗಮನಿಸಿದ ಶಾಸಕರ ಕುಟುಂಬವು ಆಕೆಯ ಕೋಣೆಯ ಬಳಿ ತೆರಳಿ ನೋಡಿದಾಗ ಒಳಗಡೆಯಿಂದ ಬಾಗಿಲನ್ನು ಲಾಕ್ ಮಾಡಿಕೊಂಡು ದುಪ್ಪಟಾದಿಂದ ನೇಣುಬಿಗಿದುಕೊಂಡಿರುವುದು ಪತ್ತೆಯಾಗಿದೆ. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದರು. ಪೊಲೀಸರು ಬಾಗಿಲನ್ನು ಒಡೆದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಕುಕಿ ಮಾಜಿ ಸೈನಿಕನ ಥಳಿಸಿ ಹತ್ಯೆ

ಡ್ರೋನ್ ದಾಳಿ ಖಂಡಿಸಿ ಇಂಫಾಲ್‌ನಲ್ಲಿ ಪ್ರತಿಭಟನೆ; ಅಶ್ರುವಾಯು ಪ್ರಯೋಗ

ಪಿಟಿಐ/ ಪ್ರಜಾವಾಣಿ ವಾರ್ತೆ

ಇಂಫಾಲ್, ಗುವಾಹಟಿ: ಮೈತೇಯಿ ಸಮುದಾಯದವರ ಪ್ರಾಬಲ್ಯವಿರುವ ಪಶ್ಚಿಮ ಇಂಫಾಲ್ ಜಿಲ್ಲೆಯ ಸೆಕ್‌ಮಾಯಿನಲ್ಲಿ ಭಾನುವಾರ ರಾತ್ರಿ ಕಾರು ಚಲಾಯಿಸಿಕೊಂಡು ಹೋಗುತ್ತಿದ್ದ ಮಾಜಿ ಸೈನಿಕರೊಬ್ಬರನ್ನು ಬಡಿದು ಹತ್ಯೆ ಮಾಡಲಾಗಿದೆ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ಮೃತ ವ್ಯಕ್ತಿ ಕುಕಿ ಸಮುದಾಯದವರಾಗಿದ್ದು, ಕಾಂಗ್‌ಪೊಕ್ಪಿ ಜಿಲ್ಲೆಯ ಶ್ಯಾರೊನ್ ವೆಂಗ್‌ನ ನಿವಾಸಿ ಲಿಮ್ಲಾಲ್ ಮೆಟ್ ಎಂದು ಗುರುತಿಸಲಾಗಿದೆ.

ಮೃತ ಯೋಧರ ಪತ್ನಿ ಕೆಲವು ವರ್ಷದ ಹಿಂದೆಯೇ ಮೃತಪಟ್ಟಿದ್ದರು. ಮಾಜಿ ಯೋಧ, ಮಗನ ಜತೆ ವಾಸಿಸುತ್ತಿದ್ದರು ಎಂದು ಕುಕಿ ಸಂಘಟನೆಗಳು ತಿಳಿಸಿವೆ. ಆದರೆ ಘಟನೆಯನ್ನು ಪೊಲೀಸರು ಇನ್ನೂ ಖಚಿತಪಡಿಸಿಲ್ಲ.

ಶಾಲೆಗಳು ಸ್ಥಗಿತ, ಪರೀಕ್ಷೆ ಮುಂದೂಡಿಕೆ: ಸೆ.1ರಂದು ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ, ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರದ ಮೇಲೆ ಒತ್ತಡ ಹೇರುವ ನಿಟ್ಟಿನಲ್ಲಿ ಮೈತೇಯಿ ಸಂಘಟನೆಗಳು ಇಂಫಾಲ್ ಕಣಿವೆ ಬಂದ್‌ಗೆ ಕರೆನೀಡಿವೆ.

ಇದರ ಬೆನ್ನಲ್ಲೇ, ಮಣಿಪುರ ಸರ್ಕಾರವು ಇಂಫಾಲ್ ಕಣಿವೆ ಪ್ರದೇಶದಲ್ಲಿರುವ ಶಾಲಾ, ಕಾಲೇಜುಗಳಿಗೆ ರಜೆ ನೀಡಿದೆ. ಸೋಮವಾರ ಹಾಗೂ ಮಂಗಳವಾರ ನಿಗದಿಯಾಗಿದ್ದ ಮಣಿಪುರ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಮುಂದೂಡಿದೆ.

ಪ್ರತಿಭಟನೆ: ರಾಜ್ಯದಲ್ಲಿ ಇತ್ತೀಚಿಗೆ ನಡೆದ ಡ್ರೋನ್ ದಾಳಿಯನ್ನು ಖಂಡಿಸಿ ಸೋಮವಾರ ಬೆಳಿಗ್ಗೆ ರಾಜಭವನ, ಮುಖ್ಯಮಂತ್ರಿ ನಿವಾಸದ ಸಮೀಪ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಭದ್ರತಾ ಪಡೆಗಳು ಹಲವು ಸುತ್ತಿನ ಅಶ್ರುವಾಯು ಪ್ರಯೋಗಿಸಿ, ಗುಂಪು ಚದುರಿಸಿತು.

ಇಲ್ಲಿನ ಟಿಡ್ಡಿಂ ರಸ್ತೆಯಲ್ಲಿ ಸುಮಾರು 3 ಕಿ.ಮೀ ಉದ್ದ ಸಾಗಿಬಂದ ಪ್ರತಿಭಟನಕಾರರನ್ನು ಪೊಲೀಸರು ತಡೆದರು. ಪೊಲೀಸ್ ಇಲಾಖೆಯ ಕೇಂದ್ರ ಕಚೇರಿ, ರಾಜ್ಯ ಸಚಿವಾಲಯ ಹಾಗೂ ಬಿಜೆಪಿ ಕಚೇರಿ ಸಮೀಪ ಭಾರಿ ಸಂಖ್ಯೆಯಲ್ಲಿ ಪ್ರತಿಭಟನಕಾರರು ಜಮಾಯಿಸಿದ್ದರು. ಗುಂಪು ಚದುರಿಸಲು ಅಶ್ರುವಾಯು ಪ್ರಯೋಗಿಸಿದರು.

ವಿದ್ಯಾರ್ಥಿಗಳು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್, ರಾಜ್ಯಪಾಲ ಎಲ್. ಆಚಾರ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ರಾಜ್ಯಪಾಲರನ್ನು ಭೇಟಿಯಾದ ಬಳಿಕ ಮಾತನಾಡಿದ ವಿದ್ಯಾರ್ಥಿ ಪ್ರತಿನಿಧಿಗಳು, ಆರು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡಲು ವಿಫಲರಾದ ಡಿಜಿಪಿ ಹಾಗೂ ಭದ್ರತಾ ಸಲಹೆಗಾರರನ್ನು ತಕ್ಷಣವೇ ಹುದ್ದೆಯಿಂದ ತೆರವುಗೊಳಿಸಬೇಕು. ಗೃಹ ಇಲಾಖೆಯು ಉಸ್ತುವಾರಿ ಏಕೀಕೃತ ಕಮಾಂಡ್ ವ್ಯವಸ್ಥೆಯನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸಬೇಕು' ಎಂದು ಆಗ್ರಹಿಸಿದರು.

ಪಶ್ಚಿಮ ಇಂಫಾಲ್ ಜಿಲ್ಲೆಯ ಕೌಟ್ರಕ್ ಗ್ರಾಮದಲ್ಲಿ ಸೆ.1ರಂದು ರಿಮೋಟ್ ನಿಯಂತ್ರಿತ ಡ್ರೋನ್ ದಾಳಿಯಿಂದ ಇಬ್ಬರು ಮೃತಪಟ್ಟು, 9 ಮಂದಿ ಗಾಯಗೊಂಡಿದ್ದರು. ಮರುದಿನ ಸೆಂಜಮ್ ಚಿರಾಂಗ್ ಗ್ರಾಮದಲ್ಲಿ ಮತ್ತೆ ಡ್ರೋನ್ ಮೂಲಕ ದಾಳಿ ನಡೆದಿದ್ದರಿಂದ ಮೂವರು ಗಾಯಗೊಂಡಿದ್ದರು.

ಇಂಫಾಲ್‌ನಲ್ಲಿ ಸೋಮವಾರ ಮಣಿಪುರ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು ಕೇಂದ್ರಿಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ವಾಹನದ ಮೇಲೆ ದಾಳಿ ನಡೆಸಿದರು –ಪಿಟಿಐ ಚಿತ್ರ

'ಮಣಿಪುರ ಸಿ.ಎಂ ವಜಾಗೊಳಿಸಿ'

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಹಿಂಸಾಚಾರ ಮತ್ತೆ ಭುಗಿಲೆದ್ದಿರುವ ಬೆನ್ನಲ್ಲೇ ವಿರೋಧ ಪಕ್ಷವಾದ ಕಾಂಗ್ರೆಸ್ ಕಿಡಿಕಾರಿದ್ದು, ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರನ್ನು ಕೂಡಲೇ ವಜಾಗೊಳಿಸಿ, ರಾಜ್ಯದಲ್ಲಿ ಉಂಟಾಗಿರುವ ಸೂಕ್ಷ್ಮ ಭದ್ರತಾ ಪರಿಸ್ಥಿತಿಯ ಹೊಣೆಯನ್ನು ಕೇಂದ್ರ ಸರ್ಕಾರವೇ ಹೊರಬೇಕು ಎಂದು ಒತ್ತಾಯಿಸಿದೆ.

ಹಿಂಸಾಪೀಡಿತ ಮಣಿಪುರ ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಏಕೆ ಭೇಟಿ ನೀಡುತ್ತಿಲ್ಲ ಎಂದು ಅಲ್ಲಿನ ಜನರು ಪ್ರಶ್ನೆ ಮಾಡುತ್ತಿದ್ದಾರೆ..?

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಸುಪ್ರೀಂಕೋರ್ಟ್ ಆದೇಶದಂತೆ 'ಮಣಿಪುರ ತನಿಖಾ ಆಯೋಗ'ವು ಹಿಂಸಾಚಾರಕ್ಕೆ ಕಾರಣವಾದ ವಿಚಾರಣೆಯನ್ನು ತ್ವರಿತಗೊಳಿಸಬೇಕು ಎಂದು ಈ ವೇಳೆ ಕಾಂಗ್ರೆಸ್ ಆಗ್ರಹಿಸಿದೆ.

'ಮಣಿಪುರದ ಪರಿಸ್ಥಿತಿ ನಿಯಂತ್ರಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವೈಫಲ್ಯವನ್ನು ಕ್ಷಮಿಸಲು ಸಾಧ್ಯವಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಎಕ್ಸ್'ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ಕುರಿತಂತೆ ಅಲ್ಲಿನ ಮಾಜಿ ರಾಜ್ಯಪಾಲೆ ಅನುಸೂಯ ಊಕೆಜಿ ಕೂಡ ಧ್ವನಿ ಎತ್ತಿದ್ದಾರೆ. ರಾಜ್ಯದಲ್ಲಿನ ಹಿಂಸೆಯಿಂದ ಜನರು ತುಂಬಾ ಶೋಕದಲ್ಲಿದ್ದು, ಪ್ರಧಾನಿ ನರೇಂದ್ರ ಮೋದಿ ಅಲ್ಲಿಗೆ ಭೇಟಿ ನೀಡಬೇಕು ಎಂದು ಬಯಸುತ್ತಿದ್ದಾರೆ' ಎಂದು ಅವರ ಹೇಳಿಕೆಯನ್ನು ಖರ್ಗೆ ಅವರು ಉಲ್ಲೇಖಿಸಿದ್ದಾರೆ.

ಗಣೇಶ ಪೆಂಡಾಲ್‌ಗೆ ಕಲ್ಲು: 28 ಜನರ ಸೆರೆ

ಪ್ರಜಾವಾಣಿ ವಾರ್ತೆ/ಪಿಟಿಐ

ಅಹಮದಾಬಾದ್ / ಸೂರತ್: ಸೂರತ್‌ನಲ್ಲಿ ಭಾನುವಾರ ತಡರಾತ್ರಿ ಎರಡು ಸಮುದಾಯಗಳ ನಡುವೆ ಗಲಭೆಗೆ ಕಾರಣವಾದ, ಗಣೇಶ ಪೆಂಡಾಲ್ ಮೇಲೆ ಕಲ್ಲು ತೂರಾಟ ನಡೆಸಿದ ಆರೋಪದ ಮೇಲೆ 28 ಜನರನ್ನು ಬಂಧಿಸಲಾಗಿದೆ.

ಇದರ ಬೆನ್ನಿಗೆ ಒತ್ತುವರಿ ಭೂಮಿಯಲ್ಲಿ ನಿರ್ಮಿಸಲಾಗಿದೆ ಎಂದು ಆರೋಪಿಸಿರುವ ಹಲವು ವಾಣಿಜ್ಯ ಮಳಿಗೆಗಳನ್ನು ಸ್ಥಳೀಯ ಸಂಸ್ಥೆ ಆಡಳಿತವು ಸೋಮವಾರ ನೆಲಸಮಗೊಳಿಸಿದೆ.

ಸೂರತ್‌ನ ಸೈಯದ್‌ಪುರ ಪ್ರದೇಶದಲ್ಲಿನ ಗಣೇಶ ಪೆಂಡಾಲ್‌ವೊಂದಕ್ಕೆ ಭಾನುವಾರ ತಡರಾತ್ರಿ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಮೂರ್ತಿಗೆ ಹಾನಿಯಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಕಾನೂನಿನ ಸಂಘರ್ಷಕ್ಕೆ ಒಳಗಾದ ಆರು ಬಾಲಕರನ್ನು ಪೊಲೀಸರು ಬಂಧಿಸಿದ ನಂತರ, ಸುಮಾರು 300ರಿಂದ 400 ಜನರಿದ್ದ ಗುಂಪು ತಮ್ಮ ಸಮುದಾಯದ ಸದಸ್ಯರ ವಿರುದ್ಧದ ಕ್ರಮವನ್ನು ಪ್ರತಿಭಟಿಸಲು ಲಾಲ್‌ಗೇಟ್ ಪೊಲೀಸ್ ಠಾಣೆ ಮುಂಭಾಗ ಜಮಾಯಿಸಿತು.

ಈ ವೇಳೆ ಎರಡು ಗುಂಪುಗಳು ಪರಸ್ಪರ ಕಲ್ಲು ತೂರಾಟ ನಡೆಸಿದ್ದು, ಪೊಲೀಸರು ಗಾಯಗೊಂಡಿದ್ದಾರೆ. ವಾಹನಕ್ಕೆ ಹಾನಿಯಾಗಿದೆ. ಉದ್ರಿಕ್ತ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಬೀಸಿ, ಅಶ್ರುವಾಯು ಪ್ರಯೋಗಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ 2 ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ. ಕಾನೂನಿನ ಸಂಘರ್ಷಕ್ಕೆ ಒಳಗಾದ ಬಾಲಕರ ಪೋಷಕರನ್ನು ವಿಚಾರಣೆಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ಸೂರತ್ ಪೊಲೀಸ್ ಆಯುಕ್ತ ಅನುಪಮ್ ಸಿಂಗ್ ಗೆಹಲೋತ್ ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಪ್ರಯಾಗ್‌ರಾಜ್‌ನಿಂದ ಭಿವಾನೀಗೆ ಹೊರಟಿದ್ದ ಕಲಿಂದಿ ಎಕ್ಸ್‌ಪ್ರೆಸ್

ಹಳಿ ಮೇಲೆ ಸಿಲಿಂಡರ್: ತಪ್ಪಿದ ಅನಾಹುತ

ಕಾನ್ಪುರ (ಪಿಟಿಐ): ಹಳಿಯ ಮೇಲೆ ಇರಿಸಲಾಗಿದ್ದ ಎಲ್‌ಪಿಜಿ ಸಿಲಿಂಡರ್‌ಗೆ ಕಲಿಂದಿ ಎಕ್ಸ್‌ಪ್ರೆಸ್ ಭಾನುವಾರ ರಾತ್ರಿ 8.20ರ ಸುಮಾರಿಗೆ ಡಿಕ್ಕಿ ಹೊಡೆದಿದೆ. ಆದರೆ, ಲೊಕೊಪೈಲಟ್‌ನ ಸಮಯಪ್ರಜ್ಞೆಯಿಂದಾಗಿ ದೊಡ್ಡ ಅನಾಹುತವೊಂದು ತಪ್ಪಿದೆ.

'ಸಿಲಿಂಡರ್ ಜೊತೆಯಲ್ಲಿ ಪೆಟ್ರೋಲ್ ತುಂಬಿದ ಬಾಟಲಿ, ಬೆಂಕಿಪೊಟ್ಟಣ ಹಾಗೂ ಸಿಹಿತಿಂಡಿಗಳಿದ್ದ ಬಾಕ್ಸ್ ಕೂಡ ಪತ್ತೆಯಾಗಿದೆ. ದೇಶದಲ್ಲಿ ಇಂಥದ್ದೊಂದು ದುರಂತ ಸಂಭವಿಸಿ, ರಾಜಕೀಯವಾಗಿ ಲಾಭ ಪಡೆಯಲು ಹಾಗೂ ವಿವಾದ ಎಬ್ಬಿಸಲೆಂದೇ ಕೃತ್ಯ ಎಸಗಲಾಗಿದೆ' ಎಂದು ಶಂಕಿಸಿ ಪೊಲೀಸರು ಸೋಮವಾರ ಘಟನೆ ಮಾಹಿತಿ ನೀಡಿದರು.

'ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಿಂದ ಹರಿಯಾಣದ ಭಿವಾನೀ ಜಿಲ್ಲೆಗೆ ಕಲಿಂದಿ ಎಕ್ಸ್‌ಪ್ರೆಸ್ ಹೊರಟಿತ್ತು. ಇಲ್ಲಿನ ಶಿವರಾಜ್‌ಪುರ ಪ್ರದೇಶದಲ್ಲಿ ಸಿಲಿಂಡರ್ ಇರಿಸಲಾಗಿತ್ತು. ವೇಗವಾಗಿ ಸಂಚರಿಸುತ್ತಿದ್ದ ರೈಲು ಸಿಲಿಂಡರ್‌ಗೆ ಡಿಕ್ಕಿ ಹೊಡೆದಿದೆ. ಆದರೆ, ಲೊಕೊಪೈಲಟ್ ತಕ್ಷಣವೇ ತುರ್ತುಬ್ರೇಕ್ ಹಾಕಿದ್ದರಿಂದ ಅನಾಹುತ ತಪ್ಪಿತು' ಎಂದರು.

ರೈಲು ಡಿಕ್ಕಿ ಹೊಡೆದ ಪರಿಣಾಮ ದೂರದಲ್ಲಿ ಬಿದ್ದಿದ್ದ ಸಿಲಿಂಡರ್ ಅನ್ನು ಪೊಲೀಸರು, ಅಗ್ನಿ ಶಾಮಕ ದಳದ ಸಿಬ್ಬಂದಿ ಭಾನುವಾರ ಪರಿಶೀಲಿಸಿದರು –ಪಿಟಿಐ ಚಿತ್ರ

'ಡಿಕ್ಕಿ ಹೊಡೆದ ಪರಿಣಾಮ, ಸಿಲಿಂಡರ್ ಹಳಿಯಿಂದ ದೂರ ಹೋಗಿ ಬಿದ್ದಿತ್ತು. ಈ ಬಗ್ಗೆ ಲೊಕೊಪೈಲಟ್ ಮಾಹಿತಿ ನೀಡಿದರು. ತಕ್ಷಣವೇ ರೈಲ್ವೆ ಸುರಕ್ಷತಾ ಪಡೆ (ಆರ್‌ಪಿಎಫ್) ಘಟನಾ ಸ್ಥಳಕ್ಕೆ ಧಾವಿಸಿತು. ಹಾನಿಗೊಳಗಾದ ಸಿಲಿಂಡರ್ ಅನ್ನು ಪತ್ತೆ ಹಚ್ಚಲಾಗಿದೆ. ವಿಧಿವಿಜ್ಞಾನ ತಂಡ ರಾತ್ರಿಯೇ ಶಿವರಾಜ್‌ಪುರ ತಲುಪಿತು' ಎಂದು ಉಪ ಪೊಲೀಸ್ ಆಯುಕ್ತ (ಪಶ್ಚಿಮ) ರಾಜೇಶ್ ಕುಮಾರ್ ಸಿಂಗ್ ವಿವರಿಸಿದರು.

ರೈಲ್ವೆ ಇಲಾಖೆಯಿಂದ ದೂರು: ಘಟನೆ ಸಂಬಂಧ ರೈಲ್ವೆ ಇಲಾಖೆಯು ಶಿವರಾಜ್‌ಪುರ ಠಾಣೆಯಲ್ಲಿ ದೂರು ದಾಖಲಿಸಿದೆ. ರೈಲನ್ನು ಹಳಿತಪ್ಪಿಸುವ ಉದ್ದೇಶದಿಂದಲೇ ಹಳಿಯ ಮೇಲೆ ಸಿಲಿಂಡರ್, ಪೆಟ್ರೋಲ್ ತುಂಬಿದ ಬಾಟಲಿ ಹಾಗೂ ಬೆಂಕಿಪೊಟ್ಟಣಗಳನ್ನು ಇರಿಸಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ಸ್ಫೋಟಕ ಕಾಯ್ದೆ ಹಾಗೂ ರೈಲ್ವೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆಗೆ ಐದು ತಂಡಗಳನ್ನು ಸರ್ಕಾರ ರಚಿಸಿದೆ.

ಭಯೋತ್ಪಾದಕ ಕೃತ್ಯ ಶಂಕೆ

'ಹಳಿ ಮೇಲೆ ಸಿಲಿಂಡರ್ ಇರಿಸಿದ್ದು ಹಾಗೂ ಕೆಲವು ಅನುಮಾನಾಸ್ಪದ ವಸ್ತುಗಳು ದೊರೆತ ಕಾರಣ, ಉತ್ತರ ಪ್ರದೇಶದ ಭಯೋತ್ಪಾದನೆ ನಿಗ್ರಹ ತಂಡವು ತನಿಖೆ ಆರಂಭಿಸಿದೆ' ಎಂದು ಪೊಲೀಸರು ತಿಳಿಸಿದರು.

'ಘಟನೆ ನಡೆದ ಹತ್ತಿರದಲ್ಲಿ ಎಲ್ಲಿಯಾದರೂ ಇಸ್ಲಾಂ ಧಾರ್ಮಿಕ ಸಮಾವೇಶ ನಡೆದಿತ್ತೆ ಎನ್ನುವ ಕುರಿತೂ ತನಿಖೆ ನಡೆಸಬೇಕು. ಜೊತೆಗೆ, ಸಮಾವೇಶದಲ್ಲಿ ಭಾಗವಹಿಸಿದವರನ್ನೂ ತನಿಖೆಗೆ ಒಳಪಡಿಸಬೇಕು ಎಂದು ನಿರ್ಧರಿಸಲಾಗಿದೆ' ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ಕಾನೂನು ಸುವ್ಯವಸ್ಥೆ) ಹರೀಶ್ ಚಂದ್ರ ಮಾಹಿತಿ ನೀಡಿದರು.

'ಘಟನಾ ಸ್ಥಳದಲ್ಲಿ ಸಿಹಿತಿಂಡಿಗಳಿದ್ದ ಬಾಕ್ಸ್‌ವೊಂದು ದೊರೆತಿದೆ. ಇದನ್ನು ಕನೌಜ್‌ನ ಸಿಯಾರಾಮ್ ಸ್ವೀಟ್ಸ್‌ನಿಂದ ಖರೀದಿಸಲಾಗಿದೆ. ಈ ಬಾಕ್ಸ್‌ನ ಮೂಲ ಪತ್ತೆ ಹಚ್ಚಿದ್ದಲ್ಲಿ, ತಪ್ಪಿತಸ್ಥರು ಸಿಕ್ಕಿಬೀಳಬಹುದು' ಎಂದರು.

'ಪ್ರೀತಿಯ ಅಂಗಡಿ' ತೆರೆಯುವವರು 'ದ್ವೇಷದ ಮಾರುಕಟ್ಟೆ' ತೆರೆದಿದ್ದಾರೆ'

ಅಧಿಕಾರದ ಲಾಲಸೆಯಿಂದಾಗಿ ಕೆಲವರು ಹಾಗೂ ಕೆಲವು ಸಂಘಟನೆಗಳು ದೇಶದಲ್ಲಿ ಗಲಭೆ ಹಾಗೂ ಅರಾಜಕತೆ ಉಂಟಾಗಲಿ ಎಂದು ಬಯಸುತ್ತಿದ್ದಾರೆ. ಹಳಿಯಲ್ಲಿ ಸಿಲಿಂಡರ್ ಇಟ್ಟು, ದುರಂತ ನಡೆಸಲು ಯತ್ನಿಸಿದವರ ಕುರಿತು ಕಠಿಣ ಕ್ರಮ ಕೈಗೊಳ್ಳಬೇಕು. 'ಪ್ರೀತಿಯ ಅಂಗಡಿ'ಯ ಕುರಿತು ಮಾತನಾಡುವವರು 'ದ್ವೇಷದ ಮಾರುಕಟ್ಟೆ'ಯನ್ನು ತೆರೆದಿದ್ದಾರೆ.

ಗೌರವ್ ಭಾಟಿಯಾ, ಬಿಜೆಪಿ ವಕ್ತಾರ

ಮಂಕಿಪಾಕ್ಸ್ ಒಬ್ಬರಿಗೆ ದೃಢ

ನವದೆಹಲಿ (ಪಿಟಿಐ): ಮಂಕಿಪಾಕ್ಸ್ ಪ್ರಸರಣವಿರುವ ದೇಶಕ್ಕೆ ಪ್ರಯಾಣ ಬೆಳೆಸಿದ್ದ ವ್ಯಕ್ತಿಯೊಬ್ಬರಿಗೆ ಮಂಕಿಪಾಕ್ಸ್ ಇರುವುದು ಪರೀಕ್ಷೆಯಿಂದ ದೃಢಪಟ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ. ಇದು 'ಪ್ರತ್ಯೇಕ ಪ್ರಕರಣ'ವಾಗಿದ್ದು, ಸಾರ್ವಜನಿಕರಿಗೆ ತಕ್ಷಣದ ಅಪಾಯವಿಲ್ಲ ಎಂದು ಸಚಿವಾಲಯ ಹೇಳಿದೆ.

ಮಂಕಿಪಾಕ್ಸ್ ದೃಢಪಟ್ಟಿರುವ 26 ವರ್ಷದ ವ್ಯಕ್ತಿ ಹರಿಯಾಣದ ಹಿಸಾರ್‌ನ ನಿವಾಸಿಯಾಗಿದ್ದು, ದೆಹಲಿಯ ಎಲ್‌ಎನ್‌ಜೆಪಿ ಆಸ್ಪತ್ರೆಗೆ ಶನಿವಾರ ದಾಖಲಾಗಿದ್ದಾರೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಮೂಲಗಳು ತಿಳಿಸಿವೆ. ಪ್ರಯೋಗಾಲಯದ ಪರೀಕ್ಷೆಯು ರೋಗಿಯಲ್ಲಿ ಪಶ್ಚಿಮ ಆಫ್ರಿಕಾದ 'ಕ್ಲಾಡ್–2 ಪಾಕ್ಸ್' ವೈರಸ್ ಇರುವುದನ್ನು ದೃಢಪಡಿಸಿದೆ.

2022ರ ಜುಲೈನಿಂದ ಭಾರತದಲ್ಲಿ ವರದಿಯಾಗಿರುವ 30 ಪ್ರಕರಣಗಳ ರೀತಿಯಲ್ಲಿ ಇದು ಪ್ರತ್ಯೇಕ ಪ್ರಕರಣವಾಗಿದೆ. ವಿಶ್ವ ಆರೋಗ್ಯ ಸಂಘಟನೆಯು ಮಂಕಿಪಾಕ್ಸ್ ಕ್ಲಾಡ್–1ಗೆ ಸಂಬಂಧಿಸಿದಂತೆ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ ಘೋಷಿಸಿದೆ ಎಂದು ಸಚಿವಾಲಯ ಹೇಳಿದೆ.

ರಾಜ್ಯಗಳಿಗೆ ಕೇಂದ್ರದ ಸಲಹೆ

ಮಂಕಿಪಾಕ್ಸ್ (ಎಂಪಾಕ್ಸ್) ಶಂಕಿತ ಪ್ರಕರಣಗಳನ್ನು ಪರೀಕ್ಷೆಗೆ ಒಳಪಡಿಸುವಂತೆ ಕೇಂದ್ರ ಸರ್ಕಾರವು ಸೋಮವಾರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸಲಹೆ ನೀಡಿದೆ.

ಹಾಗೆಯೇ, ಆಸ್ಪತ್ರೆಗಳಲ್ಲಿ ಶಂಕಿತ ರೋಗಿಗಳು ಮತ್ತು ಸೋಂಕು ದೃಢಪಟ್ಟ ರೋಗಿಗಳ ಪ್ರತ್ಯೇಕ ವಾಸಕ್ಕೆ ಮೀಸಲಿರುವ ಸೌಲಭ್ಯಗಳನ್ನು ಪರಿಶೀಲಿಸಲು ಸೂಚಿಸಿದೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ ಅವರು ಈ ಸಂಬಂಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದು, ಜನರಲ್ಲಿ ಉದ್ಭವವಾಗಿರುವ ಅನಗತ್ಯ ಆತಂಕವನ್ನು ನಿವಾರಣೆ ಮಾಡುವಂತೆ ಕೋರಿದ್ದಾರೆ.

ದೇಶದಲ್ಲಿ ಮಂಕಿಪಾಕ್ಸ್‌ನ ಸ್ಥಿತಿಗತಿಯ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಗಮನ ಇರಿಸಿದೆ ಎಂದು ತಿಳಿಸಿದ್ದಾರೆ.

240 ಎಂಜಿನ್: ಎಚ್‌ಎಎಲ್ ಜೊತೆ ಒಪ್ಪಂದ

ನವದೆಹಲಿ (ಪಿಟಿಐ): ಸು–30ಎಂಕೆಐ ಯುದ್ಧ ವಿಮಾನಗಳಿಗೆ 240 ಎಂಜಿನ್‌ಗಳ ಖರೀದಿಗೆ ರಕ್ಷಣಾ ಸಚಿವಾಲಯವು ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಂಪನಿಯ ಜೊತೆ ₹26 ಸಾವಿರ ಕೋಟಿ ಮೊತ್ತದ ಒಪ್ಪಂದಕ್ಕೆ ಸಹಿ ಹಾಕಿದೆ.

ಈ ಎಂಜಿನ್‌ಗಳನ್ನು ಎಚ್‌ಎಎಲ್‌ನ ಕೋರಾಪುಟ್ ವಿಭಾಗವು ತಯಾರಿಸಲಿದೆ. ಈ ಎಂಜಿನ್‌ಗಳು ಸು–30 ಯುದ್ಧ ವಿಮಾನಗಳನ್ನು ಕಾರ್ಯಾಚರಣೆಯ ಸ್ಥಿತಿಯಲ್ಲಿ ಮುಂದುವರಿಸಲು ನೆರವಾಗುವ ನಿರೀಕ್ಷೆ ಇದೆ. ಈ ಒಪ್ಪಂದವು ಆತ್ಮನಿರ್ಭರ ಭಾರತ ಉಪಕ್ರಮಕ್ಕೆ ದೊಡ್ಡ ಬಲ ನೀಡಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಒಪ್ಪಂದದ ಪ್ರಕಾರ ಎಚ್‌ಎಎಲ್ ಪ್ರತಿ ವರ್ಷ 30 ಎಂಜಿನ್‌ಗಳನ್ನು ಪೂರೈಸಲಿದೆ. 240 ಎಂಜಿನ್‌ಗಳನ್ನು ಒಟ್ಟು ಎಂಟು ವರ್ಷಗಳಲ್ಲಿ ಪೂರೈಸಲಾಗುತ್ತದೆ ಎಂದು ಸಚಿವಾಲಯವು ತಿಳಿಸಿದೆ. ಎಂಜಿನ್‌ಗಳ ತಯಾರಿಕೆಯ ವೇಳೆ ಎಚ್‌ಎಎಲ್ ಕಂಪನಿಯು, ಎಂಎಸ್‌ಎಂಇ ವಲಯದ ಉದ್ದಿಮೆಗಳ, ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ವಲಯದ ಉದ್ದಿಮೆಗಳ ನೆರವನ್ನು ಪಡೆಯುವ ಆಲೋಚನೆ ಹೊಂದಿದೆ ಎಂದು ಅದು ಹೇಳಿದೆ.

ಸುಭಾಷಿತ

ಅನ್ಯಾಯವನ್ನು ಸಹಿಸಿಕೊಳ್ಳುವುದು ಮತ್ತು ತಪ್ಪಿನೊಂದಿಗೆ ರಾಜಿ ಮಾಡಿಕೊಳ್ಳುವುದು ಬಹುದೊಡ್ಡ ಅಪರಾಧಗಳು.

–ನೇತಾಜಿ ಸುಭಾಷ್‌ಚಂದ್ರ ಬೋಸ್

ಹದಿನಾರನೇ ಹಣಕಾಸು ಆಯೋಗ ರಾಜ್ಯಗಳ ಬೇಡಿಕೆಗೆ ಧ್ವನಿಯಾಗಲಿ

ಕೇಂದ್ರ ಸರ್ಕಾರವು 16ನೇ ಹಣಕಾಸು ಆಯೋಗವನ್ನು ರಚಿಸಿದ ಬೆನ್ನಲ್ಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ವಿತ್ತೀಯ ಅಧಿಕಾರಗಳು ಹಾಗೂ ಹಕ್ಕುಗಳು, ಸಂಪನ್ಮೂಲದ ಹಂಚಿಕೆ, ವಿತ್ತೀಯ ಒಕ್ಕೂಟ ವ್ಯವಸ್ಥೆ ಸೇರಿದಂತೆ ಹಲವು ವಿಷಯಗಳು ಚರ್ಚೆಯ ಮುನ್ನೆಲೆಗೆ ಬಂದಿವೆ. 2026ರ ಏಪ್ರಿಲ್‌ನಿಂದ ಐದು ವರ್ಷಗಳ ಅವಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಧ್ಯೆ ವರಮಾನದ ಹಂಚಿಕೆಯ ಮಾರ್ಗಸೂಚಿಗಳನ್ನು ಆಯೋಗವು ಅಂತಿಮಗೊಳಿಸಲಿದೆ. ಆಯೋಗವು ರಾಜ್ಯ ಸರ್ಕಾರಗಳ ಜತೆ ಈ ಸಂಬಂಧ ಚರ್ಚೆಯನ್ನೂ ಆರಂಭಿಸಿದೆ. ತೆರಿಗೆ ವರಮಾನದಲ್ಲಿ ನ್ಯಾಯಯುತ ಪಾಲು ನೀಡುವಂತೆ ಬೇಡಿಕೆ ಮಂಡಿಸಿರುವ ಕೆಲವು ರಾಜ್ಯಗಳು ಕೇಂದ್ರದ ಜತೆ ಸಂಘರ್ಷಕ್ಕೆ ಮುಂದಾಗಿರುವುದು, ಬದಲಾಗುತ್ತಿರುವ ಆರ್ಥಿಕ ಚಿತ್ರಣ, ಆರ್ಥಿಕವಾಗಿ ಸಮಪಾಲು ನೀಡಬೇಕೆಂಬ ಬೇಡಿಕೆ ಹಾಗೂ ವಿತ್ತೀಯ ನ್ಯಾಯದ ಕುರಿತು ಹೊಸ ಹೊಸ ವ್ಯಾಖ್ಯಾನಗಳು ಬರುತ್ತಿರುವುದರಿಂದ ಆಯೋಗದ ಮುಂದೆ ಹಲವು ಸವಾಲುಗಳು ಇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ವಿವಿಧ ರಾಜ್ಯಗಳ ನಡುವಿನ ವಿತ್ತೀಯ ಸಂಬಂಧಗಳ ವಿಚಾರದಲ್ಲಿ ಈಗ ರಾಜಕಾರಣವೂ ನುಸುಳಿಕೊಂಡಿರುವುದರಿಂದ ಆಯೋಗದ ಕೆಲಸವು ತುಸು ಜಟಿಲವಾಗುವ ಸಾಧ್ಯತೆ ಇದೆ. ರಾಜಕೀಯ ಒಕ್ಕೂಟ ವ್ಯವಸ್ಥೆ ಮತ್ತು ವಿತ್ತೀಯ ಒಕ್ಕೂಟ ವ್ಯವಸ್ಥೆಯು ಒಂದರೊಳಗೆ ಮತ್ತೊಂದು ನಿಕಟವಾಗಿ ಬೆಸೆದುಕೊಂಡಿವೆ. ಹೀಗಾಗಿ ಆಯೋಗವು ಅತ್ಯಂತ ಕಠಿಣವಾದ ಮಾರ್ಗದಲ್ಲಿ ಸಾಗಬೇಕಾದ ಪರಿಸ್ಥಿತಿ ಇದೆ.

ರಾಜ್ಯದ ನ್ಯಾಯಯುತ ಬೇಡಿಕೆಯನ್ನು ಆಲಿಸಿ, ಅದನ್ನು ಈಡೇರಿಸುವ ದಿಸೆಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಾದ ಹೊಣೆಗಾರಿಕೆ 16ನೇ ಹಣಕಾಸು ಆಯೋಗದ ಮೇಲಿದೆ

16ನೇ ಹಣಕಾಸು ಆಯೋಗವು ಕರ್ನಾಟಕದಲ್ಲಿ ಇತ್ತೀಚೆಗೆ ನಡೆಸಿದ ಚರ್ಚೆಗಳನ್ನೂ ಇದೇ ದೃಷ್ಟಿಕೋನದಲ್ಲಿ ನೋಡಬೇಕಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಕೆಯಾಗುವ ತೆರಿಗೆ ವರಮಾನದ ನಿಧಿಗೆ ರಾಜ್ಯವು ಸಂದಾಯ ಮಾಡುತ್ತಿರುವ ಮೊತ್ತದಲ್ಲಿ ಶೇಕಡ 60ರಷ್ಟನ್ನು ರಾಜ್ಯವೇ ಪಡೆದುಕೊಳ್ಳಲು ಅವಕಾಶ ನೀಡಬೇಕು ಎಂಬ ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯೋಗಕ್ಕೆ ಸಲ್ಲಿಸಿರುವ ಮನವಿಯಲ್ಲಿ ಮಂಡಿಸಲಾಗಿದೆ. ದೇಶದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಶೇ 5ರಷ್ಟು ಜನರನ್ನು ಹೊಂದಿರುವ ಕರ್ನಾಟಕವು ಭಾರತದ ನಿವ್ವಳ ಆಂತರಿಕ ಉತ್ಪನ್ನಕ್ಕೆ ಶೇ 8.4ರಷ್ಟು ಕೊಡುಗೆ ನೀಡುತ್ತಿದೆ. ರಾಜ್ಯವು ಪಾವತಿಸುವ ಪ್ರತಿ ರೂಪಾಯಿ ತೆರಿಗೆಯಲ್ಲಿ 15 ಪೈಸೆಯಷ್ಟು ಮಾತ್ರ ರಾಜ್ಯಕ್ಕೆ ತೆರಿಗೆ ವರಮಾನ ಹಂಚಿಕೆ ರೂಪದಲ್ಲಿ ಬರುತ್ತಿದೆ ಎಂಬುದನ್ನು ಆಧರಿಸಿ ಮುಖ್ಯಮಂತ್ರಿಯವರು ತೆರಿಗೆ ವರಮಾನದ ನ್ಯಾಯಯುತ ಹಂಚಿಕೆಗೆ ಪಟ್ಟು ಹಿಡಿದಿದ್ದಾರೆ. ತೆರಿಗೆ ಪಾಲಿನ ಹಂಚಿಕೆಯ ಸೂತ್ರದಲ್ಲಿನ ಬದಲಾವಣೆಯಿಂದಾಗಿ ‘ಹಂಚಿಕೆಯಾಗಬಹುದಾದ ತೆರಿಗೆ ನಿಧಿ’ಯಿಂದ ರಾಜ್ಯಕ್ಕೆ ಬರುತ್ತಿರುವ ಪಾಲು ನಿರಂತರವಾಗಿ ಇಳಿಕೆಯಾಗುತ್ತಿದೆ ಮತ್ತು ಹೆಚ್ಚಿನ ಮೊತ್ತವು ಬೇರೆ ರಾಜ್ಯಗಳಿಗೆ ಹೋಗುತ್ತಿದೆ ಎಂಬುದನ್ನು ಅಂಕಿಅಂಶಗಳು ಹೇಳುತ್ತವೆ. ಬೆಂಗಳೂರು ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ಹಾಗೂ ಪಶ್ಚಿಮ ಘಟ್ಟಗಳಲ್ಲಿ ನೈಸರ್ಗಿಕ ವಿಕೋಪ ತಡೆಗೆ ನಿರ್ವಹಣಾ ಕೆಲಸಗಳನ್ನು ಕೈಗೊಳ್ಳಲು ವಿಶೇಷ ಅನುದಾನ ಒದಗಿಸುವಂತೆ ರಾಜ್ಯ ಸರ್ಕಾರವು 16ನೇ ಹಣಕಾಸು ಆಯೋಗವನ್ನು ಕೋರಿದೆ. ಬೆಂಗಳೂರಿನಂತಹ ದೊಡ್ಡ ನಗರಗಳನ್ನು ಹೊರಗಿಟ್ಟು ರಾಜ್ಯಗಳಲ್ಲಿನ ತಲಾ ಆದಾಯವನ್ನು ಲೆಕ್ಕ ಹಾಕುವಂತೆಯೂ ಮುಖ್ಯಮಂತ್ರಿ ಆಗ್ರಹಿಸಿದ್ದಾರೆ.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮ ಸಾಧನೆ ತೋರುತ್ತಿರುವುದಕ್ಕಾಗಿಯೇ ತೆರಿಗೆ ಪಾಲಿನ ಹಂಚಿಕೆಯಲ್ಲಿ ತಮ್ಮನ್ನು ಶಿಕ್ಷಿಸಲಾಗುತ್ತಿದೆ ಎಂಬ ಭಾವನೆ ದಕ್ಷಿಣದ ರಾಜ್ಯಗಳಲ್ಲಿದೆ. ಈ ಕಾರಣದಿಂದಾಗಿಯೇ ದಕ್ಷಿಣದ ಎಲ್ಲ ರಾಜ್ಯಗಳೂ ಏಕರೂಪದ ಬೇಡಿಕೆಗಳನ್ನು ಹೊಂದಿವೆ. ಹೆಚ್ಚು ಅಭಿವೃದ್ಧಿ ಹೊಂದಿರುವ ರಾಜ್ಯಗಳು ಅಭಿವೃದ್ಧಿಯಲ್ಲಿ ಹಿಂದುಳಿದಿರುವ ರಾಜ್ಯಗಳಿಗೆ ನೆರವಾಗಬೇಕು ಎಂಬ ‘ಸಮಾನತೆ’ಯ ಸೂತ್ರವನ್ನು ತೆರಿಗೆ ಪಾಲಿನ ಹಂಚಿಕೆಯಲ್ಲಿ ಅನುಸರಿಸಲಾಗುತ್ತಿದೆ. ಉತ್ತರ ಮತ್ತು ಪೂರ್ವ ಭಾರತದ ರಾಜ್ಯಗಳ ಕಳಪೆ ಸಾಧನೆಯ ಕಾರಣಕ್ಕೆ ತಮ್ಮ ತೆರಿಗೆ ಪಾಲು ಕಡಿತಗೊಳ್ಳುವುದು ಸರಿಯಲ್ಲ ಎಂಬ ವಾದವನ್ನು ದಕ್ಷಿಣದ ರಾಜ್ಯಗಳು ಮಂಡಿಸುತ್ತಿವೆ. ಈ ವಿಷಯದಲ್ಲಿ ಸ್ಪಷ್ಟ ನಿಲುವು ಪ್ರದರ್ಶಿಸಿರುವ ಸಿದ್ದರಾಮಯ್ಯ, ‘ನಮ್ಮ ರಾಜ್ಯಗಳ ಜನರ ಮೇಲೆ ಹೊರೆ ಹೊರಿಸಿ ಬೇರೆ ರಾಜ್ಯಗಳಿಗೆ ನೆರವು ನೀಡಲಾಗದು’ ಎಂದಿದ್ದಾರೆ. ಕೇಂದ್ರ ಸರ್ಕಾರವು ತಮ್ಮನ್ನು ತಾರತಮ್ಯದಿಂದ ನೋಡುತ್ತಿದೆ ಎಂಬ ಭಾವನೆ ದಕ್ಷಿಣದ ರಾಜ್ಯಗಳಲ್ಲಿದ್ದು, ಪಕ್ಷಪಾತದ ಧೋರಣೆಯ ವಿರುದ್ಧ ರಾಜಕೀಯ ಆಕ್ರೋಶವೂ ಬಲವಾಗುತ್ತಿದೆ. ಸಂಪನ್ಮೂಲ ಹಂಚಿಕೆಯ ವಿಚಾರದಲ್ಲಿ ಸಮತೋಲನದಿಂದ ಕೂಡಿದ ಮತ್ತು ಪಾರದರ್ಶಕವಾದ ಸ್ಪಂದನವನ್ನು ಆಯೋಗದಿಂದ ಬಯಸಿರುವುದಾಗಿ ಕರ್ನಾಟಕ ಹೇಳಿದೆ. ಭಿನ್ನಾಭಿಪ್ರಾಯಗಳಿಗೆ ಅವಕಾಶ ಕಲ್ಪಿಸುವಂತಹ ನಿರ್ಧಾರಗಳನ್ನು ತಾನು ಕೈಗೊಳ್ಳುವುದಿಲ್ಲ ಎಂದು ಆಯೋಗ ಹೇಳಿದೆ. ರಾಜ್ಯದ ನ್ಯಾಯಯುತ ಬೇಡಿಕೆಯನ್ನು ಆಲಿಸಿ, ಅದನ್ನು ಈಡೇರಿಸುವ ದಿಸೆಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಾದ ಹೊಣೆಗಾರಿಕೆ 16ನೇ ಹಣಕಾಸು ಆಯೋಗದ ಮೇಲಿದೆ.

ಆರ್ಥಿಕ ಸಮಾನತೆ ಕುರಿತ ಚರ್ಚೆಗೆ ಸಾಮಾಜಿಕ ಆಯಾಮವೂ ಸಿಗುವಂತೆ ಆಗಬೇಕು

ಅಸಮಾನತೆಯ ತಕ್ಕಡಿ ಹೇಳುವುದೇನು?

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಅಸಮಾನತೆ ಎಂಬುದು ದೊಡ್ಡ ಸಮಸ್ಯೆ ಎಂದು ಎಲ್ಲರೂ ಮಾತನಾಡುತ್ತಲೇ ಇದ್ದಾರೆ. ಆದರೂ ಅಸಮಾನತೆಯ ಪ್ರಮಾಣ ಏರುತ್ತಲೇ ಇದೆ. 1900ರಿಂದ ಈಚೆಗಿನ ಯಾವ ಕಾಲದಲ್ಲಿಯೂ ಅದು ಈಗಿರುವಷ್ಟು ಪ್ರಮಾಣದಲ್ಲಿ ಇರಲಿಲ್ಲ ಎಂದು ಹೇಳಲಾಗುತ್ತದೆ. ಅಸಮಾನತೆಯು ಎರಡನೇ ಮಹಾಯುದ್ಧದ ನಂತರ 1980ರವರೆಗೂ ಕಡಿಮೆಯಾಗುತ್ತಾ ಬಂದಿತ್ತು. ಆದರೆ ಅಲ್ಲಿಂದ ಮುಂದಕ್ಕೆ ಏರುತ್ತಾ ಹೋಗಿ ಅದು ಈವರೆಗಿನ ಗರಿಷ್ಠ ಮಟ್ಟ ಮುಟ್ಟಿದೆ.

ಅದಕ್ಕೆ ಕಾರಣ ಏನು? ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಅವರು ಇದಕ್ಕೆ ಉತ್ತರಿಸುತ್ತಾ, ಆ ಅವಧಿಯಲ್ಲಿ ಆದ ಬೆಳವಣಿಗೆಯನ್ನು ಗಮನಿಸುತ್ತಾರೆ. ಆಗ ಚೀನಾವು ಮುಕ್ತ ಮಾರುಕಟ್ಟೆಯನ್ನು ಒಪ್ಪಿಕೊಂಡಿತ್ತು. ಅಮೆರಿಕ ಹಾಗೂ ಬ್ರಿಟನ್‌ನಲ್ಲಿ ಆಡಳಿತಕ್ಕೆ ಬಂದ ರೊನಾಲ್ಡ್ ರೇಗನ್ ಮತ್ತು ಮಾರ್ಗರೇಟ್ ಥ್ಯಾಚರ್, ಶ್ರೀಮಂತರಿಗೆ ವಿಧಿಸುತ್ತಿದ್ದ ತೆರಿಗೆಯನ್ನು ದಿಢೀರನೆ ಇಳಿಸಿಬಿಟ್ಟರು. ಅಮೆರಿಕದಲ್ಲಿ ಅದು ಶೇಕಡ 70ರಷ್ಟು ಇದ್ದದ್ದು ಶೇ 40ಕ್ಕೆ ಇಳಿಯಿತು. ಅಷ್ಟೇ ಅಲ್ಲ, ಆರ್ಥಿಕ ಬೆಳವಣಿಗೆ ಆಗಬೇಕಾದರೆ ಅಸಮಾನತೆ ಅನಿವಾರ್ಯ ಮತ್ತು ಆರ್ಥಿಕತೆ ಬೆಳೆದಂತೆ ಅದರ ಫಲ ಎಲ್ಲರಿಗೂ ಹರಿದುಹೋಗುತ್ತದೆ ಅನ್ನುವುದು ಆಗಿನ ನಂಬಿಕೆಯಾಗಿತ್ತು. ಹಾಗಾಗಿ, ಅಸಮಾನತೆಗೆ ಒಂದು ಸಮರ್ಥನೆ ಸಿಕ್ಕಿಬಿಟ್ಟಿತು.

ಉದ್ದಿಮೆಗಳ ಸಿಇಒ ಸಂಬಳ ನೂರು ಪಟ್ಟು ಹೆಚ್ಚಾಯಿತು. ಅವರಿಂದ ಉದ್ದಿಮೆಗಳಲ್ಲಿ ಉತ್ಪಾದನೆಯ ಪ್ರಮಾಣ ಹೆಚ್ಚಾಯಿತು. ಅದಕ್ಕೆ ಸರಿಯಾಗಿ ಅವರಿಗೆ ವೇತನ ಕೊಡಬೇಕು ಎಂಬ ಒಮ್ಮತ ಬೆಳೆಯಿತು. ಈ ಪ್ರಕ್ರಿಯೆಯಲ್ಲಿ ಕೆಲಸಗಾರರ ಕೂಲಿ ಕನಿಷ್ಠವಾಯಿತು.

ಅಭಿಜಿತ್, ಮತ್ತೊಬ್ಬ ಅರ್ಥಶಾಸ್ತ್ರಜ್ಞ ಪಿಕೆಟ್ಟಿ ಇವರೆಲ್ಲಾ ಗಮನಿಸಿರುವಂತೆ, ಶ್ರೀಮಂತರಿಗೆ ವಿಧಿಸುತ್ತಿದ್ದ ತೆರಿಗೆಯ ಪ್ರಮಾಣವನ್ನು ಕಡಿತ ಮಾಡಿದ್ದರಿಂದ ಅಸಮಾನತೆಯ ಪ್ರಮಾಣ ಹೆಚ್ಚಾಗಿದೆ. ಆದರೆ ಬೆಳವಣಿಗೆಯ ಪ್ರಮಾಣ ಹೆಚ್ಚುವ ಬದಲು ಕುಸಿದಿದೆ. ಅಷ್ಟೇ ಅಲ್ಲ, ಅತಿ ಶ್ರೀಮಂತರ ಆದಾಯ ವಿಪರೀತ ಹೆಚ್ಚಾಗಿದೆ. ತಿಂಗಳಿಗೊಂದು ಫೆರಾರಿ ಕಾರು ಕೊಂಡರೂ ಮಕ್ಕಳ ಮದುವೆಗಾಗಿ ಕೋಟಿಗಟ್ಟಲೆ ಖರ್ಚು ಮಾಡಿದರೂ ಅವರ ಸಂಪತ್ತು ಕರಗುವುದಿಲ್ಲ, ಏರುತ್ತಲೇ ಹೋಗುತ್ತದೆ. ಹೆಚ್ಚಿದ ಸಂಪತ್ತು ಅವರ ಆದಾಯವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಹಾಗಾಗಿಯೇ ಶ್ರೀಮಂತರ ಆದಾಯದ ಬಹುಭಾಗ ಅವರ ಸಂಪತ್ತು ತಂದುಕೊಡುವ ಆದಾಯದಿಂದ ಬರುತ್ತಿದೆ. ಅವರ ಹೊಸ ಹೂಡಿಕೆಯಿಂದಾಗಲಿ, ಶ್ರಮದಿಂದಾಗಲಿ ಬಂದದ್ದು ಕಡಿಮೆ. ಅವರು ಬಹುತೇಕ ಉದ್ದಿಮೆಗಳಲ್ಲಿ ಏಕಸ್ವಾಮ್ಯ ಸಾಧಿಸಿರುವುದರಿಂದ ಅವರಿಗೆ ಸ್ಪರ್ಧೆಯ ಆತಂಕ ಇಲ್ಲ. ಹಾಗಾಗಿ ಹೆಚ್ಚಿನ ಹೂಡಿಕೆಯೂ ಬೇಕಾಗಿಲ್ಲ.

ಹೂಡಿಕೆ ಹಾಗೂ ಲಾಭದ ನಡುವಿನ ಸಂಬಂಧ ಕಡಿಮೆಯಾಗಿದೆ ಎಂದು ಅಭಿಜಿತ್ ಗುರುತಿಸುತ್ತಾರೆ. ಮಿಲ್ಟನ್ ಫ್ರೀಡ್‌ಮನ್ ಪ್ರಕಾರ, ಬಿಸಿನೆಸ್ಸಿನ ಬಿಸಿನೆಸ್ಸೇ ಬಿಸಿನೆಸ್. ಅಂದರೆ, ಗರಿಷ್ಠ ಲಾಭವೇ ಉದ್ದೇಶವಾಗಿರುವುದರಿಂದ ಅತಿ ಲಾಭವಿಲ್ಲದ ಕಡೆ ಅವರು ಹೂಡಿಕೆ ಮಾಡುವುದಿಲ್ಲ. ದೇಶದ ಆರ್ಥಿಕತೆಯ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಲ್ಲ.

ಇಂದಿನ ಬೃಹತ್ ಉದ್ಯಮಪತಿಗಳು ಹಿಂದಿನವರಂತೆ ಬಟ್ಟೆಯಂತಹ ಸಾಂಪ್ರದಾಯಿಕ ವಲಯಗಳಿಗೆ ತಮ್ಮನ್ನು ಸೀಮಿತ ಮಾಡಿಕೊಂಡಿಲ್ಲ. ಬೃಹತ್ ಕೈಗಾರಿಕೆಗಳು, ಶಸ್ತ್ರಾಸ್ತ್ರ, ಪೆಟ್ರೋಲಿಯಂ, ಟೆಲಿಕಾಂನಂತಹ ಎಲ್ಲ ಕ್ಷೇತ್ರಗಳಲ್ಲೂ ದಾಂಗುಡಿ ಇಡುತ್ತಿದ್ದಾರೆ. ಅದಕ್ಕೆ ಬೇಕಾದ ರಾಜಕೀಯ ಬೆಂಬಲವನ್ನು ಒಟ್ಟುಮಾಡಿಕೊಳ್ಳಲು ರಾಜಕೀಯ ಪಕ್ಷಗಳಿಗೆ ಧಾರಾಳವಾಗಿ ದೇಣಿಗೆ ನೀಡುತ್ತಿದ್ದಾರೆ. ಸರ್ಕಾರಗಳು ಇವರಿಗಾಗಿ ನೀತಿಗಳನ್ನು ಸಡಿಲಿಸುತ್ತವೆ. ಹೊರದೇಶಗಳಲ್ಲೂ ಗುತ್ತಿಗೆ ಕೊಡಿಸಲು ನೆರವಾಗುತ್ತವೆ. ನೈಸರ್ಗಿಕ ಸಂಪನ್ಮೂಲಗಳು, ಸರ್ಕಾರಿ ಸ್ವತ್ತುಗಳು ಅಗ್ಗದ ದರದಲ್ಲಿ ಇವರ ಕೈಸೇರುತ್ತವೆ. ಸರ್ಕಾರದೊಂದಿಗೆ ಸಂಬಂಧ ಇಟ್ಟುಕೊಳ್ಳುವುದಕ್ಕೆ, ನೆರವು ಪಡೆದುಕೊಳ್ಳುವುದಕ್ಕೆ ಇವರಿಗೆ ಯಾವುದೇ ಹಿಂಜರಿಕೆ ಇರುವುದಿಲ್ಲ.

ಶತಕೋಟ್ಯಧಿಪತಿಗಳಿಗೆ ತಮ್ಮ ಸಂಪತ್ತನ್ನಾಗಲಿ, ರಾಜಕೀಯ ನಂಟನ್ನಾಗಲಿ ಸಾರ್ವಜನಿಕವಾಗಿ ಪ್ರದರ್ಶಿಸಿಕೊಳ್ಳುವುದಕ್ಕೆ ಸಂಕೋಚವಿಲ್ಲ. ಬದಲಿಗೆ ಸಂಭ್ರಮವಿದೆ. ಮದುವೆಗೆ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡುವುದು ಹೆಮ್ಮೆಯ ವಿಷಯವಾಗುತ್ತದೆ. ಅಸಮಾನತೆ ಗರಿಷ್ಠ ಮಟ್ಟದಲ್ಲಿದೆ, ಶೇ 56.5ರಷ್ಟು ಜನ ಆರೋಗ್ಯಕರ ಆಹಾರವನ್ನು ಕೊಳ್ಳುವ ಸ್ಥಿತಿಯಲ್ಲೂ ಇಲ್ಲ ಎಂಬಂತಹ ಸಂಗತಿಗಳನ್ನು ಪರಿಗಣಿಸಿದಾಗ, ಇದು ಅನವಶ್ಯಕ ದುಂದು ಅನ್ನಿಸಬಹುದು. ಕರ್ನಾಟಕ ಸರ್ಕಾರದ ಅನ್ನಭಾಗ್ಯ ಹಾಗೂ ಯುವನಿಧಿಯಂತಹ ಯೋಜನೆಗಳ ವೆಚ್ಚಕ್ಕೆ ಒಂದು ವರ್ಷಕ್ಕೆ ಆಗುತ್ತಿತ್ತಲ್ಲ ಎಂದು ಬೇಸರವಾಗಬಹುದು. ಆದರೆ ಅವರು ಈ ಬಗೆಯಲ್ಲಿ ಖರ್ಚುಗಳನ್ನು ಮಾಡುತ್ತಲೇ ಇರುತ್ತಾರೆ.

ಶ್ರೀಮಂತರು ಏಕೆ ಹೀಗೆ ಹಣ ಖರ್ಚು ಮಾಡುತ್ತಾರೆ ಅನ್ನುವುದು ಹಲವರನ್ನು ಕಾಡುತ್ತದೆ. ಇದಕ್ಕೆ ಆರ್ಥಿಕ ಕಾರಣಗಳಿಲ್ಲ. ಇದು ಬಹುತೇಕ ಅವರ ಸಾಮಾಜಿಕ ಸ್ಥಾನಮಾನ ಹಾಗೂ ಅಧಿಕಾರವನ್ನು ಪ್ರದರ್ಶಿಸುವ ಸಲುವಾಗಿ ಮಾಡುವ ಖರ್ಚಾಗಿರುತ್ತದೆ. ತೈಲಾಗಾರ, ಬಂದರು, ವಿಮಾನ ನಿಲ್ದಾಣ, ದೊಡ್ಡ ಉದ್ದಿಮೆಗಳು ಹೀಗೆ ಏನನ್ನು ಬೇಕಾದರೂ ಅವರು ಕೊಳ್ಳಬಹುದು. ಎಷ್ಟೇ ದೊಡ್ಡ ನಟರಾಗಿರಲಿ, ಕ್ರೀಡಾಪಟುವಾಗಿರಲಿ, ರಾಜಕಾರಣಿಯಾಗಿರಲಿ ಅವರ ಕರೆಯನ್ನು ತಿರಸ್ಕರಿಸುವ ಸ್ಥಿತಿಯಲ್ಲಿ ಇರುವುದಿಲ್ಲ. ಇವರು ಆಯೋಜಿಸುವ ಸಮಾರಂಭಗಳಲ್ಲಿ ನಡೆಯುವುದು ಇಂತಹ ಅಧಿಕಾರ ಪ್ರದರ್ಶನ.

ರಾಜಕೀಯಶಾಸ್ತ್ರಜ್ಞ ಮೈಕೆಲ್ ಸ್ಯಾಂಡೆಲ್ ಹೇಳುವಂತೆ, ತಮ್ಮ ಯಶಸ್ಸು ಹಾಗೂ ಸಂಪತ್ತಿಗೆ ತಮ್ಮ ಶ್ರಮ ಮತ್ತು ಪ್ರತಿಭೆಯೇ ಕಾರಣ ಅನ್ನುವ ಭಾವನೆ ಬಹುಪಾಲು ಶ್ರೀಮಂತರಲ್ಲಿ ಇರುತ್ತದೆ. ಹಾಗಾಗಿ, ಅದನ್ನು ತಾವು ತಮಗೆ ಇಷ್ಟ ಬಂದಂತೆ ಖರ್ಚು ಮಾಡಬಹುದು ಅನ್ನುವ ವಿಚಾರ ಅವರಲ್ಲಿ ಇರುತ್ತದೆ. ಆದರೆ ಇದು ಪೂರ್ತಿ ನಿಜವಲ್ಲ. ಹುಟ್ಟು, ಪರಿಸ್ಥಿತಿಯಂತಹ ಹಲವು ಅಂಶಗಳು ಅವರ ಸಂಪತ್ತಿಗೆ ಕಾರಣವಾಗಿರುತ್ತವೆ. ಪಿಕೆಟ್ಟಿ ಹೇಳುವಂತೆ, ಅತಿ ಶ್ರೀಮಂತರಲ್ಲಿ ಬಹುತೇಕರಿಗೆ ಸಂಪತ್ತು ಬಂದಿರುವುದು ವಂಶಪಾರಂಪರ್ಯವಾಗಿ. ಜೊತೆಗೆ ದೇಶದ ಕಾನೂನು, ಸರ್ಕಾರ ಒದಗಿಸಿದ ಮೂಲ ಸೌಕರ್ಯ, ಸಾಮಾಜಿಕ ನೀತಿಯಂತಹವುಗಳ ನೆರವು ಇಲ್ಲದೇ ಹೋಗಿದ್ದರೆ ಈ ಸಂಪತ್ತನ್ನು ಗಳಿಸುವುದಕ್ಕಾಗಲಿ, ಉಳಿಸಿಕೊಳ್ಳುವುದಕ್ಕಾಗಲಿ ಸಾಧ್ಯವಾಗುತ್ತಿರಲಿಲ್ಲ.

ಸಂಪತ್ತು ಹಾಗೂ ಯಶಸ್ಸಿಗೆ ವೈಯಕ್ತಿಕ ಪ್ರತಿಭೆ ಮತ್ತು ಶ್ರಮ ಕಾರಣ ಅನ್ನುವ ಚಿಂತನೆಯಲ್ಲಿ ಇನ್ನೂ ಒಂದು ಸಮಸ್ಯೆ ಇದೆ. ಇದು ಈ ಪ್ರಕ್ರಿಯೆಯಲ್ಲಿ ಹಿಂದುಳಿದವರನ್ನು ‘ವಿಫಲರಾದವರು’ ಎಂದು ಪರಿಗಣಿಸುತ್ತದೆ. ಬಡತನಕ್ಕೆ ಬಡವರನ್ನೇ ಹೊಣೆಗಾರರನ್ನಾಗಿ ಮಾಡುತ್ತಿರುತ್ತೇವೆ. ದಡ್ಡರು, ಸೋಮಾರಿಗಳು, ಕುಡುಕರು ಹೀಗೆ ಹಲವು ನಕಾರಾತ್ಮಕ ಅಂಶಗಳನ್ನು ಅವರಿಗೆ ಆರೋಪಿಸುತ್ತೇವೆ. ದುರಂತವೆಂದರೆ ‘ವಿಫಲ’ರಾದವರೂ ಇದನ್ನು ಒಪ್ಪಿಕೊಂಡು ಸೋಲಿನ ಭಾವನೆಯಲ್ಲಿ ನರಳುತ್ತಿರುತ್ತಾರೆ. ಇಂತಹ ಹತಾಶೆಯು ಸಾಮಾಜಿಕವಾಗಿ ಹಿಂದುಳಿದವರನ್ನು, ಮಹಿಳೆಯರನ್ನು, ಅಲ್ಪಸಂಖ್ಯಾತರನ್ನು ಹೆಚ್ಚಾಗಿ ಕಾಡುತ್ತಿದೆ. ಜಾತಿ, ಲಿಂಗ, ಧರ್ಮ, ಜನಾಂಗದಂತಹ ಕಾರಣಗಳಿಂದಾಗಿ ಹಲವು ಸೌಲಭ್ಯಗಳಿಂದ ಅವರು ವಂಚಿತರಾಗಿರುತ್ತಾರೆ.

ಮಹಿಳೆಯರಿಗೆ ಮನೆಯ ಜವಾಬ್ದಾರಿ, ಸುರಕ್ಷತೆ ಹಾಗೂ ಸಾಮಾಜಿಕ ನಂಬಿಕೆಗಳ ಕಾರಣಗಳಿಂದಾಗಿ ಹಲವು ಅವಕಾಶಗಳು ತಪ್ಪಿಹೋಗುತ್ತವೆ. ಅವರಿಗೆ ಮೇಲ್ಮುಖ ಚಲನೆ ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲ ಹಲವು ಸಮುದಾಯಗಳಿಗೆ ತಮ್ಮ ಜಾತಿ, ಕಸುಬು, ಆಹಾರ ಇವೆಲ್ಲಾ ಅವಮಾನದ, ಮುಚ್ಚಿಟ್ಟುಕೊಂಡೇ ಬದುಕಬೇಕಾದ ವಿಷಯಗಳಾಗಿರುತ್ತವೆ. ತೀವ್ರವಾದ ಸಾಮಾಜಿಕ ಕಳಂಕದ ಭಾರದ ಹೊರೆಯಿಂದಾಗಿ ಅವರಿಗೆ ಆರ್ಥಿಕ ಸ್ಥಿರತೆ ಸಾಧ್ಯವಾಗುವುದಿಲ್ಲ. ನೈತಿಕ ಅಧಃಪತನದಿಂದಾಗಿಯೇ ಅವರು ಈ ಸ್ಥಿತಿಯಲ್ಲಿದ್ದಾರೆ ಎಂಬ ಭಾವನೆ ಸಮಾಜದಲ್ಲಿದೆ. ಹಾಗಾಗಿ, ಸರ್ಕಾರ ಇವರಿಗೆ ನೀಡುವ ನೆರವುಗಳ ಬಗ್ಗೆ ಸಮಾಜಕ್ಕೆ ತಾತ್ಸಾರವಿರುತ್ತದೆ.

ಸಮಾಜವನ್ನು ಸುಧಾರಿಸುವ ಬಗ್ಗೆ ಯೋಚಿಸುವಾಗ, ಬಡತನ, ಅಸಮಾನತೆಯಂತಹ ಅಂಶಗಳ ಜೊತೆಯಲ್ಲೇ ವಿಭಿನ್ನ ಸಮುದಾಯಗಳನ್ನು ‘ನೋಡುವ’ ಕ್ರಮವೂ ಮುಖ್ಯವಾಗುತ್ತದೆ. ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿನಿಂದ ಜನರ ಮೌಲ್ಯ, ಘನತೆ ನಿರ್ಧಾರವಾಗುತ್ತದೆ. ಒಂದು ಸಮುದಾಯಕ್ಕೆ ‘ದಕ್ಕಿ’ರುವ ಆ ಘನತೆಯು ಆ ಸಮುದಾಯದ ಜನರ ಆರ್ಥಿಕ ಬೆಳವಣಿಗೆಯಲ್ಲಿ ಅತಿಮುಖ್ಯ ಪಾತ್ರ ವಹಿಸುತ್ತದೆ. ಹಾಗಾಗಿ, ಆರ್ಥಿಕ ಸಮಾನತೆ ಸಾಧ್ಯವಾದರಷ್ಟೇ ಸಾಲುವುದಿಲ್ಲ. ಎಲ್ಲರ ಘನತೆಯನ್ನು ಗುರುತಿಸುವ, ಗೌರವಿಸುವ ಕೆಲಸವೂ ಮುಖ್ಯವಾಗುತ್ತದೆ. ಆರ್ಥಿಕ ಸಮಾನತೆ ಕುರಿತ ಚರ್ಚೆಗೆ ಇಂತಹ ಸಾಮಾಜಿಕ ಆಯಾಮವೂ ಸಿಗುವಂತೆ ಆಗಬೇಕು.

ಚುರುಮುರಿ

ಸತ್ಯ ಮಾಡ್ರಿ!

• ಡಿ.ಎಸ್. ಲಿಂಗರಾಜು

‘ನೆನ್ನೆ ಬೆಕ್ಕಣ್ಣ ಬ್ರೂನಿ ರಾಜನ ಅರಮನೆ ಐಭೋಗ ಹೇಳ್ತಿದ್ನಲ್ಲಾ ಅದು ದಿಟವೇನಿರ್ಲಾ? ಹಿಂಗೂ ಒಂದು ದೇಸ ಇದ್ದತ್ತೇ?’ ಯಂಟಪ್ಪಣ್ಣ ಬಾಯ ಮೇಲೆ ಬೆರಳು ಮಡಗಿತ್ತು.

‘ಆ ಸಣ್ಣ ದೇಸದೇಲಿ ಎಣ್ಣೆ, ಗ್ಯಾಸು ಬೇಜಾನ್ ಅದಂತೆ. ನಾನೂವೆ ಅರಮನೆಗೋಗಿ ಮಾರಾಜ್ರ ಚಿನ್ನದ ರೋಲೀಸುರಾಯರ ಕಾರು ಮುಟ್ಟಿ ಪುಸ್ಕಟ್ಟೆ ಎಣ್ಣೆ ಹೊಡದು ಬರಬಕು ಸಾ’ ಚಂದ್ರು ಆಸೆಪಟ್ಟ.

‘ಲೇ ಬಡ್ಡೇತ್ತುದೇ ಎಣ್ಣೆ ಅಂದ್ರೆ ಪೆಟ್ರೋಲು-ಡೀಜೆಲ್ಲು ಕಲಾ, ಸರಾಪಲ್ಲ. ಅಲ್ಲೇನಾದ್ರೂ ನೀನು ಕೋತಚೇಷ್ಟೆ ಮಾಡಿದರೆ ಶೆಡ್ಡಿಗೆ ಎತ್ತಾಕ್ಯಂದೋಗಿ ರುಬ್ಬತರೆ. ಅಲ್ಲಿ ಜನ ಉಸಿರು ಕಿಸಿಯಂಗಿಲ್ಲ’ ತುರೇಮಣೆ ಛೇಡಿಸಿದರು.

‘ಇಲ್ಲಿ ನಾವೂ ಹಂಗೆ ಅಲ್ಲುವ್ರಾ ಬದುಕ್ತಿರದು. ಜನಕ್ಕೆ ಬೇಕೋ ಬ್ಯಾಡವೋ ಸಾವಿರಾರು ಕೋಟಿ ಸುರಿದು ಕೊರೆಯದು, ಮುರಿಯದು ನಡೀತಾ ಅದೆ. ‘ನಾನೂ ಸೀನಿಯರ್. ನನಗೂ ಸಿಎಂ ಆಗಕ್ಕೆ ಅವಕಾಸ ಅದೆ. ಪಾಲು-ಪಾರೀಕತ್ತು ಮಾಡಿ ಚೇರು ಕೊಡ್ರಿ’ ಅಂತ ಕೆಲವರು ನುಲೀತಾವ್ರೆ’ ನನ್ನ ಅಭಿಪ್ರಾಯ ಹೇಳಿದೆ.

‘ಗುಂಡಿ-ಗೊಟರು ಕಾಣದೆ ಬೈಕು-ಸ್ಕೂಟ್ರು ಸಮೇತ ಜನ ಬಿದ್ದು ವಯಕ್ ಅಂತಾವ್ರೆ. ರೋಡ ರಿಪೇರಿ ಮಾಡದು ಬುಟ್ಟು ‘ಪರಿಹಾರ ಕೊಡ್ತೀವಿ. ಇನ್ನು ಹದಿನೈದು ದಿನದೊಳಗೆ ಗುಂಡಿ ಮುಚ್ಚದೇಯ’ ಅಂದ್ಕಂದು ಕೂತರೆ ಆದತ್ತೇ. ಮನೆ ಕೆಲಸ ಮಾಡದು ಬುಟ್ಟು ಗೃಹಲಕ್ಷ್ಮಿ ರೀಲ್ಸ್ ಮಾಡ್ರಿ ಅಂತರೆ. ಕಾಯಿಗಿಂತ ಜುಟ್ಟೇ ಉದ್ದ ಅಂದಂಗಾಯ್ತು ನಮ್ಮ ಕತೆ’ ಯಂಟಪ್ಪಣ್ಣ ಸಿಟ್ಟಿಗೆ ಬಿದ್ದಿತ್ತು.

‘ಮೂರೂ ಪಕ್ಸದೋರ ಧರ್ಮಸ್ಥಳಕ್ಕೆ ಕರಕೋಗಿ ನಮಪ್ಪ ಮಂಜ್ನಾತ ಸ್ವಾಮಿ ಮುಂದೆ ತೀರ್ಥ ಕೈಗೆ ಬುಟ್ಟು ‘ಇನ್ನು ಮ್ಯಾಲೆ ನೀಯತ್ತಿಂದ ಕ್ಯಾಮೆ ಮಾಡಿಕ್ಯಂಡಿರತೀವಿ, ತಲೆಲ್ಲಾ ಮಾತಾಡಕುಲ್ಲ’ ಅಂತ ಪ್ರಮಾಣ ಮಾಡ್ರಯ್ಯ ಅನ್ನಬಕು. ಯಂಗೋ ಇವು ನಮ್ಮ ಬಡ್ಡೆಗೆ ಬರದಿದ್ರೆ ಸಾಕು’ ತುರೇಮಣೆ ಶರಾ ಬರೆದರು.

ದಿನದ ಟ್ವೀಟ್

ಅಭಿವೃದ್ಧಿಯ ವಿಕೇಂದ್ರೀಕರಣವಾಗಲಿ

ಎಲ್ಲದಕ್ಕೂ ಒಂದು ಮಿತಿ ಇರಬೇಕು. ಹಾಗೇ ಅಭಿವೃದ್ಧಿಗೂ. ಬೆಂಗಳೂರಿನ ವಿಚಾರಕ್ಕೆ ಬಂದರೆ, ಮಿತಿ ಮೀರಿ ಬೆಳೆಯುತ್ತಿರುವ ನಗರದ ವೇಗವನ್ನು ನಿಯಂತ್ರಿಸುವುದು ಒಳಿತು. ಸಾಮರ್ಥ್ಯಕ್ಕೆ ಮೀರಿದ ಜನಸಂಖ್ಯೆಯಿಂದ ಕಳೆದ ವರ್ಷ ಕುಡಿಯುವ ನೀರಿಗೂ ನಗರ ಪರದಾಡಿದ್ದನ್ನು ಎಚ್ಚರಿಕೆಯ ಗಂಟೆಯಾಗಿ ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕು. ಅಭಿವೃದ್ಧಿಯನ್ನು ರಾಜ್ಯದ ಇತರ ನಗರಗಳಿಗೂ ವಿಸ್ತರಿಸುವ ಯೋಜನೆಗಳನ್ನು ಹಿಂದೆಂದಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಹೆಣೆಯಬೇಕು...

ಕವಿರಾಜ್, ಚಿತ್ರಸಾಹಿತಿ

ಕಿಡಿನುಡಿ

ಈಗಿನ ದಿನಗಳಲ್ಲಿ ಪ್ರಾಮಾಣಿಕವಾದ ಸಂಬಂಧಗಳನ್ನು ಕಾಣುವುದೇ ಅಪರೂಪವಾಗಿದೆ. ಏಳು ಜನ್ಮಗಳೂ ಜೊತೆಗಿರುವ ಬಗ್ಗೆ ಜನ ಮಾತನಾಡುತ್ತಾರೆ. ಆದರೆ ಕನಿಷ್ಠ ಒಂದು ಜನ್ಮಕ್ಕಾದರೂ ಜೊತೆಗಿರಲು ಅವರಿಗೆ ಸಾಧ್ಯವಾಗುವುದಿಲ್ಲ.

ವರುಣ್ ತ್ರೇಜ, ಹೂಡಿಕೆದಾರ

---

25 ವರ್ಷಗಳ ಹಿಂದೆ

ಶುಕ್ರವಾರ, 10-9-1999

• ಜಿಂಕೆ ಮಾಂಸ ತಿಂದ ಪ್ರಕರಣ ನಾಲ್ವರು ಸಿಬ್ಬಂದಿ ಅಮಾನತು

ಮೈಸೂರು, ಸೆ. 9 – ಚಾಮರಾಜನಗರ ಜಿಲ್ಲೆಯ ಪುಣಜನೂರು (ಕೊಳ್ಳೇಗಾಲ ತಾಲ್ಲೂಕು) ಮತ್ತು ಬಂಡೀಪುರ (ಗುಂಡ್ಲುಪೇಟೆ ತಾಲ್ಲೂಕು) ಸಂರಕ್ಷಿತ ಅರಣ್ಯದಲ್ಲಿ ಜಿಂಕೆ ಮಾಂಸ ಬೇಯಿಸಿ ತಿಂದಿರುವ ಎರಡು ಪ್ರಕರಣಗಳಲ್ಲಿ ಕರ್ತವ್ಯನಿರತ ಅರಣ್ಯ ಸಿಬ್ಬಂದಿಯೇ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ.

ಕೊಳ್ಳೇಗಾಲ ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಅರಣ್ಯ ಪ್ರದೇಶವನ್ನು ವೀಕ್ಷಿಸಲು ದೆಹಲಿಯಿಂದ ಬಂದಿದ್ದ ವಿಶ್ವ ವನ್ಯಜೀವಿ ನಿಧಿ ಮಂಜೂರಿಗೆ ಸಂಬಂಧಿಸಿದ ಪ್ರತಿನಿಧಿಗಳು ಪುಣಜನೂರು ಅರಣ್ಯ ಪ್ರದೇಶದಲ್ಲಿ ಸುತ್ತಾಡುತ್ತಿದ್ದಾಗ, ಅರಣ್ಯ ಸಿಬ್ಬಂದಿಯೇ ಸತ್ತ ಜಿಂಕೆಯ ಮಾಂಸವನ್ನು ಬೇಯಿಸಿಕೊಂಡು ತಿನ್ನುವುದು ಪತ್ತೆಯಾಗಿದೆ.

• ಚುನಾವಣಾ ಸಮೀಕ್ಷೆಗೆ ತಡೆಯಾಜ್ಞೆ ಇಲ್ಲ

ನವದೆಹಲಿ, ಸೆ. 9 (ಪಿಟಿಐ)– ಫಲಿತಾಂಶ ಪೂರ್ವ ಸಮೀಕ್ಷೆ ಮತ್ತು ಚುನಾವಣಾ ಪೂರ್ವ ಸಮೀಕ್ಷೆಗಳನ್ನು ಪ್ರಕಟಿಸುವುದರ ಮೇಲಿನ ‘ವಿವಾದಾತ್ಮಕ’ ನಿಷೇಧ ಜಾರಿಗೆ ಮಧ್ಯಂತರ ತಡೆ ಆಜ್ಞೆ ನೀಡಬೇಕೆಂಬ ಚುನಾವಣಾ ಆಯೋಗದ ಕೋರಿಕೆಯನ್ನು ಸುಪ್ರೀಂ ಕೋರ್ಟ್ ಇಂದು ತಳ್ಳಿಹಾಕಿತು. ವಿವಾದವನ್ನು ಸಂವಿಧಾನ ಪೀಠದ ಪರಿಶೀಲನೆಗೆ ಒಪ್ಪಿಸಲಾಗಿದ್ದು, ಬರುವ ಮಂಗಳವಾರ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎ.ಎಸ್. ಆನಂದ ಅವರ ನೇತೃತ್ವದಲ್ಲಿನ ಮೂವರು ಸದಸ್ಯರ ಪೀಠವು ಇಂದು ಮಧ್ಯಾಹ್ನ ಈ ವಿಷಯವನ್ನು ವಿಚಾರಣೆಗೆ ಕೈಗೆತ್ತಿಕೊಂಡಿತು.

50 ವರ್ಷಗಳ ಹಿಂದೆ

ಮಂಗಳವಾರ, 10-9-1974

• ಕಾಂಟ್ರಾಕ್ಟ್ ಬಸ್‌ಗೆ ಇತಿಶ್ರೀ: ಸಾರಿಗೆ ಸಂಸ್ಥೆಯಿಂದಲೇ ನಿರ್ವಹಣೆಗೆ ನಿರ್ಧಾರ

ಬೆಂಗಳೂರು, ಸೆ. 9 – ಇನ್ನು ಮುಂದೆ ಖಾಸಗಿ ಕಾಂಟ್ರಾಕ್ಟ್ ಬಸ್ಸುಗಳಿಗೆ ಅವಕಾಶ ನೀಡದೆ ರಸ್ತೆ ಸಾರಿಗೆ ಸಂಸ್ಥೆಯೇ ಅದನ್ನು ನಡೆಸಬೇಕೆಂದು ನಿರ್ಧರಿಸಲಾಗಿದೆ ಎಂದು ಸಾರಿಗೆ ಸಚಿವ ಕೆ.ಎಚ್. ರಂಗನಾಥ್ ಅವರು ಇಂದು ವಿಧಾನ ಪರಿಷತ್‌ನಲ್ಲಿ ಹೇಳಿದರು.

ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕದ ಮೇಲಿನ ಚರ್ಚೆಯ ಕಾಲದಲ್ಲಿ ಸದಸ್ಯರಿಂದ ತೀವ್ರ ಟೀಕೆಗೆ ತುತ್ತಾದ ಕಾಂಟ್ರಾಕ್ಟ್ ಬಸ್ಸುಗಳ ವಿಚಾರ ಪ್ರಸ್ತಾಪಿಸಿದ ಸಚಿವರು ‘ಈಗಾಗಲೇ ಶಾಸನದ ಪ್ರಕಾರ ಪ್ರಾರಂಭಿಕ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಆಕ್ಷೇಪ ಮತ್ತು ಸಲಹೆ ಕೇಳಲಾಗಿದೆ. ಅವು ಬಂದ ಮೇಲೆ ಮುಖ್ಯಮಂತ್ರಿ ವಿಚಾರಣೆ ಮಾಡಿದ ನಂತರ ಅಂತಿಮ ಪ್ರಕಟಣೆ ಹೊರಬೀಳುತ್ತದೆ’ ಎಂದರು.

• ಆಪಾದನೆ ಮೊದಲ ನೋಟಕ್ಕೆ ಸರಿ ಎಂದು ನಿರ್ಧರಿಸುವ ಅಧಿಕಾರ ಮುಖ್ಯಮಂತ್ರಿಗಿಲ್ಲ

ಬೆಂಗಳೂರು, ಸೆ. 9 – ಆಪಾದನೆಗಳನ್ನು ತಮ್ಮ ವಿರುದ್ಧವೇ ಮಾಡಲಾಗುತ್ತಿರುವುದರಿಂದ ಮೊದಲ ನೋಟಕ್ಕೆ ಸರಿ ಎಂದು ಕಂಡುಬರುವುವೆ ಎಂಬುದನ್ನು ನಿರ್ಧರಿಸುವ ‘ನೈತಿಕ ಅಧಿಕಾರ’ ಮುಖ್ಯಮಂತ್ರಿ ಅವರಿಗಿಲ್ಲವೆಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಎಚ್.ಡಿ.ದೇವೇಗೌಡರು ಇಂದು ಇಲ್ಲಿ ತಿಳಿಸಿದರು.

ಸಂಗತ

ಆಹಾರ ಪ್ಯಾಕಿಂಗ್: ಇರಲಿ ಎಚ್ಚರ

ಆಹಾರ ಪದಾರ್ಥಗಳ ಪ್ಯಾಕಿಂಗ್‌ಗೆ ಪ್ಲಾಸ್ಟಿಕ್ ಹೊರತಾಗಿ ಇರುವ ಉತ್ತಮ ಪರ್ಯಾಯ ವಿಧಾನಗಳನ್ನು ಅನುಸರಿಸಲು ಜನ ಗಟ್ಟಿ ಮನಸ್ಸು ಮಾಡಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಸಕ್ಕರೆ ಮತ್ತು ಉಪ್ಪನ್ನು ಉತ್ತಮ ಗುಣಮಟ್ಟದ ಸೆಣಬಿನ ಚೀಲಗಳಲ್ಲಿ ಸಂಗ್ರಹಿಸುವ ವಿಧಾನ ಈ ಮೊದಲು ರೂಢಿಯಲ್ಲಿತ್ತು. ಕೇಂದ್ರ ಸರ್ಕಾರವು ಕಾನೂನಿನ ಮೂಲಕ ಈ ವಿಧಾನವನ್ನು ಕಡ್ಡಾಯಗೊಳಿಸಿತ್ತು. ಆಹಾರಧಾನ್ಯಗಳ ಸಂಗ್ರಹಕ್ಕೂ ಗೋಣಿಚೀಲಗಳನ್ನೇ ಬಳಸಲಾಗುತ್ತಿತ್ತು. ಸಕ್ಕರೆ, ಉಪ್ಪು ಸಂಗ್ರಹಕ್ಕೆ ಬಳಸಿ ಖಾಲಿಯಾದ ಗೋಣಿಚೀಲಗಳನ್ನು ತೊಳೆದು ಒಣಗಿಸಿ ಮರುಬಳಕೆ ಮಾಡುವ ಪರಿಪಾಟವೂ ಇತ್ತು. ಸಹಜವಾಗಿ ಆಗ ಎಲ್ಲ ಆಹಾರ ಪದಾರ್ಥಗಳೂ ಮೈಕ್ರೊಪ್ಲಾಸ್ಟಿಕ್ ಕಣಗಳಿಂದ ಮುಕ್ತವಾಗಿ ಇರುತ್ತಿದ್ದವು.

ಸಕ್ಕರೆ ಮತ್ತು ಉಪ್ಪಿನಲ್ಲಿ ಆರೋಗ್ಯಕ್ಕೆ ಹಾನಿಕರವಾದ ಮೈಕ್ರೊಪ್ಲಾಸ್ಟಿಕ್ ಕಣಗಳು ಈಗ ಆತಂಕಕಾರಿಯಾದ ಮಟ್ಟದಲ್ಲಿ ಇವೆ ಎಂಬ ‘ಆಳ ಅಗಲ’ದ ವರದಿ (ಪ್ರ.ವಾ., ಆ. 26) ಓದಿದಾಗ, ಸಕ್ಕರೆ ಮತ್ತು ಉಪ್ಪಿನ ಕೈಗಾರಿಕೆಗಳಲ್ಲಿ ಕೆಲಸ ಮಾಡಿದ ಅನುಭವ ಇರುವ ನನಗೆ, ಆಹಾರ ವಸ್ತುಗಳನ್ನು ಪ್ಯಾಕಿಂಗ್ ಮಾಡುವ ಉತ್ತಮ ವಿಧಾನವನ್ನು ಕೈಬಿಟ್ಟು, ಹಾನಿಕಾರಕ ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬಳಕೆಗೆ ಪಲ್ಲಟಗೊಂಡ ಸಂಗತಿಯನ್ನು ಹೇಳುವ ಮನಸ್ಸಾಯಿತು.

ಹಣ್ಣು, ತರಕಾರಿ, ಆಲೂಗಡ್ಡೆ, ಈರುಳ್ಳಿಯಂತಹ ತೋಟಗಾರಿಕೆ ಉತ್ಪನ್ನಗಳನ್ನು ಕೂಡ ಗೋಣಿಚೀಲದಲ್ಲಿಯೇ ಸಂಗ್ರಹಿಸಲಾಗುತ್ತಿತ್ತು. ಬೆಲ್ಲದ ಅಚ್ಚುಗಳನ್ನು ಗೋಣಿ ಬಟ್ಟೆಯಲ್ಲಿ ಪ್ಯಾಕ್ ಮಾಡಲಾಗುತ್ತಿತ್ತು. ಹತ್ತಿಯನ್ನು ಸೆಣಬಿನ ಜಾಳಿಗೆಗಳಲ್ಲಿ ಸಂಗ್ರಹಿಸಿ ಜವಳಿ ಕಾರ್ಖಾನೆಗಳಿಗೆ ಕಳಿಸಲಾಗುತ್ತಿತ್ತು. ಎಲ್ಲ ಆಹಾರ ವಸ್ತುಗಳು ಗೋಣಿಚೀಲಗಳಲ್ಲಿಯೇ ಮಾರುಕಟ್ಟೆಗೆ ಬರುತ್ತಿದ್ದವು.

ಈ ಚೀಲಗಳ ಬಳಕೆ ಕ್ರಮೇಣ ಕಡಿಮೆಯಾಗಿ ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬಳಕೆ ಮುನ್ನೆಲೆಗೆ ಬಂದಿತು. ಇದು ಈ ಅನಾಹುತ ಸೃಷ್ಟಿಗೆ ಮುಖ್ಯ ಕಾರಣವಾಗಿದೆ.

ಸೆಣಬಿನ ಚೀಲಗಳಿಗೆ ಹೋಲಿಸಿದರೆ ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬ್ಯಾಗುಗಳ ಬೆಲೆ ತೀರಾ ಕಡಿಮೆ. ಇದರಿಂದಾಗಿ ಇವುಗಳ ಬಳಕೆ ವೇಗವಾಗಿ ಹರಡಿತು. ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬ್ಯಾಗುಗಳು ಮರುಬಳಕೆಗೆ ಯೋಗ್ಯವಾಗಿ ಇರುವುದಿಲ್ಲ. ಕರಗದ ತ್ಯಾಜ್ಯಗಳಾಗಿ ಉಳಿದುಬಿಡುತ್ತವೆ. ಆದರೆ ಗೋಣಿಚೀಲಗಳನ್ನು 8ರಿಂದ 10 ವರ್ಷಗಳ ಕಾಲ ಬಳಸಬಹುದು. ಗೋಣಿಚೀಲಗಳ ಬೆಲೆ ಹೆಚ್ಚಾದರೂ ಸುರಕ್ಷಿತ ಮತ್ತು ದೀರ್ಘಕಾಲ ಉಪಯೋಗಕ್ಕೆ ಬರುತ್ತವೆ ಎಂಬುದನ್ನು ಮರೆಯಬಾರದು.

ಈಗ ಎಲ್ಲ ಸಕ್ಕರೆ ಕಾರ್ಖಾನೆಗಳು ಹಾಗೂ ಉಪ್ಪು ಉತ್ಪಾದಕ ಘಟಕಗಳು ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬ್ಯಾಗುಗಳನ್ನೇ ಬಳಸುತ್ತಿವೆ. ಕೃಷಿ ಉತ್ಪನ್ನಗಳ ಸಂಗ್ರಹಕ್ಕೆ ರೈತರು ಕೂಡ ಹೆಚ್ಚಾಗಿ ಇಂತಹ ಬ್ಯಾಗುಗಳನ್ನೇ ಉಪಯೋಗಿಸುತ್ತಿದ್ದಾರೆ. ಇದರಿಂದ ಮೈಕ್ರೊಪ್ಲಾಸ್ಟಿಕ್ ಕಣಗಳು ಎಲ್ಲ ಕಡೆಗೆ ದಾಳಿ ಇಡತೊಡಗಿವೆ.

ಸಕ್ಕರೆ, ಉಪ್ಪು, ಆಹಾರಧಾನ್ಯಗಳನ್ನು 1, 2, 5, 10 ಕಿಲೊ ಅಳತೆಯ ಆಕರ್ಷಕ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಪ್ಯಾಕ್ ಮಾಡಿ, ಶ್ರೇಷ್ಠ ಗುಣಮಟ್ಟದವು ಎಂದು ಬಿಂಬಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ತಂತ್ರ ಧಾರಾಳವಾಗಿ ನಡೆಯುತ್ತಿದೆ. ಗ್ರಾಹಕರು ಕೂಡ ಇವುಗಳನ್ನೇ ಹೆಚ್ಚಾಗಿ ಖರೀದಿಸುತ್ತಿದ್ದಾರೆ.

ಶಾಲಾ ಮಕ್ಕಳು ಊಟ, ಉಪಾಹಾರದಂತಹ ಖಾದ್ಯ ಪದಾರ್ಥಗಳನ್ನು ಪ್ಲಾಸ್ಟಿಕ್ ಬ್ಯಾಗುಗಳಲ್ಲಿ ತರುತ್ತಿದ್ದಾರೆ. ಬಿಸಿ ಪದಾರ್ಥಗಳನ್ನು ಪ್ಲಾಸ್ಟಿಕ್ ಬ್ಯಾಗಿನಲ್ಲಿ ಇಡುವುದರಿಂದ ಪ್ಲಾಸ್ಟಿಕ್ ಕಣಗಳು ಅಧಿಕ ಪ್ರಮಾಣದಲ್ಲಿ ಆಹಾರವನ್ನು ಸೇರಿಕೊಳ್ಳುವ ಸಾಧ್ಯತೆ ಇರುತ್ತದೆ. ಹೋಟೆಲ್‌ಗಳಿಂದ ತರಿಸುವ ಪದಾರ್ಥಗಳು ಪ್ಲಾಸ್ಟಿಕ್ ಚೀಲದಲ್ಲಿಯೇ ಬರುತ್ತವೆ.

ಹಿಂದೆ ಸಂತೆ, ಪೇಟೆಯಿಂದ ಆಹಾರ ಪದಾರ್ಥಗಳನ್ನು ಖರೀದಿಸಿ ತರಲು ಬಟ್ಟೆಯಿಂದ ತಯಾರಿಸಿದ ಕೈಚೀಲಗಳನ್ನು ಬಳಸುತ್ತಿದ್ದರು. ಈಗ ಅವು ಮಾಯವಾಗಿ ಆ ಜಾಗಗಳನ್ನು ಪ್ಲಾಸ್ಟಿಕ್ ಬ್ಯಾಗುಗಳು ಆವರಿಸಿವೆ. ಕಡಿಮೆ ಮೈಕ್ರಾನ್‌ನ ಪ್ಲಾಸ್ಟಿಕ್ ಬ್ಯಾಗ್ ನಿಷೇಧದ ಕಾರಣದಿಂದ ಸ್ವಲ್ಪಮಟ್ಟಿಗೆ ಇವುಗಳ ಬಳಕೆ ಕಡಿಮೆ ಆಗಿದೆಯಾದರೂ ಸಂಪೂರ್ಣ ನಿಯಂತ್ರಣ ಸಾಧ್ಯವಾಗಿಲ್ಲ. ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ತೊಂದರೆಗಳ ಬಗ್ಗೆ ಎಲ್ಲರಿಗೂ ಅರಿವಿದ್ದರೂ ದೃಢ ನಿರ್ಧಾರದ ಕೊರತೆಯಿಂದ ಬಳಕೆ ಕಡಿಮೆಯಾಗುತ್ತಿಲ್ಲ.

ಈಚೆಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ, ಕಂಪಾರ್ಟ್‌ಮೆಂಟಿನಲ್ಲಿ ದೋಸೆ ಖರೀದಿಸಿದೆ. ರಟ್ಟಿನ ಬಾಕ್ಸ್‌ನಲ್ಲಿ ದೋಸೆಯನ್ನು ಪ್ಯಾಕ್ ಮಾಡಲಾಗಿತ್ತು. ಆದರೆ ಸಾಂಬಾರ್, ಚಟ್ನಿಯನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಇಡಲಾಗಿತ್ತು. ಬಿಸಿ ದೋಸೆಯನ್ನು ಮಿಂಚುವ ಪ್ಲಾಸ್ಟಿಕ್ ಕಾಗದದಲ್ಲಿ ಸುತ್ತಲಾಗಿತ್ತು. ಕಾಗದದ ವರ್ಣವು ದೋಸೆಗೆ ಅಂಟಿಕೊಂಡಿದ್ದು ಕಾಣಿಸುತ್ತಿತ್ತು. ತಿನ್ನುವುದಕ್ಕೆ ಮನಸ್ಸಾಗಲಿಲ್ಲ. ಇಂತಹ ಸಂದರ್ಭಗಳಲ್ಲಿ, ಪ್ಲಾಸ್ಟಿಕ್‌ನಿಂದ ದೂರ ಇರಲು ಬಯಸುವವರು ಉಪವಾಸ ಮಾಡಬೇಕಾದ ಪರಿಸ್ಥಿತಿ ಬಂದಿದೆ.

ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ವಿಪರೀತ ಹೆಚ್ಚಾಗತೊಡಗಿದೆ. ಪ್ಲಾಸ್ಟಿಕ್‌ನಲ್ಲಿ ಅನೇಕ ರಾಸಾಯನಿಕ ಮತ್ತು ಅಪಾಯಕಾರಿ ಪದಾರ್ಥಗಳು ಇರುತ್ತವೆ. ಇವು ಮಣ್ಣಿನಲ್ಲಿ ಕರಗದೆ ಸಣ್ಣಸಣ್ಣ ಕಣಗಳಾಗಿ ಬದಲಾಗುತ್ತವೆ. ಅತಿ ಸೂಕ್ಷ್ಮ ಕಣಗಳನ್ನು ಮೈಕ್ರೊಪ್ಲಾಸ್ಟಿಕ್ ಕಣಗಳೆಂದು ಕರೆಯಲಾಗುತ್ತದೆ. ಇವು ಪರಿಸರ, ಜೀವಿಗಳು, ಮಣ್ಣು, ನೀರಿನ ಮೇಲೆ ದುಷ್ಪರಿಣಾಮ ಬೀರುತ್ತವೆ.

ಜನ ಸೇವಿಸುವ ಆಹಾರ ಮತ್ತು ಆಹಾರಧಾನ್ಯಗಳ ಪ್ಯಾಕಿಂಗ್ ಅತ್ಯಂತ ಮುಖ್ಯವಾದ ಕ್ರಿಯೆ. ಪ್ಲಾಸ್ಟಿಕ್ ಹೊರತಾಗಿ ಉತ್ತಮ ಪರ್ಯಾಯ ಪ್ಯಾಕಿಂಗ್ ಪದ್ಧತಿಗಳಿವೆ. ಸಾಂಪ್ರದಾಯಿಕ ಸರಳ ವಿಧಾನಗಳಿವೆ. ಅವುಗಳನ್ನು ಅನುಸರಿಸಲು ಜನ ಗಟ್ಟಿ ಮನಸ್ಸು ಮಾಡಬೇಕು. ಹಾಗೆಯೇ ಸರ್ಕಾರ ಕಟ್ಟುನಿಟ್ಟಿನ ನಿಯಮಗಳನ್ನು ಅನುಷ್ಠಾನಕ್ಕೆ ತರುವುದು ಅವಶ್ಯ.

ವಾಚಕರ ವಾಣಿ

ಅನಪೇಕ್ಷಿತ ಸಂದೇಶ: ಸಂಸ್ಥೆಗಳ ಕಿವಿ ಹಿಂಡಬೇಕಿದೆ

ಸ್ಥಿರ ದೂರವಾಣಿ ಮತ್ತು ಮೊಬೈಲ್ ಫೋನ್‌ಗಳಲ್ಲಿ ಮಾರಾಟದ ಉದ್ದೇಶದಿಂದ ಮೊದಲೆಲ್ಲ ಬರುತ್ತಿದ್ದ ಹಲವು ಅನಪೇಕ್ಷಿತ ಕರೆಗಳು ಕಿರಿಕಿರಿ ಉಂಟುಮಾಡುತ್ತಿದ್ದವು. ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಕಠಿಣ ಕ್ರಮಗಳನ್ನು ಕೈಗೊಂಡ ಬಳಿಕ ಈ ಸಮಸ್ಯೆ ಬಹುತೇಕ ದೂರವಾಗಿದೆ. ಆದರೆ ಈಗ ಅವರೆಲ್ಲ ಹೊಸತೊಂದು ಕಳ್ಳಮಾರ್ಗವನ್ನು ಕಂಡುಹಿಡಿದಿದ್ದಾರೆ. ಅದು ವಾಟ್ಸ್‌ಆ್ಯಪ್ ಮೂಲಕ ಸಂದೇಶ ರವಾನೆ!

ಯಾವುದಾದರೂ ಮಾಲ್‌ನ ಮಳಿಗೆಗಳು, ಡಿಪಾರ್ಟ್‌ಮೆಂಟಲ್ ಸ್ಟೋರ್‌ಗಳಿಗೆ ಹೋದಾಗ ಅಲ್ಲಿ ನಮ್ಮ ಮೊಬೈಲ್ ಸಂಖ್ಯೆಯನ್ನು ಪಡೆದುಕೊಳ್ಳುತ್ತಾರೆ. ವಾಟ್ಸ್‌ಆ್ಯಪ್ ಮುಖಾಂತರ ಇಂತಹ ಕಂಪನಿಗಳು ತಮ್ಮ ಮಾರಾಟದ ಸಂದೇಶಗಳನ್ನು ತಳ್ಳುತ್ತಲೇ ಇರುತ್ತವೆ. ಇಂತಹ ಅನಪೇಕ್ಷಿತ ಸಂದೇಶಗಳೇ ತುಂಬಿಕೊಂಡಾಗ, ನಮಗೆ ಅಗತ್ಯವಿರುವ ಕೆಲವು ಮುಖ್ಯ ಸಂದೇಶಗಳು ನಮ್ಮ ಕಣ್ತಪ್ಪುವ ಅಪಾಯ ಇರುತ್ತದೆ. ಹೀಗಾಗಿ, ಪ್ರಾಧಿಕಾರವು ಇಂತಹ ಸಂಸ್ಥೆಗಳ ಕಿವಿ ಹಿಂಡಿ, ಸಾರ್ವಜನಿಕರಿಗಾಗುವ ತೊಂದರೆಗಳನ್ನು ದೂರ ಮಾಡಬೇಕು.

ಬಿ.ಎನ್.ಭರತ್, ಬೆಂಗಳೂರು

ಭ್ರೂಣಹತ್ಯೆ: ಆಯೋಗ ರಚಿಸಿ ಪ್ರಯೋಜನವೇನು?

ಹೆಣ್ಣು ಭ್ರೂಣಹತ್ಯೆ ತಡೆಯುವ ದಿಸೆಯಲ್ಲಿ ಪ್ರತ್ಯೇಕ ಆಯೋಗವನ್ನು ನೇಮಿಸಬೇಕು ಎಂದು ರೂಪ ಹಾಸನ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಸೆ. 9). ಹೆಣ್ಣು ಭ್ರೂಣ ಲಿಂಗ ಪತ್ತೆ ಮತ್ತು ಹತ್ಯೆ ಮಾಡುವವರಿಗೆ ಮೂರರಿಂದ ಐದು ವರ್ಷಗಳ ಜೈಲು ಶಿಕ್ಷೆ, ₹ 50 ಸಾವಿರ ದಂಡ ಮತ್ತು ಅವರ ವೈದ್ಯಕೀಯ ಪರವಾನಗಿ ರದ್ದುಪಡಿಸುವುದು ಮಾತ್ರವಲ್ಲದೆ ಅವರನ್ನು ಕಪ್ಪುಪಟ್ಟಿಗೆ ಸೇರಿಸುವ ಕಾನೂನು ಜಾರಿಗೆ ಬಂದು ಹಲವಾರು ವರ್ಷಗಳೇ ಆಗಿವೆ. ಆದರೆ ಇದುವರೆಗೂ ಒಬ್ಬರಿಗೂ ಶಿಕ್ಷೆ ಆದಂತಿಲ್ಲ. ಇನ್ನು ಆಯೋಗ ರಚಿಸಿ ಪ್ರಯೋಜನವೇನು? ಇರುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಸಾಕು.

ಆತಂಕದ ಸಂಗತಿ ಎಂದರೆ, 2011ರ ಜನಗಣತಿಯಂತೆ ರಾಜ್ಯದ 14 ಜಿಲ್ಲೆಗಳಲ್ಲಿ 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣುಮಕ್ಕಳ ಸಂಖ್ಯೆ 1,000ಕ್ಕೆ 924 ಇರುವುದು. ಮತ್ತೊಂದು ಆತಂಕದ ವಿಷಯವೆಂದರೆ, ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಪ್ರತಿ ಸಾವಿರ ಗಂಡುಮಕ್ಕಳಿಗೆ ಹೆಣ್ಣುಮಕ್ಕಳ ಸಂಖ್ಯೆ ಬರೀ 634ರಿಂದ 750 ಇರುವುದು. ಈಗಿರುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಮಾತ್ರ ಹೆಣ್ಣು ಭ್ರೂಣಹತ್ಯೆ ತಡೆಯಲು ಸಾಧ್ಯ.

ಬೂಕನಕೆರೆ ವಿಜೇಂದ್ರ, ಮೈಸೂರು

ರಾಜಕೀಯ ಲೆಕ್ಕಾಚಾರದ ಲಾಭ ಮುಖ್ಯಮಂತ್ರಿಗೆ!

ಸಂವಿಧಾನ ಅತ್ಯಂತ ಪವಿತ್ರವೆಂದು ದಿನಬೆಳಗಾದರೆ ಗಂಟಲು ಹರಿದುಕೊಳ್ಳುತ್ತಿರುವವರಿಗೆ, ದೇಶದ ಆಡಳಿತದ ಚುಕ್ಕಾಣಿ ಹಿಡಿದಿರುವ ಕೇಂದ್ರ ಸರ್ಕಾರಕ್ಕೆ, ಪರಮೋಚ್ಚ ನ್ಯಾಯಪೀಠವಾದ ಸುಪ್ರೀಂ ಕೋರ್ಟ್‌ಗೆ ಇವೆಲ್ಲಕ್ಕೂ ಸಡ್ಡು ಹೊಡೆದಂತಿರುವುದು ದೆಹಲಿಯ ಮುಖ್ಯಮಂತ್ರಿ ಪ್ರಕರಣ. ಅವರು ಜೈಲು ಸೇರಿ ಹಲವಾರು ತಿಂಗಳೇ ಕಳೆದುಹೋಗಿದ್ದರೂ ಅವರ ಜಾಗಕ್ಕೆ ಯಾರೂ ಇಲ್ಲದೆಯೇ ದೆಹಲಿ ಆಡಳಿತ ನಡೆಯುತ್ತಿರುವ ಪ್ರಸಂಗ. ಜನಪ್ರತಿನಿಧಿಯೆಂದರೆ ಯಾರೂ ಸ್ಪರ್ಶಿಸಲಾರದಷ್ಟು ಅವರು ವಜ್ರಕವಚಧಾರಿಯೇ? ಗುರುತರ ಅಪರಾಧದ ಆರೋಪಿಯಾಗಿ ಜೈಲು ಸೇರಿದ್ದರೂ ಅವರನ್ನು ಯಾವುದೂ ಕದಲಿಸಲು ಸಾಧ್ಯವಿಲ್ಲವೆಂದರೆ ಅದೆಂಥ ಕಾನೂನು? ಬೇರೆಯವರಿಗೆ ಅಧಿಕಾರ ವಹಿಸಿಕೊಡಿ ಎಂದು ಹೇಳಲು ಸಾಧ್ಯವಾಗುತ್ತಿಲ್ಲವೇಕೆ? ಈ ದೇಶದ ಒಬ್ಬ ಸಾಮಾನ್ಯ ಪ್ರಜೆಯನ್ನು ಕಾಡುವ ಪ್ರಶ್ನೆಗಳಿವು.

ಕೇಂದ್ರ ಸರ್ಕಾರ ತನ್ನದೇ ರಾಜಕೀಯ ಲೆಕ್ಕಾಚಾರದಿಂದ ರಾಷ್ಟ್ರಪತಿ ಆಡಳಿತ ಹೇರಲು ಹಿಂಜರಿಯುತ್ತಿದೆ. ಸರ್ಕಾರ ರಾಜಕೀಯವಾಗಿ ಪರಿಹರಿಸಬಹುದಾದ ಸಮಸ್ಯೆಯಲ್ಲಿ ತಾನೇಕೆ ತಲೆಹಾಕಬೇಕೆಂದು ಹೈಕೋರ್ಟ್ ಸುಮ್ಮನಿದೆ. ಇದರ ಲಾಭ ಜೈಲಲ್ಲಿರುವ ಮುಖ್ಯಮಂತ್ರಿಗೆ! ‘ಹಲಬರ ನಡುವಣ ಹಾವು ಸಾಯದು’ ಎಂಬ ಕನ್ನಡ ಗಾದೆಗೆ ಈ ಪ್ರಸಂಗ ಅತ್ಯುತ್ತಮ ನಿದರ್ಶನ. ವಿರೋಧ ಪಕ್ಷಗಳ ಕೆಂಗಣ್ಣು ಮತ್ತು ಕೆನ್ನಾಲಿಗೆಗೆ ಹೆದರಿ ಕುಳಿತಿರುವ ಕೇಂದ್ರ ಸರ್ಕಾರದ ದೌರ್ಬಲ್ಯಕ್ಕೂ ಇದೊಂದು ಜ್ವಲಂತ ನಿದರ್ಶನ. ಸ್ವಾತಂತ್ರ್ಯಾನಂತರದಲ್ಲಿ ಇಂತಹ ಒಗಟಿನಂಥ ಪ್ರಕರಣ ಇದೇ ಎನಿಸುತ್ತದೆ.

ಆರ್.ಲಕ್ಷ್ಮೀನಾರಾಯಣ, ಬೆಂಗಳೂರು

ಗಾದೆ ನೆನಪಾಯ್ತು!

‘ಎತ್ತಿನಹೊಳೆ ಯೋಜನೆಗೆ ಕೇಂದ್ರ ತಕರಾರು’– ಸುದ್ದಿ (ಪ್ರ.ವಾ., ಸೆ. 9).
‘ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು’ ಎಂಬ ಗಾದೆ ನೆನಪಾಯ್ತು!

ನಿಖಿತಾ ಶಶಾಂಕ್ ಭಟ್
ಬೆಂಗಳೂರು

ವಾಗ್ವಾದ ಸಾಕು, ತಾಂತ್ರಿಕ ವಿವರ ನೀಡಿ

ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಉದ್ಘಾಟನೆ ಬಗೆಗಿನ ಎರಡು ವರದಿಗಳು (ಪ್ರ.ವಾ., ಸೆ. 6) ಅದರ ಹಿನ್ನೆಲೆ, ಮುಂದಿನ ಕಾಮಗಾರಿಗಳ ಚಿತ್ರಣವನ್ನು ನೀಡಿವೆ. ಈ ನಡುವೆ ಮೂರು ಜಿಲ್ಲೆಗಳಿಗೆ (ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ) ಮೊದಲು ನೀರು ಕೊಡಿ ಎಂದು ಸಂಸದ ಸುಧಾಕರ್ ಹೇಳಿದ್ದಾರೆ. ಇದು ಕಾರ್ಯಸಾಧ್ಯವೆ? ಮೊದಲಿಗೆ ನೀರಿನ ಲಭ್ಯತೆ ಎಷ್ಟು ಎಂಬುದರ ಅರಿವು ಈಗಷ್ಟೇ ಆಗಲಿದೆ. ಅದು 24 ಟಿಎಂಸಿ ಅಡಿ ಆಗಲಾರದು, 10 ಟಿಎಂಸಿ ಅಡಿ ಒಳಗೇ ಎಂದು ಕೆಲವು ಅಧ್ಯಯನಗಳು ಹೇಳಿರುವುದನ್ನು ಉಲ್ಲೇಖಿಸಲಾಗುತ್ತಿದೆ.

ಕೊನೆಯ ಪ್ರದೇಶಗಳಿಗೆ (ಟೇಲ್ ಎಂಡ್) ನವೆಂಬರ್ 2026– ಮಾರ್ಚ್ 2027ರ ವೇಳೆಗೆ ನೀರು ಸಿಗುತ್ತದೆ ಎಂದು ರಾಜ್ಯ ಸರ್ಕಾರದಲ್ಲಿ ಇರುವವರು ಹೇಳಿದರೆ, ಡಿಸೆಂಬರ್ 2025– ಮಾರ್ಚ್ 2026ರ ವೇಳೆಗೆ ನೀರು ತುಂಬಿಸಿ ಎಂದು ಸುಧಾಕರ್ ಕೇಳಿದ್ದಾರೆ. ಗ್ರ್ಯಾವಿಟಿ ಕೆನಾಲ್ ಮತ್ತಿತರ ಹಲವು ಕೆಲಸಗಳು ಮುಗಿಯಬೇಕು ಎಂಬುದು ಅವರಿಗೆ ಗೊತ್ತಿರುತ್ತದೆ. ಒಟ್ಟಿನಲ್ಲಿ ಕರ್ನಾಟಕದ ಮೂರೂ ಪ್ರಮುಖ ರಾಜಕೀಯ ಪಕ್ಷಗಳು ಹಾಗೂ ಎರಡೂ ತುದಿಗಳ ಪರಿಸರಾಸಕ್ತರು ಇದನ್ನು ಒಂದು ವಾಗ್ವಾದ, ಮಾತಿನ ಮೇಲಾಟ ಮಾಡುವುದನ್ನು ನಿಲ್ಲಿಸಬೇಕು. ತಾಂತ್ರಿಕ ವಿವರ, ತೊಂದರೆಗಳನ್ನು ಪರಿಣತಿ ಉಳ್ಳವರೇ ಸಾರ್ವಜನಿಕವಾಗಿ ಹೇಳಿದರೆ ಒಳಿತು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋವಿಡ್ ಸೃಷ್ಟಿಸಿರುವ ಅಸಮಾನತೆಯನ್ನು ತೀವ್ರಗೊಳಿಸುತ್ತಿರುವ ತಾಂತ್ರಿಕ ಆವಿಷ್ಕಾರಗಳು

ಕಾರ್ಮಿಕರ ಆದಾಯಕ್ಕೆ ಎಐ ಪೆಟ್ಟು

ಕೋವಿಡ್‌ನಿಂದ ಅಸಮಾನತೆ ಹೆಚ್ಚಾಗಿದ್ದು, ಅದನ್ನು ಕೃತಕ ಬುದ್ಧಿಮತ್ತೆಯಂಥ ಆವಿಷ್ಕಾರಗಳು ಮತ್ತಷ್ಟು ಹೆಚ್ಚಿಸುತ್ತಿವೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಅಧ್ಯಯನ ತಿಳಿಸಿದೆ. ಜಿಡಿಪಿಯಲ್ಲಿ ಕಾರ್ಮಿಕರ ಆದಾಯದ ಪಾಲು ಕಡಿಮೆ ಆಗುತ್ತಿದೆ.

• ಬಿ.ವಿ.ಶ್ರೀನಾಥ್

ಜಾಗತಿಕ ಮಟ್ಟದಲ್ಲಿ ರೂಪಿಸಲಾಗಿದ್ದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿ) ಸಾಧಿಸಲು 2030ರ ಗಡುವನ್ನು ನಿಗದಿಗೊಳಿಸಲಾಗಿದೆ. ಗಡುವಿಗೆ ಇನ್ನು ಆರು ವರ್ಷಗಳಷ್ಟೇ ಬಾಕಿ ಇದ್ದರೂ, ಕ್ರಮಿಸಬೇಕಾದ ಹಾದಿ ಇನ್ನೂ ಬಹುದೂರ ಇದ್ದು, ಅಸಾಧ್ಯವೆನ್ನುವಂತಿದೆ. ಜಿಡಿಪಿಯಲ್ಲಿ ಕಾರ್ಮಿಕರ ಆದಾಯದ ಪಾಲು ಇಳಿಕೆಯಾಗುತ್ತಿರುವುದು ಕೂಡ ಈ ದಿಸೆಯಲ್ಲಿ ಒಂದು ಹಿನ್ನಡೆಯಾಗಿದೆ. ಈ ಬಗ್ಗೆ ಐಎಲ್‌ಒ ‘ವರ್ಲ್ಡ್ ಎಂಪ್ಲಾಯ್‌ಮೆಂಟ್ ಆ್ಯಂಡ್ ಸೋಷಿಯಲ್ ಔಟ್‌ಲುಕ್–ಸೆಪ್ಟೆಂಬರ್ 2024’ ಎನ್ನುವ ಅಧ್ಯಯನ ವರದಿಯನ್ನು ಪ್ರಕಟಿಸಿದೆ.

ಕಾರ್ಮಿಕರ ಆದಾಯದ ಪಾಲು (Labour income share) ಎಂದರೆ, ಒಂದು ಆರ್ಥಿಕತೆಯ ಒಟ್ಟು ಆದಾಯದಲ್ಲಿ ಕಾರ್ಮಿಕರು ಗಳಿಸುವ ಪಾಲು. ಬಂಡವಾಳದಿಂದ ಬರುವ ಆದಾಯ (capital income) ಎಂದರೆ, ಭೂಮಿ, ಯಂತ್ರ, ಕಟ್ಟಡ, ಪೇಟೆಂಟ್‌ಗಳಿಂದ ಬರುವ ಆದಾಯ. ಇವೆರಡನ್ನೂ ಸೇರಿಸಿದರೆ, ರಾಷ್ಟ್ರೀಯ ಆದಾಯ (National income) ಸಿಗುತ್ತದೆ.

ಕಾರ್ಮಿಕರ ಆದಾಯದ ಪಾಲು ಬಹಳ ಹಿಂದಿನಿಂದಲೂ ಕುಸಿಯುತ್ತಲೇ ಇದೆ. 2004ರಿಂದ 2024ರವರೆಗೆ ಕಾರ್ಮಿಕರ ಆದಾಯದ ಪಾಲಿನಲ್ಲಿ ಶೇ 1.6 ಅಂಕಗಳಷ್ಟು ಕುಸಿತವಾಗಿದೆ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ, ಕಳೆದ ಎರಡು ದಶಕಗಳಲ್ಲಿ ಉಂಟಾದ ಕುಸಿತದಲ್ಲಿ ಶೇ 40ರಷ್ಟು 2020–2022ರ ಅವಧಿಯಲ್ಲಿಯೇ ಸಂಭವಿಸಿದೆ. ನಂತರ ಅದು ಸ್ಥಿರವಾಗಿದೆ.

ಶೇಕಡಾವಾರಿನಲ್ಲಿ ಈ ಕುಸಿತವು ದೊಡ್ಡದು ಎಂದು ಅನ್ನಿಸದೇ ಇರಬಹುದು. ಹಣದಲ್ಲಿ ಲೆಕ್ಕ ಹಾಕಿದಾಗ ಅದರ ತೀವ್ರತೆ ಅರಿವಾಗುತ್ತದೆ. 2004ರ ಕಾರ್ಮಿಕರ ಆದಾಯದ ಪಾಲು ಸ್ಥಿರವಾಗಿಯೇ ಮುಂದುವರಿದಿದ್ದಲ್ಲಿ 2024ಕ್ಕೆ ಅವರು ₹201 ಲಕ್ಷ ಕೋಟಿಯಷ್ಟು (2.4 ಟ್ರಿಲಿಯನ್ ಡಾಲರ್) ಹೆಚ್ಚು ಆದಾಯ ಗಳಿಸುತ್ತಿದ್ದರು. ಕಾರ್ಮಿಕರ ಆದಾಯದ ಪಾಲಿನ ಕುಸಿತದಿಂದಾಗಿ ಅಸಮಾನತೆಯ ಪ್ರಮಾಣವೂ ಹೆಚ್ಚಾಗುತ್ತಿದೆ. ಏಕೆಂದರೆ, ಬಂಡವಾಳದಿಂದ ಬರುವ ಆದಾಯಕ್ಕೆ ಹೋಲಿಸಿದರೆ, ಕಾರ್ಮಿಕರ ಆದಾಯದ ಪಾಲು ಹೆಚ್ಚು ಸಮನಾಗಿ ಹಂಚಿಕೆಯಾಗಿರುತ್ತದೆ.

ಬಂಡವಾಳದಿಂದ ಬರುವ ಆದಾಯವು ಉದ್ಯಮಿಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ, ಕಾರ್ಮಿಕರ ಆದಾಯದ ಪಾಲನ್ನು ಅಸಮಾನತೆ ಅಳೆಯಲು ವ್ಯಾಪಕವಾಗಿ ಬಳಸಲಾಗುತ್ತದೆ. ಹಾಗೆಯೇ ಇದನ್ನು ಸುಸ್ಥಿರ ಅಭಿವೃದ್ಧಿ ಗುರಿ 10ರ (ದೇಶಗಳ ನಡುವಿನ ಮತ್ತು ಒಳಗಿನ ಅಸಮಾನತೆ ಹೋಗಲಾಡಿಸುವುದು) ಪ್ರಗತಿಯನ್ನು ಅಳೆಯಲು ಕೂಡ ಬಳಸಲಾಗುತ್ತಿದೆ.

ಕಳೆದ ಎರಡು ದಶಕಗಳಲ್ಲಿ ರಾಷ್ಟ್ರೀಯ ಆದಾಯದಲ್ಲಿ ಕಾರ್ಮಿಕರ ಆದಾಯದ ಪಾಲು ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದೆ. 1980ರಷ್ಟು ಹಿಂದೆಯೇ ಈ ಕುಸಿತ ಆರಂಭವಾಗಿದೆ. ನಡುವೆ ಆಗಾಗ್ಗೆ (2008–10ರಲ್ಲಿ ಆದಂತೆ) ಆರ್ಥಿಕ ಬಿಕ್ಕಟ್ಟಿನ ಅವಧಿಯಲ್ಲಿ ಅಲ್ಪಮಟ್ಟದಲ್ಲಿ ಏರಿಕೆಯಾಗಿದೆ. 2019ರಲ್ಲಿ ಕಾರ್ಮಿಕರ ಆದಾಯದ ಪಾಲು ಶೇ 52.9 ಆಗಿತ್ತು. ಜಾಗತಿಕ ಆರ್ಥಿಕತೆಯು ಕೋವಿಡ್ ಹೊಡೆತದಿಂದ ಹೊರಬಂದು ಚೇತರಿಕೆ ಕಂಡ ನಂತರ ಅದು ಕೋವಿಡ್‌ಪೂರ್ವ ದಿನಗಳಿಗೇ ವಾಪಸ್ ಆಗಿದೆ (2020ರ ಅಲ್ಪ ಅವಧಿಯ ಏರಿಕೆ ಹೊರತುಪಡಿಸಿ). 2022ರಲ್ಲಿ ಅದರ ಪ್ರಮಾಣವು ಶೇ 52.3 ಇತ್ತು. 2023–24ರ ಅಂದಾಜಿನಂತೆ, ಕಾರ್ಮಿಕರ ಆದಾಯದ ಪಾಲು ಕೋವಿಡ್‌ಪೂರ್ವ ದಿನಗಳಿಗಿಂತಲೂ ಶೇ 0.6 ಅಂಶಗಳಷ್ಟು ಕುಸಿಯಲಿದೆ. ಕಾರ್ಮಿಕರ ಆದಾಯದ ಪಾಲು ಕುಸಿಯಲು ಉತ್ಪಾದನಾ ಮಾರುಕಟ್ಟೆ, ಬಂಡವಾಳ ಮಾರುಕಟ್ಟೆ, ಕಾರ್ಮಿಕ ಮಾರುಕಟ್ಟೆ ಮತ್ತು ಜಾಗತೀಕರಣದಂಥ ಹಲವು ಕಾರಣಗಳಿವೆ. ಆದರೆ, ಬಹುಮುಖ್ಯ ಕಾರಣ, ಕೃತಕ ಬುದ್ಧಿಮತ್ತೆಯಂತಹ (ಎಐ) ತಾಂತ್ರಿಕ ಆವಿಷ್ಕಾರಗಳು. ಚಾಟ್ ಜಿಪಿಟಿಯಂಥ ಎಐ ಸಾಧನಗಳಿಂದ ಕಾರ್ಮಿಕ ಆದಾಯದ ಪಾಲು ಕುಸಿತ ಕಂಡಿದೆ. 36 ದೇಶಗಳಲ್ಲಿ ನಡೆಸಿದ ಅಧ್ಯಯನದಿಂದ ಇದು ದೃಢಪಟ್ಟಿದೆ.

ತಾಂತ್ರಿಕ ಬೆಳವಣಿಗೆಯು ಆರ್ಥಿಕ ಅಭಿವೃದ್ಧಿಯ ಪ್ರಮುಖ ಸಾಧನ. ತಾಂತ್ರಿಕತೆಯ ಬೆಳವಣಿಗೆಯು ಜಾಗತಿಕ ಮಟ್ಟದಲ್ಲಿ ಜಿಡಿಪಿ ಬೆಳವಣಿಗೆ ದರವನ್ನು ದುಪ್ಪಟ್ಟು ಮಾಡಬಹುದೆನ್ನುವ ಅಂದಾಜಿದೆ (2024ರಲ್ಲಿ ಶೇ 3.2). ಇದೇ ವೇಳೆ ಅದು ಕಾರ್ಮಿಕರ ಆದಾಯದ ಪಾಲನ್ನು ಕಡಿಮೆ ಮಾಡಿದೆ. ಹಾಗೆಂದು ಎಐನಿಂದ ಪ್ರತಿಕೂಲ ಪರಿಣಾಮಗಳು ಸಂಭವಿಸುತ್ತವೆ ಎಂಬುದು ಎಲ್ಲ ಕಾಲಕ್ಕೂ ಅನ್ವಯಿಸಬಹುದಾದ ಸತ್ಯ ಎಂದೇನಲ್ಲ. ಇಲ್ಲಿ ನೀತಿ ನಿರೂಪಣೆಯು ಪ್ರಮುಖ ಪಾತ್ರ ವಹಿಸುತ್ತದೆ. ಎಐ ಬೆಳವಣಿಗೆಯು ಅಸಮಾನತೆಯನ್ನು ಹೆಚ್ಚಿಸದಂತೆ ನಿಯಮಗಳಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಮತ್ತು ಅದರ (ಎಐ) ಪ್ರಯೋಜನವು ಎಲ್ಲರಿಗೂ ಸಮನಾಗಿ ದಕ್ಕುವಂತೆ ಮಾಡಬೇಕಾದ ಅಗತ್ಯದ ಕಡೆಗೆ ಅಧ್ಯಯನವು ಗಮನ ಸೆಳೆಯುತ್ತದೆ.

ಚಾಟ್ ಜಿಪಿಟಿಯಂಥ ಎಐ ಸಾಧನಗಳ ಬೆಳವಣಿಗೆಯ ಜತೆಯಲ್ಲೇ ಕಾರ್ಮಿಕ ಪಡೆಯನ್ನು ಅದನ್ನು ಬಳಸಲು ಅಗತ್ಯವಾದ ಶಿಕ್ಷಣ, ತರಬೇತಿ ಮತ್ತು ಕೌಶಲವನ್ನು ಕಲಿಯುವಂತೆ ಉತ್ತೇಜಿಸುವುದು ಬಹಳ ಮುಖ್ಯವಾದುದು. ಇದರಿಂದ ದೀರ್ಘ ಕಾಲದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ವರದಿ ತಿಳಿಸಿದೆ.

2004–2024ರವರೆಗಿನ ಕಾರ್ಮಿಕ ಆದಾಯದ ಪಾಲು



ಲಿಂಗ ಅಸಮಾನತೆ ಹೆಚ್ಚಳ

ಆದಾಯವನ್ನು ಕಾರ್ಮಿಕರ ಆದಾಯದ ಪಾಲು, ಬಂಡವಾಳದಿಂದ ಬರುವ ಪಾಲು ಎಂದು ವಿಂಗಡಿಸಿ ನೋಡುವುದರ ಜತೆಗೆ, ಅಸಮಾನತೆಯನ್ನು ಅರಿಯಲು ಇನ್ನೂ ಹಲವು ಮಾನದಂಡಗಳನ್ನು ಬಳಸಲಾಗುತ್ತದೆ. ಅವುಗಳಲ್ಲಿ ಮುಖ್ಯವಾದದ್ದು ಕಾರ್ಮಿಕರ ಆದಾಯದ ಹಂಚಿಕೆ. ಅಂದರೆ, ಕಾರ್ಮಿಕರ ಆದಾಯದ ಪಾಲಿನಲ್ಲಿರುವ ಲಿಂಗ ಅಸಮಾನತೆ. ಜಾಗತಿಕ ಮಟ್ಟದಲ್ಲಿ ಕಾರ್ಮಿಕರ ಆದಾಯದಲ್ಲಿ ಗಣನೀಯ ಪ್ರಮಾಣದ ಲಿಂಗ ಅಂತರ ಕಂಡುಬಂದಿದೆ. 2005ರಲ್ಲಿ ಜಾಗತಿಕ ಮಟ್ಟದಲ್ಲಿ ಮಹಿಳೆಯರು ಮತ್ತು ಪುರುಷರ ಕಾರ್ಮಿಕ ಆದಾಯದ ಅನುಪಾತ ಶೇ 46.8ರಷ್ಟಿತ್ತು. ಅಂದರೆ, ಕಾರ್ಮಿಕ ಆದಾಯವಾಗಿ ಪುರುಷ ಗಳಿಸುವ ಪ್ರತಿ ಒಂದು ಡಾಲರ್‌ಗೆ ಮಹಿಳೆ ಅದರ ಶೇ 47ರಷ್ಟನ್ನು ಮಾತ್ರ ಗಳಿಸುತ್ತಿದ್ದಾಳೆ. 2024ರ ಹೊತ್ತಿಗೆ ಈ ಅನುಪಾತವು ಶೇ 51.8 ಆಗಿದ್ದು, ಅಲ್ಪ ಚೇತರಿಕೆ ಕಂಡಿದೆ. ಪ್ರದೇಶದಿಂದ ಪ್ರದೇಶಕ್ಕೆ ಈ ಅನುಪಾತದಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಮಹಿಳೆಯರು ಮತ್ತು ಪುರುಷರ ಕಾರ್ಮಿಕ ಆದಾಯದ ಅನುಪಾತ*

ಪ್ರದೇಶ	2005	2024
ಜಾಗತಿಕ ಮಟ್ಟ	46.8	51.8
ಆಫ್ರಿಕಾ	34.9	34.7
ಅಮೆರಿಕ	54.0	64.7
ಅರಬ್ ರಾಷ್ಟ್ರಗಳು	12.1	12.4
ಏಷ್ಯಾ ಮತ್ತು ಪೆಸಿಫಿಕ್	36.8	44.2
ಯುರೋಪ್ ಮತ್ತು ಸೆಂಟ್ರಲ್ ಏಷ್ಯಾ	53.9	61.9

* ಮಹಿಳೆಯರ ಕಾರ್ಮಿಕ ಆದಾಯ ಮತ್ತು ಪುರುಷರ ಕಾರ್ಮಿಕ ಆದಾಯದ ಅನುಪಾತವು 100ಕ್ಕಿಂತ ಕಡಿಮೆ ಇದ್ದರೆ, ಮಹಿಳೆಯರು ಪುರುಷರಿಗಿಂತ ಕಡಿಮೆ ಗಳಿಸುತ್ತಿದ್ದಾರೆ ಎಂದು ಅರ್ಥ. ಈ ಅನುಪಾತವು 100 ಆಗಿದ್ದರೆ, ಅದು ಗಳಿಕೆಯಲ್ಲಿ ಸಮಾನತೆ ಇದೆ ಎನ್ನುವುದನ್ನು ಸೂಚಿಸುತ್ತದೆ.

2005 ಮತ್ತು 2024ರ ಎನ್‌ಇಇಟಿ ದರ



ನಿರುದ್ಯೋಗ ಏರಿಕೆ

ಉದ್ಯೋಗ, ಶಿಕ್ಷಣ ಅಥವಾ ತರಬೇತಿಯಲ್ಲಿ ಇಲ್ಲದ ಯುವಜನರ ಸಂಖ್ಯೆಯು (ಎನ್‌ಇಇಟಿ) 2015ರಿಂದ ಈಚೆಗೆ ಅಲ್ಪ ಮಟ್ಟಿಗೆ ಕುಸಿದಿದ್ದು, 2024ರಲ್ಲಿ ಅದರ ಪ್ರಮಾಣವು ಶೇ 20.4 ಆಗಿದೆ. ಅರಬ್ ರಾಷ್ಟ್ರಗಳಲ್ಲಿ ಇದರ ಪ್ರಮಾಣ ಹೆಚ್ಚಾಗಿದೆ (ಶೇ 33.3).

2015ರಲ್ಲಿ ಎನ್‌ಇಇಟಿ ದರವನ್ನು ಕಡಿಮೆ ಮಾಡುವ ಸುಸ್ಥಿರ ಅಭಿವೃದ್ಧಿ ಗುರಿಯನ್ನು ಹೊಂದಲಾಗಿತ್ತು. ಆಗ ಎನ್‌ಇಇಟಿಯ ಜಾಗತಿಕ ಪ್ರಮಾಣವು ಶೇ 21.3ರಷ್ಟಿತ್ತು. ಈ ಪ್ರಮಾಣವು 2025 ಮತ್ತು 2026ರಲ್ಲಿಯೂ 20.4ರ ಸನಿಹದಲ್ಲಿಯೇ ಇರುತ್ತದೆ ಎಂದು ಅಂದಾಜಿಸಲಾಗಿದೆ. 2015 ಮತ್ತು 2024ರ ನಡುವೆ ಯುವಜನತೆಯ ಸಂಖ್ಯೆ ಹೆಚ್ಚಾಗಿದ್ದರೂ, ಎನ್‌ಇಇಟಿ ಪ್ರಮಾಣ ಸ್ಥಿರವಾಗಿದೆ. ಅದಕ್ಕಿಂತಲೂ ಗಂಭೀರ ವಿಚಾರವೆಂದರೆ, ಎನ್‌ಇಇಟಿ ಪ್ರಮಾಣವು ಮುಂದಿನ ದಿನಗಳಲ್ಲಿ ಹೆಚ್ಚಾಗುವ ಸಾಧ್ಯತೆಯೂ ಇದೆ.

ಉದ್ಯೋಗ ಮತ್ತು ಶಿಕ್ಷಣದ ಲಭ್ಯತೆಯಲ್ಲಿ ಲಿಂಗ ಅಸಮಾನತೆ ಇನ್ನೂ ದೊಡ್ಡ ಮಟ್ಟದಲ್ಲಿದೆ ಎನ್ನುವುದನ್ನು ಎನ್‌ಇಇಟಿಯ ಅಂಕಿಅಂಶಗಳು ತೋರಿಸುತ್ತವೆ. ಕಳೆದ ಎರಡು ದಶಕಗಳಿಂದ ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳು ನಡೆಯುತ್ತಿದ್ದರೂ ಆಗಿರುವ ಪ್ರಗತಿ ಕಡಿಮೆ. 2024ರಲ್ಲಿ ಪುರುಷರ ಎನ್‌ಇಇಟಿ ಪ್ರಮಾಣವು ಶೇ 13.1 ಇದ್ದರೆ, ಮಹಿಳೆಯರ ಎನ್‌ಇಇಟಿ ದರವು ಅದರ ಎರಡರಷ್ಟಿದೆ (ಶೇ 28.2).

ಎನ್‌ಇಇಟಿಯಲ್ಲಿ ಲಿಂಗ ಅಂತರ ಅರಬ್ ರಾಷ್ಟ್ರಗಳಲ್ಲಿ ಹೆಚ್ಚಿದ್ದು, ಅದು 25.3 ಪಿಪಿ ಇದೆ. (ಪಿಪಿ- ಶೇಕಡಾವಾರು ಅಂಕಗಳು; ಪರ್ಸೆಂಟೇಜ್ ಪಾಯಿಂಟ್ಸ್). ಏಷ್ಯಾ ಮತ್ತು ಪೆಸಿಫಿಕ್‌ನಲ್ಲಿ 19.1 ಪಿಪಿ, ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್‌ನಲ್ಲಿ 17.6 ಪಿಪಿ, ಆಫ್ರಿಕಾದಲ್ಲಿ 12.5 ಪಿಪಿ ಇದೆ. ಯುರೋಪ್ ಮತ್ತು ಸೆಂಟ್ರಲ್ ಏಷ್ಯಾ (3.5 ಪಿಪಿ) ಹಾಗೂ ಉತ್ತರ ಅಮೆರಿಕದಲ್ಲಿ (0.2 ಪಿಪಿ) ಲಿಂಗ ಅಂತರ ಅತಿ ಕಡಿಮೆ ಇದೆ.

ಆಧಾರ: ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ‘ವರ್ಲ್ಡ್ ಎಂಪ್ಲಾಯ್‌ಮೆಂಟ್ ಆ್ಯಂಡ್ ಸೋಷಿಯಲ್ ಔಟ್‌ಲುಕ್–ಸೆಪ್ಟೆಂಬರ್ 2024’ ವರದಿ

ಸಿನಿಮಾವಾಗುತ್ತಿದೆ ‘ಜುಗಾರಿ ಕ್ರಾಸ್’



ಕಳೆದ ವರ್ಷ ತೆರೆಯ ಮೇಲೆ ಹೆಸರಾಂತ ಲೇಖಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಥೆಯಾಧಾರಿತ ‘ಡೇರ್‌ಡೆವಿಲ್ ಮುಸ್ತಾಫಾ’ ಸಿನಿಮಾ ತೆರೆಕಂಡಿತ್ತು. ಇದೀಗ ಅವರ ಮತ್ತೊಂದು ಕೃತಿ ಸಿನಿಮಾವಾಗಲಿದೆ.

ತೇಜಸ್ವಿ ಅವರ ‘ಜುಗಾರಿ ಕ್ರಾಸ್’ ಮಲೆನಾಡಿನ ಕೃಷಿಕ ದಂಪತಿಯ ಸ್ವಾರಸ್ಯಕರ ಕಥೆಯನ್ನು ಹೇಳುತ್ತದೆ. ಓದುಗರ ನೆಚ್ಚಿನ ಕೃತಿಗಳಲ್ಲಿ ಒಂದಾದ ಇದನ್ನು ಸಿನಿಮಾವಾಗಿ ತೆರೆಮೇಲೆ ತರುವ ಸಾಹಸಕ್ಕೆ ಮುಂದಾಗಿರುವುದು ನಿರ್ದೇಶಕ ಗುರುದತ್ ಗಾಣಿಗ. ಸದ್ಯ ‘ಕರಾವಳಿ’ ಸಿನಿಮಾ ನಿರ್ದೇಶಿಸಿ ಅದರ ಬಿಡುಗಡೆಗೆ ಸಿದ್ಧತೆ ನಡೆಸುತ್ತಿರುವಾಗಲೇ ಹೊಸ ಸಿನಿಮಾವನ್ನು ಘೋಷಿಸಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅವರ ಜನ್ಮದಿನದಂದೇ ‘ಜುಗಾರಿ ಕ್ರಾಸ್’ ಸಿನಿಮಾ ನಿರ್ಮಾಣದ ಬಗ್ಗೆ ಚಿತ್ರತಂಡ ಘೋಷಿಸಿದೆ. ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆಯಾಗಿದ್ದು, ಸಿನಿಮಾವನ್ನು ಗುರುದತ್ ಗಾಣಿಗ ಫಿಲ್ಮ್ ಹಾಗೂ ಸಪ್ತಗಿರಿ ಎಂಟರ್‌ಟೇನ್ಮೆಂಟ್ ನಿರ್ಮಾಣ ಮಾಡುತ್ತಿದೆ.

‘ಜುಗಾರಿ ಕ್ರಾಸ್’ ಅನ್ನು ಸಿನಿಮಾ ಮಾಡಬೇಕೆಂದು ಕನಸು ಕಂಡವರು ಅನೇಕರು. ಆದರೆ ಅವು ಕಾರ್ಯರೂಪಕ್ಕೆ ಬಂದಿರಲಿಲ್ಲ. ಇದೀಗ ಕೊನೆಗೂ ಕಾಲ ಕೂಡಿ ಬಂದಿದೆ. ಶೀಘ್ರದಲ್ಲೇ ಚಿತ್ರದ ಕಲಾವಿದರನ್ನು ಪರಿಚಯಿಸಲಾಗುವುದು’ ಎಂದಿದೆ ಚಿತ್ರತಂಡ. ಚಿತ್ರಕ್ಕೆ ಅಭಿಮನ್ಯು ಸದಾನಂದನ್ ಛಾಯಾಚಿತ್ರಗ್ರಹಣವಿರಲಿದೆ.

ಆರಾಮ್ ಅರವಿಂದ ಸ್ವಾಮಿ ಚಿತ್ರದ ಪೋಸ್ಟರ್

ನವೆಂಬರ್‌ನಲ್ಲಿ ಬರ್ತಾನೆ ಆರಾಮ್ ಅರವಿಂದ ಸ್ವಾಮಿ

ಆರಂಭದಿಂದಲೂ ಭಿನ್ನವಾದ ಪ್ರಚಾರ ಶೈಲಿಯ ಮೂಲಕ ಗಮನಸೆಳೆಯುತ್ತಿರುವ ‘ಆರಾಮ್ ಅರವಿಂದ ಸ್ವಾಮಿ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ನವೆಂಬರ್‌ನಲ್ಲಿ ಸಿನಿಮಾ ತೆರೆಕಾಣಲಿದೆ ಎಂದು ಚಿತ್ರತಂಡ ಘೋಷಿಸಿದೆ.

ಅಭಿಷೇಕ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಅನೀಶ್ ತೇಜೇಶ್ವರ್ ನಾಯಕನಾಗಿ ನಟಿಸಿದ್ದಾರೆ. ನವೆಂಬರ್‌ನಲ್ಲಿ ಸಿನಿಮಾ ಬರಲಿದೆ ಅನ್ನೋದನ್ನಷ್ಟೇ ಚಿತ್ರತಂಡ ಘೋಷಿಸಿದ್ದು ದಿನಾಂಕವನ್ನು ಶೀಘ್ರದಲ್ಲೇ ತಿಳಿಸಲಾಗುವುದು ಎಂದಿದೆ. ಮಾಸ್ ಸಿನಿಮಾಗಳಲ್ಲಿಯೇ ಹೆಚ್ಚಾಗಿ ನಟಿಸಿರುವ ಅನೀಶ್ ‘ಆರಾಮ್ ಅರವಿಂದ್ ಸ್ವಾಮಿ’ ಸಿನಿಮಾ ಮೂಲಕ ರೊಮ್ಯಾಂಟಿಕ್ ಕಾಮಿಡಿ ಕಥಾಹಂದರದ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ‘ನಮ್ ಗಣಿ ಬಿಕಾಂ ಪಾಸ್’ ಹಾಗೂ ‘ಗಜಾನನ ಆ್ಯಂಡ್ ಗ್ಯಾಂಗ್’ ಸಿನಿಮಾ ಬಳಿಕ ಅಭಿಷೇಕ್ ಶೆಟ್ಟಿ ಕೈಗೆತ್ತಿಕೊಂಡಿರುವ ಪ್ರಾಜೆಕ್ಟ್ ಇದಾಗಿದೆ. ಅನೀಶ್‌ಗೆ ಮಿಲನಾ ನಾಗರಾಜ್ ಹಾಗೂ ಹೃತಿಕ ಶ್ರೀನಿವಾಸ್ ಜೋಡಿಯಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಶ್ರೀಕಾಂತ್ ಪ್ರಸನ್ನ ಹಾಗೂ ಪ್ರಶಾಂತ್ ರೆಡ್ಡಿ ನಿರ್ಮಾಣ ಮಾಡಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಎಲ್ಲರೂ ಒಟ್ಟಾಗಿ ಬದುಕಬೇಕು!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

19

ಚೀನಾದ ತತ್ವಜ್ಞಾನಿ ಲಾವೋತ್ಸೆ ಒಂದೆಡೆ ಹೇಳುತ್ತಾನೆ, ‘ಭೂಮಿ ವಿಶಾಲವಾಗಿರಬೇಕು, ಜನಸಂಖ್ಯೆ ಕಡಿಮೆ ಇರಬೇಕು, ಅನ್ನ, ನೀರಿಗೆ ಕೊರತೆ ಇರಬಾರದು, ಅಲ್ಲಿ ಎಲ್ಲ ಜಾತಿ ಜನಾಂಗದ ಜನ ಪ್ರೀತಿಯಿಂದ ಇರಬೇಕು, ಅದು ಸ್ವರ್ಗ’ ಅಂತ. ನಮ್ಮ ಜನ ಮಂಗಳ ಗ್ರಹಕ್ಕೆ ಹೋಗಿ ಬಂದರು. ಜಲಮಾರ್ಗದ ಮೂಲಕ ಹುಡುಕಾಟ ನಡೆಸಿದರು. ಆದರೂ ಭೂಮಿಯಂತಹ ಸ್ವರ್ಗ ಎಲ್ಲಿಯೂ ಸಿಗಲಿಲ್ಲ. ಇಲ್ಲಿರುವ ಪಶು ಪಕ್ಷಿ ಪ್ರಾಣಿಗಳೂ ಮನುಷ್ಯನಿಗೆ ಸಹಕಾರ ಕೊಟ್ಟಿವೆ. ಯಾಕೆ ಕೊಟ್ಟಿವೆ ಎಂದರೆ, ಮನುಷ್ಯ ಸಂತೋಷವಾಗಿ ಬದುಕಬೇಕು ಅಂತ. ನನ್ನ ಜೊತೆ ಎಲ್ಲರೂ ಬದುಕಬೇಕು ಎಂಬ ಭಾವ ಬಂತು ಅಂದ್ರ ಭೂಮಿ ದೊಡ್ಡದಾಗುತ್ತದೆ.

ಅಶೋಕ ಚಕ್ರವರ್ತಿ ಕಳಿಂಗ ಯುದ್ಧ ಗೆದ್ದ. ಯುದ್ಧ ಮುಗಿದ ನಂತರ ಯುದ್ಧಭೂಮಿಯನ್ನು ನೋಡಿ ಬರೋಣ ಅಂತ ಹೊರಟ. ಅಲ್ಲಿ ಸಾವಿರಾರು ಮಕ್ಕಳು ತಂದೆಯನ್ನು ಕಳೆದುಕೊಂಡು ಅಳುತ್ತಿದ್ದರು. ಸಾವಿರಾರು ಮಹಿಳೆಯರು ಗಂಡನನ್ನು ಕಳೆದುಕೊಂಡು ಗೋಳಿಡುತ್ತಿದ್ದರು. ಮಗನನ್ನು ಕಳೆದುಕೊಂಡು ಅಳುತ್ತಿದ್ದ ಒಂದು ಮುದುಕಿ ಅಶೋಕನಿಗೆ ‘ನೀನು ಯಾರು’ ಅಂತ ಕೇಳಿದಳು. ‘ಈ ಕಳಿಂಗ ಯುದ್ಧವನ್ನು ಗೆದ್ದಿನಲ್ಲ, ನಾನೇ ಅಶೋಕ’ ಎಂದು ಉತ್ತರಿಸಿದ ಚಕ್ರವರ್ತಿ. ‘ನೀನು ಅಶೋಕ ಹ್ಯಾಂಗ್ ಆಗತೀಯ. ಬರೀ ನಿನ್ನ ಹೆಸರು ಅಶೋಕ ಅಷ್ಟೆ. ಯಾರಿಗೆ ಅಶೋಕ ಎನಬೇಕು? ಯಾವ ವ್ಯಕ್ತಿ ಇರುವಲ್ಲಿ ಶೋಕ ಇರುವುದಿಲ್ಲವೋ ಅಂತಹ ವ್ಯಕ್ತಿಗೆ ಮಾತ್ರ ಅಶೋಕ ಎನಬೇಕು. ನೀ ಹ್ಯಾಂಗ ಅಶೋಕ ಆಗ್ತಿ. ನೀನು ಹೆಣಗಳ ದಿಬ್ಬಣದ ಮೇಲೆ ಸಾಮ್ರಾಜ್ಯ ಕಟ್ಟಿದಿ. ಸಾವಿರ ಸಾವಿರ ಅನಾಥ ಮಕ್ಕಳ ಗೋರಿಯ ಮೇಲೆ ಕಟ್ಟಿದ ಸಾಮ್ರಾಜ್ಯ ಉಳೀಲಿಕ್ಕೆ ಸಾಧ್ಯ ಅದ ಏನು? ಸಾವಿರ ಸಾವಿರ ಮಹಿಳೆಯರನ್ನು ವಿಧವೆಯರನ್ನಾಗಿ ಮಾಡಿದ ನಿನ್ನ ಸಾಮ್ರಾಜ್ಯ ಶಾಶ್ವತವೇನು? ಅಶೋಕ, ನೀನು ಯುದ್ಧದಲ್ಲಿ ಗೆದ್ದಿರಬಹುದು. ಆದರೆ ಜೀವನದಲ್ಲಿ ಸೋತಿದ್ದೀಯ’ ಎಂದಳು. ಆ ಮುದುಕಿಯ ಮಾತು ಅಶೋಕನಿಗೆ ನಾಟಿತು. ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟ. ಯುದ್ಧಭೂಮಿಯಿಂದ ಬುದ್ಧಭೂಮಿಯತ್ತ ನಡೆದ. ಅದಕ್ಕಾಗಿ ಅವ ದೇವಾನಾಂಪ್ರಿಯ ಅಶೋಕ ಆದ.

ಮನುಷ್ಯನ ಆಸೆಗಳಿಂದ ಜಗತ್ತು ಸಣ್ಣದಾಗುತ್ತದೆ. ಮನುಷ್ಯ ಇರುವಿಕೆಗಿಂತ ತೋರುವಿಕೆಗೆ ಬಹಳ ಪ್ರೀತಿ ಮಾಡ್ತಾನ. ಆಡಂಬರದ ಬದುಕು ಅವನನ್ನ ಅಟ್ರಾಕ್ಟ್ ಮಾಡತೈತಿ. ಒಂದು ಹೆಣಮಗಳು ಮಗುನ ತೊಟ್ಲಾಗ ಹಾಕಿದ್ಲು. ಸಂಬಂಧಿಗಳೆಲ್ಲಾ ಬಂದಿದ್ದರು. ಮಗು ಅಳುತ್ತಿತ್ತು. ‘ಬಂಗಾರ ಹಾಕೇನಿ, ಹೂವು ಹಾಕೇನಿ, ಬಣ್ಣಬಣ್ಣದ ಬಲೂನು ಕಟ್ಟೇನಿ, ಆದರೂ ಮಗು ಯಾಕೆ ಅಳತೈತಿ’ ಎಂದು ಕೇಳಿದಳಂತೆ. ಅದಕ್ಕೆ ಮುದುಕಿಯೊಬ್ಬಳು ‘ಬಂಗಾರದ ತೊಟ್ಟಿಲು, ಬೆಳ್ಳಿ ಕಾಲಕಡಗ ಹಾಕಿದಿ. ತೋರಣ ಕಟ್ಟೇದಿ. ಆದರೆ ಮಗುವಿಗೆ ಹಾಲು ಕುಡಿಸಿದಿಯೋ ಇಲ್ಲೋ’ ಎಂದು ಕೇಳಿದಳಂತೆ. ‘ಇಲ್ಲ ಅದನ್ನೇ ಮರೆತೇನಿ’ ಅಂದಳಂತೆ ತಾಯಿ. ಅಂದ್ರ ಯಾವುದಕ್ಕೆ ಬೆಲೆ ಕೊಡಬೇಕಿತ್ತೋ ಅದಕ್ಕೆ ಬೆಲೆ ಇಲ್ಲ; ತೋರಿಕೆಗೆ ಬೆಲೆ.

ಕನ್ಯಾ ನೋಡಾಕ, ವರನ್ನ ನೋಡಾಕ ಹೋಗ್ತಾರ. ಬಂದವರು ಹೇಳ್ತಾರ, ‘ನೂರು ಎಕರಿ ಹೊಲ ಐತಿ, ಕಾಂಪ್ಲೆಕ್ಸ್ ಐತಿ, ಕಾರು ಐತಿ’ ಅಂತ. ಅದಕ್ಕ ಹುಡುಗಿ ಕೇಳ್ತು, ‘ನನಗೇನು ಕಾರು ಕೂಡ ಮದುವೆ ಮಾಡಸ್ತೀಯಾ ಇಲ್ಲ ಹುಡುಗನ ಕೂಡಾ ಮದುವೆ ಮಾಡಸ್ತೀಯಾ’ ಅಂತ. ಹಣ ಇದ್ದವರು ದೊಡ್ಡವರಾಗಲ್ಲ; ಗುಣ ಇದ್ದವರು ದೊಡ್ಡವರಾಗುತ್ತಾರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಸೆಪ್ಟೆಂಬರ್ 10, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಸಪ್ತಮಿ ಗಂ. 23-13 ನಕ್ಷತ್ರ: ಅನುರಾಧ ಗಂ. 20-04 ಯೋಗ: ವಿಷ್ಕಂಭ ಗಂ. 24-31 ಕರಣ: ಗರ ಗಂ. 10-38, ಸಿಂಹ ಮಾಸದ 24 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-23 **ಸೂರ್ಯಾಸ್ತ :** 06-32
ಮುಸ್ಲಿಂ ದಿನಾಂಕ : 06 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 5, 11

ಮೇಷ: ನಿಮ್ಮ ತಪ್ಪುಗಳಿಗೆ ಪಶ್ಚಾತ್ತಾಪ ಪಟ್ಟು ಸರಿ ಮಾಡಲು ಯತ್ನಿಸಿಕೊಳ್ಳುವ ಗುಣ ಇಂದು ಬೇಕಾಗುತ್ತದೆ. ಕೆಲಸಕ್ಕೆ ಸಂಬಂಧಪಟ್ಟಂತೆ ಪ್ರವಾಸ ಮಾಡುವ ಸಾಧ್ಯತೆಗಳಿರಬಹುದು.

ವೃಷಭ: ವೈದ್ಯ ವೃತ್ತಿಯಲ್ಲಿನ ಸಾಧನೆಗೆ ಸಾಮಾಜಿಕವಾಗಿ ಗೌರವವನ್ನು ಪಡೆದುಕೊಳ್ಳುವಿರಿ. ಗಾಯಕರು, ಹಿನ್ನೆಲೆ ಗಾಯಕರು ಹಾಗೂ ಸಂಗೀತ ನಿರ್ದೇಶಕರಿಗೆ ಹೊಸ ಅವಕಾಶಗಳು ದೊರೆಯಲಿವೆ. ಉನ್ನತ ಅಧಿಕಾರ ಸಿಗಲಿದೆ.

ಮಿಥುನ: ಸ್ನೇಹಿತರೊಂದಿಗೆ ಪ್ರವಾಸ ಮಾಡಬೇಕೆನಿಸಿದ್ದರೂ ಮುಂದೂಡುವುದು ಉತ್ತಮ. ಸಮರ್ಥಿಸಿಕೊಳ್ಳುವ ಮಾತುಗಳನ್ನು ಆಡುವಾಗ ನುಡಿಯಲ್ಲಿ ದಿಟ್ಟತನವಿರಲಿ. ಷೇರು ವ್ಯವಹಾರ ಲಾಭದಾಯಕ.

ಕರ್ಕಾಟಕ: ವೃತ್ತಿರಂಗದಲ್ಲಿ ತಿಳಿವಳಿಕೆಯಂತೆ ನಡೆಯಿರಿ, ಅನ್ಯರ ಮಾತಿಗೆ ಕಿವಿಗೊಡಬೇಡಿ. ಹೊಸ ಒಪ್ಪಂದಗಳನ್ನು ಒಪ್ಪಿಕೊಳ್ಳುವ ಮುನ್ನ ಅದರ ಸಾಧಕ ಬಾಧಕಗಳನ್ನು ಯೋಚಿಸಿ ಮುಂದುವರಿಯಿರಿ.

ಸಿಂಹ: ಖರೀದಿಸಿದ ನಿವೇಶನ ಈಗ ಮಾರುವುದಾದರೆ ಉತ್ತಮ ಬೆಲೆಗೆ ಮಾರಾಟ ಆಗುವುದು. ಸಮಯಕ್ಕೆ ಸರಿಯಾಗಿ ವರ್ತಿಸುವಂಥ ಬುದ್ಧಿವಂತಿಕೆ ತೋರುವಿರಿ. ಕಲಾವಿದರಿಗೆ ನೂತನ ಅವಕಾಶಗಳು ಅಧಿಕ ಮಟ್ಟದಲ್ಲಿ ಸಿಗಲಿದೆ.

ಕನ್ಯಾ: ನಿರ್ಮಲವಾದ ಮನಸ್ಸಿನಿಂದಾಗಿ ಎಷ್ಟೇ ಸಣ್ಣ ತಪ್ಪು ನಿಮ್ಮದಾದರೂ ಪಶ್ಚಾತ್ತಾಪ ಪಡುತ್ತೀರಿ. ಮಾಡುವ ಕೆಲಸಗಳೆಲ್ಲವೂ ನಿಮಗೆ ಸರಿಯಾಗಿಯೇ ಕಂಡರೂ ಅವೆಲ್ಲವೂ ಸರಿಯಾಗಿ ಇರುವುದಿಲ್ಲ.

ತುಲಾ: ಉತ್ತಮವಾದ ರೀತಿ ನೀತಿಗಳನ್ನು ಬೆಳೆಸಿಕೊಳ್ಳುವ ಮೂಲಕ ಶ್ರೇಯಸ್ಸನ್ನು ಕಾಣುವಿರಿ. ಕೆಲಸವನ್ನು ಬೇಗ ಮುಗಿಸಬೇಕೆಂಬ ಆತುರವು ಅಚಾತುರ್ಯ ಉಂಟುಮಾಡುವುದು. ಉದ್ಯೋಗದಲ್ಲಿ ಗೆಲುವು ದೊರೆಯಲಿದೆ.

ವೃಶ್ಚಿಕ: ಅತಿ ಆತ್ಮವಿಶ್ವಾಸದಿಂದಾಗಿ ತಪ್ಪು ನಿರ್ಧಾರಗಳನ್ನು ಕೈಗೊಳ್ಳುವಿರಿ. ಮನೆಯಲ್ಲಿ ಇರುವವರೆಲ್ಲರನ್ನೂ ಕೇಳದೆ ನಿರ್ಧಾರ ತೆಗೆದುಕೊಳ್ಳಬೇಡಿ. ಮಕ್ಕಳ ವಿಷಯವಾಗಿ ಮುಂಗೋಪಿಯಾಗುವಿರಿ.

ಧನು: ಉದ್ಯೋಗದಲ್ಲಿ ಸೆಣಸಾಡಲು ಬಂದವರ ಜತೆ ಕ್ರೀಡಾ ಸ್ಫೂರ್ತಿಯಂತೆ ಸ್ವೀಕರಿಸಿ ಸೆಣಸಾಡಿ. ಕಲಿಕೆಯಲ್ಲಿ ಉತ್ತಮ ಅಂಕಗಳನ್ನು ತೆಗೆಯಲು ಅಧಿಕ ಶ್ರಮ ಪಡಬೇಕಾಗುವುದು. ಸ್ತ್ರೀ ಸಂಬಂಧಿ ವ್ಯಾಜ್ಯಗಳು ಕಾಡಬಹುದು.

ಮಕರ: ರೇಷ್ಮೆ ಬೆಳೆಗಾರರಿಗೆ ಈ ಬಾರಿಯ ಬೆಳೆಯಿಂದ ಹೆಚ್ಚಿನ ಸಂತಸ ಮತ್ತು ಆದಾಯವಿರುವುದು. ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳುವ ಕಾರಣದಿಂದ ತೂಕವನ್ನು ಕಡಿಮೆ ಮಾಡುಕೊಳ್ಳುವ ಸಾಹಸಕ್ಕೆ ಕೈಹಾಕುವಿರಿ.

ಕುಂಭ: ವಿದ್ಯಾರ್ಥಿಗಳು ಏಕಾಗ್ರತೆ ಹೆಚ್ಚಿಸಿಕೊಳ್ಳುವ ಮೂಲಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವಿರಿ. ಸೋದರಿಯ ಕುಟುಂಬದ ವಿವಾದಗಳು ಇತ್ಯರ್ಥಗೊಳ್ಳುವುದು. ಸ್ವಂತ ವ್ಯವಹಾರದಲ್ಲಿ ಅಭಿವೃದ್ಧಿಯನ್ನು ಕಾಣುವಿರಿ.

ಮೀನ: ತಾರ್ಕಿಕ ಹಾದಿಯಲ್ಲಿ ಬರುವ ಭಾವನಾತ್ಮಕ ಆಲೋಚನೆಗಳನ್ನು ಬದಿಗೆ ಸರಿಸಿ. ದುಡುಕಿನ ಮಾತುಗಳು ಇತರರ ಮನಸ್ಸನ್ನು ನೋಯಿಸದಿರಲಿ. ಗುರಿ ಸಾಧಿಸಲು ಕೆಲ ಹೊಸ ಬದಲಾವಣೆಗಳು ಅನಿವಾರ್ಯ ಎನಿಸಲಿವೆ.

ಪದಬಂಧ 5798

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಅದೇ ತಾನೆ ಅರಳಿದ ಹೂವು (4)
6.ನವನೀತ ಹಚ್ಚಿ ಆಡಿರುವ ನಯವಾದ ನುಡಿ (4)
7.ಮಾತಿಗೆ ನಿಲುಕದುದು ವಾರದೊಳಗಿದೆ! (6)
9.ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ (6)
14. ಒತ್ತಾಯವನ್ನು ಹೀಗೆನ್ನಿ (4)
16.ಅಂದವಿಲ್ಲದ ವ್ಯಕ್ತಿ (4)

ಮೇಲಿಂದ ಕೆಳಕ್ಕೆ
1.ವಿಷಯ ಪ್ರಸ್ತಾಪಿಸಿದ್ದಕ್ಕೇ ಈ ದ್ವೇಷ! (4)
2.ಮೂಗಿನಿಂದ ಸುರಿವ ಸಿಂಬಳ (2)
3.ಅವಸರ ಹೀಗೆ ಬಂದಿದೆ (3)
5.ಒಡೆತನವಿಲ್ಲಿ ಉಲ್ಟಾ ಕಾಣುತ್ತಿದೆ (3)
6.ಬಣ್ಣ ಬದಲಾಯಿಸುವ ಊಸರವಳ್ಳಿ ತಿರುವುಮುರುವಾಗಿದೆ (3)
8.ಪುಸ್ತಕದ ಬಳಿಯಿರಿಸಿದ ತಲೆ (3)
10.ಮಿತದಲ್ಲಿರುವ ಸ್ಪಂದನ! (3)
11.ನಿಂತು ನಿಂತು ಬರುವ ಅಸ್ಪಷ್ಟ ಮಾತು (3)
12.ಗಾಡಿ ಹಿಡಿದಿರುವ ಯಕ್ಷಿಣಿಗಾರ (4)
13.ಒನಕೆ ಎಂದಾಕ್ಷಣ ನೆನಪಿಗೆ ಬರುವ ವೀರ ವನಿತೆ (3)
15.ವಂದಿಸುವಾಗ ಹೊಗಳು ಭಟ್ಟ ಕಾಣಿಸದನಲ್ಲಾ! (2)



5797ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಾನಪಲ್ಲಟ 4.ಗರ್ಗರ
5.ಗಯ್ಯಾಳಿ 6.ಪುಕಾರು
7.ಕೆಸರು 9.ಮಂಠ
10.ನಾಕ 12.ಬೆರಗು
14.ಕನಕ 15.ಜರೂರು
16.ಆಳ್ವೇರಿ 17.ಮರಣಕಾಲ

ಮೇಲಿಂದ ಕೆಳಕ್ಕೆ:
1.ಸ್ಥಾನಭ್ರಷ್ಟ 2.ಪಠ್ಯಪುಸ್ತಕ
3.ಟಗರು 4.ಗಳಿಕೆ
8.ಸಭಿಕ 9.ಮಂದಿರ
10.ನಾಮಕರಣ 11.ಇಳಿಗಾಲ
13.ಗುಜರಿ 14.ಕರುಮ

ಸುಡೊಕು 6183

6				5		2		8
5		4	1		8		3	
				7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6182 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹6500-9100
ಕೆ.ಆರ್.ಪೇಟೆ	₹12000-12000
ತುರುವೇಕೆರೆ	₹13200-13200

ವಿನಿಮಯ ದರ

$	ಡಾಲರ್	83.95
£	ಪೌಂಡ್	109.92
€	ಯುರೊ	92.85
¥	ಯೆನ್ (100ಕ್ಕೆ)	59

ಷೇರುಪೇಟೆ ವಹಿವಾಟು 375



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,852
ಇಂದಿನ ಅಂತ್ಯ	24,936
▲	84
ದಿನದ ಗರಿಷ್ಠ	24,957

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹226
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹206

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹545
12 ಕ್ಕೆ	₹75
ಮೈಸೂರು	
100ಕ್ಕೆ	₹550

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹307-539
ದ್ವಿತಳಿ (ಬಿ.ವಿ)	₹382-725

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1590 (1580)
ಸೋಯಾ (ರಿಫೈನ್ಡ್)	₹990 (990)
ಸೂರ್ಯಕಾಂತಿ (ರಿಫೈನ್ಡ್)	₹995 (995)
ಪಾಮೋಲಿನ್	₹985 (985)

ಪ್ರೀತಿಯ ನೆನಪಿನಲ್ಲಿ

ಡಾ. ಮಲ್ಲೇಶಪ್ಪ ರಾಜಶೇಖರ್

10 ಸೆಪ್ಟೆಂಬರ್ 1942 - 8 ಸೆಪ್ಟೆಂಬರ್ 2024



ಡಾ. ಎಂ. ರಾಜಶೇಖರ್ ಅವರ ನಿಧನವನ್ನು ನಾವು ಅತ್ಯಂತ ದುಃಖದಿಂದ ಘೋಷಿಸುತ್ತೇವೆ. ವಿನಮ್ರ ಆರಂಭದಿಂದ ಏರಿದ ವಿಶ್ವ-ಪ್ರಸಿದ್ಧ ಪಶುವೈದ್ಯಕೀಯ ಸಾಂಕ್ರಾಮಿಕ ರೋಗಶಾಸ್ತ್ರಜ್ಞ. ಅವರು ಉಮಾ ಅವರಿಗೆ ನಿಷ್ಠಾವಂತ ಪತಿ, ಮಮತಾ ಮತ್ತು ಮೃದುಲ್‌ಗೆ ಪ್ರೀತಿಯ ತಂದೆ, ಚಂದ್ರೇಶ್ ಕೆದಂಬಾಡಿಗೆ ಮಾವ ಮತ್ತು ಕೀರ್ತಿ, ಕಲ್ಯಾಣ್, ಆರ್ಯ ಮತ್ತು ಸೂರ್ಯ ಅವರಿಗೆ ಸ್ಫೂರ್ತಿದಾಯಕ ಅಜ್ಜ.

ಶವಸಂಸ್ಕಾರ

10ನೇ ಸೆಪ್ಟೆಂಬರ್ 2024 ಬೆಳಗ್ಗೆ 09:30ಕ್ಕೆ

ಹೆಬ್ಬಾಳ ಸ್ಮಶಾನ

ಚಿರಂಜೀವಿ ಲೇಔಟ್, ಕೆಂಪಾಪುರ
ಬೆಂಗಳೂರು, ಕರ್ನಾಟಕ 560024.

ಅವರ ಜೀವನ ಮತ್ತು ಪರಂಪರೆಯನ್ನು ಗೌರವಿಸಲು ನಮ್ಮೊಂದಿಗೆ ಸೇರಿ

‘ಅಲ್ಕಜಾರ್’ನ ಹೊಸ ಮಾದರಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಕಜಾರ್‌ನ ಹೊಸ ಮಾದರಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಹುಂಡೈ ಮೋಟರ್ ಇಂಡಿಯಾ ಕಂಪನಿಯು ಸೋಮವಾರ ತಿಳಿಸಿದೆ.

1.5 ಲೀ. ಸಾಮರ್ಥ್ಯದ ಟರ್ಬೊ ಜಿಡಿಐ ಪೆಟ್ರೋಲ್ ವಾಹನದ ಆರಂಭಿಕ ಬೆಲೆ ₹14.99 ಲಕ್ಷ ಇದೆ. 1.5 ಲೀ. ಸಾಮರ್ಥ್ಯದ ಯು2 ಸಿಆರ್‌ಡಿಐ ಡೀಸೆಲ್ ವಾಹನದ ಆರಂಭಿಕ ಬೆಲೆ ₹15.99 ಲಕ್ಷ ಇದೆ ಎಂದು ಕಂಪನಿ ತಿಳಿಸಿದೆ.

ಆರು ಹಾಗೂ ಏಳು ಆಸನಗಳ ಸಾಮರ್ಥ್ಯದಲ್ಲಿ ಈ ವಾಹನ ಲಭ್ಯವಿರಲಿದೆ. ಕ್ಯಾಬಿನ್ ಹೈಟೆಕ್ ಮತ್ತು ಆರಾಮದಾಯಕ ಅನುಭವವನ್ನು ನೀಡಲಿದೆ. ವಾಹನದಲ್ಲಿ 8 ಸ್ಪೀಕರ್ ವ್ಯವಸ್ಥೆ, ಮಳೆಯ ಸೆನ್ಸಿಂಗ್ ವೈಪರ್‌ಗಳು, ಪಾರ್ಕಿಂಗ್ ಸೆನ್ಸಾರ್, ಎಲ್‌ಇಡಿ ಹೆಡ್‌ಲ್ಯಾಂಪ್‌ಗಳು ಆರು ಏರ್ ಬ್ಯಾಗ್‌ಗಳು, 4 ಡಿಸ್ಕ್ ಬ್ರೇಕ್‌ಗಳು, 40 ಪ್ರಮಾಣಿತ ಮತ್ತು 70ಕ್ಕೂ ಹೆಚ್ಚು ಸುರಕ್ಷತಾ ವೈಶಿಷ್ಟ್ಯಗಳು ಇರಲಿವೆ. 9 ಆಕರ್ಷಕ ಬಣ್ಣಗಳಲ್ಲಿ ದೊರೆಯಲಿದ್ದು, 8 ಮೊನೊ-ಟೋನ್ ಆಯ್ಕೆ ಹೊಂದಿರಲಿದೆ. ಎಕ್ಸಿಕ್ಯುಟಿವ್, ಪ್ರೆಸ್ಟೀಜ್, ಪ್ಲಾಟಿನಮ್ ಮತ್ತು ಸಿಗ್ನೇಚರ್ ವೇರಿಯೆಂಟ್‌ಗಳಲ್ಲಿ ಲಭ್ಯವಿದೆ ಎಂದು ಕಂಪನಿ ತಿಳಿಸಿದೆ.

ಫೇಮ್ 3 ಯೋಜನೆ 2 ತಿಂಗಳಲ್ಲಿ ಜಾರಿ: ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ

‘ಇ.ವಿ ಉತ್ತೇಜನ ಮುಂದುವರಿಕೆ’

ಪ್ರಜಾವಾಣಿ ವಾರ್ತೆ



ನವದೆಹಲಿ: ಆಟೊ ಬಿಡಿಭಾಗಗಳಿಗಾಗಿ ಇತರೆ ದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬೇಕು ಎಂದು ಆಟೊ ಉದ್ಯಮಕ್ಕೆ ಸಲಹೆ ನೀಡಿದ ಕೇಂದ್ರ ಭಾರಿ ಕೈಗಾರಿಕಾ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ, ‘ಈ ನಿಟ್ಟಿನಲ್ಲಿ ಸ್ವಾವಲಂಬನೆ ಸಾಧಿಸಲು ದೊಡ್ಡ ಹೆಜ್ಜೆ ಇಡಬೇಕು’ ಎಂದು ಕರೆ ನೀಡಿದರು.

ನವದೆಹಲಿಯಲ್ಲಿ ಎಸಿಎಂಎ 64ನೇ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ಆಟೊ ಉದ್ಯಮವು ಬಿಡಿಭಾಗಗಳನ್ನು ಹೊರ ದೇಶಗಳಿಂದ ಆಮದು ಮಾಡಿಕೊಳ್ಳುವುದನ್ನು ಕಡಿಮೆ ಮಾಡಲೇಬೇಕು. ದೇಶದಲ್ಲಿ ವಿದ್ಯುತ್ ಚಾಲಿತ ಹಾಗೂ ಹೈಬ್ರಿಡ್ ವಾಹನಗಳ ತಯಾರಿಕೆ ಮತ್ತು ಬಳಕೆಗೆ ಉತ್ತೇಜನ ನೀಡುವ ‘ಫೇಮ್ 3’ ಯೋಜನೆ ಜಾರಿಗೆ ಬರುವ ತನಕ ಎಲೆಕ್ಟ್ರಿಕ್ ವಾಹನ ಉತ್ತೇಜನ ಯೋಜನೆಯನ್ನು (ಇಪಿಎಂಎಸ್) ಮುಂದುವರಿಸಲಾಗುವುದು ಎಂದರು. ‘ಫೇಮ್ 3 ಯೋಜನೆ 2 ತಿಂಗಳಲ್ಲಿ ಜಾರಿಗೆ ಬರಲಿದೆ’ ಎಂದು ಸಚಿವರು ವಿಶ್ವಾಸ ವ್ಯಕ್ತಪಡಿಸಿದರು.

ಸದ್ಯಕ್ಕೆ ಆಟೊ ಬಿಡಿಭಾಗ ತಯಾರಿಕಾ ಘಟಕಗಳು ಜಿಡಿಪಿಗೆ ಶೇ 2.7ರಷ್ಟು ಕೊಡುಗೆ ನೀಡುತ್ತಿವೆ ಹಾಗೂ 50 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶ ಕಲ್ಪಿಸಿವೆ ಎಂದರು.

ಈ ಉದ್ಯಮವನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು ಉತ್ಪಾದನಾ ಸಂಪರ್ಕ ಉಪಕ್ರಮಗಳನ್ನು ಕೈಗೊಂಡಿದೆ. ಈ ಮೂಲಕ ₹74,850 ಕೋಟಿ ಹೂಡಿಕೆಯನ್ನು ಉತ್ತೇಜಿಸಲಾಗಿದೆ. ಈ ಪೈಕಿ ₹17,836 ಕೋಟಿ ಮೊತ್ತ 2024ರ ಮಾರ್ಚ್ ಹೊತ್ತಿಗೆ ಹೂಡಿಕೆ ಆಗಿದೆ. ಇದರ ಪರಿಣಾಮವಾಗಿ 30,500 ಉದ್ಯೋಗ ಅವಕಾಶಗಳು ಸೃಷ್ಟಿಯಾಗಿವೆ. ಇದು ಉದ್ಯಮಕ್ಕೆ ದೊಡ್ಡ ಶಕ್ತಿಯನ್ನು ತುಂಬಿದೆ ಎಂದು ಸಚಿವರು ಹೇಳಿದರು.

ಇ.ವಿ ಬೆಲೆ ಇಳಿಕೆ: ಗಡ್ಕರಿ ವಿಶ್ವಾಸ



ಲಿಥಿಯಂ-ಅಯಾನ್ ಬ್ಯಾಟರಿ ಬೆಲೆಗಳಲ್ಲಿ ಇಳಿಕೆ ಆಗಿರುವುದರಿಂದ, ವಿದ್ಯುತ್ ಚಾಲಿತ ವಾಹನಗಳನ್ನು ಈಗ ಸಬ್ಸಿಡಿ ಇಲ್ಲದೆ ನಿರ್ವಹಿಸ ಬಹುದು. ಆದರೆ ವಿದ್ಯುತ್ ಚಾಲಿತ ವಾಹನಗಳಿಗೆ ಪ್ರೋತ್ಸಾಹ ನೀಡುವ ಅಗತ್ಯವಿದೆಯೇ ಎಂಬುದನ್ನು ಹಣಕಾಸು ಮತ್ತು ಭಾರಿ ಕೈಗಾರಿಕೆಗಳ ಸಚಿವಾಲಯಗಳು ನಿರ್ಧರಿಸಬೇಕಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಸೋಮವಾರ ಹೇಳಿದ್ದಾರೆ.

ನಾನು ಯಾವುದೇ ಸಬ್ಸಿಡಿಗಳನ್ನು ವಿರೋಧಿಸುವುದಿಲ್ಲ. ಆದರೆ, ಮುಂದಿನ ಎರಡು ವರ್ಷಗಳಲ್ಲಿ ವಿದ್ಯುತ್ ಚಾಲಿತ (ಇ.ವಿ) ವಾಹನಗಳ ಬೆಲೆಯು ಪೆಟ್ರೋಲ್ ಮತ್ತು ಡೀಸೆಲ್ ವಾಹನ ಬೆಲೆಯಷ್ಟೇ ಆಗಲಿದೆ ಎಂದು ಎಸಿಎಂಎ ಸಮಾವೇಶದಲ್ಲಿ ಹೇಳಿದರು.

ತಯಾರಿಕಾ ವೆಚ್ಚ ಕಡಿಮೆಯಾಗಿರುವ ಕಾರಣ ಸಬ್ಸಿಡಿ ಇಲ್ಲದೆಯೇ ಇ.ವಿಗಳನ್ನು ನಿರ್ವಹಿಸಬಹುದು. ಇದಲ್ಲದೆ, ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಯ ಪ್ರಮಾಣ ಕೂಡ ಹೆಚ್ಚಾಗುತ್ತಿದೆ ಎಂದರು.

‘ಉದ್ಯಮದ ಗಾತ್ರ ₹20 ಲಕ್ಷ ಕೋಟಿ’

ನವದೆಹಲಿ (ಪಿಟಿಐ): ದೇಶದ ವಾಹನ ಉದ್ಯಮದ ಗಾತ್ರವು 2023-24ರ ಹಣಕಾಸು ವರ್ಷದಲ್ಲಿ ₹20 ಲಕ್ಷ ಕೋಟಿ ದಾಟಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟದ (ಎಸ್‌ಐಎಎಂ) ಅಧ್ಯಕ್ಷ ವಿನೋದ್ ಅಗರ್ವಾಲ್ ಹೇಳಿದ್ದಾರೆ.

ದೇಶದ ಒಟ್ಟು ಜಿಎಸ್‌ಟಿ ವರಮಾನದಲ್ಲಿ ವಾಹನ ಉದ್ಯಮದ ಪಾಲು ಶೇ 14-15ರಷ್ಟು ಇದೆ. ಜೊತೆಗೆ ವಲಯವು ನೇರ ಮತ್ತು ಪರೋಕ್ಷ ಉದ್ಯೋಗ ಸೃಷ್ಟಿಯಲ್ಲಿ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಭಾರತೀಯ ವಾಹನ ಬಿಡಿಭಾಗಗಳ ತಯಾರಕರ ಒಕ್ಕೂಟದ (ಎಸಿಎಂಎ) 64ನೇ ವಾರ್ಷಿಕ ಸಮಾವೇಶದಲ್ಲಿ ಸೋಮವಾರ ಹೇಳಿದರು.

ದೇಶದ ಜಿಡಿಪಿಗೆ ಈ ಉದ್ಯಮವು ಪ್ರಸ್ತುತ ಶೇ 6.8ಕ್ಕಿಂತ ಹೆಚ್ಚು ಕೊಡುಗೆ ನೀಡಲಿದೆ. ಜಾಗತಿಕವಾಗಿ ದೇಶದ ವಾಹನ ಉದ್ಯಮವು ಪ್ರಗತಿ ಕಾಣುತ್ತಿದೆ ಎಂದು ಹೇಳಿದರು.

ಆಮದು ಅವಲಂಬನೆ ತಗ್ಗಿಸಲು, ಸ್ಥಳೀಯ ಉತ್ಪಾದನೆ ಹೆಚ್ಚಿಸಲು ವಲಯವು 50 ನಿರ್ಣಾಯಕ ಘಟಕಗಳನ್ನು ಗುರುತಿಸಲಾಗಿದೆ. ಎಸ್‌ಐಎಎಂ ಮತ್ತು ಎಸಿಎಂಎ ಸ್ಥಳೀಯವಾಗಿ ತಯಾರಿಕೆ ಹೆಚ್ಚಿಸಲು ಆರಂಭಿಸಿದೆ.

ದೇಶದಲ್ಲಿ ಎಲೆಕ್ಟ್ರಿಕಲ್ ಅಥವಾ ಎಲೆಕ್ಟ್ರಾನಿಕ್ಸ್ ನಂತಹ ವಸ್ತುಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ ಎಂದು ಹೇಳಿದರು.

ಇದಲ್ಲದೆ, ಗ್ಯಾಸೋಲಿನ್ ಮತ್ತು ಡೀಸೆಲ್‌ನಂತಹ ಸಾಂಪ್ರದಾಯಿಕ ಆಂತರಿಕ ದಹನಕಾರಿ ಎಂಜಿನ್ (ಇಂಟರ್‌ನಲ್ ಕಂಬಷನ್ ಎಂಜಿನ್) ತಂತ್ರಜ್ಞಾನಗಳಲ್ಲಿ ಪರಿಣತಿಯನ್ನು ಹೊಂದಿರುವ ಉದ್ಯಮವು, ಈಗ ಸಿಎನ್‌ಜಿ ಮತ್ತು ಎಲೆಕ್ಟ್ರಿಫೈಡ್ ವಾಹನಗಳಾದ ವಿದ್ಯುತ್ ಚಾಲಿತ, ಹೈಬ್ರಿಡ್ ವಾಹನಗಳನ್ನು ಅಭಿವೃದ್ಧಿ ಪಡಿಸಿದೆ ಎಂದು ಅಗರ್ವಾಲ್ ಹೇಳಿದರು.

‘ಉದ್ಯಮವು ಆಟೊಮೋಟಿವ್ ಮಿಷನ್ ಯೋಜನೆಯ ಮೂರನೇ ಆವೃತ್ತಿಯನ್ನು ಎದುರು ನೋಡುತ್ತಿದೆ’ ಎಂದು ಎಸಿಎಂಎ ಅಧ್ಯಕ್ಷೆ ಶ್ರದ್ಧಾ ಸೂರಿ ಮರ್ವಾಹ್ ಹೇಳಿದರು. ಕೌಶಲ ಕೊರತೆ ಮತ್ತು ಅಂತರರಾಷ್ಟ್ರೀಯ ಗುಣಮಟ್ಟದ ಮಾನದಂಡಗಳ ಪಾಲನೆಯಲ್ಲಿ ಉದ್ಯಮವು ವಿವಿಧ ಸವಾಲುಗಳನ್ನು ಎದುರಿಸುತ್ತಿದೆ. ಆದ್ದರಿಂದ, ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಹ ಯೋಗ ಮತ್ತು ಕೌಶಲ ಅಭಿವೃದ್ಧಿಗೆ ಹೂಡಿಕೆ ಅಗತ್ಯವಾಗಿದೆ. ಜೊತೆಗೆ, ಉದ್ಯಮದ ಸಹಯೋಗವು ಅಷ್ಟೇ ಮುಖ್ಯವಾಗಿದೆ ಎಂದು ಹೇಳಿದರು.

ಚಿರಸ್ಮರಣೆ



ಶ್ರೀಮತಿ ಲಕ್ಷ್ಮಮ್ಮ	ಶ್ರೀ ಪಾಪಣ್ಣ ರೆಡ್ಡಿ	ಶ್ರೀ ಬಿ.ಪಿ. ಗೋಪಾಲರೆಡ್ಡಿ
ನಿಧನ: 23-01-1973	ನಿಧನ: 08-07-1988	ನಿಧನ: 20-09-2015

ನೀವುಗಳು ನಮ್ಮನ್ನು ಅಗಲಿದರೂ ನಿಮ್ಮ ಪ್ರೀತಿ, ತಾಳ್ಮೆ, ತ್ಯಾಗ, ಆದರ್ಶಮಯ ಜೀವನ ನಿಮ್ಮ ಮಾರ್ಗದರ್ಶನ ನಮ್ಮ ಬದುಕಿಗೆ ದಾರಿ ದೀಪವಾಗಿದೆ.

ಪ್ರತಿದಿನವೂ, ಪ್ರತಿಕ್ಷಣವೂ ನಿಮ್ಮಗಳ ನೆನಪಿನಲ್ಲಿರುವ

ಶ್ರೀಮತಿ ಶಾರದಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬದವರು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಹೊಸಚಾಲಿ	32019-35029	ರಾಶಿ	30000-48421
ಕೋಕ	18000-28500	**ಪುತ್ತೂರು**		ಸರಕು	57619-74163
ಹೊಸತು	28500-40500	ಹೊಸತು	28000-40500	**ಶಿರಸಿ**	
ಹಳತು	40500-48000	ಹಳತು	34000-47500	ಬೆಟ್ಟೆ	20519-39096
ಚಿತ್ರದುರ್ಗ		**ಸಾಗರ**		ಬಿಳಿಗೋಟು	27009-29877
ಅಪಿ	46619-47059	ಬಿಳಿಗೋಟು	14099-22799	ಚಾಲಿ	31899-36259
ಬೆಟ್ಟೆ	32629-33099	ಚಾಲಿ	26299-32754	ರಾಶಿ	40209-42889
ಕೆಂಪುಗೋಟು	26609-27010	ಕೋಕ	8699-18699	**ಯಲ್ಲಾಪುರ**	
ರಾಶಿ	46139-46569	ಕೆಂಪುಗೋಟು	27699-35199	ಬಿಳಿಗೋಟು	23099-27290
ಕುಮಟ		ರಾಶಿ	36199-47910	ಚಾಲಿ	30540-35600
ಚಿಪ್ಪು	23509-26509	ಸಿಪ್ಪೆಗೋಟು	9099-15799	ಕೋಕ	5900-21299
ಕೋಕ	5099-21099	**ಶಿವಮೊಗ್ಗ**		ಕೆಂಪುಗೋಟು	26099-26099
ಫ್ಯಾಕ್ಟರಿ	6019-17129	ಬೆಟ್ಟೆ	38009-53899	ರಾಶಿ	40189-53139
ಹಳೆಚಾಲಿ	35099-38699	ಗೊರಬಲು	20321-32032	ತಟ್ಟಿಬೆಟ್ಟೆ	31099-37080

ಮುಂಬೈ ಧಾರಣೆ (ಶೇಂಗಾ)

09-09-2024

ಜಾವಾ 70/80(ಹೊಸ)	11800-11900
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1600)
ಒಂದು ವಾರದ ಡೆಲಿವರಿ	1605 (1595)
ಪಾಮ್ ವಾರದ ಡೆಲಿವರಿ	988 (983)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹**71,150** (71,450)
ಬೆಳ್ಳಿ ಕೆ.ಜಿ	₹**81,550** (83,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬೆಳ್ಳಿ ದರ ಕೆ.ಜಿಗೆ ₹2 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸೋಮವಾರ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹700 ಕಡಿಮೆಯಾಗಿ ₹73,500ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹2 ಸಾವಿರ ಕಡಿಮೆಯಾಗಿ ₹83,800ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಹೇಳಿದೆ.

ಇಳಿಕೆಗೆ ಕಾರಣವೇನು?: ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆ, ಹಣದುಬ್ಬರ ವರದಿ, ಉದ್ಯೋಗ ದರದ ಬೆಳವಣಿಗೆಯಲ್ಲಿ ಇಳಿಕೆ ಸೇರಿದಂತೆ ದೇಶೀಯ ಆಭರಣ ತಯಾರಕರು ಮತ್ತು ಮಾರಾಟಗಾರರಿಂದ ಬೇಡಿಕೆ ಕಡಿಮೆಯಾಗಿದ್ದರಿಂದ ಹಳದಿ ಲೋಹದ ಬೆಲೆ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555 6364468422

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

TRAVEL CORNER ಕ್ಲಾಸಿಫೈಡ್ಸ್

ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ರಿಯಾಯಿತಿ ದರದಲ್ಲಿ ಪ್ರವಾಸಗಳು

9900080793

ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್ Orchid

6 ದಿನಗಳ ಬಾಲಿ-ಇಂಡೊನೇಷಿಯ ಪ್ರವಾಸ
ಲ್ಯಾಂಡ್ ಆಫ್ ಗಾಡ್, ಲ್ಯಾಂಡ್ ಆಫ್ ಹೆರಿಟೇಜ್, ಮೌಂಟೈನ್ಸ್, ಬೀಚಸ್ ಮತ್ತು ಫಾರೆಸ್ಟ್ಸ್ ಜೊತೆಗೆ ಗರುಡ ವಿಷ್ಣು ಟೆಂಪಲ್

7/11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್ ಪ್ರವಾಸ
ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್, ಯುನಿವರ್ಸಲ್ ಸ್ಟುಡಿಯೋ
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್
ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್, ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

6 ದಿನಗಳ ದುಬೈ ಶಾಪಿಂಗ್ ಫೆಸ್ಟಿವಲ್ -2025
ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ, ಅಬುಧಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್, ಮಿರಾಕಲ್ ಗಾರ್ಡನ್, ಗ್ಲೋಬಲ್ ವಿಲೇಜ್ ಹಾಗು ಇತರೆ

18 ದಿನಗಳ ಗ್ರ್ಯಾಂಡ್ ಯು.ಕೆ. ಯುರೋಪ್ - 10 ದೇಶಗಳು
ಯುಕೆ, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಫ್ರಾನ್ಸ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಲೆಚಿನ್‌ಸ್ಟೈನ್, ಆಸ್ಟ್ರಿಯಾ, ಇಟಲಿ, ವ್ಯಾಟಿಕನ್

7 / 11 ದಿನಗಳ ವಿಯೇಟ್ನಾಮ್ ಮತ್ತು ಕಾಂಬೋಡಿಯಾ ಪ್ರವಾಸ
ವಿಯೇಟ್ನಾಮ್ : ಹನಾಯ್ ನಗರ, ಡಾನ್ಹಾಗ್, ಹ ಲಾಂಗ್ ಬೇ, ಹೊ ಚಿ ಮಿನ್
ಕಾಂಬೋಡಿಯಾ : ಸಿಯಾಮ್‌ರಿಪ್, ನಾಮ್‌ಪೆನ್ ಇತ್ಯಾದಿ

6 ದಿನಗಳ ಶ್ರೀಲಂಕಾ ಪ್ರವಾಸ
ಸ್ಯಾಂಡ್ ಬೀಚ್, ಭಕ್ತ ಹನುಮಾನ್ ಟೆಂಪಲ್, ರಾವಣ ಎಲ್ಲೆ ಹಿಲ್ಸ್, ಶ್ರೀಲಂಕ ಕಲ್ಚರಲ್ ಶೋ, ಕ್ಯಾಂಡಿ ಲೇಕ್, ಸೀತ ಅಶೋಕವನ, ಡಿವುರಂಪೋಲ, ಗಾಯತ್ರಿ ಪೀಠಂ, ಕೊಲಂಬೋ ಸಿಟಿ ಟೂರ್

8 ದಿನಗಳ ಹಿಸ್ಟಾರಿಕಲ್ ಈಜಿಪ್ಟ್
ಕೈರೋ ಸಿಟಿ ಟೂರ್, 4 ದಿನಗಳ ನೈಲ್ ನದಿ 5 ಸ್ಟಾರ್ ಕ್ರೂಸ್, ಆಸ್ವಾನ್ ಹಾಗೂ ಲಕ್ಸರ್ ನಗರ ವೀಕ್ಷಣೆ

ಸಂಪರ್ಕಿಸಿ 9900080796 / 9900080792 / 9900093613

ನಂ. 98, 1ನೇ ಮಹಡಿ, ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು

ಪ್ರವಾಸ

Travel

22.9.2024, 4.10.2024 ಯಮನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ 3.10.2024 ಶಿರಡಿ/ ಮಹಾರಾಷ್ಟ್ರ ಜ್ಯೋತಿರ್ಲಿಂಗ ಪ್ರವಾಸ 12.10.2024 ಅಯೋದ್ಯಾ, ಕಾಶಿ, ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755

ವೈಯಕ್ತಿಕ

Change of Name

I, VENKATESHA Murthy Nayana @ Nayana D/O H Venkatesha Murthy residing at E18/4, Phase-1, DRDO Township, CV Raman Nagar, Bengaluru-560093, have changed my name to Nayana Venkatesha Murthy vide affidavit dated 17/08/2024 at Bengaluru.

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಕ್ಕಾಗಿ

BOOK YOUR JOB ADS IN PRAJAVANI ALL KARNATAKA ON WEDNESDAY + SUNDAY

@ 500/-* PER SQCM

SINGLE / DOUBLE / MULTIPLE COLUMN

www.dhclassifieds.com

BOOK NOW

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

‘ಹೆಲಿಕಾಪ್ಟರ್ ಸೇವೆಗೆ ತೆರಿಗೆ ಇಳಿಕೆ’

ನವದೆಹಲಿ (ಪಿಟಿಐ): ಧಾರ್ಮಿಕ ಉದ್ದೇಶದ ಪ್ರಯಾಣಗಳಿಗೆ ಹೆಲಿಕಾಪ್ಟರ್ ಸೇವೆ ಬಳಸಿಕೊಳ್ಳುವುದಕ್ಕೆ ವಿಧಿಸುವ ತೆರಿಗೆಯ ಪ್ರಮಾಣವನ್ನು ಶೇಕಡ 5ಕ್ಕೆ ಇಳಿಸುವುದಕ್ಕೆ ಜಿಎಸ್‌ಟಿ ಮಂಡಳಿ ಒಪ್ಪಿಗೆ ನೀಡಿದೆ ಎಂದು ಉತ್ತರಾಖಂಡದ ಹಣಕಾಸು ಸಚಿವ ಪ್ರೇಮಚಂದ್ ಅಗರ್ವಾಲ್ ತಿಳಿಸಿದ್ದಾರೆ.

‘ಕೇದಾರನಾಥ, ಬದರಿನಾಥದಂತಹ ಸ್ಥಳಗಳಿಗೆ ಕೈಗೊಳ್ಳುವ ಧಾರ್ಮಿಕ ಪ್ರಯಾಣಗಳಿಗೆ ಹೆಲಿಕಾಪ್ಟರ್ ಸೇವೆ ಪಡೆದಾಗ ಅದಕ್ಕೆ ವಿಧಿಸುವ ತೆರಿಗೆಯ ಪ್ರಮಾಣವು ಈಗ ಶೇ 18ರಷ್ಟು ಇದೆ. ಇನ್ನು ಮುಂದೆ ಅದು ಶೇ 5ರಷ್ಟು ಆಗಲಿದೆ. ಈ ವಿಚಾರವಾಗಿ ಇದುವರೆಗೆ ಸ್ಪಷ್ಟತೆ ಇರಲಿಲ್ಲ. ಇನ್ನು ಮುಂದೆ ಸ್ಪಷ್ಟತೆ ಇರಲಿದೆ’ ಎಂದು ಅಗರ್ವಾಲ್ ಅವರು ಸುದ್ದಿಗಾರರಿಗೆ ತಿಳಿಸಿದರು.

‘ಎಲಾನ್ ಮಸ್ಕ್ 2027ರ ಹೊತ್ತಿಗೆ ಜಗತ್ತಿನ ಮೊದಲ ಟ್ರಿಲಿಯನೇರ್’

ನವದೆಹಲಿ (ಪಿಟಿಐ): ಅಮೆರಿಕದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪನಿ ಟೆಸ್ಲಾದ ಸಿಇಒ ಎಲಾನ್ ಮಸ್ಕ್, 2027ರ ವೇಳೆಗೆ ವಿಶ್ವದ ಮೊದಲ ಟ್ರಿಲಿಯನೇರ್ (ಲಕ್ಷ ಕೋಟಿ ಡಾಲರ್ ಒಡೆಯ - ಅಂದಾಜು ₹83.95 ಲಕ್ಷ ಕೋಟಿ ಸಂಪತ್ತಿನ ಮಾಲೀಕ) ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಜಗತ್ತಿನ ಎರಡನೇ ಟ್ರಿಲಿಯನೇರ್ ಎನಿಸಿಕೊಳ್ಳುವ ಶ್ರೇಯ ಭಾರತದ ಗೌತಮ್ ಅದಾನಿ ಅವರದಾಗಲಿದ್ದು, 2028ರಲ್ಲಿ ಅವರು ಅಷ್ಟು ಮೊತ್ತದ ಒಡೆಯರೆನಿಸಲಿದ್ದಾರೆ. ಮುಕೇಶ್ ಅಂಬಾನಿ 2033ರ ವೇಳೆಗೆ ಟ್ರಿಲಿಯನೇರ್ ಆಗಲಿದ್ದಾರೆ ಎಂದು ಇನ್‌ಫಾರ್ಮಾ ಕನೆಕ್ಟ್ ಅಕಾಡೆಮಿಯ ವರದಿ ಅಂದಾಜಿಸಿದೆ.

ಮಸ್ಕ್ ₹19.89 ಲಕ್ಷ ಕೋಟಿ ನಿವ್ವಳ

ಸಂಪತ್ತಿನೊಂದಿಗೆ ವಿಶ್ವದ ಅತ್ಯಂತ ಶ್ರೀಮಂತರಾಗಿದ್ದಾರೆ. ವಾರ್ಷಿಕ ಸರಾಸರಿ ಶೇ 110ರಷ್ಟು ಬೆಳವಣಿಗೆಯಾದರೆ, ಜಗತ್ತಿನ ಮೊದಲ ಟ್ರಿಲಿಯನೇರ್ ಆಗಲಿದ್ದಾರೆ.

ವಿಶ್ವದ ಬಿಲಿಯನೇರ್‌ಗಳ (ಶತಕೋಟಿ ಡಾಲರ್ ಒಡೆಯರು) ಪಟ್ಟಿಯಲ್ಲಿ 13ನೇ ಸ್ಥಾನದಲ್ಲಿರುವ ಗೌತಮ್ ಅದಾನಿ ₹8.39 ಲಕ್ಷ ಕೋಟಿಯಷ್ಟು ಸಂಪತ್ತು ಹೊಂದಿದ್ದಾರೆ. ವಾರ್ಷಿಕ ಸರಾಸರಿ ಶೇ 123ರಷ್ಟು ಬೆಳವಣಿಗೆ ದಾಖಲಿಸಿದರೆ 2028ರವೇಳೆಗೆ ಟ್ರಿಲಿಯೇನರ್ ಆಗಲಿದ್ದಾರೆ. ಏಷ್ಯಾದ ಶ್ರೀಮಂತ ವ್ಯಕ್ತಿ ಮುಕೇಶ್ ಅಂಬಾನಿ ಸದ್ಯ ₹9.31 ಲಕ್ಷ ಕೋಟಿ ಸಂಪತ್ತನ್ನು ಹೊಂದಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್, ಎಚ್‌ಯುಎಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ಗಳ ಷೇರು ಖರೀದಿ ಹೆಚ್ಚಳದಿಂದ ನಾಲ್ಕು ವಹಿವಾಟಿನ ದಿನದ ಬಳಿಕ ಷೇರು ಸೂಚ್ಯಂಕಗಳು ಸೋಮವಾರ ಏರಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 375 ಅಂಶ ಏರಿಕೆಯಾಗಿ, 81,559 ಅಂಶಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 84 ಅಂಶ ಹೆಚ್ಚಳವಾಗಿ 24,963ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ ಇಳಿಕೆ ಕಂಡಿದ್ದ ಸೂಚ್ಯಂಕಗಳು, ನಂತರ ಚೇತರಿಸಿ ಕೊಂಡವು. ಹಿಂದುಸ್ತಾನ್ ಯೂನಿಲಿವರ್, ಐಸಿಐಸಿಐ ಬ್ಯಾಂಕ್, ಐಟಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆ ದಾಖಲಿಸಿವೆ.

ಜೈಶಂಕರ್-ಲಾವ್ರೊ ಭೇಟಿ

ರಿಯಾದ್ (ಪಿಟಿಐ): ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ರಷ್ಯಾ ವಿದೇಶಾಂಗ ವ್ಯವಹಾರಗಳ ಸಚಿವ ಸೆರ್ಗೆ ಲ್ಯಾವ್ರೊಫ್ ಅವರನ್ನು ಸೋಮವಾರ ಸೌದಿ ರಾಜಧಾನಿ ರಿಯಾದ್‌ನಲ್ಲಿ ಭೇಟಿಯಾದರು.

ಉಕ್ರೇನ್ ಸಂಘರ್ಷದ ವಿಚಾರವಾಗಿ ಭಾರತ ಸೇರಿ ಮೂರು ದೇಶಗಳೊಂದಿಗೆ ನಿರಂತರ ಸಂಪರ್ಕದಲ್ಲಿ ಇರುವುದಾಗಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ತಿಳಿಸಿದ ಬೆನ್ನಲ್ಲೇ ಉಭಯ ದೇಶಗಳ ನಾಯಕರು ಭೇಟಿಯಾಗಿದ್ದಾರೆ.

ಭಾರತ-ಗಲ್ಫ್ ಸಹಕಾರ ಮಂಡಳಿಯ ವಿದೇಶಾಂಗ ಸಚಿವರ ಸಭೆಯ ಮಧ್ಯೆಯೇ ಜೈಶಂಕರ್ ಮತ್ತು ಲ್ಯಾವ್ರೊಫ್ ಅವರು ಸಂವಾದ ನಡೆಸಿದರು.

ಗಲ್ಫ್ ಸಹಕಾರ ಮಂಡಳಿಯು ಯುಎಇ, ಬಹರೈನ್, ಸೌದಿ ಅರೇಬಿಯಾ, ಒಮಾನ್, ಕತಾರ್ ಮತ್ತು ಕುವೈತ್ ದೇಶಗಳನ್ನು ಒಳಗೊಂಡಿದೆ.

ಜೈಶಂಕರ್ ಅವರು ಮೂರು ದೇಶಗಳ ಪ್ರವಾಸದ ಭಾಗವಾಗಿ ಭಾನುವಾರ ಸೌದಿ ರಾಜಧಾನಿಗೆ ಭೇಟಿ ನೀಡಿದ್ದಾರೆ. ನಂತರ ಜರ್ಮನಿಗೆ ಪ್ರಯಾಣ ಬೆಳೆಸಿ, ಅಲ್ಲಿನ ವಿದೇಶಾಂಗ ವ್ಯವಹಾರಗಳ ಸಚಿವರೊಂದಿಗೆ ಮತ್ತು ಇತರ ಸಚಿವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಪ್ರವಾಸದ ಕೊನೆಯ ದಿನ ಜಿನೆವಾಗೆ ಭೇಟಿ ನೀಡಲಿದ್ದಾರೆ.

ಇಸ್ರೇಲ್-ಪ್ಯಾಲೆಸ್ಟೀನ್ ಕದನ ವಿರಾಮಕ್ಕೆ ಬೆಂಬಲ

ಗಾಜಾದಲ್ಲಿ ಇಸ್ರೇಲ್-ಪ್ಯಾಲೆಸ್ಟೀನ್ ಮಧ್ಯೆ ಆರಂಭವಾಗಿರುವ ಯುದ್ಧಕ್ಕೆ ಆದಷ್ಟು ಶೀಘ್ರ ಕದನವಿರಾಮ ಘೋಷಣೆಯಾಗಲಿ. ಅದಕ್ಕೆ ಭಾರತವು ಬೆಂಬಲ ನೀಡುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಸೋಮವಾರ ಹೇಳಿದರು.



ಎಸ್. ಜೈಶಂಕರ್

ರಿಯಾದ್‌ನಲ್ಲಿ ನಡೆದ ಭಾರತ-ಗಲ್ಫ್ ಸಹಕಾರ ಮಂಡಳಿಯ (ಜಿಸಿಸಿ) ವಿದೇಶಾಂಗ ವ್ಯವಹಾರಗಳ ಸಚಿವರ ಸಭೆಯಲ್ಲಿ ಜೈಶಂಕರ್ ಅವರು ಈ ಮಾತು ಹೇಳಿದರು.

‘ಇಸ್ರೇಲ್-ಪ್ಯಾಲೆಸ್ಟೀನ್ ಸಂಘರ್ಷದ ವಿಚಾರದಲ್ಲಿ ಭಾರತದ ನಿರ್ಧಾರವು ಸ್ಥಿರವಾಗಿದೆ. ಭಯೋತ್ಪಾದನೆ ಮತ್ತು ಒತ್ತೆಯಾಳುಗಳಾಗಿ ಹೊತ್ತೊಯ್ಯುವುದನ್ನು ಖಂಡಿಸುತ್ತೇವೆ. ಹಾಗೆಯೇ ಈ ಸಂಘರ್ಷದಲ್ಲಿ ಮುಗ್ಧ ನಾಗರಿಕರು ಮೃತಪಡುತ್ತಿರುವ ಬಗ್ಗೆ ತೀವ್ರ ಸಂಕಟವೂ ಆಗುತ್ತಿದೆ’ ಎಂದರು.

ಉಭಯ ದೇಶಗಳು ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಬೇಕು ಎಂಬುದು ಭಾರತದ ಸಲಹೆ ಎಂದೂ ಹೇಳಿದರು.

ವಿಯೆಟ್ನಾಂನಲ್ಲಿ ಪ್ರಬಲ ಚಂಡಮಾರುತ- ಭೀಕರ ಪ್ರವಾಹ, ಭೂಕುಸಿತ

ಕೊಚ್ಚಿಹೋದ ಬಸ್: 59 ಮಂದಿ ಸಾವು

ಹನೋಯಿ (ಎಪಿ): ವಿಯೆಟ್ನಾಂನಲ್ಲಿ ‘ಯಾಗಿ’ ಪ್ರಬಲ ಚಂಡಮಾರುತದಿಂದ ಪ್ರವಾಹ ಉಂಟಾಗಿದ್ದು, ನದಿನೀರಿನಲ್ಲಿ ಬಸ್ಸೊಂದು ಕೊಚ್ಚಿಹೋಗಿದೆ. ನಿರಂತರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ವ್ಯಾಪಾರ ವಹಿವಾಟಿನ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಪ್ರಕೃತಿ ವಿಕೋಪದಿಂದಾಗಿ ಮೃತಪಟ್ಟವರ ಸಂಖ್ಯೆ 59ಕ್ಕೆ ಏರಿಕೆಯಾಗಿದೆ ಎಂದು ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

‘ಶನಿವಾರ ದೇಶದ ವಿವಿಧೆಡೆ ಸಂಭವಿಸಿದ ಭೂಕುಸಿತದಿಂದ 9 ಮಂದಿ, ಪ್ರವಾಹದಿಂದ 50 ಮಂದಿ ಮೃತಪಟ್ಟಿದ್ದಾರೆ’ ಎಂದು ಇಲ್ಲಿನ ಪ್ರಮುಖ ಮಾಧ್ಯಮ ‘ವಿಎನ್ ಎಕ್ಸ್‌ಪ್ರೆಸ್’ ವರದಿ ಮಾಡಿದೆ. ಉತ್ತರ ವಿಯೆಟ್ನಾಂನ ಪ್ರಮುಖ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ವಿಯೆಟ್ನಾಂನ ಫು-ಥೊ ಪ್ರಾಂತ್ಯದ ಫೊಂಗ್ ಚೌನಲ್ಲಿ ಕೆಂಪು ನದಿಗೆ ನಿರ್ಮಿಸಿದ್ದ ಉಕ್ಕಿನ ಸೇತುವೆ ಕುಸಿದುಬಿದ್ದಿದೆ — ಎಎಫ್‌ಪಿ ಚಿತ್ರ

ಕಾವೊ ಬಾಂಗ್ ಪ್ರಾಂತ್ಯದಲ್ಲಿ ಸೋಮವಾರ ಬೆಳಿಗ್ಗೆ ಪ್ರವಾಹಕ್ಕೆ ಸಿಲುಕಿ 20 ಮಂದಿ ಪ್ರಯಾಣಿಸುತ್ತಿದ್ದ ಬಸ್ಸೊಂದು ಕೊಚ್ಚಿಹೋಗಿದೆ. ತಕ್ಷಣವೇ ರಕ್ಷಣಾ ತಂಡವನ್ನು ನಿಯೋಜಿಸಲಾಗಿದೆ. ಆದರೆ, ನಿರಂತರ ಭೂಕುಸಿತದಿಂದಾಗಿ ತಂಡವು ಘಟನಾ ಸ್ಥಳ ತಲುಪುವುದು ವಿಳಂಬವಾಗಿದೆ.

ಫು-ಥೊ ಪ್ರಾಂತ್ಯದ ಫೊಂಗ್ ಚೌನಲ್ಲಿ ಕೆಂಪು ನದಿಗೆ ನಿರ್ಮಿಸಿದ್ದ ಉಕ್ಕಿನ ಸೇತುವೆ ಕುಸಿದುಬಿದ್ದಿದ್ದು, ಅದರ ಮೇಲೆ ಚಲಿಸುತ್ತಿದ್ದ 10 ಕಾರುಗಳು, ಎರಡು ಮೋಟರ್ ಬೈಕ್‌ಗಳು ಕೊಚ್ಚಿಹೋಗಿವೆ. ಮೂವರನ್ನು ತಕ್ಷಣವೇ ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಲಾಗಿದೆ. 13 ಮಂದಿ ಕಣ್ಮರೆಯಾಗಿದ್ದಾರೆ.

ವಹಿವಾಟಿಗೂ ಹಿನ್ನಡೆ: ‘ವಿಯೆಟ್ನಾಂನ ಪ್ರಮುಖ ಕೈಗಾರಿಕಾ ಪ್ರದೇಶವಾಗಿರುವ ಹೈಫೊಂಗ್ ಪ್ರಾಂತ್ಯದಲ್ಲಿ ಪ್ರವಾಹದಿಂದ ಭಾರಿ ಹಾನಿ ಸಂಭವಿಸಿದೆ. ದುಬಾರಿ ಯಂತ್ರೋಪಕರಣ ನೀರು ನುಗ್ಗಿದ್ದರಿಂದಾಗಿ ಹಾಳಾಗಿವೆ. ಸೋಮವಾರವೂ ವಿದ್ಯುತ್ ಪೂರೈಕೆಯಾಗದ ಕಾರಣ, ಕೈಗಾರಿಕೆಗಳು ತೆರೆದಿಲ್ಲ. ಎಂದಿನಂತೆ ಚಟುವಟಿಕೆಗಳು ಆರಂಭವಾಗಲು ಒಂದು ತಿಂಗಳು ಬೇಕಾಗಬಹುದು’ ಎಂದು ಇಲ್ಲಿನ ‘ಲಾವೊ ಡಾಂಗ್’ ಪತ್ರಿಕೆ ವರದಿ ಮಾಡಿದೆ.

ಹರಿಯಾಣ: ಎಎಪಿ ಏಕಾಂಗಿ ಸ್ಪರ್ಧೆ

ಪ್ರಗತಿ ಕಾಣದ ಕಾಂಗ್ರೆಸ್ ಜತೆಗಿನ ಮೈತ್ರಿ ಮಾತುಕತೆ • 20 ಅಭ್ಯರ್ಥಿಗಳ ಪ್ರಕಟಿಸಿದ 'ಆಮ್ ಆದ್ಮಿ'

ಮುಖ್ಯಾಂಶಗಳು

- ಕಾಂಗ್ರೆಸ್– ಎಎಪಿ ಮೈತ್ರಿ ಕುರಿತ ಕುತೂಹಲಕ್ಕೆ ತೆರೆ
- 90 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಎಎಪಿ ನಿರ್ಧಾರ
- 10 ಕ್ಷೇತ್ರಗಳಿಗೆ ಎಎಪಿ ಬೇಡಿಕೆ. 5 ಕ್ಷೇತ್ರ ಬಿಟ್ಟುಕೊಡಲು ಒಪ್ಪಿದ್ದ ಕಾಂಗ್ರೆಸ್

ಪ್ರಜಾ ಮತ
ಜನತಂತ್ರದ ಹಬ್ಬ

ನವದೆಹಲಿ (ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಮಾತುಕತೆಯಲ್ಲಿ ಯಾವುದೇ ಪ್ರಗತಿಯಾಗದ ಕಾರಣ, ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಎಎಪಿ ಸೋಮವಾರ ಘೋಷಿಸಿದೆ. ಅಲ್ಲದೆ 20 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನೂ ಬಿಡುಗಡೆ ಮಾಡಿದೆ. ಈ ಮೂಲಕ ಕಾಂಗ್ರೆಸ್–ಎಎಪಿ ಮೈತ್ರಿ ಕುರಿತ ಕುತೂಹಲಕ್ಕೆ ತೆರೆಬಿದ್ದಿದೆ.

ಎರಡೂ ಪಕ್ಷಗಳ ಜತೆ ಕೆಲ ದಿನಗಳಿಂದ ಮೈತ್ರಿ ಮಾತುಕತೆ ನಡೆಯುತ್ತಿತ್ತು. ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮಗೊಳ್ಳದ ಕಾರಣ, ಮಾತುಕತೆ ಫಲಪ್ರದವಾಗಲಿಲ್ಲ. ನಾಮಪತ್ರ ಸಲ್ಲಿಕೆ ಇದೇ 12ಕ್ಕೆ ಕೊನೆಗೊಳ್ಳಲಿರುವ ಕಾರಣ, ತ್ವರಿತವಾಗಿ ಅಭ್ಯರ್ಥಿಗಳನ್ನು ಘೋಷಿಸಲು ಎಎಪಿ ನಿರ್ಧರಿಸಿದೆ.

ಹರಿಯಾಣದ 90 ವಿಧಾನಸಭಾ ಕ್ಷೇತ್ರಗಳಿಗೆ ಅಕ್ಟೋಬರ್ 5ರಂದು ಮತದಾನ ನಡೆಯಲಿದೆ.

ಮೈತ್ರಿ ಕುರಿತು ಪ್ರತಿಕ್ರಿಯಿಸಿದ ಎಎಪಿ ಹರಿಯಾಣ ಘಟಕದ ಅಧ್ಯಕ್ಷ ಸುಶೀಲ್ ಗುಪ್ತಾ, 'ನಾವು ಆರಂಭದಿಂದಲೇ ಎಲ್ಲ 90 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದೆವು. ಚುನಾವಣೆಗೆ ಹೆಚ್ಚಿನ ಸಮಯವಿಲ್ಲ, ನಾಮಪತ್ರ ಸಲ್ಲಿಸಲು ಇದೇ 12 ಕೊನೆಯ ದಿನ. ಹೀಗಾಗಿ ಕಾಯುವುದು ಮುಗಿದಿದೆ' ಎಂದಿದ್ದಾರೆ.

'ಹರಿಯಾಣದಲ್ಲಿ ಎಎಪಿ ಬಲಿಷ್ಠ ಪರ್ಯಾಯ ಪಕ್ಷವಾಗಿದ್ದು, ಶೀಘ್ರದಲ್ಲಿಯೇ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನೂ ಬಿಡುಗಡೆ ಮಾಡಲಾಗುವುದು' ಎಂದು ಹೇಳಿದ್ದಾರೆ.

'ಸೀಟು ಹಂಚಿಕೆ ಪ್ರಕ್ರಿಯೆ ಕುರಿತು ಕಾಂಗ್ರೆಸ್ ಸೋಮವಾರ ಸಂಜೆಯೊಳಗೆ ಅಂತಿಮ ನಿರ್ಧಾರ ತೆಗೆದುಕೊಳ್ಳದಿದ್ದರೆ, ಎಎಪಿ ಎಲ್ಲ 90 ಸೀಟುಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಲಿದೆ' ಎಂದು ಗುಪ್ತಾ ಅವರು ಬೆಳಿಗ್ಗೆಯೇ ಸೂಚನೆ ನೀಡಿದ್ದರು.

10 ಕ್ಷೇತ್ರಕ್ಕೆ ಪಟ್ಟು ಹಿಡಿದಿದ್ದ ಎಎಪಿ: ಮೂಲಗಳ ಪ್ರಕಾರ, ಅರವಿಂದ ಕೇಜ್ರಿವಾಲ್ ನೇತೃತ್ವದ ಎಎಪಿಯು 10 ಕ್ಷೇತ್ರಗಳನ್ನು ಬಿಟ್ಟುಕೊಡುವಂತೆ ಬೇಡಿಕೆಯಿಟ್ಟಿತ್ತು. ಇದಕ್ಕೆ ಒಪ್ಪದ ಕಾಂಗ್ರೆಸ್ ಐದು ಕ್ಷೇತ್ರಗಳನ್ನು ಬಿಟ್ಟುಕೊಡಲು ಸಮ್ಮತಿಸಿತ್ತು.

ಕಾಂಗ್ರೆಸ್ ಹಿರಿಯ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರು ಹಿಡಿತ ಹೊಂದಿರುವ ಕಲಾಯತ್ ಕ್ಷೇತ್ರದಿಂದ ಎಎಪಿ ಹರಿಯಾಣ ಘಟಕದ ಉಪಾಧ್ಯಕ್ಷ ಅನುರಾಗ್ ಧಂಡ ಸ್ಪರ್ಧಿಸಲಿದ್ದಾರೆ.

ಭಿವಾನಿಯಿಂದ ಇಂದು ಶರ್ಮಾ, ಮೆಹಮ್‌ನಿಂದ ವಿಕಾಶ್ ನೆಹ್ರಾ, ರೋಹ್ಟಕ್‌ನಿಂದ ಬಿಜೇಂದರ್ ಹೂಡಾ ಹೆಸರನ್ನು ಎಎಪಿ ಪ್ರಕಟಿಸಿದೆ.

ದೆಹಲಿ ಚುನಾವಣೆ ಮೇಲೆ ಪ್ರಭಾವ?

ಹರಿಯಾಣದಲ್ಲಿ ಸೀಟು ಹಂಚಿಕೆ ಕುರಿತು ಎಎಪಿ ಮತ್ತು ಕಾಂಗ್ರೆಸ್ ಒಮ್ಮತಕ್ಕೆ ಬರುವಲ್ಲಿ ವಿಫಲವಾಗಿರುವುದು, ಮುಂದಿನ ವರ್ಷ ನಡೆಯಲಿರುವ ದೆಹಲಿ ವಿಧಾನಸಭೆ ಚುನಾವಣೆಯ ಮೇಲೂ ಪರಿಣಾಮ ಬೀರಲಿದೆಯೇ ಎಂಬ ಪ್ರಶ್ನೆ ಎದುರಾಗಿದೆ.

ಹರಿಯಾಣ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವ ಕುರಿತು ಎಎಪಿ ತೆಗೆದುಕೊಂಡಿರುವ ನಿರ್ಧಾರವು, ಬಿಜೆಪಿಗೆ ಅನುಕೂಲವಾಗುತ್ತದೆಯೇ ಎಂಬ ವರದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸುಶೀಲ್ ಗುಪ್ತಾ, 'ಹರಿಯಾಣದಿಂದ ಬಿಜೆಪಿ ಆಡಳಿತವನ್ನು ಕೊನೆಗೊಳಿಸುವ ದಿನಗಣನೆ ಆರಂಭವಾಗಿದೆ. ನಮ್ಮ ನಿರ್ಧಾರದಿಂದ ಅದಕ್ಕೆ ಯಾವುದೇ ರೀತಿಯಲ್ಲಿ ಪ್ರಯೋಜನವಾಗಲು ಬಿಡುವುದಿಲ್ಲ' ಎಂದಿದ್ದಾರೆ.

ಎಎಪಿಯ ಮತ್ತೊಬ್ಬ ನಾಯಕ ಸಂಜಯ್ ಸಿಂಗ್, 'ಹರಿಯಾಣ ಚುನಾವಣೆಯಲ್ಲಿ ಪಕ್ಷವು ಪೂರ್ಣ ಬಲದಿಂದ ಸ್ಪರ್ಧಿಸಲಿದೆ' ಎಂದು ಪ್ರತಿಕ್ರಿಯಿಸಿದ್ದಾರೆ. ಮೈತ್ರಿ ಕುರಿತು ಭಾನುವಾರ ಪ್ರತಿಕ್ರಿಯಿಸಿದ್ದ ಎಎಪಿ ನಾಯಕ ರಾಘವ್ ಛಡ್ಡಾ, 'ಮಾತುಕತೆ ಸಕಾರಾತ್ಮಕ ದಿಕ್ಕಿನಲ್ಲಿ ಸಾಗಿದೆ. ಕಾಂಗ್ರೆಸ್ ಮತ್ತು ಎಎಪಿ ತಮ್ಮ ವೈಯಕ್ತಿಕ ಆಕಾಂಕ್ಷೆಗಳನ್ನು ಬದಿಗಿಟ್ಟು ಹರಿಯಾಣ ಚುನಾವಣೆಯಲ್ಲಿ ಮೈತ್ರಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿವೆ' ಎಂದಿದ್ದರು.

ಎರಡನೇ ಪಟ್ಟಿ ಬಿಡುಗಡೆ

ಚಂಡೀಗಢ (ಪಿಟಿಐ): ಹರಿಯಾಣ ವಿಧಾನಸಭಾ ಚುನಾವಣೆಗೆ ಜನನಾಯಕ ಜನತಾ ಪಕ್ಷ(ಜೆಜೆಪಿ) ಮತ್ತು ಆಜಾದ್ ಸಮಾಜ ಪಕ್ಷಗಳ (ಎಎಸ್‌ಪಿ) ಮೈತ್ರಿಕೂಟವು 12 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಸೋಮವಾರ ಬಿಡುಗಡೆಗೊಳಿಸಿದೆ.

'ಬಂಧಿತ ವ್ಯಕ್ತಿ ಮತ್ತೊಂದು ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಬಹುದು'

ನವದೆಹಲಿ (ಪಿಟಿಐ): ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಬಂಧನದಲ್ಲಿ ಇರುವ ವ್ಯಕ್ತಿಯು ಇನ್ನೊಂದು ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗದೆ ಇದ್ದ ಸಂದರ್ಭದಲ್ಲಿ, ಆ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಲು ಅಡ್ಡಿ ಇಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠವು ಈ ಸ್ಪಷ್ಟನೆ ನೀಡಿದೆ. ಜೈಲಿನಲ್ಲಿ ಇರುವ ಆರೋಪಿಯೊಬ್ಬ, ಇನ್ನೊಂದು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿದ್ದರೆ, ಆ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಲು ಅವಕಾಶ ಇದೆಯೇ ಎಂಬ ಪ್ರಶ್ನೆಯನ್ನು ಪೀಠವು ಪರಿಶೀಲಿಸಿತ್ತು.

'ಇನ್ನೊಂದು ಪ್ರಕರಣದಲ್ಲಿ ಬಂಧಿತನಾಗಿದ್ದರೂ, ರೆಗ್ಯುಲರ್ ಜಾಮೀನಿಗೆ ಅರ್ಜಿ ಸಲ್ಲಿಸಲು ಆರೋಪಿಗೆ ಅವಕಾಶ ಇದ್ದೇ ಇರುತ್ತದೆ' ಎಂದು ನ್ಯಾಯಮೂರ್ತಿ ಪಾರ್ದೀವಾಲಾ ಅವರು ತೀರ್ಪನ್ನು ಪ್ರಕಟಿಸುವ ಸಂದರ್ಭದಲ್ಲಿ ಹೇಳಿದ್ದಾರೆ.

'ವಿನೇಶ್ ಫೋಗಾಟ್ 'ದಬಂಗ್ ಲೇಡಿ' ಆಕೆಯನ್ನೇ ಸಿ.ಎಂ ಅಭ್ಯರ್ಥಿಯನ್ನಾಗಿಸಿ'

ಪ್ರಜಾವಾಣಿ ವಾರ್ತೆ

ಲಖನೌ: ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಕುಸ್ತಿಪಟು ವಿನೇಶ್ ಫೋಗಾಟ್ ಹಾಗೂ ಇತರ ಕುಸ್ತಿಪಟುಗಳ ವಿರುದ್ಧ ಯಾವುದೇ ಹೇಳಿಕೆ ನೀಡದಂತೆ ಭಾರತೀಯ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ, ಬಿಜೆಪಿ ನಾಯಕ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೆ ಹೈಕಮಾಂಡ್ ಖಡಕ್ ಸೂಚನೆ ನೀಡಿದೆ. ಆದರೂ ಸೋಮವಾರ ಬ್ರಿಜ್‌ಭೂಷಣ್ ಅವರು ವಿನೇಶ್ ಅವರನ್ನು 'ದಬಂಗ್ ಲೇಡಿ' ಎಂದು ವ್ಯಂಗ್ಯವಾಡಿ, ಹೊಸ ಹೇಳಿಕೆ ನೀಡಿದ್ದಾರೆ.

ಬ್ರಿಜ್‌ಭೂಷಣ್ ಶರಣ್ ಸಿಂಗ್

ಹರಿಯಾಣ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಹೈಕಮಾಂಡ್ ಈ ಸೂಚನೆ ನೀಡಿತ್ತು.

'ಅವರಿಗೆ (ಕಾಂಗ್ರೆಸ್) ಇಂಥ ದಬಂಗ್ ಲೇಡಿ (ಸರ್ವಾಧಿಕಾರಿ, ಅಧಿಕಾರಯುತ ವ್ಯಕ್ತಿತ್ವ) ಎಲ್ಲಿಯೂ ಸಿಗುವುದಿಲ್ಲ. ವ್ಯವಸ್ಥೆಯನ್ನು ತನ್ನ ಕೈವಶ ಮಾಡಿಕೊಳ್ಳುವ ಶಕ್ತಿ ಆಕೆಗಿದೆ... ಸೋತ ಕುಸ್ತಿ ಪಂದ್ಯವನ್ನೂ ಗೆಲ್ಲುವ ಶಕ್ತಿ ಇದೆ... ಫೆಡರೇಷನ್‌ನ ಪದಾಧಿಕಾರಿಗಳನ್ನು ಫೆಡರೇಷನ್‌ನಿಂದಲೇ ಓಡಿಸಲು ಆಕೆಗೆ ಸಾಧ್ಯವಿದೆ... ಆಯ್ಕೆ ಟ್ರಯಲ್ಸ್ ಅನ್ನು ನಡೆಯದಂತೆ ಈಕೆ ನಿಲ್ಲಿಸಬಲ್ಲಳು... ನೋಡಿ ನಿಮಗೆ (ವರದಿಗಾರರಿಗೆ) ಇಂಥ ದಬಂಗ್ ಲೇಡಿ ಎಲ್ಲಾದರೂ ಸಿಗುತ್ತಾರೆಯೇ?' ಎಂದು ಉತ್ತರ ಪ್ರದೇಶದ ಗೊಂಡಾದಲ್ಲಿ ಬ್ರಿಜ್‌ಭೂಷಣ್ ಮಾತನಾಡಿದರು.

'ಈಕೆಯನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಕಾಂಗ್ರೆಸ್ ಯಾಕೆ ಘೋಷಿಸುತ್ತಿಲ್ಲ?... ಆಕೆಯನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿಸಿ ಕಾಂಗ್ರೆಸ್ ಚುನಾವಣೆ ಎದುರಿಸಬೇಕು. ಕಾಂಗ್ರೆಸ್ ಅನ್ನೇ ಸೇರಬೇಕು ಎಂದಿದ್ದರೆ ಇಷ್ಟೆಲ್ಲಾ ನಾಟಕ ಯಾಕೆ ಆಡಬೇಕಿತ್ತು' ಎಂದರು.

ಬ್ರಿಜ್‌ಭೂಷಣ್ ಅವರು ವಿನೇಶ್ ಅವರನ್ನು ದ್ರೌಪದಿಗೆ ಹೋಲಿಸಿ ಇತ್ತೀಚೆಗೆ ವಿವಾದಾತ್ಮಕ ಹೇಳಿಕೆ ನೀಡಿದ್ದರು.

ಯಾರು ಸತ್ಯ ಹೇಳುತ್ತಿದ್ದಾರೆ?: ಅಮಿತ್ ಶಾಗೆ ಒಮರ್ ತಿರುಗೇಟು

ಬನಿಹಾಲ್ (ಪಿಟಿಐ): ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ನ್ಯಾಷನಲ್ ಕಾನ್ಫರೆನ್ಸ್‌ನ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರು ಸೋಮವಾರ ತಿರುಗೇಟು ನೀಡಿದರು.

ಒಮರ್ ಅಬ್ದುಲ್ಲಾ

ಇಲ್ಲಿ ನಡೆದ ಚುನಾವಣಾ ರ‍್ಯಾಲಿಯೊಂದರಲ್ಲಿ ಮಾತನಾಡಿದ ಅವರು, 'ಭಯೋತ್ಪಾದನೆ ನಿಗ್ರಹಿಸುವ ಸಂಬಂಧ ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಸಚಿವ ರಾಜನಾಥ ಹೇಳುತ್ತಾರೆ. ನಾವು ಇದನ್ನೇ ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಆದರೆ, ಸಚಿವ ಅಮಿತ್ ಶಾ ಅವರು ನಮ್ಮ ಪ್ರಣಾಳಿಕೆಯಲ್ಲಿನ ಈ ಅಂಶಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ರಕ್ಷಣಾ ಸಚಿವರು ಸರಿಯೊ, ಗೃಹ ಸಚಿವರು ಸರಿಯೊ' ಎಂದು ಪ್ರಶ್ನಿಸಿದರು.

'ಅಮಿತ್ ಶಾ ಅವರು ಹುರಿಯತ್‌ನೊಂದಿಗೆ ಮಾತುಕತೆ ಸಾಧ್ಯವಿಲ್ಲ ಎನ್ನುತ್ತಾರೆ. ಆದರೆ, 2016ರಲ್ಲಿ ಹುರಿಯತ್‌ನೊಂದಿಗೆ ಮಾತುಕತೆ ನಡೆಸಲು ಸಂಸದರ ನಿಯೋಗ ಹೋಗಿತ್ತು ಎಂದು ರಾಜನಾಥ್ ಸಿಂಗ್ ಹೇಳುತ್ತಾರೆ. ಯಾರು ಸತ್ಯ ಹೇಳುತ್ತಿದ್ದಾರೆ?' ಎಂದರು.

'ಈ ರೀತಿಯ ರಾಜಕಾರಣವನ್ನು ಜಮ್ಮು ಮತ್ತು ಕಾಶ್ಮೀರದ ಜನರು ಇಷ್ಟ ಪಡುವುದಿಲ್ಲ. ಅಕ್ಟೋಬರ್ 8ಕ್ಕೆ (ಫಲಿತಾಂಶದ ದಿನ) ಇಲ್ಲಿಗೆ ಬನ್ನಿ. ನಮ್ಮ ಮೈತ್ರಿಕೂಟದ ಸರ್ಕಾರ ರಚನೆಯಾಗುತ್ತದೆ. ಜನರು ಅನುಭವಿಸುತ್ತಿರುವ ಹಿಂಸೆಯು ಅಂತ್ಯ ಕಾಣುವ ಕಾಲ ಸನ್ನಿಹಿತವಾಗಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ನಿಲುವಿನ ಕುರಿತು ಅಮೆರಿಕದಲ್ಲಿ ಟೀಕೆ

ರಾಜಕಾರಣದಲ್ಲಿ ಪ್ರೀತಿ, ವಿನಯ ಇಲ್ಲ: ರಾಹುಲ್

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕದ ಟೆಕ್ಸಾಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆ ಸಂವಾದಕ್ಕೆ ಬಂದ ಸಂದರ್ಭ –ಪಿಟಿಐ ಚಿತ್ರ

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ಇರುವುದು ಒಂದೇ ಬಗೆಯ ಚಿಂತನಾಕ್ರಮ ಎಂಬ ನಂಬಿಕೆ ಆರ್‌ಎಸ್‌ಎಸ್‌ನಲ್ಲಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಟೀಕಿಸಿದರು. ಭಾರತದ ರಾಜಕಾರಣದಲ್ಲಿ ಪ್ರೀತಿ, ಗೌರವ ಮತ್ತು ವಿನಯ ಕಾಣುತ್ತಿಲ್ಲ ಎಂದು ಅವರು ಹೇಳಿದರು.

'ಮಹಿಳೆಯರು ನಿರ್ದಿಷ್ಟ ಹೊಣೆ ನಿಭಾಯಿಸುವುದಕ್ಕೆ ಸೀಮಿತರಾಗಬೇಕು ಎಂಬ ನಂಬಿಕೆಯು ಆರ್‌ಎಸ್‌ಎಸ್ ಮತ್ತು ಬಿಜೆಪಿಯಲ್ಲಿ ಇದೆ. ಮಹಿಳೆಯರು ಮನೆಯಲ್ಲೇ ಇರಬೇಕು, ಅಡುಗೆ ಮಾಡಬೇಕು, ಅವರು ಹೆಚ್ಚು ಮಾತನಾಡಬಾರದು ಎಂಬ ನಂಬಿಕೆ ಅವರಲ್ಲಿದೆ. ಆದರೆ, ತಾವು ಬಯಸಿದ್ದನ್ನು ಮಾಡುವ ಆಕಾಂಕ್ಷೆ ಮಹಿಳೆಯರಲ್ಲಿ ಇರಬೇಕು ಎಂಬುದು ನಮ್ಮ ನಂಬಿಕೆ' ಎಂದು ಅವರು ಹೇಳಿದರು.

ಅಮೆರಿಕದ ಟೆಕ್ಸಾಸ್‌ನಲ್ಲಿ ಅವರು ಭಾರತ ಮೂಲದ ಅಮೆರಿಕನ್ನರನ್ನು ಉದ್ದೇಶಿಸಿ ಮಾತನಾಡಿದರು. 'ಭಾರತದಲ್ಲಿರುವುದು ಒಂದೇ ಬಗೆಯ ಚಿಂತನಾಕ್ರಮ ಎಂದು ಆರ್‌ಎಸ್‌ಎಸ್ ನಂಬಿದೆ. ಆದರೆ, ಭಾರತದಲ್ಲಿ ಹಲವು ಬಗೆಯ ಚಿಂತನಾಕ್ರಮಗಳು ಇವೆ ಎಂದು ನಾವು ನಂಬಿದ್ದೇವೆ' ಎಂದು ಅವರು ಹೇಳಿದರು. 'ಅಮೆರಿಕದಲ್ಲಿ ಇರುವಂತೆಯೇ ಜಾತಿ, ಭಾಷೆ, ಧರ್ಮ, ಸಂಪ್ರದಾಯ, ಹಿನ್ನೆಲೆಗಳನ್ನು ಮೀರಿ ಎಲ್ಲರಿಗೂ ಕನಸು ಕಾಣಲು, ಭಾಗವಹಿಸಲು ಅವಕಾಶ ಇರಬೇಕು ಎಂಬುದು ನಮ್ಮ ನಂಬಿಕೆ' ಎಂದರು.

'ಇದೊಂದು ಹೋರಾಟ. ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಸಂವಿಧಾನದ ಮೇಲೆ ಆಕ್ರಮಣ ನಡೆಸುತ್ತಿದ್ದಾರೆ ಎಂಬುದನ್ನು ದೇಶದ ಕೋಟ್ಯಂತರ ಜನ ಚುನಾವಣೆಯ ಹೊತ್ತಿನಲ್ಲಿ ಸ್ಪಷ್ಟವಾಗಿ ಅರ್ಥ ಮಾಡಿಕೊಂಡಾಗ ಈ ಹೋರಾಟವು ಹರಳುಗಟ್ಟಿತು' ಎಂದರು.

'ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಯಾವ ಪಕ್ಷದಲ್ಲಿಯೂ ಪ್ರೀತಿ, ಗೌರವ ಮತ್ತು ವಿನಯ ಕಾಣಿಸುತ್ತಿಲ್ಲ. ಮನುಷ್ಯರೆಲ್ಲರ ಬಗ್ಗೆ ಪ್ರೀತಿಯಿರಬೇಕು; ಒಂದು ಧರ್ಮದ, ಒಂದು ಸಮುದಾಯದ, ಒಂದು ಜಾತಿಯ, ಒಂದು ಭಾಷೆಯ ಜನರ ಬಗ್ಗೆ ಮಾತ್ರ ಅಲ್ಲ' ಎಂದು ಅವರು ವಿವರಿಸಿದರು.

ಲೋಕಸಭಾ ಚುನಾವಣೆಯ ಫಲಿತಾಂಶದ ಬಗ್ಗೆ ಪರೋಕ್ಷವಾಗಿ ಉಲ್ಲೇಖಿಸಿದ ಅವರು, 'ಬಿಜೆಪಿಯು ನಮ್ಮ ಸಂಪ್ರದಾಯ, ಭಾಷೆಯ ಮೇಲೆ ದಾಳಿ ನಡೆಸುತ್ತಿದೆ ಎಂದು ಜನ ಹೇಳುತ್ತಿದ್ದರು. ಸಂವಿಧಾನದ ಮೇಲೆ ದಾಳಿ ನಡೆಸುವವರು ನಮ್ಮ ಧಾರ್ಮಿಕ ಸಂಪ್ರದಾಯದ ಮೇಲೆಯೂ ದಾಳಿ ನಡೆಸುತ್ತಿದ್ದಾರೆ ಎಂಬುದನ್ನು ಅವರು ಅರ್ಥ ಮಾಡಿಕೊಂಡರು. ಚುನಾವಣಾ ಫಲಿತಾಂಶ ಪ್ರಕಟವಾದ ಕೆಲವೇ ನಿಮಿಷಗಳಲ್ಲಿ ಭಾರತದಲ್ಲಿ ಯಾರಿಗೂ ಬಿಜೆಪಿ ಬಗ್ಗೆ, ಪ್ರಧಾನಿಯ ಬಗ್ಗೆ ಭಯ ಉಳಿಯಲಿಲ್ಲ. ಇದು ಭಾರತದ ಜನರ ದೊಡ್ಡ ಸಾಧನೆ...' ಎಂದು ಹೇಳಿದರು.

'ಕೌಶಲವನ್ನು ಗೌರವಿಸುತ್ತಿಲ್ಲ': ಕೌಶಲ ಇರುವ ಲಕ್ಷಾಂತರ ಜನರನ್ನು ಭಾರತದಲ್ಲಿ ಉಪೇಕ್ಷಿಸಲಾಗುತ್ತಿದೆ ಎಂದು ರಾಹುಲ್ ಹೇಳಿದರು. ಟೆಕ್ಸಾಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆಗಿನ ಸಂವಾದದಲ್ಲಿ ಈ ಮಾತು ಹೇಳಿದ ಅವರು ಮಹಾಭಾರತದ ಏಕಲವ್ಯನ ಕಥೆಯನ್ನು ಉದಾಹರಿಸಿದರು.

ಭಾರತದಲ್ಲಿ ಕೌಶಲಕ್ಕೆ ಕೊರತೆ ಇಲ್ಲ, ಆದರೆ ಕೌಶಲವನ್ನು ಗೌರವಿಸುವುದರಲ್ಲಿ ಕೊರತೆ ಇದೆ ಎಂದರು. 'ನಿಮಗೆ ಏಕಲವ್ಯನ ಬಗ್ಗೆ ಗೊತ್ತೇ? ಭಾರತದಲ್ಲಿ ಏಕಲವ್ಯನ ಕಥೆ ಪ್ರತಿದಿನವೂ ಲಕ್ಷಾಂತರ ಸಂಖ್ಯೆಯಲ್ಲಿ ಸೃಷ್ಟಿಯಾಗುತ್ತಿದೆ. ಕೌಶಲ ಇರುವ ಜನರನ್ನು ಬೆಳೆಯಲು, ಕೆಲಸ ಮಾಡಲು ಬಿಡುತ್ತಿಲ್ಲ. ಇದು ಎಲ್ಲೆಡೆಯೂ ಆಗುತ್ತಿದೆ' ಎಂದು ರಾಹುಲ್ ಹೇಳಿರುವುದಾಗಿ ಕಾಂಗ್ರೆಸ್‌ನ 'ಎಕ್ಸ್' ಖಾತೆಯಲ್ಲಿ ಬರೆಯಲಾಗಿದೆ.

> **ಬಿಜೆಪಿಯು ಪ್ರಚಾರ ಮಾಡುತ್ತಿರುವಂತೆ ರಾಹುಲ್ ಗಾಂಧಿ 'ಪಪ್ಪು' ಅಲ್ಲ. ಅವರು 'ಉನ್ನತ ಶಿಕ್ಷಣ ಪಡೆದಿರುವ, ಸಾಕಷ್ಟು ತಿಳಿದಿರುವ ಕಾರ್ಯತಂತ್ರ ನಿಪುಣ**
> **ಸ್ಯಾಮ್ ಪಿತ್ರೋಡಾ**
> ಕಾಂಗ್ರೆಸ್ ಹಿರಿಯ ನಾಯಕ

ರಾಹುಲ್ ಕಪ್ಪು ಚುಕ್ಕೆ: ಬಿಜೆಪಿ

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿ ಆಡಿರುವ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿ, ಅವರು ಭಾರತದ ಪ್ರಜಾತಂತ್ರ ವ್ಯವಸ್ಥೆಯ ಮೇಲಿನ 'ಕಪ್ಪು ಚುಕ್ಕೆ' ಎಂದು ಜರಿದಿದೆ.

ಯುಪಿಎ ಸರ್ಕಾರ ಆಡಳಿತದಲ್ಲಿದ್ದಾಗ ಕಾಂಗ್ರೆಸ್ ಮತ್ತು ಚೀನಾದ ಕಮ್ಯುನಿಸ್ಟ್ ಪಕ್ಷದ ನಡುವೆ ಆಗಿದೆ ಎನ್ನಲಾದ ಒಪ್ಪಂದಕ್ಕೆ ಅನುಗುಣವಾಗಿ ರಾಹುಲ್ ಅವರು ಭಾರತದ ಪ್ರಜಾತಂತ್ರವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಆರೋಪಿಸಿದ್ದಾರೆ.

'ರಾಹುಲ್ ಅವರು ಅಪ್ರಬುದ್ಧ ಹಾಗೂ ಅರೆಕಾಲಿಕ ನಾಯಕ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ವಿರೋಧ ಪಕ್ಷದ ನಾಯಕರಾದ ನಂತರ ಜನರು ಅವರ ಮೇಲೆ ದೊಡ್ಡ ಹೊಣೆ ಹೊರಿಸಿದ್ದಾರೆ... ವಿದೇಶಕ್ಕೆ ಭೇಟಿ ನೀಡಿದಾಗ ಏನು ಮಾತನಾಡಬೇಕು ಎಂಬುದು ಕೂಡ ಅವರಿಗೆ ಗೊತ್ತಿಲ್ಲ' ಎಂದು ಭಾಟಿಯಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಹುಲ್ ಅವರು ಆರ್‌ಎಸ್‌ಎಸ್ ಬಗ್ಗೆ ಮಾಡಿರುವ ಟೀಕೆಯ ಕುರಿತು ಕೇಳಿದ ಪ್ರಶ್ನೆಗೆ ಭಾಟಿಯಾ ಉತ್ತರಿಸಿದ್ದಾರೆ. 'ರಾಹುಲ್ ಅವರು ಚೀನಾ ವಿರುದ್ಧ ಒಂದೇ ಒಂದು ಮಾತು ಹೇಳಲಾರರು. ಅವರು ಭಾರತವನ್ನು ದುರ್ಬಲಗೊಳಿ-ಸುತ್ತಾರೆ... ಅವರು ಚೀನಾದ ಜೊತೆ ಇದ್ದಾರೆ' ಎಂದು ದೂರಿದ್ದಾರೆ.

ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಟ್ರೋಫಿ: ಕೆಎಸ್‌ಸಿಎ ಇಲೆವನ್ ಬೌಲರ್‌ಗಳ ಪಾರಮ್ಯ

ಮೊಹಸಿನ್, ವಿದ್ಯಾಧರ್ ದಾಳಿಗೆ ಕುಸಿದ ಮಧ್ಯಪ್ರದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಸಿಎ ಇಲೆವನ್ ತಂಡದ ಮೊಹಸಿನ್ ಖಾನ್ (42ಕ್ಕೆ4) ಮತ್ತು ವಿದ್ಯಾಧರ್ ಪಾಟೀಲ (40ಕ್ಕೆ3) ಅವರ ಪರಿಣಾಮಕಾರಿ ದಾಳಿಯ ಮುಂದೆ ಮಧ್ಯಪ್ರದೇಶ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೋಮವಾರ ಆರಂಭವಾದ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವು 79.3 ಓವರ್‌ಗಳಲ್ಲಿ 187 ರನ್‌ಗಳಿಗೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರುಗಳು: ಚಿನ್ನಸ್ವಾಮಿ ಕ್ರೀಡಾಂಗಣ: ಮಧ್ಯಪ್ರದೇಶ: 79.3 ಓವರ್‌ಗಳಲ್ಲಿ 187 (ಹರ್ಷ ಗವಳಿ 22, ರಿಷಭ್ ಚೌಹಾಣ್ 24, ಹರಪ್ರೀತ್ ಸಿಂಗ್ 68, ಕುಮಾರ ಕಾರ್ತಿಕೇಯ 21, ವಿದ್ಯಾಧರ್ ಪಾಟೀಲ 40ಕ್ಕೆ3, ಸಂತೋಕ್ ಸಿಂಗ್ 41ಕ್ಕೆ2, ಮೊಹಸಿನ್ ಖಾನ್ 42ಕ್ಕೆ4) ವಿರುದ್ಧ ಕೆಎಸ್‌ಸಿಎ ಇಲೆವನ್.

ವಿದ್ಯಾಧರ್ ಪಾಟೀಲ

ಆಲೂರು (1); ಛತ್ತೀಸಗಡ: 90 ಓವರ್‌ಗಳಲ್ಲಿ 7ಕ್ಕೆ289 (ರಿಷಭ್ ತಿವಾರಿ 86, ಸಂಜೀತ್ ದೇಸಾಯಿ 77, ಶಶಾಂಕ್ ಸಿಂಗ್ ಔಟಾಗದೆ 50, ಅರ್ಜುನ್ ತೆಂಡೂಲ್ಕರ್ 40ಕ್ಕೆ2, ಮೋಹಿತ್ ರೇಡ್ಕರ್ 92ಕ್ಕೆ3, ದರ್ಶನ್ ಮಿಶಾಲ್ 43ಕ್ಕೆ2) ವಿರುದ್ಧ ಗೋವಾ.

ಬಿಜಿಎಸ್ ಕ್ರೀಡಾಂಗಣ: ವಿದರ್ಭ: 90 ಓವರ್‌ಗಳಲ್ಲಿ 6ಕ್ಕೆ247 (ಅಮನ್ ಮೊಖಾಡೆ 35, ಯಶ್ ರಾಥೋಡ್ 25, ಜಿತೇಶ್ ಶರ್ಮಾ 23, ಶುಭಂ ದುಬೆ 47, ಅಕ್ಷಯ್ ಕರ್ಣೇವರ್ ಔಟಾಗದೆ 57, ಪಾರ್ಥ್ ರೇಕಡೆ 30, ರಾಜವೀರ್ ವಾದ್ವಾ 39ಕ್ಕೆ2) ವಿರುದ್ಧ ಕೆಎಸ್‌ಸಿಎ ಪ್ರೆಸಿಡೆಂಟ್ಸ್ ಇಲೆವನ್.

ಆಲೂರು (3): ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 63.1 ಓವರ್‌ಗಳಲ್ಲಿ 181 (ಶ್ರೇಯಸ್ ಗೋಪಾಲ್ 51, ಯಶೋವರ್ಧನ್ ಪರಂತಾಪ್ 27, ಅಧೋಕ್ಷ 56, ಎಸ್. ಅಖಿಲ್ 34ಕ್ಕೆ3, ಸತ್ಯನಾರಾಯಣ ರಾಜು 43ಕ್ಕೆ2, ಜಿ. ಮನೀಶ್ 30ಕ್ಕೆ3), ಆಂಧ್ರ: 24 ಓವರ್‌ಗಳಲ್ಲಿ 1 ವಿಕೆಟ್‌ಗೆ 106 (ಕೆ. ಮಹೀಪ್ ಕುಮಾರ 22, ಎಂ. ವಂಶಿಕೃಷ್ಣ ಔಟಾಗದೇ 77)

ಮೈಸೂರು: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಒಡಿಶಾ ಕ್ರಿಕೆಟ್ ಸಂಸ್ಥೆ: 28.3 ಓವರ್‌ಗಳಲ್ಲಿ 2 ವಿಕೆಟ್‌ಗೆ 73 (ಶಂತನು ಮಿಶ್ರ ಔಟಾಗದೆ 30, ಗೋವಿಂದ ಪೊದ್ದಾರ್ ಔಟಾಗದೇ 19 ಲಕ್ಮನ್ ಮೆರಿವಾಲಾ 20ಕ್ಕೆ 1). ಬರೋಡಾ ಕ್ರಿಕೆಟ್ ಸಂಸ್ಥೆ ವಿರುದ್ಧ.

ಮೊದಲ ದಿನ ಮಳೆಯದ್ದೇ ಆಟ!

ಮೈಸೂರು: ಇಲ್ಲಿನ ಎಸ್‌ಜೆಸಿಇ ಕ್ರೀಡಾಂಗಣದಲ್ಲಿ ಸೋಮವಾರ ಆರಂಭವಾದ ಕೆಎಸ್‌ಸಿಎ ಕೋಲ್ಟ್ಸ್ ಹಾಗೂ ಡಾ.ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ ನಡುವಿನ ಕ್ರಿಕೆಟ್ ಪಂದ್ಯವು ಮೊದಲ ದಿನದಂದು ಮಳೆಯ ಕಾರಣಕ್ಕೆ ಒಂದೂ ಎಸೆತ ಕಾಣಲಿಲ್ಲ.

ಮಳೆಯಿಂದಾಗಿ ಅಂಕಣ ಒದ್ದೆ ಆಗಿದ್ದರಿಂದ ಬೆಳಿಗ್ಗೆ ಟಾಸ್ ವಿಳಂಬವಾಯಿತು. ಮಧ್ಯಾಹ್ನ ಮತ್ತೆ ಮಳೆ ಸುರಿದಿದ್ದರಿಂದ ಪಂದ್ಯವನ್ನು ದಿನದ ಮಟ್ಟಿಗೆ ಸ್ಥಗಿತಗೊಳಿಸಲಾಯಿತು. ಮಂಗಳವಾರವೂ ಮಳೆ ಸುರಿಯುವ ಸಾಧ್ಯತೆ ಇದೆ.

ಫುಟ್‌ಬಾಲ್: ಭಾರತಕ್ಕೆ ಸೋಲು, ಸಿರಿಯಾಗೆ ಪ್ರಶಸ್ತಿ

ಹೈದರಾಬಾದ್ (ಪಿಟಿಐ): ಸಿರಿಯಾ ತಂಡವು ಸೋಮವಾರ ನಡೆದ ಇಂಟರ್ ಕಾಂಟಿನೆಂಟಲ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭಾರತವನ್ನು 3–0 ಗೋಲುಗಳಿಂದ ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಜಿಎಂಸಿ ಬಾಲಯೋಗಿ ಅಥ್ಲೆಟಿಕ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಸಿರಿಯಾ ತಂಡದ ಮೊಹಮೂದ್ ಅಲ್ ಅಸ್ವದ್ (7ನೇ ನಿ.), ಡಲೆಹೊ ಇರಾನಡಸ್ಟ್ (76 ನಿ.) ಮತ್ತು ಪಾಬ್ಲೊ ಸಬಾಗ್ (90 + 6 ನಿ.) ಗೋಲು ಗಳಿಸಿದರು.

ಇದಕ್ಕಿಂತ ಮುನ್ನ ನಡೆದ ಭಾರತ ಮತ್ತು ಮಾರಿಷಸ್ ನಡುವಣ ಪಂದ್ಯವು ಗೋಲಿಲ್ಲದೆ ಡ್ರಾ ಆಯಿತ್ತು. ಎರಡನೇ ಪಂದ್ಯದ ಸೋಲಿನೊಂದಿಗೆ ಭಾರತ ತಂಡದ ಪ್ರಶಸ್ತಿ ಗೆಲ್ಲುವ ಆಸೆ ಭಗ್ನಗೊಂಡಿತು.

ಸಿರಿಯಾ ತನ್ನ ಆರಂಭಿಕ ಪಂದ್ಯದಲ್ಲಿ ಮಾರಿಷಸ್ ವಿರುದ್ಧ 2-0 ಗೋಲುಗಳಿಂದ ಜಯ ಗಳಿಸಿ ಒಟ್ಟು ಆರು ಅಂಕಗಳೊಂದಿಗೆ ಅಗ್ರಸ್ಥಾನ ಪಡೆಯಿತು.

ರೌಂಡ್ ರಾಬಿನ್ ಹಂತದಲ್ಲಿ ಅಗ್ರಸ್ಥಾನ ಪಡೆದ ತಂಡವು ಚಾಂಪಿಯನ್ ಆಗಿ ಹೊರಹೊಮ್ಮುತ್ತದೆ. ಭಾರತ ಮತ್ತು ಮಾರಿಷಸ್ ತಲಾ ಒಂದು ಅಂಕ ಗಳಿಸಿ ಅಭಿಯಾನ ಮುಗಿಸಿದವು.

ಭಾರತ 2018 ಮತ್ತು 2023ರಲ್ಲಿ ಪ್ರಶಸ್ತಿ ಗೆದ್ದಿತ್ತು. ಸಿರಿಯಾಗೆ ಇದು ಚೊಚ್ಚಲ ಪ್ರಶಸ್ತಿಯಾಗಿದೆ.

ಸ್ಪೇನ್‌ನ ಮನೊಲೊ ಮಾರ್ಕ್ವೆಝ್ ಅವರು ಭಾರತ ಫುಟ್‌ಬಾಲ್ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕವಾದ ಬಳಿಕ ಮೊದಲ ಟೂರ್ನಿ ಇದಾಗಿತ್ತು.

ಶ್ರೀಲಂಕಾದ ಬ್ಯಾಟರ್ ಪಥುಮ್ ನಿಸಾಂಕ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ಲಂಕಾಗೆ ಐತಿಹಾಸಿಕ ಜಯ

ಲಂಡನ್ (ಎಎಫ್‌ಪಿ): ಪಥುಮ್ ನಿಸಾಂಕ ಅವರ ಅಜೇಯ ಶತಕದ ಬಲದಿಂದ ಶ್ರೀಲಂಕಾ ತಂಡವು ದ ಓವಲ್‌ನಲ್ಲಿ ಸೋಮವಾರ ಇಂಗ್ಲೆಂಡ್ ವಿರುದ್ಧ ನಡೆದ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಜಯ ಗಳಿಸಿತು.

ಶ್ರೀಲಂಕಾ ತಂಡಕ್ಕೆ ಆತಿಥೇಯ ಇಂಗ್ಲೆಂಡ್ ತಂಡವು 219 ರನ್‌ಗಳ ಗುರಿಯೊಡ್ಡಿತ್ತು. ನಿಸಾಂಕ (ಔಟಾಗದೇ 127, 124ಎ) ಅವರ ಆಟದ ಬಲದಿಂದ ತಂಡವು 40.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 219 ರನ್ ಗಳಿಸಿತು. ನಿಸಾಂಕ 13 ಬೌಂಡರಿ ಮತ್ತು 2 ಸಿಕ್ಸರ್ ಗಳಿಸಿದರು.

ಇಂಗ್ಲೆಂಡ್ ನೆಲದಲ್ಲಿ ಶ್ರೀಲಂಕಾ ತಂಡವು ಗೆದ್ದ ನಾಲ್ಕನೇ ಟೆಸ್ಟ್ ಇದಾಗಿದೆ. 2014ರಲ್ಲಿ ಹೆಡಿಂಗ್ಲಿಯಲ್ಲಿ ನಡೆದಿದ್ದ ಪಂದ್ಯದಲ್ಲಿ ಲಂಕಾ ತಂಡವು ಜಯಿಸಿತ್ತು. ಅದರ ನಂತರ ಈಗ ಜಯದ ಸಾಧನೆ ಮಾಡಿದೆ. ಈ ಸರಣಿಯಲ್ಲಿ ಇಂಗ್ಲೆಂಡ್ ಮೊದಲೆರಡು ಪಂದ್ಯಗಳನ್ನು ಜಯಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 69.1 ಓವರ್‌ಗಳಲ್ಲಿ 325. ಶ್ರೀಲಂಕಾ: 263. ಎರಡನೇ ಇನಿಂಗ್ಸ್: ಇಂಗ್ಲೆಂಡ್: 156. ಶ್ರೀಲಂಕಾ: 40.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 219 (ಪಥುಮ್ ನಿಸಾಂಕ ಔಟಾಗದೇ 127, ಕುಶಾಲ ಮೆಂಡಿಸ್ 39, ಏಂಜೆಲೊ ಮ್ಯಾಥ್ಯೂಸ್ ಔಟಾಗದೇ 32, ಕ್ರಿಸ್ ವೋಕ್ಸ್ 52ಕ್ಕೆ1, ಗಸ್ ಅಟ್ಕಿನ್ಸನ್ 44ಕ್ಕೆ1)

ಕ್ರಿಕೆಟ್: ಇಂಗ್ಲೆಂಡ್ ವನಿತೆಯರಿಗೆ 275 ರನ್‌ಗಳ ಜಯ

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ಮಹಿಳಾ ತಂಡವು ಸೋಮವಾರ ಐರ್ಲೆಂಡ್ ವಿರುದ್ಧದ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ದಾಖಲೆಯ 275 ರನ್‌ಗಳಿಂದ ಗೆಲುವು ಸಾಧಿಸಿತು.

ಟಾಮಿ ಬ್ಯೂಮಾಂಟ್

ಈ ಗೆಲುವಿನೊಂದಿಗೆ ಮೂರು ಪಂದ್ಯಗಳ ಸರಣಿಯನ್ನು ಒಂದು ಪಂದ್ಯ ಬಾಕಿ ಇರುವಂತೆ ಇಂಗ್ಲೆಂಡ್ ತಂಡವು 2–0ಯಿಂದ ವಶ ಮಾಡಿಕೊಂಡಿದೆ. ಮೊದಲ ಪಂದ್ಯವನ್ನು ಆಂಗ್ಲ ಪಡೆ ನಾಲ್ಕು ವಿಕೆಟ್‌ಗಳಿಂದ ಗೆದ್ದಿತ್ತು.

ಆರಂಭಿಕ ಆಟಗಾರ್ತಿ ಟಾಮಿ ಬ್ಯೂಮಾಂಟ್ ಅವರ ಅಜೇಯ 150 ರನ್‌ಗಳ ಬಲದಿಂದ ಇಂಗ್ಲೆಂಡ್ 50 ಓವರ್‌ಗಳಲ್ಲಿ ಎಂಟು ವಿಕೆಟ್‌ಗೆ 320 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಆತಿಥೇಯ ಐರ್ಲೆಂಡ್ ತಂಡವು 45 ರನ್‌ಗೆ ಕುಸಿಯಿತು. ಇಂಗ್ಲೆಂಡ್ ತಂಡದ ನಾಯಕಿ ಕೇಟ್ ಕ್ರಾಸ್ ಮತ್ತು ಲಾರೆನ್ ಫೈಲರ್ ತಲಾ ಮೂರು ವಿಕೆಟ್ ಪಡೆದು ಮಿಂಚಿದರು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 50 ಓವರ್‌ಗಳಲ್ಲಿ 8ಕ್ಕೆ 320 (ಟಾಮಿ ಬ್ಯೂಮಾಂಟ್ ಔಟಾಗದೇ 150, ಫ್ರೇಯಾ ಕೆಂಪ್ 65; ಅರ್ಲೀನ್ ಕೆಲ್ಲಿ 61ಕ್ಕೆ 2, ಫ್ರೇಯಾ ಸಾರ್ಜೆಂಟ್ 60ಕ್ಕೆ 2). ಐರ್ಲೆಂಡ್: 16.5 ಓವರ್‌ಗಳಲ್ಲಿ 45 (ಉನಾ ರೇಮಂಡ್-ಹೋಯ್ 22; ಕೇಟ್ ಕ್ರಾಸ್ 8ಕ್ಕೆ 3, ಲಾರೆನ್ ಫೈಲರ್ 10ಕ್ಕೆ 3). ಪಂದ್ಯದ ಆಟಗಾರ್ತಿ: ಟಾಮಿ ಬ್ಯೂಮಾಂಟ್

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಸುಖಜೀತ್ ಸಿಂಗ್ ಎರಡು ಗೋಲು

ಭಾರತಕ್ಕೆ ಶರಣಾದ ಜಪಾನ್

ಹುಲುನ್‌ಬೈರ್, ಚೀನಾ (ಪಿಟಿಐ): ಸುಖಜೀತ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಹಾಲಿ ಚಾಂಪಿಯನ್ ಭಾರತ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಜಪಾನ್ ವಿರುದ್ಧ ಜಯಗಳಿಸಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಸುಖಜೀತ್ (2ನೇ ಹಾಗೂ 60ನೇ ನಿಮಿಷ) ಹೊಡೆದ ಗೋಲುಗಳಿಂದಾಗಿ ಭಾರತ ತಂಡವು 5–1ರಿಂದ ಜಪಾನ್ ಎದುರು ಗೆದ್ದಿತು. ಭಾರತದ ಅಭಿಷೇಕ್ (3ನಿ), ಸಂಜಯ್ (17ನಿ) ಮತ್ತು ಉತ್ತಮ್ ಸಿಂಗ್ (54 ನಿ) ಅವರು ತಲಾ ಒಂದು ಗೋಲು ಕಾಣಿಕೆ ನೀಡಿದರು.

ಜಪಾನ್ ತಂಡದ ಮಾತ್ಸುಮೊಟೊ ಕಝುಮಾಸಾ 41ನೇ ನಿಮಿಷದಲ್ಲಿ ಒಂದು ಗೋಲು ಹೊಡೆದ ಸೋಲಿನ ಅಂತರವನ್ನು ತುಸು ತಗ್ಗಿಸಿದರು. ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಚೀನಾ ಎದುರು ಜಯಿಸಿತ್ತು.

ಜಪಾನ್ ಎದುರಿನ ಪಂದ್ಯದಲ್ಲಿ ಸುಖಜೀತ್ ಅವರು ಫೀಲ್ಡ್ ಗೋಲ್ ಹೊಡೆಯುವ ಮೂಲಕ ಭಾರತದ ಖಾತೆಯನ್ನು ತೆರೆದರು. ಪಂದ್ಯ ಆರಂಭವಾಗಿ ಎರಡನೇ ನಿಮಿಷದಲ್ಲಿ ವೃತ್ತದ ಬಲಬದಿಯಿಂದ ಧಾವಿಸಿದ ಸಂಜಯ್ ಅವರು ಲಾಬ್ ಮಾಡಿದ ಚೆಂಡನ್ನು ಸುಖಜೀತ್ ಗೋಲುಪೆಟ್ಟಿಗೆಯತ್ತ ಕಳುಹಿಸುವಲ್ಲಿ ಸಫಲರಾದರು. ಒಂದು ನಿಮಿಷದ ನಂತರ ಜಪಾನ್ ರಕ್ಷಣಾ ಪಡೆಯನ್ನು ದಾಟಿದ ಅಭಿಷೇಕ್ ಚುರುಕಾಗಿ ಡ್ರಿಬಲ್ ಮಾಡುತ್ತ ಚೆಂಡನ್ನು ಗೋಲುಪೆಟ್ಟಿಗೆ ಸೇರಿಸಿದರು. ಇದಾಗಿ 14 ನಿಮಿಷಗಳ ನಂತರ ಲಭಿಸಿದ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದ ಸಂಜಯ್ ಕೇಕೆ ಹಾಕಿದರು. ಇದರಿಂದಾಗಿ ತಂಡವು 3–0 ಮುನ್ನಡೆ ಗಳಿಸಿತು.

ಈ ಹಂತದಲ್ಲಿ ಒತ್ತಡಕ್ಕೊಳಗಾದ ಜಪಾನ್ ತಂಡದ ಆಟಗಾರರು ಆಕ್ರಮಣಶೀಲರಾದರು. ಚೆಂಡನ್ನು ಗೋಲು ವರ್ತುಲದಲ್ಲಿ ಹಲವು ಬಾರಿ ತೆಗೆದುಕೊಂಡು ಹೋದರು. ಇದರ ಫಲವಾಗಿ 21ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಪಡೆಯುವಲ್ಲಿ ಯಶಸ್ವಿಯೂ ಆದರು. ಆದರೆ ಜಪಾನಿಯರ ಡ್ರ್ಯಾಗ್ ಫ್ಲಿಕ್ ತಡೆಯುವಲ್ಲಿ ಭಾರತದ ರಕ್ಷಣಾ ಪಡೆ ಯಶಸ್ವಿಯಾಯಿತು. ಅಲ್ಲದೇ ತಿರುಗೇಟು ನೀಡಲೂ ಭಾರತ ತಂಡವು ಮುನ್ನುಗ್ಗಿತು. ಜುಗರಾಜ್ ಸಿಂಗ್ ಅವರು ಚುರುಕಿನ ಆಟದ ಮೂಲಕ ಫ್ರೀ ಹಿಟ್ ಪಡೆದರು.

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು –ಹಾಕಿ ಇಂಡಿಯಾ ಎಕ್ಸ್ ಚಿತ್ರ

ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಭಾರತ ತಂಡವು ಹೆಚ್ಚು ಪಾರಮ್ಯ ಮೆರೆಯಿತು. ಶೇ 67ರಷ್ಟು ಸಮಯದಲ್ಲಿ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿತು. 11 ಬಾರಿ ವೃತ್ತ ಪ್ರವೇಶಿಸಿದ ಭಾರತದ ಆಟಗಾರರು, ಮೂರು ಬಾರಿ ಗೋಲುಪೆಟ್ಟಿಗೆಯತ್ತ ಚೆಂಡನ್ನು ಹೊಡೆದರು. ಆದರೆ ಗೋಲು ದಾಖಲಾಗಲಿಲ್ಲ. 41ನೇ ನಿಮಿಷದಲ್ಲಿ ಕಝುಮಸಾ ಅವರು ಗೋಲು ಹೊಡೆಯುವ ಮೂಲಕ ಜಪಾನ್ ತಂಡಕ್ಕೆ ಅಲ್ಪ ಸಮಾಧಾನ ತಂದರು. ಇದಾಗಿ 13 ನಿಮಿಷ ಕಳೆದಿತ್ತು. ಜರ್ಮನ್‌ಪ್ರೀತ್ ಸಿಂಗ್ ಅಸಿಸ್ಟ್ ಮಾಡಿದ ಚೆಂಡನ್ನು ಉತ್ತಮ್ ಸಿಂಗ್ ಗೋಲುಪೆಟ್ಟಿಗೆಗೆ ತಳ್ಳಿದರು. ಕೆಲನಿಮಿಷಗಳ ನಂತರ ಸುಖಜೀತ್ ಅವರು ತಮ್ಮ ಎರಡನೇ ಗೋಲು ಗಳಿಸಿದರು. ಅಭಿಷೇಕ್ ಅಸಿಸ್ಟ್ ಮಾಡಿದ ಚೆಂಡನ್ನು ನಿಯಂತ್ರಣಕ್ಕೆ ಪಡೆದ ಸುಖಜೀತ್ ಗೋಲುಪೆಟ್ಟಿಗೆಗೆ ಸೇರಿಸಿದ ರೀತಿ ಆಕರ್ಷಕವಾಗಿತ್ತು.

ಜಪಾನ್ ತಂಡವು ಹೋದ ವರ್ಷದ ಟೂರ್ನಿಯಲ್ಲಿ ಮೂರನೇ ಸ್ಥಾನ ಪಡೆದಿತ್ತು. ಆಗ ರನ್ನರ್ಸ್ ಅಪ್ ಆಗಿದ್ದ ಮಲೇಷ್ಯಾ ತಂಡವನ್ನು ಭಾರತವು ಬುಧವಾರ ಎದುರಿಸಲಿದೆ. ಮಂಗಳವಾರ ವಿಶ್ರಾಂತಿಯ ದಿನವಾಗಿದೆ.

ರಾಷ್ಟ್ರೀಯ ಈಜು ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದಲ್ಲಿ ಮಂಗಳವಾರದಿಂದ 77ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್ ಆರಂಭವಾಗಲಿದೆ. ಸೆ. 13ರವರೆಗೆ ನಗರದ ಎಮ್ಮೆಕೆರೆ ಅಂತರರಾಷ್ಟ್ರೀಯ ಈಜುಕೊಳದಲ್ಲಿ ನಡೆಯಲಿದೆ.

ಭಾರತ ಈಜು ಫೆಡರೇಷನ್ ಹಾಗೂ ಕರ್ನಾಟಕ ಈಜು ಸಂಸ್ಥೆ ಆಯೋಜಿಸಿರುವ ನಾಲ್ಕು ದಿನಗಳ ಚಾಂಪಿಯನ್‌ಷಿಪ್‌ನಲ್ಲಿ ದೇಶದ ವಿವಿಧೆಡೆಯ 500ಕ್ಕೂ ಹೆಚ್ಚು ಈಜುಪಟುಗಳು ಭಾಗವಹಿಸಲಿದ್ದಾರೆ ಎಂದು ಸಂಘಟನಾ ಕಾರ್ಯದರ್ಶಿ ಸತೀಶ್ ಕುಮಾರ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, 'ಒಲಿಂಪಿಯನ್ ಶ್ರೀಹರಿ ನಟರಾಜ್, ಲಿಖಿತ್ ಎಸ್.ಪಿ, ಅನೀಶ್ ಗೌಡ, ಎಸ್. ಶಿವಾ, ಪೃಥ್ವಿ, ಆನಂದ್ ಎ.ಎಸ್, ಮಿಹೀರ್ ಆಮ್ರೆ, ರಿಷಬ್ ದಾಸ್, ದೇವಾಂಶ್ ಪರಮಾರ್, ಧನುಷ್ ಎಸ್., ಸೋನು ದೇವನಾಥ್, ಹರ್ಷಿತಾ ಜಯರಾಂ, ಮಾನವಿ, ಪ್ರತಿಷ್ಠಾ ದಾಂಗಿ, ಆಸ್ಥಾ ಚೌಧರಿ, ವೃದ್ಧಿ ಅಗರವಾಲ್, ಅಂತಿಕಾ ಚವನ್, ಶಿವಾಂಗಿ ಶರ್ಮಾ, ಭವ್ಯಾ ಸಚದೇವ ಸ್ಪರ್ಧಿಸಲಿದ್ದಾರೆ' ಎಂದರು.

ಎಸ್. ಶಿವಾ ಮತ್ತು ಶ್ರೀಹರಿ ನಟರಾಜ್

ಸೆ.10ರ ಸಂಜೆ 5 ಗಂಟೆಗೆ ವಿಧಾನ ಸಭೆ ಸ್ಪೀಕರ್ ಯು.ಟಿ.ಖಾದರ್ ಅವರು ಚಾಂಪಿಯನ್‌ಷಿಪ್ ಉದ್ಘಾಟಿಸುವರು. ರಾಜ್ಯ ಈಜು ಸಂಸ್ಥೆ ಅಧ್ಯಕ್ಷ ಗೋಪಾಲ್ ಹೊಸೂರ್ ಅವರ ಮಾರ್ಗದರ್ಶನದಲ್ಲಿ ಈಜು ಕೂಟ ನಡೆಯಲಿದೆ. ಭಾರತದ ದೊಡ್ಡ ಈಜು ಚಾಂಪಿಯನ್‌ಷಿಪ್ ಇದಾಗಿದ್ದು, 2021ರಲ್ಲಿ ಕರ್ನಾಟಕದ ಆತಿಥ್ಯದಲ್ಲಿ ಬೆಂಗಳೂರಿನಲ್ಲಿ ಸ್ಪರ್ಧೆ ನಡೆದಿತ್ತು' ಎಂದು ಹೇಳಿದರು.

ಬೆಳಕಿನ ವೈಭವ... ಪ್ಯಾರಿಸ್‌ನ ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪ್ಯಾರಾಲಿಂಪಿಕ್ ಕೂಟದ ಮುಕ್ತಾಯ ಸಮಾರಂಭದ ವೇಳೆ ಆಕರ್ಷಕ ಸುಡುಮದ್ದು ಪ್ರದರ್ಶನ (ಎಡಚಿತ್ರ). ಭಾರತದ ಚಿನ್ನದ ಪದಕ ವಿಜೇತ ಆರ್ಚರಿಪಟು ಹರ್ವಿಂದರ್ ಸಿಂಗ್ ಮತ್ತು ಡಬಲ್ ಕಂಚು ಗೆದ್ದ ಸ್ಪ್ರಿಂಟರ್ ಪ್ರೀತಿ ಪಾಲ್ ಅವರು ಸಮಾರೋಪ ಸಮಾರಂಭದಲ್ಲಿ ಧ್ವಜಧಾರಿ ಆಗಿದ್ದರು –ಎಎಫ್‌ಪಿ/ ಎಕ್ಸ್ ಚಿತ್ರ

ಪ್ಯಾರಾಲಿಂಪಿಕ್ಸ್‌ಗೆ ವರ್ಣರಂಜಿತ ತೆರೆ

ಪ್ಯಾರಿಸ್ (ಪಿಟಿಐ): ಆಗಸ್ಟ್ 28ರಂದು ಆರಂಭವಾದ ಪ್ಯಾರಾಲಿಂಪಿಕ್ಸ್‌ಗೆ ಭಾನುವಾರ ತಡರಾತ್ರಿ ತೆರೆಬಿದ್ದಿದೆ. ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ನಡೆದ ಸಮಾರೋಪ ಸಮಾರಂಭದೊಂದಿಗೆ 17ನೇ ಆವೃತ್ತಿಯ ಕ್ರೀಡಾಕೂಟ ಸಂಪನ್ನಗೊಂಡಿತು. ವರ್ಣರಂಜಿತ ಕಾರ್ಯಕ್ರಮವು ಸಂಗೀತ, ಬೆಳಕಿನ ವೈಭವದೊಂದಿಗೆ ಪ್ರೇಕ್ಷಕರ ಮನಸೂರೆಗೊಂಡಿತು.

ಪುರುಷರ ಸಿಂಗಲ್ಸ್ ಕಿರೀಟ ಗೆದ್ದ ಇಟಲಿಯ ಮೊದಲ ಆಟಗಾರ • ಟೇಲರ್ ಫ್ರಿಟ್ಜ್‌ಗೆ ನಿರಾಸೆ

ಸಿನ್ನರ್‌ಗೆ ಅಮೆರಿಕ ಓಪನ್ ಪ್ರಶಸ್ತಿ

ಅಂಕಿ ಅಂಶಗಳು

₹30.22 ಕೋಟಿ ಯಾನಿಕ್ ಸಿನ್ನರ್ ಗೆದ್ದ ಬಹುಮಾನ

₹15.11 ಕೋಟಿ ಟೇಲರ್ ಫ್ರಿಟ್ಜ್ ಪಡೆದ ಬಹುಮಾನ

ನ್ಯೂಯಾರ್ಕ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್, 23 ವರ್ಷ ವಯಸ್ಸಿನ ಸಿನ್ನರ್ ಅವರಿಗೆ ಇದು ಎರಡನೇ ಗ್ರ್ಯಾನ್‌ಸ್ಲಾಮ್ ಕಿರೀಟವಾಗಿದೆ. ಈ ಗೆಲುವಿನೊಂದಿಗೆ ಅಮೆರಿಕ ಓಪನ್ ಗೆದ್ದ ಇಟಲಿಯ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರವಾದರು.

ಇಲ್ಲಿನ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಭಾನುವಾರ ತಡರಾತ್ರಿ ನಡೆದ ಫೈನಲ್ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕಕ್ಕೆ ತಕ್ಕ ಆಟವಾಡಿದ ಸಿನ್ನರ್ 6-3, 6-4, 7-5ರ ನೇರ ಸೆಟ್‌ಗಳಿಂದ ಆತಿಥೇಯ ದೇಶದ ಯುವ ತಾರೆ ಟೇಲರ್ ಫ್ರಿಟ್ಜ್ ಅವರನ್ನು ಸೋಲಿಸಿದರು.

ಪ್ರಸಕ್ತ ಋತುವಿನಲ್ಲಿ ಅದ್ಭುತ ಲಯದಲ್ಲಿರುವ ಸಿನ್ನರ್ ಅವರಿಗೆ ಇದು 55ನೇ ಪಂದ್ಯದ ಗೆಲುವಾಗಿದೆ. ಆಸ್ಟ್ರೇಲಿಯಾ ಓಪನ್ ಪ್ರಶಸ್ತಿಯೊಂದಿಗೆ ಋತು ಆರಂಭಿಸಿದ್ದ ಅವರಿಗೆ ಇದು ಆರನೇ ಪ್ರಶಸ್ತಿಯಾಗಿದೆ. ಜೊತೆಗೆ ಒಂದೇ ವರ್ಷದಲ್ಲಿ ಎರಡು ಹಾರ್ಡ್‌ಕೋರ್ಟ್ ಪ್ರಶಸ್ತಿಯನ್ನು ಗೆದ್ದ ಅತ್ಯಂತ ಕಿರಿಯ ವಯಸ್ಸಿನ ಆಟಗಾರ ಎಂಬ ಕೀರ್ತಿ ಅವರದಾಯಿತು.

ಪ್ರಸಕ್ತ ಋತುವಿನಲ್ಲಿ ಸ್ಪೇನ್‌ನ 21 ವರ್ಷ ವಯಸ್ಸಿನ ಕಾರ್ಲೋಸ್ ಅಲ್ಕರಾಜ್ ಅವರು ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಗೆದ್ದರೆ, ಉಳಿದ ಎರಡು ಗ್ರ್ಯಾನ್‌ಸ್ಲಾಮ್ ಕಿರೀಟಗಳು ಸಿನ್ನರ್ ಪಾಲಾಗಿವೆ. ಹೀಗಾಗಿ, ಈ ಇಬ್ಬರು ಯುವ ತಾರೆಯರು ಟೆನಿಸ್‌ನ ಹೊಸಯುಗದ ಶಕ್ತಿ ಎನಿಸಿಕೊಂಡಿದ್ದಾರೆ.

26 ವರ್ಷ ವಯಸ್ಸಿನ ಫ್ರಿಟ್ಜ್ ಸೋಲುವುದರೊಂದಿಗೆ ಅಮೆರಿಕ ಓಪನ್‌ನಲ್ಲಿ 21 ವರ್ಷಗಳ ಬಳಿಕ ತವರಿನ ಆಟಗಾರನೊಬ್ಬ ಪ್ರಶಸ್ತಿ ಗೆಲ್ಲುವ ಭರವಸೆಯೂ ಭಗ್ನಗೊಂಡಿತು. 2003ರಲ್ಲಿ ಆ್ಯಂಡಿ ರಾಡಿಕ್ ನಂತರ ತವರಿನ ಯಾವುದೇ ಆಟಗಾರ ಇಲ್ಲಿ ಚಾಂಪಿಯನ್ ಆಗಿಲ್ಲ.



ಅಮೆರಿಕ ಓಪನ್ ಟ್ರೋಫಿಯೊಂದಿಗೆ ಇಟಲಿಯ ಯಾನಿಕ್ ಸಿನ್ನರ್ (ಎಡಚಿತ್ರ). ಸೋತ ನಿರಾಸೆಯಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ –ಎಎಫ್‌ಪಿ ಚಿತ್ರಗಳು

ಎರಡು ವಾರಗಳ ಹಿಂದೆ ಸಿನ್ಸಿನಾಟಿ ಮಾಸ್ಟರ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ಇಲ್ಲೂ ಗೆಲ್ಲುವ ಫೇವರಿಟ್ ಆಟಗಾರನಾಗಿ ಸಿನ್ನರ್ ಕಣಕ್ಕಿಳಿದಿದ್ದರು. 2 ಗಂಟೆ 16 ನಿಮಿಷ ಸಾಗಿದ ಫೈನಲ್ ಪಂದ್ಯವೂ ಏಕಪಕ್ಷೀಯವಾಗಿತ್ತು. ವೃತ್ತಿಜೀವನದಲ್ಲಿ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಫೈನಲ್ ತಲುಪಿದ್ದ 12ನೇ ಶ್ರೇಯಾಂಕದ ಫ್ರಿಟ್ಜ್ ಒತ್ತಡ ನಿಭಾಯಿಸುವಲ್ಲಿ ಎಡವಿದರು.

ಪಂದ್ಯದ ಮೊದಲ ಸೆಟ್‌ನಲ್ಲೇ ಆಕರ್ಷಕ ಸರ್ವ್‌ಗಳೊಂದಿಗೆ ಗಮನ ಸೆಳೆದ ಸಿನ್ನರ್, ಫೋರ್‌ಹ್ಯಾಂಡ್ ಹೊಡೆತಗಳ ಮೂಲಕ ಫ್ರಿಟ್ಜ್ ಮೇಲೆ ಒತ್ತಡ ಹೇರಿದರು. ಕೇವಲ 41 ನಿಮಿಷಗಳಲ್ಲಿ ಮೊದಲ ಸೆಟ್ ಅನ್ನು ಇಟಲಿಯ ಆಟಗಾರ ಗೆದ್ದುಕೊಂಡರು. ತವರಿನ ಪ್ರೇಕ್ಷಕರ ಬೆಂಬಲದೊಂದಿಗೆ ಎರಡನೇ ಸೆಟ್‌ನಲ್ಲಿ ಫ್ರಿಟ್ಜ್ ಕೊಂಚ ಪ್ರತಿರೋಧ ತೋರಿದರು. ಒಂದು ಹಂತದಲ್ಲಿ 4–4ರಿಂದ ಪಂದ್ಯ ಸಾಗಿತ್ತಾದರೂ ಚುರುಕಿನ ಆಟವಾಡಿದ ಸಿನ್ನರ್ ಮತ್ತೆ ಮೇಲುಗೈ ಸಾಧಿಸಿದರು. ಮೂರನೇ ಸೆಟ್‌ನ ಆರಂಭದಲ್ಲಿ ಸಮಬಲದ ಹೋರಾಟ ಕಂಡುಬಂದರೂ ನಿಖರವಾದ ಡ್ರಾಪ್‌ಶಾಟ್ ಮತ್ತು ಓವರ್‌ಹೆಡ್ ಹೊಡೆತಗಳ ಮೂಲಕ ಸಿನ್ನರ್ ಪಾರಮ್ಯ ಮೆರೆದು ಪ್ರಶಸ್ತಿಗೆ ಮುತ್ತಿಕ್ಕಿದರು.

ಅ.18ರಿಂದ ಪ್ರೊ ಕಬಡ್ಡಿ ಟೂರ್ನಿ: ಹೈದರಾಬಾದಿನಲ್ಲಿ ಉದ್ಘಾಟನಾ ಪಂದ್ಯ

ನವದೆಹಲಿ (ಪಿಟಿಐ): ಪ್ರೊ ಕಬಡ್ಡಿ 11ನೇ ಆವೃತ್ತಿಯ ಟೂರ್ನಿಯ ಅಕ್ಟೋಬರ್ 18ರಿಂದ ಆರಂಭವಾಗಲಿದೆ. ನವೆಂಬರ್ 9ರವರೆಗೂ ಹೈದರಾಬಾದಿನ ಗಚಿಬೌಳಿ ಒಳಾಂಗಣ ಕ್ರೀಡಾಂಗಣದಲ್ಲಿ ಮೊದಲ ಲೆಗ್ ನಡೆಯಲಿದೆ.

ಮೊದಲ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ತೆಲುಗು ಟೈಟನ್ಸ್ ಮುಖಾಮುಖಿಯಾಗಲಿವೆ. ಎರಡನೇ ಪಂದ್ಯದಲ್ಲಿ ಯು ಮುಂಬಾ ಮತ್ತು ದಬಾಂಗ್ ಡೆಲ್ಲಿ ವಿರುದ್ಧ ಆಡಲಿದೆ.

ನವೆಂಬರ್ 10ರಿಂದ ಡಿಸೆಂಬರ್ 1ರವರೆಗೆ ನೋಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಎರಡನೇ ಲೆಗ್ ಮತ್ತು ಡಿ.3 ರಿಂದ 24ರವರೆಗೆ ಪುಣೆಯ ಬಾಲೇವಾಡಿ ಕ್ರೀಡಾಂಗಣದಲ್ಲಿ ಮೂರನೇ ಲೆಗ್ ಪಂದ್ಯಗಳು ನಡೆಯಲಿವೆ.

ರ‍್ಯಾಂಕಿಂಗ್: ಜ್ವೆರೇವ್‌ಗೆ ಬಡ್ತಿ, ಕುಸಿದ ಜೊಕೊವಿಚ್

ನ್ಯೂಯಾರ್ಕ್ (ಎಎಫ್‌ಪಿ): ದಾಖಲೆಯ 24 ಗ್ರ್ಯಾನ್‌ಸ್ಲಾಮ್ ಕಿರೀಟ ಗೆದ್ದು, ನಂತರದಲ್ಲಿ ಪ್ರಶಸ್ತಿಯ ಬರವನ್ನು ಎದುರಿಸುತ್ತಿರುವ ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಸೋಮವಾರ ಪ್ರಕಟಗೊಂಡ ಎಟಿಪಿ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದಿದ್ದಾರೆ.

ಅಮೆರಿಕ ಓಪನ್ ರನ್ನರ್ ಅಪ್ ಟೇಲರ್ ಫ್ರಿಟ್ಜ್ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ 12ನೇ ಸ್ಥಾನದಲ್ಲಿದ್ದ ಅವರು ಏಳನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.



ಅಲೆಕ್ಸಾಂಡರ್ ಜ್ವೆರೇವ್

ಇಟಲಿಯ ಯಾನಿಕ್ ಸಿನ್ನರ್ ಅಗ್ರಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿದ್ದಾರೆ. ಎರಡನೇ ಸ್ಥಾನದಲ್ಲಿದ್ದ ಜೊಕೊವಿಚ್ ಅಮೆರಿಕಾ ಓಪನ್‌ನಲ್ಲಿ ಮೂರನೇ ಸುತ್ತಿನಲ್ಲಿ ಹೊರಬಿದ್ದಿದ್ದರು.

ನಾಲ್ಕನೇ ಸ್ಥಾನದಲ್ಲಿದ್ದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ ಎರಡನೇ ಸ್ಥಾನಕ್ಕೆ ಏರಿದ್ದಾರೆ. ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ರಷ್ಯಾದ ಡೇನಿಯಲ್ ಮೆಡ್ವೆಡೇವ್ ಕ್ರಮವಾಗಿ ಮೂರನೇ ಮತ್ತು ಐದನೇ ಕ್ರಮಾಂಕದಲ್ಲಿ ಮುಂದುವರಿದಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಮೆರಿಕದ ಜೆಸ್ಸಿಕಾ ಪೆಗುಲಾ ಮೂರು ಸ್ಥಾನಗಳ ಬಡ್ತಿಯೊಂದಿಗೆ ಮೂರನೇ ಸ್ಥಾನಕ್ಕೆ ಏರಿದ್ದಾರೆ. ಅವರು ಅಮೆರಿಕಾ ಓಪನ್‌ನಲ್ಲಿ ರನ್ನರ್ ಅಪ್ ಆದವರು.

ಇಲ್ಲಿ ಸೆಮಿಫೈನಲ್ ತಲುಪಿದ್ದ ಅಮೆರಿಕದ ಮತ್ತೊಬ್ಬ ಆಟಗಾರ್ತಿ ಎಮ್ಮಾ ನವಾರೊ ಜೀವನಶ್ರೇಷ್ಠ ಎಂಟನೇ ರ‍್ಯಾಂಕ್‌ಗೆ ಬಡ್ತಿ ಪಡೆದಿದ್ದಾರೆ. ಪೋಲೆಂಡ್‌ನ ಇಗಾ ಶ್ವಾಂಟೆಕ್, ಅಮೆರಿಕ ಓಪನ್ ಚಾಂಪಿಯನ್, ಬೆಲಾರಸ್‌ನ ಅರಿನಾ ಸಬಲೆಂಕಾ ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿ ಮುಂದುವರಿದಿದ್ದಾರೆ.